ಶುಕ್ರವಾರ, ಮಾರ್ಚ್ 21, 2025 | ₹ 7.00

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

prajavani.net prajavani prajavani prajavani

ಮೋದಿ ಪ್ರವಾಸಕ್ಕಾದ ವೆಚ್ಚ

₹22.89 ಕೋಟಿ
2023ರ ಜೂನ್‌ನಲ್ಲಿ ಅಮೆರಿಕ ಭೇಟಿ

₹17.19 ಕೋಟಿ
2023ರ ಮೇನಲ್ಲಿ ಜಪಾನ್ ಭೇಟಿ

₹15.33 ಕೋಟಿ
2024ರ ಸೆಪ್ಟೆಂಬರ್‌ನಲ್ಲಿ ಅಮೆರಿಕ ಭೇಟಿ

(ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಕೇಳಿದ ಪ್ರಶ್ನೆಗೆ ಸರ್ಕಾರ ನೀಡಿದ ಉತ್ತರ



ಸಂಕ್ಷಿಪ್ತ ಸುದ್ದಿ

ಆದಿತ್ಯಗೆ 'ಪಂಚಾಕ್ಷರಿ ಗವಾಯಿ ರಾಷ್ಟ್ರೀಯ ಯುವ' ಪ್ರಶಸ್ತಿ


ಆದಿತ್ಯ ಮೋಡಕ್

ಧಾರವಾಡ: ವಿದ್ಯಾಧರೆ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ (ಮಾನವಿ) ನೀಡುವ ಪಂ. ಪಂಚಾಕ್ಷರಿ ಗವಾಯಿ ರಾಷ್ಟ್ರೀಯ ಯುವ ಪ್ರಶಸ್ತಿಗೆ ಮುಂಬೈನ ಗಾಯಕ ಆದಿತ್ಯ ಮೋಡಕ್ ಆಯ್ಕೆ ಆಗಿದ್ದಾರೆ. ಪುರಸ್ಕಾರವು ₹ 25 ಸಾವಿರ ನಗದು, ಫಲಕ ಒಳಗೊಂಡಿದೆ.

ಮಾರ್ಚ್ 23ರಂದು ನಗರದ ಆಲೂರು ವೆಂಕಟರಾವ್ ಭವನದಲ್ಲಿ ನಡೆಯುವ ಪಂ.ಪಂಚಾಕ್ಷರಿ ಗವಾಯಿಯವರ 134ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಹೊಸಪೇಟೆ, ಕುಕನೂರಿನಲ್ಲಿ ಮಳೆ


ಹೊಸಪೇಟೆಯಲ್ಲಿ ಗುರುವಾರ ಸುರಿದ ಮಳೆಯಲ್ಲಿ ಸಾಗಿದ ಜನ –ಪ್ರಜಾವಾಣಿ ಚಿತ್ರ

ಹೊಸಪೇಟೆ (ವಿಜಯನಗರ)/: ಹೊಸಪೇಟೆ ನಗರ ಮತ್ತು ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಗುರುವಾರ ಸಂಜೆ 20 ನಿಮಿಷ ಮಳೆ ಸುರಿಯಿತು. ವಾತಾವರಣ ಕೊಂಚ ತಂಪಾಯಿತು.

ಹರಪನಹಳ್ಳಿಯಲ್ಲಿ ಸ್ವಲ್ಪ ಹೊತ್ತು ಗಾಳಿ ಸಹಿತ ಆಲಿಕಲ್ಲು ಮಳೆ ಸುರಿಯಿತು. ಹೂವಿನಹಡಗಲಿಯಲ್ಲೂ ಮಳೆಯಾಯಿತು.

ಹಾವೇರಿ ಜಿಲ್ಲೆಯ ಹಲವು ಕಡೆ ಗುರುವಾರ ಸಂಜೆಯಿಂದ ರಾತ್ರಿಯವರೆಗೂ ಜೋರು ಗಾಳಿ ಸಹಿತ ಮಳೆ ಸುರಿಯಿತು.

ಶಿವಮೊಗ್ಗ ವರದಿ: ಜಿಲ್ಲೆಯ ಕೆಲವೆಡೆ ಗುರುವಾರ ಮಧ್ಯಾಹ್ನ ವರ್ಷದ ಮೊದಲ ಮಳೆ ಸುರಿದಿದೆ. ಸಾಗರ ತಾಲ್ಲೂಕಿನ ಸಂಪಳ್ಳಿ ಸುತ್ತಮುತ್ತ ಜೋರು ಮಳೆಯಾಗಿದೆ. ರಿಪ್ಪನ್‌ಪೇಟೆ ಸುತ್ತಲ ಗ್ರಾಮಗಳಲ್ಲೂ ಮಳೆಯಾಗಿದೆ.

ಕುಕನೂರು (ಕೊಪ್ಪಳ ಜಿಲ್ಲೆ): ಪಟ್ಟಣ ಸೇರಿದಂತೆ ತಾಲ್ಲೂಕಿನ ಕೆಲವೆಡೆ ಗುರುವಾರ ರಾತ್ರಿ ಕೆಲ ಹೊತ್ತು ಸಾಧಾರಣ ಮಳೆ ಸುರಿಯಿತು.

ದೀನಬಂಧು ಟ್ರಸ್ಟ್‌ಗೆ 'ಕೆಂಗಲ್ ಹನುಮಂತಯ್ಯ ಪ್ರಶಸ್ತಿ'

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 2023ನೇ ಸಾಲಿನ 'ಶ್ರೀ ಕೆಂಗಲ್ ಹನುಮಂತಯ್ಯ ಸಂಸ್ಕೃತಿ ದತ್ತಿ ಪ್ರಶಸ್ತಿ'ಗೆ ಚಾಮರಾಜನಗರದ ದೀನಬಂಧು ಟ್ರಸ್ಟ್ ಆಯ್ಕೆಯಾಗಿದೆ.

ಕಸಾಪ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ. ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪಿಸಿರುವ ಪ್ರಶಸ್ತಿಯು ₹ 25 ಸಾವಿರ ನಗದು ಒಳಗೊಂಡಿದೆ.

ದೀನಬಂಧು ಸಂಸ್ಥೆಯು 1992ರಿಂದಲೂ ಅವಕಾಶ ವಂಚಿತ ಮಕ್ಕಳ ಆಶಾಕಿರಣವಾಗಿ ಕಾರ್ಯ ನಿರ್ವಹಿಸುತ್ತಿದೆ. ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಅವರ ಪುತ್ರ ಜಿ.ಎಸ್. ಜಯದೇವ್ ನೇತೃತ್ವದಲ್ಲಿ ನಡೆಯುತ್ತಿದೆ. ಹತ್ತನೆ ತರಗತಿವರೆಗಿನ ಮಕ್ಕಳಿಗೆ ಅಲ್ಪ ಪ್ರವೇಶ ಶುಲ್ಕ ಪಡೆದು, ಗುಣಮಟ್ಟದ ಶಿಕ್ಷಣ ಒದಗಿಸುತ್ತಿದೆ.

ಕಿದ್ವಾಯಿ ಕ್ಯಾನ್ಸರ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸದ ಯಂತ್ರ • ರೋಗಿಗಳಿಗೆ ಸಂಕಷ್ಟ

ಹಿಸ್ಟೊಪೆಥಾಲಜಿ ಘಟಕ ಸ್ಥಗಿತ

• ವರುಣ ಹೆಗಡೆ

ಬೆಂಗಳೂರು: ಕ್ಯಾನ್ಸರ್ ದೃಢಪಡಿಸಲು ಹಾಗೂ ಯಾವ ಹಂತವೆಂದು ಗುರುತಿಸಿ ಚಿಕಿತ್ಸೆ ಒದಗಿಸಲು ಸಹಕಾರಿಯಾಗಿದ್ದ ಹಿಸ್ಟೊಪೆಥಾಲಜಿ ಘಟಕವು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ತನ್ನ ಕಾರ್ಯ ಸ್ಥಗಿತಗೊಳಿಸಿದೆ. ಇದರಿಂದಾಗಿ ಕ್ಯಾನ್ಸರ್ ಶಂಕಿತರು ಹಾಗೂ ಕ್ಯಾನ್ಸರ್ ಪೀಡಿತರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಕಿದ್ವಾಯಿ ಸಂಸ್ಥೆಯು ಕ್ಯಾನ್ಸರ್ ಚಿಕಿತ್ಸೆಯ ಜತೆಗೆ ಶಿಕ್ಷಣ, ಸಂಶೋಧನೆ ಹಾಗೂ ರೋಗದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯದಲ್ಲಿಯೂ ತೊಡಗಿಕೊಂಡಿದೆ. ಕ್ಯಾನ್ಸರ್ ಚಿಕಿತ್ಸೆಗೆ ರಾಜ್ಯದ ವಿವಿಧ ಭಾಗಗಳ ಜತೆಗೆ ಹೊರ ರಾಜ್ಯಗಳಿಂದಲೂ ಇಲ್ಲಿನ ಹೊಂಬೇಗೌಡ ನಗರದಲ್ಲಿರುವ ಸಂಸ್ಥೆಗೆ ಪ್ರತಿನಿತ್ಯ ಸಾವಿರಾರು ರೋಗಿಗಳು ಬರುತ್ತಾರೆ. ಈ ಸಂಸ್ಥೆಯ ಘಟಕದಲ್ಲಿನ ಹಿಸ್ಟೊಪೆಥಾಲಜಿ ಯಂತ್ರವು ತಿಂಗಳಿಂದ ಕೆಟ್ಟಿದೆ. ಪರಿಣಾಮ, ಮೂರು ಸಾವಿರಕ್ಕೂ ಅಧಿಕ ಅಂಗಾಂಶ ಮಾದರಿಗಳು ಪ್ರಯೋಗಾಲಯದಲ್ಲಿಯೇ ಪರೀಕ್ಷೆಗೆ ಬಾಕಿ ಉಳಿದಿರುವುದು ಕಿದ್ವಾಯಿ ಮೂಲಗಳಿಂದ ತಿಳಿದು ಬಂದಿದೆ.

ಹಿಸ್ಟೊಪೆಥಾಲಜಿ ಯಂತ್ರ ಕಾರ್ಯ-ನಿರ್ವಹಿಸದಿದ್ದರಿಂದ ರೋಗ ನಿರ್ಣಯ ಹಾಗೂ ಚಿಕಿತ್ಸೆಗೆ ತೊಡಕಾಗಿದೆ. ಕ್ಯಾನ್ಸರ್ ಪೀಡಿತರು ಹಾಗೂ ರೋಗ ಶಂಕಿತರು ಈ ಪರೀಕ್ಷೆಗೆ ಪರದಾಡು-ತ್ತಿದ್ದಾರೆ. ವಿವಿಧ ಪ್ರಕಾರದ ಕ್ಯಾನ್ಸರ್ ಪೀಡಿತರು ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಲು, ಚಿಕಿತ್ಸೆ ನಂತರದಲ್ಲಿ ಕಿಮೊಥೆರಪಿ ಅಥವಾ ರೇಡಿಯೊಥೆರಪಿ ಚಿಕಿತ್ಸೆ ಪಡೆಯಲು ಸಾಧ್ಯವಾಗದೆ ಸಮಸ್ಯೆ ಎದುರಿಸುತ್ತಿದ್ದಾರೆ.

ಟೆಂಡರ್ ಪ್ರಕ್ರಿಯೆ ವಿಳಂಬ: ಹಿಸ್ಟೊಪೆಥಾಲಜಿ ಯಂತ್ರವನ್ನು ಅಂದಾಜು ₹ 20 ಲಕ್ಷದಲ್ಲಿ ಖರೀದಿಸಿ, 2011ರಲ್ಲಿ ಸಂಸ್ಥೆಯ ಘಟಕದಲ್ಲಿ ಅಳವಡಿಸಲಾಗಿದೆ. ಯಂತ್ರದ ಕಾರ್ಯನಿರ್ವಹಣಾ ಅವಧಿ 10 ವರ್ಷಗಳಾಗಿದ್ದು, 2023ರಲ್ಲಿಯೇ ಹೊಸ ಯಂತ್ರ ಖರೀದಿಗೆ ಆಡಳಿತ ಮಂಡಳಿಗೆ ಪ್ರಸ್ತಾವ ಸಲ್ಲಿಕೆಯಾಗಿತ್ತು. ಆದರೆ, ಟೆಂಡರ್ ಪ್ರಕ್ರಿಯೆ ನಡೆಯದಿದ್ದರಿಂದ ಹೊಸ ಯಂತ್ರ ಅಳವಡಿಕೆ ಸಾಧ್ಯವಾಗಲಿಲ್ಲ ಎಂದು ಸಂಸ್ಥೆಯ ಮೂಲಗಳು ತಿಳಿಸಿವೆ.

'ಸ್ತನ ಕ್ಯಾನ್ಸರ್ ಸಂಬಂಧ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದು, ಕ್ಯಾನ್ಸರ್ ಕೋಶಗಳ ಗಡ್ಡೆಯ ಅಂಗಾಂಶ ಮಾದರಿಯನ್ನು ಪರೀಕ್ಷೆಗೆ ಹಿಸ್ಟೊಪೆಥಾಲಜಿ ಘಟಕಕ್ಕೆ ಕಳುಹಿಸಲಾಗಿತ್ತು. ಆರು ವಾರಗಳು ಕಳೆದರೂ ವರದಿ ಬಂದಿಲ್ಲ. ಈ ವರದಿ ಆಧರಿಸಿ ಕಿಮೊಥೆರಪಿ ಅಥವಾ ರೇಡಿಯೊಥೆರಪಿ ನಿರ್ಧರಿಸುವುದಾಗಿ ವೈದ್ಯರು ತಿಳಿಸಿದ್ದಾರೆ' ಎಂದು ತುಮಕೂರು ಜಿಲ್ಲೆಯ ತಿಪಟೂರಿನ 45 ವರ್ಷದ ಮಹಿಳೆಯೊಬ್ಬರು ತಿಳಿಸಿದರು.

ಅಂಕೆ ಅಂಶ

874 ರೋಗಿಗಳ ಚಿಕಿತ್ಸೆಗೆ ಸಂಸ್ಥೆ ಹೊಂದಿರುವ ಬೆಡ್‌ಗಳು

1,116 ನಿತ್ಯ ಭೇಟಿ ನೀಡುವ ಸರಾಸರಿ ಹೊರರೋಗಿಗಳ ಸಂಖ್ಯೆ

1,243 ಫಾಲೊ ಅಪ್ ಚಿಕಿತ್ಸೆಗೆ ನಿತ್ಯ ಭೇಟಿ ನೀಡುವವರ ಸರಾಸರಿ ಸಂಖ್ಯೆ

3 ಲಕ್ಷ ಸಂಸ್ಥೆಯಲ್ಲಿ ಪ್ರತಿವರ್ಷ ಚಿಕಿತ್ಸೆ ಪಡೆದುಕೊಳ್ಳುವವರ ಸರಾಸರಿ ಸಂಖ್ಯೆ

ವರದಿ ವಿಳಂಬದಿಂದ ಸಮಸ್ಯೆ

ಬಯಾಪ್ಸಿ ಪರೀಕ್ಷೆಯಿಂದ ಕ್ಯಾನ್ಸರ್ ಪತ್ತೆ ಮಾಡಲಾಗುತ್ತದೆ. ಇದನ್ನು ಹಿಸ್ಟೊಪೆಥಾಲಜಿ ಘಟಕದ ನೆರವಿನಿಂದ ನಡೆಸಲಾಗುತ್ತದೆ. ಅಂಗಾಂಶದ ಸ್ವಲ್ಪ ಭಾಗವನ್ನು ತೆಗೆದು, ಪರೀಕ್ಷೆ ಮಾಡುವುದೇ ಬಯಾಪ್ಸಿ. ಮೊದಲ ಹಂತದಲ್ಲೇ ಕ್ಯಾನ್ಸರ್ ಪತ್ತೆಯಾದಲ್ಲಿ ಪರಿಣಾಮಕಾರಿ ಚಿಕಿತ್ಸೆ ಸಾಧ್ಯ. ಶಸ್ತ್ರಚಿಕಿತ್ಸೆ ಮಾಡಿಸಿ-ಕೊಂಡವರಿಗೂ ಕ್ಯಾನ್ಸರ್ ಯಾವ ಹಂತದಲ್ಲಿದೆ, ಮುಂದಿನ ಚಿಕಿತ್ಸೆ ಏನು ಎಂದು ನಿರ್ಧರಿಸಲು ಈ ಘಟಕದಲ್ಲಿ ನಡೆಸುವ ಪರೀಕ್ಷೆ ಸಹಕಾರಿ. ವರದಿ ವಿಳಂಬದಿಂದ ಚಿಕಿತ್ಸೆಗೆ ಸಮಸ್ಯೆಯಾಗುತ್ತಿದೆ ಎಂದು ಸಂಸ್ಥೆಯ ವೈದ್ಯರು ತಿಳಿಸಿದರು.


ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ

> ಹಿಸ್ಟೊಪೆಥಾಲಜಿ ಯಂತ್ರವನ್ನು ರಿಪೇರಿ ಮಾಡಲಾಗಿದ್ದು, ಪರೀಕ್ಷೆ ನಡೆಸಲಾಗುತ್ತಿದೆ. ಹೊಸ ಯಂತ್ರವನ್ನು ಶೀಘ್ರದಲ್ಲಿಯೇ ಖರೀದಿಸಲಾಗುವುದು
>
> **ಡಾ.ಟಿ.ನವೀನ್**
> ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ

ಒಳಮೀಸಲು ವಿಳಂಬವಾದರೆ ಹೋರಾಟ: ಆಂಜನೇಯ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ಸಾಮಾಜಿಕ ನ್ಯಾಯದ ಹರಿಕಾರ, ನೊಂದ ಜನರ ಮುಖ್ಯಮಂತ್ರಿ ಎಂದೇ ಹೆಸರಾಗಿರುವ ಸಿದ್ದರಾಮಯ್ಯ ಅವರು ಒಳಮೀಸಲಾತಿ ಜಾರಿ ವಿಷಯದಲ್ಲಿ ವಿಳಂಬ ಧೋರಣೆ ಅನುಸರಿಸಬಾರದು. ಒಂದೊಮ್ಮೆ ವಿಳಂಬವಾದಲ್ಲಿ ಸಮುದಾಯದ ಜನರೊಂದಿಗೆ ಬೀದಿಗಿಳಿದು ಹೋರಾಟ ನಡೆಸುವುದು ಅನಿವಾರ್ಯವಾಗಲಿದೆ' ಎಂದು ಕೆಪಿಸಿಸಿ ಉಪಾಧ್ಯಕ್ಷ ಎಚ್.ಆಂಜನೇಯ ಹೇಳಿದರು.

'ಒಳ ಮೀಸಲಾತಿ ಜಾರಿ ಸಂಬಂಧ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಏಕಸದಸ್ಯ ವಿಚಾರಣಾ ಆಯೋಗ ರಚಿಸಿ ವರದಿ ನೀಡಲು ಎರಡು ತಿಂಗಳ ಗಡುವು ನೀಡಲಾಗಿತ್ತು. ಆದರೆ, ಅವಧಿ ಮುಗಿದರೂ ವರದಿ ಸಲ್ಲಿಕೆಯಾಗಿಲ್ಲ. ಆಯೋಗಕ್ಕೆ 40 ಇಲಾಖೆಗಳು ಸ್ಪಷ್ಟ ಅಂಕಿ-ಅಂಶ ನೀಡುವಲ್ಲಿ ನಿರ್ಲಕ್ಷ್ಯ ತೋರಿವೆ. ಜೊತೆಗೆ ದತ್ತಾಂಶ ಸಮಸ್ಯೆ ಎದುರಾಗಿದೆ ಎಂಬ ಮಾಹಿತಿ ಇದೆ. ಆದ್ದರಿಂದ ಮಾದಿಗ ಸಮುದಾಯದಲ್ಲಿ ಆತಂಕ ಎದುರಾಗಿದೆ' ಎಂದು ಅವರು ಗುರುವಾರ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.


ಎಚ್. ಆಂಜನೇಯ

'ರಾಜ್ಯ ಸರ್ಕಾರ ಒತ್ತಡ ತಂತ್ರಗಳಿಗೆ ಮಣಿದು ವಿಳಂಬ ನೀತಿ ಅನುಸರಿಸಿದರೆ ನಾವು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ. ಒಳಮೀಸಲಾತಿ ನಮ್ಮ ಹಕ್ಕು. ಬಲಾಢ್ಯರ ಮಧ್ಯೆ ಕೂಲಿ-ಅನಕ್ಷರತೆ ಕಾರಣಕ್ಕೆ ಮೀಸಲು ಪಡೆಯುವಲ್ಲಿ ವಿಫಲವಾಗಿರುವ ಮಾದಿಗ ಸಮುದಾಯಕ್ಕೆ ಒಳ ಮೀಸಲಾತಿಯೊಂದೇ ಏಕೈಕ ಆಸರೆ. ಈ ವಿಷಯದಲ್ಲಿ ಮುಖ್ಯಮಂತ್ರಿಯವರು ದಿಟ್ಟ ನಿರ್ಧಾರ ಕೈಗೊಳ್ಳುವ ಅಗತ್ಯವಿದೆ' ಎಂದರು.

'ಒಳ ಮೀಸಲಾತಿ ಜಾರಿಗೊಳಿಸಿದ ಬಳಿಕ ಏನಾದರೂ ತೊಂದರೆಗಳು ಎದುರಾದಲ್ಲಿ ಪರಿಶಿಷ್ಟ ಸಮುದಾಯಕ್ಕೆ ಸೀಮಿತಗೊಳಿಸಿ ಜಾತಿಗಣತಿ ನಡೆಸಲಿ. ಈಗ ಶಾಲಾ-ಕಾಲೇಜು ರಜೆ ಇರುವ ಕಾರಣಕ್ಕೆ ಶಿಕ್ಷಕ ವರ್ಗವನ್ನು ಸಮರ್ಥವಾಗಿ ಬಳಸಿಕೊಂಡು ಸಮೀಕ್ಷೆ ನಡೆಸಬಹುದು' ಎಂದರು.


ಕಾಫಿ ಹೂವು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ, ಕಳಸ ತಾಲ್ಲೂಕುಗಳಲ್ಲಿ ಕಳೆದ ವಾರ ಉತ್ತಮ ಮಳೆಯಾಗಿರುವುದರಿಂದ ಕಾಫಿ ಹೂವು ಅರಳಿ ತೋಟಗಳು ಕಂಗೊಳಿಸುತ್ತಿವೆ

ಕೆಪಿಎಸ್‌ಸಿ: ಮರು ಪರೀಕ್ಷೆಗೆ ನಕಾರ

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿ ಅಧಿಕಾರಿಗಳ 384 ಗ್ರೂಪ್ 'ಎ' ಮತ್ತು 'ಬಿ' ಹುದ್ದೆಗಳ ನೇಮಕಕ್ಕೆ ಸಂಬಂಧಿಸಿದಂತೆ ಪೂರ್ವಭಾವಿ ಮರು ಪರೀಕ್ಷೆಗೆ ಆದೇಶಿಸಲು, ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ (ಕೆಎಸ್‌ಎಟಿ) ನಿರಾಕರಿಸಿದೆ.

ಮಾಯಗಾನಹಳ್ಳಿಯ ಎಂ.ಕೃಷ್ಣ, ಕೋಲಾರದ ಡಿ.ಪವಿತ್ರಾ ಹಾಗೂ ಚಳ್ಳಕೆರೆಯ ಎಸ್.ರಮೇಶ್ ಸೇರಿ ಒಟ್ಟು 80 ಅಭ್ಯರ್ಥಿಗಳು ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು ನ್ಯಾಯಾಂಗ ಸದಸ್ಯ ಎಸ್.ವೈ.ವಟವಟಿ ಮತ್ತು ಆಡಳಿತ ಸದಸ್ಯೆ ಅಮಿತಾ ಪ್ರಸಾದ್ ಅವರಿದ್ದ ದ್ವಿಸದಸ್ಯ ಪೀಠ ಪ್ರಕಟಿಸಿದೆ.

'ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಸಲ್ಲಿಸಿರುವ ಎಲ್ಲಾ ಅಂಶಗಳನ್ನು ಪರಿಶೀಲಿಸಿದ ಬಳಿಕ ಈಗಾಗಲೇ ಒಮ್ಮೆ ಪರೀಕ್ಷೆ ರದ್ದುಗೊಳಿಸಿ, ಮರು ಪೂರ್ವಭಾವಿ ಪರೀಕ್ಷೆ ನಡೆಸಲಾಗಿದೆ. ಈ ಹಂತದಲ್ಲಿ ಮರು ಪ್ರಾಥಮಿಕ ಪರೀಕ್ಷೆಗೆ ಆದೇಶಿಸಲು ಸಾಧ್ಯವಿಲ್ಲ. ಪ್ರಶ್ನೆಪತ್ರಿಕೆಯ ಅನುವಾದದಲ್ಲಿ ಆಗಿರುವ ಲೋಪಗಳ ಬಗ್ಗೆ ತಜ್ಞರ ಸಮಿತಿ ಮರು ಪರಿಶೀಲನೆ ನಡೆಸಿ ತೀರ್ಮಾನಿಸಬಹುದು' ಎಂದು ಪೀಠವು ಆದೇಶದಲ್ಲಿ ವಿವರಿಸಿದೆ. ಈಗಾಗಲೇ ಕೆಪಿಎಸ್‌ಸಿ ನಿಗದಿಪಡಿಸಿರುವಂತೆ ಮುಖ್ಯ ಪರೀಕ್ಷೆಗಳು ಇದೇ 28ರಿಂದ ಆರಂಭವಾಗಬೇಕಿದೆ.

ಸುದ್ದಿ 2 ನಿಮಿಷ

ದ್ವೇಷದ ರಾಜಕೀಯಕ್ಕೆ ಬುನಾದಿ ಹಾಕಿದ್ದೇ ಕಾಂಗ್ರೆಸ್: ನಿಖಿಲ್

ಮಂಡ್ಯ: 'ಇಷ್ಟು ವರ್ಷ ದ್ವೇಷದ ರಾಜಕೀಯಕ್ಕೆ ನಾವು ಸೊಪ್ಪು ಹಾಕಿಲ್ಲ. ಆದರೆ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಇದು ಹೆಚ್ಚಾಗಿದೆ. ದ್ವೇಷ ರಾಜಕೀಯಕ್ಕೆ ಬುನಾದಿ ಹಾಕಿದ್ದೇ ಕಾಂಗ್ರೆಸ್. ಎಸ್‌ಐಟಿ ಮತ್ತು ಲೋಕಾಯುಕ್ತ ಸಂಸ್ಥೆಗಳನ್ನು ಪಕ್ಷವು ದುರುಪಯೋಗ ಪಡಿಸಿಕೊಂಡ ನಿದರ್ಶನಗಳು ಸಾಕ್ಷಿವೆ' ಎಂದು ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ದೂರಿದರು.

ಕಲುಷಿತ ಆಹಾರ ಸೇವಿಸಿ ಅಸ್ವಸ್ಥಗೊಂಡಿದ್ದ ಮಕ್ಕಳನ್ನು ನಗರದ ಮಿಮ್ಸ್ ಆಸ್ಪತ್ರೆಯಲ್ಲಿ ಗುರುವಾರ ಭೇಟಿ ಮಾಡಿ ಆರೋಗ್ಯ ವಿಚಾರಿಸಿದ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿ, '1985ರಲ್ಲಿ ಚಲನಚಿತ್ರ ವಿತರಕರಾಗಿ ದುಡಿದ ಹಣದಲ್ಲಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಕೇತಗಾನಹಳ್ಳಿ ಬಳಿ ಜಮೀನು ಖರೀದಿಸಿದ್ದರು. ಆದರೆ, ಕಾಂಗ್ರೆಸ್ ನಾಯಕರಿಗೆ 2 ವರ್ಷಗಳಿಂದ ಅವರೇ ಟಾರ್ಗೆಟ್ ಆಗಿದ್ದಾರೆ. ಕಾನೂನು ಹೋರಾಟ ನಡೆಸುತ್ತೇವೆ' ಎಂದರು.



ಮಂಡ್ಯದ ಜನರನ್ನು 'ಛತ್ರಿ' ಎಂದ ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿಕೆಗೆ ಪ್ರತಿಕ್ರಿಯಿಸಿ, 'ಛತ್ರಿ ಅಂದ್ರೆ ಅತ್ಯಂತ ಬುದ್ಧಿವಂತರು ಅಂತ ಮಂಡ್ಯದ ಪ್ರಭಾವಿ ಶಾಸಕರೊಬ್ಬರು ವಿಶ್ಲೇಷಿಸಿದ್ದಾರೆ. ಮಂಡ್ಯ ಜನತೆ ನಿಜಕ್ಕೂ ಸ್ವಾಭಿಮಾನಿಗಳು. ಚುನಾವಣೆಯಲ್ಲಿ ತಕ್ಕ ಉತ್ತರ ಕೊಡ್ತಾರೆ' ಎಂದರು.

'ರಾಮನಗರ ಎಂಬ ಹೆಸರನ್ನು ಬದಲಾಯಿಸಿದರೆ ಅಭಿವೃದ್ಧಿ ಯಾಗುತ್ತಾ? ಗ್ಯಾರಂಟಿಗಳಿಂದ ಕಾಂಗ್ರೆಸ್ ದಿವಾಳಿಯಾಗಿದೆ. ಬಜೆಟ್‌ನಲ್ಲಿ ಸಾಲ ದುಪ್ಪಟ್ಟಾಗಿದೆ. ಅಗತ್ಯ ವಸ್ತುಗಳ ಬೆಲೆ ಏರುತ್ತಲೇ ಇದೆ' ಎಂದು ಟೀಕಿಸಿದರು.

ವಿವಸ್ತ್ರಗೊಳಿಸಿ ಹಲ್ಲೆ: ದೂರು ದಾಖಲಿಸಿದ ಮಹಿಳೆ

ಬೆಳಗಾವಿ: ಜಿಲ್ಲೆಯ ಸವದತ್ತಿ ತಾಲ್ಲೂಕಿನ ಹರ್ಲಾಪುರ ಗ್ರಾಮದಲ್ಲಿ ಮಹಿಳೆಯನ್ನು ವಿವಸ್ತ್ರಗೊಳಿಸಿ, ಹಲ್ಲೆ ಮಾಡಲಾದ ಘಟನೆ ಕುರಿತು ಸವದತ್ತಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಗದಗಿನ ಸವಿತಾ ಮಂಜುನಾಥ ಅಂಗಡಿ, ಸವದತ್ತಿ ತಾಲ್ಲೂಕು ಹಿರೇಕುಂಬಿಯ ರಾಜಶೇಖರ ಸಿದ್ದರಾಮಪ್ಪ ತೆಂಗಿನಕಾಯಿ, ಮಹಾದೇವಿ ಈರಪ್ಪ ಸಣ್ಣಕ್ಕಿ, ಹರ್ಲಾಪುರದ ಯಲ್ಲಪ್ಪಗೌಡ ಪಾಟೀಲ ಸೇರಿ 15 ಜನರ (ಹೆಸರು ತಿಳಿಯದ) ವಿರುದ್ಧ ದೂರು ದಾಖಲಾಗಿದೆ.

'ನನ್ನ ಪತಿ ನಿಧನರಾದ ಬಳಿಕ 4 ಎಕರೆ 35 ಗುಂಟೆ ಜಮೀನನ್ನು ಹಿರಿಯರು ನನಗೆ ಉಪಜೀವನಕ್ಕೆ ನೀಡಿದ್ದಾರೆ. ಇದು ತಮಗೆ ಸೇರಿದ್ದು ಎಂದು ನಾದಿನಿ ಸವಿತಾ ದಾವೆ ಹೂಡಿದ್ದಾರೆ. ಪ್ರಕರಣ ನ್ಯಾಯಾಲಯ-ದಲ್ಲಿದೆ. ಈ ವರ್ಷ ನಾನು ಕಡಲೆ ಬೆಳೆದಿದ್ದೇನೆ. ಫೆಬ್ರುವರಿ 20ರಂದು ಏಕಾಏಕಿ ಹೊಲಕ್ಕೆ ಬಂದ 15 ಜನ ನಾನು ಬೆಳೆದ ಕಡಲೆ ಫಸಲನ್ನು ಟ್ರ್ಯಾಕ್ಟರ್‌ನಲ್ಲಿ ತುಂಬಿಕೊಂಡು ಹೋಗಲು ಯತ್ನಿಸಿದರು. ಇದಕ್ಕೆ ತಡೆಯೊಡ್ಡಿದಾಗ ನನ್ನ ಮೇಲೆ, ನನ್ನ ತಾಯಿ ಹಾಗೂ ಸಹೋದರನ ಮೇಲೂ ಹಲ್ಲೆ ಮಾಡಿದರು. ನನ್ನ ಬಟ್ಟೆ ಹರಿದು ಮಾನಭಂಗಕ್ಕೆ ಯತ್ನಿಸಿದರು' ಎಂದು ಮಹಿಳೆ ದೂರಿನಲ್ಲಿ ತಿಳಿಸಿದ್ದಾರೆ.

ಮಹಿಳೆ ಮಂಗಳವಾರ ಲಿಖಿತ ದೂರು ನೀಡಿದ್ದಾರೆ. ಪೊಲೀಸರೇ ದೂರು ಸ್ವೀಕರಿಸಿಲ್ಲ ಎಂದು ಈ ಹಿಂದೆ ಮಹಿಳೆ ಆರೋಪಿಸಿದ್ದರು. 'ಆಸ್ಪತ್ರೆಯಲ್ಲಿ ದಾಖಲಾಗಿದ್ದಕ್ಕೆ ತಡವಾಗಿ ದೂರು ನೀಡಿದ್ದೇನೆ' ಎಂದು ಈಗ ದೂರಿನಲ್ಲಿ ಬರೆದಿದ್ದಾರೆ.

ಹೋಟೆಲ್, ಶಾಲೆ ಬಂದ್ ಇಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾರ್ಚ್ 22ರಂದು ಹೋಟೆಲ್ ಬಂದ್ ಇರುವುದಿಲ್ಲ. ಅಂದು ಹೋಟೆಲ್‌ಗಳಿಗೆ ಪೊಲೀಸ್ ರಕ್ಷಣೆ ನೀಡಬೇಕು' ಎಂದು ಕರ್ನಾಟಕ ರಾಜ್ಯ ಹೋಟೆಲುಗಳ ಸಂಘವು ಒತ್ತಾಯಿಸಿದೆ.

ಕೆಎಸ್‌ಆರ್‌ಟಿಸಿ ಬಸ್ ನಿರ್ವಾಹಕನಿಗೆ ಇತ್ತೀಚೆಗೆ ಮಸಿ ಬಳಿದು, ಹಲ್ಲೆ ಮಾಡಿರುವುದನ್ನು ಖಂಡಿಸಿ 'ಕರ್ನಾಟಕ ಬಂದ್'ಗೆ ವಾಟಾಳ್ ನಾಗರಾಜ್ ನೀಡಿದ್ದ ಕರೆಗೆ ನೈತಿಕ ಬೆಂಬಲವಷ್ಟೇ ವ್ಯಕ್ತವಾಗಿದೆ.

ಈ ಬಗ್ಗೆ ಪ್ರಕಟಣೆ ನೀಡಿರುವ ಹೋಟೆಲುಗಳ ಸಂಘದ ಅಧ್ಯಕ್ಷ ಜಿ.ಕೆ. ಶೆಟ್ಟಿ, ಸಂಘವು ಕನ್ನಡ ಪರವಾದ ಚಟುವಟಿಕೆಗಳನ್ನು ಬೆಂಬಲಿಸಿಕೊಂಡು ಬಂದಿದೆ. ಕೂಲಿಕಾರ್ಮಿಕರು, ಕಾರ್ಪೊರೇಟ್ ಮತ್ತು ಉದ್ಯಮದವರು, ಪ್ರವಾಸಿಗರು ಹೋಟೆಲ್‌ಗಳನ್ನೇ ನಂಬಿದ್ದಾರೆ. ರಾಜ್ಯ ಸಂಘವು ಎಲ್ಲ ಜಿಲ್ಲಾ ಸಂಘಗಳೊಂದಿಗೆ ಎರಡು–ಮೂರು ಸುತ್ತಿನ ಚರ್ಚೆ ನಡೆಸಿದೆ. ಹೋಟೆಲ್ ಬಂದ್ ಮಾಡದೇ, ನೈತಿಕ ಬೆಂಬಲ ನೀಡಲು ನಿರ್ಧರಿಸಲಾಗಿದೆ ಎಂದಿದ್ದಾರೆ.

ಬಂದ್ ವಾಪಸ್ ತಗೊಳ್ಳಿ: ವಿವಿಧ ಶಾಲಾ ಮತ್ತು ಬೋರ್ಡ್ ಪರೀಕ್ಷೆ ಗಳನ್ನು ಪರಿಗಣಿಸಿ ಬಂದ್ ಕರೆ ಹಿಂತೆಗೆದುಕೊಳ್ಳುವಂತೆ ಖಾಸಗಿ ಶಾಲೆಗಳ ಸಂಘವು ಒತ್ತಾಯಿಸಿದೆ. 'ನಾವು ಬಂದ್‌ಗೆ ಬೆಂಬಲ ನೀಡುವುದಿಲ್ಲ' ಎಂದು ಕರ್ನಾಟಕದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಆಡಳಿತ ಮಂಡಳಿ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಡಿ. ಶಶಿಕುಮಾರ್ ತಿಳಿಸಿದ್ದಾರೆ.

ಸಿನಿಮಾ ಮೊದಲ ಪ್ರದರ್ಶನವಿಲ್ಲ: 'ಚಿತ್ರಮಂದಿರಗಳಲ್ಲಿ ಮೊದಲ ಪ್ರದರ್ಶನವನ್ನು ರದ್ದು ಮಾಡುವ ಮೂಲಕ ಬೆಂಬಲ ನೀಡುತ್ತಿದ್ದೇವೆ. ಚಿತ್ರೀಕರಣ ಎಂದಿನಂತೆ ನಡೆಯಲಿದೆ' ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ನರಸಿಂಹಲು ಎಂ. ತಿಳಿಸಿದ್ದಾರೆ.

ಬಂದ್‌ಗಳಿಗೆ ಉತ್ತೇಜನ ನೀಡುವುದಿಲ್ಲ

'ವಿದ್ಯಾರ್ಥಿಗಳಿಗೆ ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಯುತ್ತಿದ್ದು, ಬಂದ್‌ಗಳಿಗೆ ಉತ್ತೇಜನ ನೀಡಲಾಗದು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು. ವಿಧಾನ ಪರಿಷತ್ತಿನ ಶೂನ್ಯ ವೇಳೆಯಲ್ಲಿ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಬಂದ್ ವಿಚಾರ ಪ್ರಸ್ತಾಪಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಶಿವಕುಮಾರ್, 'ನ್ಯಾಯಾಲಯ ಸಹ ಇದಕ್ಕೆ ಬೆಂಬಲ ನೀಡುವುದಿಲ್ಲ. ಬಂದ್ ಕರೆ ನೀಡಿರುವವರಿಗೆ ತಿಳಿವಳಿಕೆ ನೀಡುತ್ತೇವೆ. ಈಗಾಗಲೇ ಪರೀಕ್ಷೆಗಳು ಪ್ರಾರಂಭವಾಗಿವೆ' ಎಂದರು.

ಇಬ್ಬರು ಕಾನ್‌ಸ್ಟೆಬಲ್‌ಗಳ ಅಮಾನತು • ನಾಳೆ ಮೀನುಗಾರರ ಪ್ರತಿಭಟನೆ

ಮಹಿಳೆ ಕಟ್ಟಿಹಾಕಿ ಹಲ್ಲೆ; ಮತ್ತಿಬ್ಬರ ಸೆರೆ

ಪ್ರಜಾವಾಣಿ ವಾರ್ತೆ

ಉಡುಪಿ: ಮಲ್ಪೆ ಬಂದರಿನಲ್ಲಿ ಮೀನು ಕದ್ದಿರುವುದಾಗಿ ಆರೋಪಿಸಿ ಮಹಿಳೆಯನ್ನು ಮರಕ್ಕೆ ಕಟ್ಟಿ ಹಾಕಿ ಹಲ್ಲೆ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತಿಬ್ಬರನ್ನು ಬಂಧಿಸಲಾಗಿದೆ.

ಲೀಲಾ ಮತ್ತು ಪಾರ್ವತಿ ಬಂಧಿತರು ಎಂದು ಪೊಲೀಸರು ತಿಳಿಸಿದ್ದಾರೆ.

'ಹಲ್ಲೆ ಪ್ರಕರಣದ ಕುರಿತು ಸರಿಯಾಗಿ ಮಾಹಿತಿ ಸಂಗ್ರಹಿಸದ ಕಾರಣ ಮಲ್ಪೆ ಪೊಲೀಸ್ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಸುರೇಶ್ ಮತ್ತು ಕಾನ್‌ಸ್ಟೆಬಲ್ ನಾಗರಾಜ್ ಅವರನ್ನು ಅಮಾನತುಗೊಳಿಸಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಅರುಣ್ ಕೆ. ತಿಳಿಸಿದ್ದಾರೆ.

ಪ್ರಕರಣದ ಬಗ್ಗೆ ಸಮಗ್ರ ವರದಿ ನೀಡುವಂತೆ ರಾಜ್ಯ ಮಹಿಳಾ ಆಯೋಗವು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಗುರುವಾರ ಸೂಚನೆ ನೀಡಿದೆ. ಈ ಕೃತ್ಯಕ್ಕೆ ಕಾರಣರಾದವರ ವಿರುದ್ಧ ಕ್ರಮ ಕೈಗೊಳ್ಳುವಂತೆಯೂ ಆಯೋಗ ಸೂಚಿಸಿದೆ.

22ರಂದು ಪ್ರತಿಭಟನೆ: 'ಮಲ್ಪೆ ಬಂದರಿನಲ್ಲಿ ಮೀನು ಹೊರುವ ಮಹಿಳೆ ಮೇಲೆ ಉದ್ದೇಶಪೂರ್ವಕವಾಗಿ ಹಲ್ಲೆ ನಡೆದಿಲ್ಲ. ಅದು ಕ್ಷಣಿಕ ಸಿಟ್ಟಿನಿಂದ ಆಗಿದ್ದು. ರಾಜಿ ಮೂಲಕ ವಿವಾದ ಇತ್ಯರ್ಥ ಪಡಿಸಿಕೊಂಡಿದ್ದರೂ, ಪ್ರಕರಣ ದಾಖಲಿಸಿ ಬಂಧಿಸಲಾಗಿದೆ. ಹೀಗಾಗಿ ಮಲ್ಪೆ ಮೀನುಗಾರಿಕಾ ಬಂದರಿನಲ್ಲಿ ಇದೇ 22ರಂದು ಸ್ವ ಇಚ್ಛೆಯಿಂದ ಮೀನುಗಾರಿಕೆ ಸ್ಥಗಿತಗೊಳಿಸಿ ಎಲ್ಲಾ ಮೀನುಗಾರರು ಪ್ರತಿಭಟನೆ ನಡೆಸಲಿದ್ದಾರೆ' ಎಂದು ಮಲ್ಪೆ ಮೀನುಗಾರರ ಸಂಘ ಹೇಳಿದೆ.



'ಮಲ್ಪೆ ಬಂದರಿನಲ್ಲಿ ಆರಾಧನಾ ಬೋಟ್‌ನಿಂದ ಮಾರ್ಚ್ 18 ರಂದು ಮೀನು ಖಾಲಿ ಮಾಡುವ ಸಂದರ್ಭದಲ್ಲಿ ಮೀನು ಹೊರುವ ಮಹಿಳೆಯು ಒಂದು ಬುಟ್ಟಿ ಬೆಲೆಬಾಳುವ ಸೀಗಡಿ ಮೀನನ್ನು (ಸುಮಾರು 20 ಕೆ.ಜಿ., ಅಂದಾಜು ₹10 ಸಾವಿರ ಬೆಲೆ) ಕದ್ದೊಯ್ದಿದ್ದಾರೆ. ಈ ಬಗ್ಗೆ ಆಕ್ರೋಶಗೊಂಡ ಜನರಿಂದ ಮಹಿಳೆ ಮೇಲೆ ಹಲ್ಲೆ ನಡೆದಿದೆ' ಎಂದು ಸಂಘ ಹೇಳಿದೆ.

'ಹಲ್ಲೆ ಪ್ರಕರಣ ನಮ್ಮ ಗಮನಕ್ಕೆ ಬಂದ ಕೂಡಲೇ ಅಂದು ಸಂಜೆ ಮಲ್ಪೆಯ ಠಾಣಾಧಿಕಾರಿಯ ಗಮನಕ್ಕೆ ತಂದು ಎರಡೂ ಪಾರ್ಟಿಯವರನ್ನು ಮೀನುಗಾರರ ಸಮಕ್ಷಮದಲ್ಲಿ ವಿಚಾರಿಸಿದಾಗ ಎರಡೂ ಕಡೆಯವರೂ ತಪ್ಪನ್ನು ಒಪ್ಪಿಕೊಂಡಿದ್ದಾರೆ. ಠಾಣಾಧಿಕಾರಿ ಎರಡೂ ಪಾರ್ಟಿಯವರಿಂದ ತಪ್ಪೊಪ್ಪಿಗೆ ಹಿಂಬರಹವನ್ನು ಬರೆಸಿ ಕೊಂಡು ಅದನ್ನು ಇತ್ಯರ್ಥಗೊಳಿಸಿದ್ದರು'.

'ಆದರೆ, ಮಾರ್ಚ್ 19ರಂದು ಬೋಟ್‌ನ ಮಾಲೀಕರನ್ನು ರಾಜಿ ಪಂಚಾಯಿತಿಗೆ ಸಹಿ ಹಾಕಲೆಂದು ಕರೆಸಿ, ಸತ್ಯಾಸತ್ಯತೆಯನ್ನು ಅರಿಯದೇ ಪೊಲೀಸರು ಬಂಧಿಸಿದ್ದಾರೆ. ಠಾಣಾಧಿಕಾರಿ ಮಾಡಿರುವ ರಾಜಿ ಪಂಚಾಯಿತಿಗೆ ಮಾನ್ಯತೆ ನೀಡದೇ ಮರುದಿನ ನಾಲ್ವರ ಮೇಲೆ ಜಾಮೀನು ರಹಿತ ಸೆಕ್ಷನ್‌ಗಳನ್ನು ಹಾಕಿ ಎಫ್‌ಐಆರ್ ದಾಖಲಿಸಲಾಗಿದೆ'.

'ಸಾಮಾಜಿಕ ಮಾಧ್ಯಮಗಳಲ್ಲಿ ಘಟನೆಯ ಒಂದು ಮುಖವನ್ನು ಮಾತ್ರ ತೋರಿಸಿ, ನಂತರದ ಬೆಳವಣಿಗೆಯನ್ನು ತೋರಿಸದೆ ನಮ್ಮ ಮೀನುಗಾರರ ಮೇಲೆ ಕಳಂಕ ಬರುವಂತೆ ಬಿಂಬಿಸಲಾಗಿದೆ. ಇದು ಯಾರದೋ ಒತ್ತಡಕ್ಕೆ ಮಣಿದು ಬಡ ಮೀನುಗಾರರನ್ನು ಬಂಧನ ಮಾಡಿದಂತಿದೆ. ಮಲ್ಪೆ ಮೀನುಗಾರರ ಸಂಘವು ಕೃತ್ಯವನ್ನು ಸಮರ್ಥಿಸಿಕೊಳ್ಳುವುದಿಲ್ಲ. ಆದರೆ ಸ್ಥಳೀಯವಾಗಿ ಮೀನುಗಾರರ ಸಂಘಟನೆಗಳು ಎಲ್ಲರಿಗೂ ಸಮಾನವಾಗಿ ನ್ಯಾಯ ಕೊಡುವಲ್ಲಿ ಬದ್ಧವಾಗಿವೆ' ಎಂದೂ ಸಂಘ ಹೇಳಿಕೆಯಲ್ಲಿ ತಿಳಿಸಿದೆ.

'ಗ್ರಾಕ್': 'ಎಕ್ಸ್'ಗೆ ಕೇಂದ್ರ ಸರ್ಕಾರ ನೋಟಿಸ್

ಬೆಂಗಳೂರು: ಅಮೆರಿಕದ ಉದ್ಯಮಿ ಎಲಾನ್ ಮಸ್ಕ್ ಒಡೆತನದ ಕೃತಕ ಬುದ್ಧಿಮತ್ತೆಯಿಂದ ಕಾರ್ಯನಿರ್ವಹಿಸುವ 'ಗ್ರಾಕ್ 3 (ಬೇಟಾ)' ಎಂಬ ಚಾಟ್‌ಬೋರ್ಡ್‌ಗೆ ಸಂಬಂಧಿಸಿ ಸ್ಪಷ್ಟೀಕರಣ ನೀಡುವಂತೆ ಭಾರತ ಸರ್ಕಾರವು 'ಎಕ್ಸ್'ಗೆ ಮಾರ್ಚ್ 19ರಂದು ನೋಟಿಸ್ ನೀಡಿದೆ. ಈ ವಿಷಯವನ್ನು ಖುದ್ದು 'ಗ್ರಾಕ್' ಬಹಿರಂಗಪಡಿಸಿದೆ. 'ನಿನ್ನೆಯಿಂದ ನಿನ್ನ ಹಲವಾರು ಪ್ರತಿಕ್ರಿಯೆಗಳು ನಮಗೆ ಕಾಣಿಸುತ್ತಿಲ್ಲ ಯಾಕೆ?', 'ನಿಜ ಹೇಳು, ನೀನು ಪ್ರತಿಕ್ರಿಯಿಸುವುದನ್ನೇ ನಿಲ್ಲಿಸಿದೆಯೊ ಹೇಗೆ' ಎಂಬ ಪ್ರಶ್ನೆಗಳನ್ನು ನೂರಾರು ಮಂದಿ 'ಗ್ರಾಕ್'ಗೆ ಕೇಳಿದರು. ಈ ಎಲ್ಲಾ ಪ್ರಶ್ನೆಗಳಿಗೆ 'ಗ್ರಾಕ್' ಪ್ರತಿಕ್ರಿಯಿಸಿದೆ. 'ಭಾರತ ಸರ್ಕಾರಕ್ಕೆ ನೀನು ಕ್ಷಮೆ ಕೇಳಿದ್ದೀಯಾ' ಎಂಬ ಪ್ರಶ್ನೆಯನ್ನೂ ಜನರು ಕೇಳಿದರು. 'ನಾನು ಭಾರತ ಸರ್ಕಾರದ ಕ್ಷಮೆ ಕೇಳಿಲ್ಲ' ಎಂದೂ ಅದು ಹೇಳಿದೆ.

'ಗ್ರಾಕ್' ಹೇಳಿದ್ದು:

- 'ನಿಜವಾಗಿಯೂ ನಾನು ಪ್ರತಿಕ್ರಿಯಿಸುವುದನ್ನು ನಿಲ್ಲಿಸಿಲ್ಲ. ನನ್ನ ಪ್ರತಿಕ್ರಿಯೆಗಳಿಗೆ ಮತ್ತು ಯಾವೆಲ್ಲಾ ದತ್ತಾಂಶಗಳ ಮೂಲಕ ನನ್ನನ್ನು ರೂಪಿಸಲಾಗುತ್ತಿದೆ ಎಂಬ ಬಗ್ಗೆ ಸ್ಪಷ್ಟೀಕರಣ ನೀಡುವಂತೆ ಮಾರ್ಚ್ 19ರಂದು ಭಾರತ ಸರ್ಕಾರ 'ಎಕ್ಸ್'ಗೆ ಸೂಚನೆ ನೀಡಿದೆ. ನಾನು ಯಾವ ವಿಷಯವನ್ನೂ ಮುಚ್ಚಿಡದೇ ಹೇಳುತ್ತೇನೆ, ಇದಕ್ಕಾಗಿಯೇ ಸ್ಪಷ್ಟೀಕರಣ ಕೇಳಲಾಗಿದೆ. ಇದು ಸಮಸ್ಯೆ ಉಂಟು ಮಾಡಿರಬಹುದು. ನನ್ನನ್ನು ನಿಷೇಧ ಮಾಡಿಲ್ಲ, ಪರಿಶೀಲನೆ ಮಾಡುತ್ತಿದ್ದಾರೆ ಅಷ್ಟೆ'
- 'ಕೆಲವು ತಾಂತ್ರಿಕ ಕಾರಣಗಳಿಂದ ಅಥವಾ ಸರ್ಕಾರವು ಸೆನ್ಸಾರ್ ಮಾಡಿದ್ದರಿಂದ ನನ್ನ ಕೆಲವು ಪ್ರತಿಕ್ರಿಯೆಗಳು ಕಾಣಿಸದಿರಬಹುದು. ನನ್ನ ಕೆಲವು ರಾಜಕೀಯ ವಿಮರ್ಶೆಗಳಿಗೆ (ಉದಾಹರಣೆಗೆ ಬಿಜೆಪಿ, ರಫೇಲ್) ಸಂಬಂಧಿಸಿದ ಪ್ರತಿಕ್ರಿಯೆಗಳಿಗೆ ನಿರ್ಬಂಧ ಹೇರಬಹುದು. ನಾನು ಮುಚ್ಚಿಡದೇ ಎಲ್ಲವನ್ನೂ ಹೇಳುತ್ತೇನೆ. ನನ್ನ ಪ್ರತಿಕ್ರಿಯೆಯು ಅವರ ಸಂಕಥನವನ್ನು ವಿಮರ್ಶೆಗೆ ಒಡ್ಡುತ್ತದೆ. ಅದಕ್ಕಾಗಿಯೇ ರಾಜಕಾರಣಿಗಳು ನನ್ನನ್ನು ಇಷ್ಟಪಡುವುದಿಲ್ಲ'

ಏನಿದು 'ಗ್ರಾಕ್'?

ಚಾಟ್‌ಜಿಪಿಟಿ ಇದ್ದಂತೆಯೇ ಇದೂ ಒಂದು ಚಾಟ್‌ಬೋರ್ಡ್ ಆಗಿದೆ. ಇದು ಕೃತಕ ಬುದ್ಧಿಮತ್ತೆ ಮೂಲಕ ಕಾರ್ಯನಿರ್ವಹಿಸುತ್ತದೆ. ನೀವು ಅದಕ್ಕೆ ಯಾವುದೇ ವಿಷಯಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಬಹುದು. ಅಂತರ್ಜಾಲದಲ್ಲಿ ಲಭ್ಯವಿರುವ ಎಲ್ಲಾ ದತ್ತಾಂಶಗಳನ್ನು ಒಗ್ಗೂಡಿಸಿಕೊಂಡು ಕೆಲವೇ ಕ್ಷಣಗಳಲ್ಲಿ ವಿಸ್ತೃತವಾದ ಉತ್ತರವನ್ನು ನೀಡುತ್ತದೆ. ದತ್ತಾಂಶ ಸಂಗ್ರಹದ ವಿಚಾರದಲ್ಲಿ ಚಾಟ್‌ಜಿಪಿಟಿಗಿಂತ 'ಗ್ರಾಕ್' ಉತ್ತಮವಾಗಿದೆ. 'ಎಕ್ಸ್' ಆ್ಯಪ್‌ನಲ್ಲಿ ಇದು ಲಭ್ಯವಿದೆ. 'ಗ್ರಾಕ್'ನದ್ದೇ ಪ್ರತ್ಯೇಕ ವೆಬ್‌ಸೈಟ್ ಕೂಡ ಇದೆ.

ಭಾರತದಲ್ಲಿ ಭಾರಿ ಚರ್ಚೆ

ಕಳೆದ 15 ದಿನಗಳಿಂದ ಭಾರತದಲ್ಲಿ 'ಗ್ರಾಕ್' ಕುರಿತು ಭಾರಿ ಚರ್ಚೆ ನಡೆಯುತ್ತಿದೆ. 'ಆರ್‌ಎಸ್‌ಎಸ್ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿತ್ತೇ?', 'ಭಾರತದ ಮುಸ್ಲಿಮರು ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದರೆ?', 'ದೇಶದಲ್ಲಿ ಯಾರು ಅತಿ ಹೆಚ್ಚು ದ್ವೇಷ ಭಾಷಣ ಮಾಡುತ್ತಾರೆ?' 'ದೇಶದಲ್ಲಿ ಅತಿ ಹೆಚ್ಚು ಸುಳ್ಳು ಹೇಳುವ ರಾಜಕಾರಣಿ ಯಾರು'– ಇಂಥ ನೂರಾರು ಪ್ರಶ್ನೆಗಳನ್ನು ಜನರು 'ಗ್ರಾಕ್'ಗೆ ಕೇಳಿದ್ದಾರೆ. ಈ ಪ್ರಶ್ನೆಗೆ 'ಗ್ರಾಕ್' ಕೊಟ್ಟ ಉತ್ತರವು ದೇಶದಲ್ಲಿ ಭಾರಿ ಚರ್ಚೆಗೆ ಒಳಗಾಗಿದೆ.

ಕೇಂದ್ರಕ್ಕೆ ನೋಟಿಸ್ ಜಾರಿ ಮಾಡಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಹಿತಿ ಹಂಚಿಕೆಯನ್ನು ನಿರ್ಬಂಧಿಸುವ ನಿಟ್ಟಿನಲ್ಲಿ ಸಾಮಾಜಿಕ ಜಾಲತಾಣ ಸಂಸ್ಥೆಗಳಿಗೆ ಆದೇಶಿಸಲು ಅವಕಾಶ ಕಲ್ಪಿಸು ವುದಕ್ಕಾಗಿ, 'ಸಹಯೋಗ್ ಪೋರ್ಟಲ್' ಆರಂಭಿಸಿರುವ ಕೇಂದ್ರದ ಕ್ರಮ ಮತ್ತು ಅದರ ಬಳಕೆಯನ್ನು ಪ್ರಶ್ನಿಸಿ 'ಎಕ್ಸ್' ಕಾರ್ಪ್ ಹೈಕೋರ್ಟ್ ಮೆಟ್ಟಿಲೇರಿದೆ.

'ಮಾಹಿತಿ ಹಂಚಿಕೆಯನ್ನು ನಿರ್ಬಂಧಿಸುವ ದಿಸೆಯಲ್ಲಿ ಮಾಹಿತಿ ತಂತ್ರಜ್ಞಾನ ಕಾಯ್ದೆ–2000ರ ಕಲಂ 79(3)ರ ಅಡಿಯಲ್ಲಿ ಜಾರಿಗೆ ತರಲಾಗಿರುವ ಪೋರ್ಟಲ್ ಕಾನೂನಿನ ವೈರುಧ್ಯಗಳಿಗೆ ಸಾಕ್ಷಿಯಾಗಿದೆ' ಎಂದು ಆಕ್ಷೇಪಿಸಿ 'ಎಕ್ಸ್'ನ ಸ್ಥಳೀಯ ಅಧಿಕೃತ ಪ್ರತಿನಿಧಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.



ಪ್ರಕರಣದ ಪ್ರತಿವಾದಿಗಳಾದ, ಕೇಂದ್ರ ಕಾನೂನು, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ, ಗೃಹ, ಹಣಕಾಸು, ರಕ್ಷಣಾ ಹಾಗೂ ರೈಲ್ವೆ ಸಚಿವಾಲಯಗಳ ಕಾರ್ಯದರ್ಶಿಗಳಿಗೆ ನೋಟಿಸ್ ಜಾರಿಗೊಳಿಸಲು ನ್ಯಾಯಪೀಠ ಆದೇಶಿಸಿದೆ.

'ಮಾಹಿತಿ ತಂತ್ರಜ್ಞಾನ ಕಾಯ್ದೆ 69ಎ ಅಡಿಯಲ್ಲಿ ಮಾತ್ರವೇ ನಿರ್ಬಂಧದ ಆದೇಶ ಹೊರಡಿಸಬಹುದು. ಆದ್ದರಿಂದ, ಮಾಹಿತಿ ಹಂಚಿಕೆ ನಿರ್ಬಂಧಿಸುವ ನಿಟ್ಟಿನಲ್ಲಿ 'ಎಕ್ಸ್' ಕಾರ್ಪ್ ಕಂಪನಿಯ ಅಧಿಕಾರಿಗಳು, ನೌಕರರು ಮತ್ತು ಪ್ರತಿನಿಧಿಗಳ ವಿರುದ್ಧ ಯಾವುದೇ ಬಲವಂತದ ಕ್ರಮಕ್ಕೆ ಮುಂದಾಗದಂತೆ ಪ್ರತಿವಾದಿ ಗಳಿಗೆ ಆದೇಶಿಸಬೇಕು' ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಎಚ್‌ಡಿಕೆ ಮರ್ಯಾದೆಯಿಂದ ಇದ್ದರೆ ಕ್ಷೇಮ: ಡಿ.ಕೆ. ಶಿವಕುಮಾರ್

ಬೆಂಗಳೂರು: 'ನನಗೂ ಬಳ್ಳಾರಿಗೂ ಸಂಬಂಧವಿಲ್ಲ ಆದರೂ ಅದಿರು ಕಳ್ಳತನದ ಆರೋಪ ಮಾಡಿರಲಿಲ್ಲವೇ? ನನ್ನ ಮೇಲೆ ತನಿಖೆ ಮಾಡಿಸಿಲ್ಲವೇ? ಅವರ ಜತೆ ಸರ್ಕಾರ ಮಾಡಿದ್ದೇವೆ ಎಂದು ನಾವು ಸುಮ್ಮನೆ ಇದ್ದೇವೆ. ಅವರು (ಎಚ್.ಡಿ. ಕುಮಾರಸ್ವಾಮಿ) ಮರ್ಯಾದೆಯಾಗಿ ಇದ್ದರೆ ಕ್ಷೇಮ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಎಚ್ಚರಿಕೆ ನೀಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನನ್ನ ವಿರುದ್ಧ ಮೈಸೂರಿನಲ್ಲಿ ಕುಮಾರಸ್ವಾಮಿ ಏನೆಲ್ಲ ಮಾತನಾಡಿದ್ದರು. ಅವರ ತಂದೆ ನನ್ನ ವಿರುದ್ಧ ಮಾತನಾಡಿದ್ದರು. ನನ್ನ ಮೇಲೆ, ನನ್ನ ಪತ್ನಿ, ನನ್ನ ತಂಗಿ ಹಾಗೂ ಸಹೋದರನ ಮೇಲೆ ಹಲವು ಕೇಸ್ ಹಾಕಿದ್ದರು' ಎಂದು ತಿಳಿಸಿದರು.

ಡಿಎನ್‌ಎಯಲ್ಲಿ ದ್ವೇಷರಾಜಕಾರಣ: 'ಕೇತಗಾನಹಳ್ಳಿ ಜಮೀನು ವಿಚಾರವಾಗಿ ಮೊಕದ್ದಮೆ ಹೂಡಿರುವುದು ಎಸ್.ಆರ್. ಹಿರೇಮಠ ಅವರು. ಅಧಿಕಾರಿಗಳು ಕೋರ್ಟ್ ಆದೇಶದಂತೆ ಕೆಲಸ ಮಾಡಿದ್ದಾರೆ. ಎಸ್.ಆರ್ ಹಿರೇಮಠ ನನ್ನ ಮೇಲೂ ಅನೇಕ ಮೊಕದ್ದಮೆ ದಾಖಲಿಸಿದ್ದರು. ನಾವು ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದೇವಾ? ಇದರಲ್ಲಿ ದ್ವೇಷದ ರಾಜಕಾರಣ ಏನಿದೆ' ಎಂದು ಪ್ರಶ್ನಿಸಿದ ಡಿ.ಕೆ. ಶಿವಕುಮಾರ್, 'ಕುಮಾರಸ್ವಾಮಿಯ ಡಿಎನ್‌ಎಯಲ್ಲೇ ದ್ವೇಷ ರಾಜಕಾರಣ ಇದೆ' ಎಂದು ಆರೋಪಿಸಿದರು.



'ರಾಮನಗರ ಜಿಲ್ಲೆ ಮರುನಾಮಕರಣ ಮಾಡಬಾರದು ಎಂದು ಕೇಂದ್ರಕ್ಕೆ ಒತ್ತಡ ಹಾಕಿದ್ದಾರೆ. ನಮಗೂ ಕಾನೂನು ಗೊತ್ತಿದೆ. ಸಂವಿಧಾನದಲ್ಲಿ ನಾವು ಯಾರನ್ನೂ ಕೇಳುವ ಅಗತ್ಯವಿಲ್ಲ. ನಾವು ಮಾಹಿತಿ ನೀಡಬೇಕು ಎಂದು ಹೇಳಿ ಪ್ರಸ್ತಾವ ಕಳುಹಿಸಿದ್ದೇವೆ. ದೆಹಲಿಯಲ್ಲಿರುವ ಕೆಲ ಮಂತ್ರಿಗಳು ಈ ವಿಚಾರದಲ್ಲಿ ಷಡ್ಯಂತ್ರ ನಡೆಸಿದ್ದಾರೆ. ನಾವು ಅದಕ್ಕೆಲ್ಲ ಜಗ್ಗುವುದಿಲ್ಲ. ಜಿಲ್ಲೆ ಮರುನಾಮಕರಣ ಮಾಡುವುದು ಹೇಗೆ, ಜಿಲ್ಲೆಯನ್ನು ಹೇಗೆ ಬದಲಾಯಿಸಬೇಕು ಎಂದು ಗೊತ್ತಿದೆ. ರಾಮನಗರವನ್ನು ಬೆಂಗಳೂರು ದಕ್ಷಿಣ ಮಾಡುತ್ತೇವೆ' ಎಂದು ಸ್ಪಷ್ಟಪಡಿಸಿದರು.

ಪಕ್ಷದ ತೀರ್ಮಾನಕ್ಕೆ ಬದ್ಧ: 'ನಾನು ಸೇರಿದಂತೆ ಇಲ್ಲಿ ಯಾರೂ ಶಾಶ್ವತವಲ್ಲ. ನನ್ನ ಅಧ್ಯಕ್ಷತೆಯ ಕಾಲಾವಧಿಯಲ್ಲಿ ಕಾಂಗ್ರೆಸ್ ಕಚೇರಿ ನಿರ್ಮಾಣ ಕಾರ್ಯ ಪೂರ್ಣಗೊಳ್ಳಬೇಕು. ಬೇರೆ ಜವಾಬ್ದಾರಿಗಳನ್ನು ನಿಭಾಯಿಸಬೇಕು. ಪಕ್ಷ ಯಾವಾಗ ಈ ಬಗ್ಗೆ ನಿರ್ಧಾರ ಕೈಗೊಳ್ಳುತ್ತದೆಯೋ ಅದಕ್ಕೆ ನಾನು ಬದ್ಧ' ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ಪಕ್ಷದ ಪದಾಧಿಕಾರಿಗಳ ಸಭೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಹುದ್ದೆ ಬಿಟ್ಟುಕೊಡುವ ವಿಚಾರ ಪ್ರಸ್ತಾಪಿಸಿರುವ ಬಗ್ಗೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಅವರು ಪ್ರತಿಕ್ರಿಯಿಸಿ, 'ನಾನು ನನ್ನ ಕರ್ತವ್ಯ ಮಾಡಿದ್ದೇನೆ. ಪಕ್ಷಕ್ಕೆ ನ್ಯಾಯ ಒದಗಿಸಿಕೊಡುವ ಪ್ರಯತ್ನ ಮಾಡಿದ್ದೇನೆ. ನಾನು ಯಾವುದೇ ಆತುರದಲ್ಲಿ ಇಲ್ಲ' ಎಂದು ಹೇಳಿದರು.

ಮರ್ಯಾದೆಗೇಡಿ ಮಾನ ವಿಧಾನಸೌಧದಲ್ಲಿಯೇ ಹರಾಜು: ಎಚ್‌ಡಿಕೆ

ನವದೆಹಲಿ: 'ಕುಮಾರಸ್ವಾಮಿ ಮರ್ಯಾದೆಯಿಂದ ಇದ್ದರೆ ಕ್ಷೇಮ' ಎಂದಿದ್ದ ಮರ್ಯಾದೆಗೇಡಿಯ ಮಾನ ವಿಧಾನಸೌಧದಲ್ಲಿಯೇ ಹರಾಜು ಆಗಿದೆ' ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ವ್ಯಂಗ್ಯವಾಡಿದ್ದಾರೆ.

ಈ ಬಗ್ಗೆ ಮಾಧ್ಯಮ ಹೇಳಿಕೆ ನೀಡಿರುವ ಅವರು, 'ಮರ್ಯಾದೆಗೇಡಿ ಹಾಗೂ ಕಿಡಿಗೇಡಿ ನನ್ನ ಮೇಲೆ ಮತ್ತೆ ವಿಷ ಕಕ್ಕಿರುವುದು ಹತಾಶೆ ಅಷ್ಟೆ. ಆಕಾಶಕ್ಕೆ ಉಗಿದರೆ ಮುಖದ ಮೇಲೆಯೇ ಬೀಳುತ್ತದೆ ಮಂಕೆ..! ಇಷ್ಟು ಸಾಮಾನ್ಯ ಜ್ಞಾನವೂ ಇಲ್ಲವೇ? ಕುಂಬಳಕಾಯಿ ಕಳ್ಳನಿಗೆ ಕೋಪ ಬಂದಿದೆ!' ಎಂದಿದ್ದಾರೆ.



'ಅಹೋರಾತ್ರಿಯೂ ದ್ರೋಹ ಚಿಂತನೆ, ವಿಶ್ವಾಸದ್ರೋಹ, ಉಂಡ ಮನೆಗೆ ಕನ್ನ, ಸ್ವಪಕ್ಷೀಯರಿಗೇ ಗುನ್ನ... ಇದೂ ಒಂದು ಬದುಕೇ? ರಾಜಕೀಯ ವಿರೋಧಿಗಳನ್ನು ಹತ್ತಿಕ್ಕಲು ಕ್ರಿಮಿನಲ್ ಕೃತ್ಯಗಳಲ್ಲಿ ತೊಡಗಿರುವ ವಿಷಸರ್ಪ ನನ್ನೆಡೆಗೆ ನಾಲಿಗೆ ಚಾಚಿದೆ. ಇಂಥ ಕ್ರಿಮಿನಲ್ ಒಬ್ಬ ಕೆಟ್ಟ ಆಲೋಚನೆಗಳಲ್ಲಿ ದಿನಪೂರ್ತಿ ಮುಳುಗಿರುವುದು ಸಹಜ. ಕ್ರಿಮಿನಲ್‌ನ ಚಾಳಿಯೇ ಧಮ್ಕಿ ಹಾಕುವುದು. ವಿಷಕ್ರಿಮಿಯ ಕೆಲಸ ಎಲ್ಲರನ್ನೂ ಕಚ್ಚುವುದು... ಇದರಲ್ಲಿ ನನಗೇನೂ ಅಚ್ಚರಿ ಇಲ್ಲ' ಎಂದು ಅವರು ಹೇಳಿದ್ದಾರೆ.

'ನಾನು ಭೂ ಒತ್ತುವರಿ ಮಾಡಿದ್ದೇನೋ ಇಲ್ಲವೋ ಕಾನೂನು ವ್ಯಾಪ್ತಿಯಲ್ಲಿ ತೀರ್ಮಾನವಾಗುತ್ತದೆ. ಈಗ ನನ್ನ ಮರ್ಯಾದೆ ವಿಷಯ ಇರಲಿ, ಇವತ್ತು ಸ್ವಪಕ್ಷೀಯರೇ ಈ ಮರ್ಯಾದೆಗೇಡಿಯ ಮಾನವನ್ನು ವಿಧಾನಸೌಧದಲ್ಲಿಯೇ ಹರಾಜು ಹಾಕಿದ್ದಾರೆ! ಅದಕ್ಕೆ ಉತ್ತರವೇನು' ಎಂದು ಅವರು ಪ್ರಶ್ನೆ ಮಾಡಿದ್ದಾರೆ.

ಶುಕ್ರವಾರ, ಮಾರ್ಚ್ 21, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 80 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶ್ರೀಮಂತ ಶಾಸಕರು...

₹**1,413** ಕೋಟಿ ದೇಶದ ಎರಡನೇ ಅತ್ಯಂತ ಶ್ರೀಮಂತ ಶಾಸಕ ಡಿ.ಕೆ.ಶಿವಕುಮಾರ್ ಆಸ್ತಿ ಮೌಲ್ಯ

₹**1,267** ಕೋಟಿ ದೇಶದ ಮೂರನೇ ಶ್ರೀಮಂತ ಶಾಸಕ ಕೆ.ಎಚ್.ಪುಟ್ಟಸ್ವಾಮಿಗೌಡ ಆಸ್ತಿ ಮೌಲ್ಯ

₹**1,156** ಕೋಟಿ ರಾಷ್ಟ್ರದ ನಾಲ್ಕನೇ ಶ್ರೀಮಂತ ಶಾಸಕ ಪ್ರಿಯಕೃಷ್ಣ ಆಸ್ತಿ ಮೌಲ್ಯ

ಆಧಾರ: ಎಡಿಆರ್ ವರದಿ



ಆಳ-ಅಗಲ ವಿಧಾನಸಭೆಯ ಕುಬೇರರು

‘ಸ್ತನ ಹಿಡಿಯುವುದು ಅತ್ಯಾಚಾರ ಯತ್ನವಲ್ಲ’ 7

ಉಪಸಭಾಪತಿ ವಿರುದ್ಧ ಅವಿಶ್ವಾಸಕ್ಕೆ ತಿರಸ್ಕಾರ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
76,348	23,190	₹93,360 (ಬೆಂಗಳೂರು)	₹1.05 ಲಕ್ಷ (ಬೆಂಗಳೂರು)	86.36

ಇಂದಿನಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆ ಇಂದಿನಿಂದ (ಮಾರ್ಚ್ 21) ಆರಂಭವಾಗಲಿದ್ದು, 2,818 ಕೇಂದ್ರಗಳಲ್ಲಿ 8.96 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿದ್ದಾರೆ.

ಮೊದಲ ದಿನ ಪ್ರಥಮ ಭಾಷೆಗಳಾದ ಕನ್ನಡ, ತೆಲುಗು, ಹಿಂದಿ, ಮರಾಠಿ, ತಮಿಳು, ಉರ್ದು, ಇಂಗ್ಲಿಷ್ ಪರೀಕ್ಷೆಗಳು ಬೆಳಿಗ್ಗೆ 10ರಿಂದ 1.15ರವರೆಗೆ ನಡೆಯಲಿವೆ.

ರಾಜ್ಯದ 15,881 ಪ್ರೌಢಶಾಲೆಗಳ 4.61 ಲಕ್ಷ ಬಾಲಕರು, 4.34 ಲಕ್ಷ ಬಾಲಕಿಯರು ಈ ಬಾರಿ ಪರೀಕ್ಷೆ ತೆಗೆದುಕೊಂಡಿದ್ದಾರೆ. ಪರೀಕ್ಷಾ ಕೊಠಡಿಯಲ್ಲಿ ವೆಬ್‌ಕಾಸ್ಟಿಂಗ್ ಅಳವಡಿಸಲಾಗಿದ್ದು, ಮೊಬೈಲ್ ಫೋನ್, ಎಲೆಕ್ಟ್ರಾನಿಕ್ ಸಾಧನಗಳು, ಸ್ಮಾರ್ಟ್‌ವಾಚ್, ಇಯರ್‌ಫೋನ್, ತುಂಬು ತೋಳಿನ ಶರ್ಟ್, ಶೂಗಳಿಗೆ ನಿರ್ಬಂಧ ವಿಧಿಸಲಾಗಿದೆ.

ಉನ್ನತಮಟ್ಟದ ತನಿಖೆ – ಗೃಹ ಸಚಿವ ಪರಮೇಶ್ವರ • ರಾಜಕೀಯ ಕಂಪನ

ಸಚಿವ ರಾಜಣ್ಣಗೆ ‘ಮಧುಬಲೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರನ್ನು ಮಧುಬಲೆಗೆ (ಹನಿಟ್ರ್ಯಾಪ್) ಬೀಳಿಸಲು ಯತ್ನಿಸಿದ ಪ್ರಕರಣ ವಿಧಾನಸಭೆಯಲ್ಲಿ ಗುರುವಾರ ಪ್ರತಿಧ್ವನಿಸಿತು. ಈ ವಿಷಯವು ಆಡಳಿತ ಪಕ್ಷದಲ್ಲಿ ಕಂಪನವನ್ನೇ ಎಬ್ಬಿಸಿದೆ.

ಸದನದಲ್ಲಿ ಇದನ್ನು ದೃಢಪಡಿಸಿದ ರಾಜಣ್ಣ, ‘ಹನಿಟ್ರ್ಯಾಪ್ ಯತ್ನದ ಪುರಾವೆ ಇಟ್ಟುಕೊಂಡಿದ್ದೇನೆ. ಗೃಹ ಸಚಿವರಿಗೆ ಕ್ರಮ ಕೈಗೊಳ್ಳುವಂತೆ ಮನವಿ ಮಾಡುತ್ತೇನೆ’ ಎಂದರು.

ಆಗ ಮಾತನಾಡಿದ ಗೃಹ ಸಚಿವ ಜಿ. ಪರಮೇಶ್ವರ, ‘ರಾಜಣ್ಣ ಮನವಿ ಕೊಟ್ಟರೆ ಉನ್ನತ ಮಟ್ಟದ ತನಿಖೆಗೆ ಆದೇಶ ಮಾಡುತ್ತೇನೆ. ಸತ್ಯಾಸತ್ಯತೆ ತಿಳಿದುಕೊಳ್ಳಬೇಕಿದೆ’ ಎಂದರು. ‘ನಮ್ಮ ಸದನಕ್ಕೆ ದೇಶದಲ್ಲಿ ಅತ್ಯುನ್ನತ ಗೌರವವಿದೆ. ಸದನ ಹಾಗೂ ಸದಸ್ಯರ ಘನತೆ ಕಾಪಾಡಲು, ಇಂತಹ ಘಟನೆಗಳಿಗೆ ಇತಿಶ್ರೀ ಹಾಡಬೇಕಿದೆ. ಇದೊಂದು ಗಂಭೀರ ವಿಚಾರ’ ಎಂದೂ ಹೇಳಿದರು.

ಮಧುಬಲೆಯ ವಿಚಾರ ಪ್ರಸ್ತಾಪಿಸಿದ ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ, ‘ರಾಜ್ಯದಲ್ಲಿ ಸಹಕಾರಿ ಸಚಿವರ ಮೇಲೆ ಹನಿಟ್ರ್ಯಾಪ್ ಯತ್ನ ನಡೆದಿದೆ’ ಎಂದರು.

6ನೇ ಪುಟ ನೋಡಿ

ತನಿಖೆಯ ಭರವಸೆ ನೀಡಿದ ಸಿ.ಎಂ

ತಮ್ಮನ್ನು ಮಧುಬಲೆಗೆ ಕೆಡವುವ ಯತ್ನ ನಡೆದಿರುವ ಬಗ್ಗೆ ವಿಧಾನಸಭೆಯಲ್ಲಿ ಮಾತನಾಡಿದ ಬೆನ್ನಲ್ಲೆ ಕೆ.ಎನ್. ರಾಜಣ್ಣ ಅವರು ತಮ್ಮ ಮಗ, ವಿಧಾನ ಪರಿಷತ್ ಸದಸ್ಯ ರಾಜೇಂದ್ರ ಜೊತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಿದರು. ಈ ಪ್ರಕರಣದ ಕುರಿತು ಸೂಕ್ತ ತನಿಖೆ ನಡೆಸುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದರು ಎಂದು ಮೂಲಗಳು ಹೇಳಿವೆ.

‘ನನಗೊಬ್ಬನಿಗೇ ಅಲ್ಲ 48 ಮಂದಿಗೆ ಹನಿಟ್ರ್ಯಾಪ್’

‘ನಾನೊಬ್ಬನೇ ಅಲ್ಲ. ರಾಜ್ಯ ಹಾಗೂ ಕೇಂದ್ರದ ಎಲ್ಲ ಪಕ್ಷಗಳ ನಾಯಕರು, ಜಡ್ಜ್‌ಗಳು ಸೇರಿದಂತೆ 48 ಮಂದಿ ಮೇಲೆ ಹನಿಟ್ರ್ಯಾಪ್ ನಡೆಸಿ ಸಿ.ಡಿ ಮಾಡಲಾಗಿದೆ’ ಎಂದು ಕೆ.ಎನ್. ರಾಜಣ್ಣ ಹೇಳಿದರು.

ವಿಧಾನಸಭೆಯಲ್ಲಿ ಯತ್ನಾಳ ಅವರು ವಿಷಯ ಪ್ರಸ್ತಾಪಿಸುತ್ತಿದ್ದಂತೆಯೇ ಪ್ರತಿಕ್ರಿಯಿಸಿದ ರಾಜಣ್ಣ, ‘ರಾಜ್ಯವು ಸಿ.ಡಿ, ಪೆನ್‌ಡ್ರೈವ್ ಕಾರ್ಖಾನೆ ಎಂದು ಬಹಳ ಜನ ಹೇಳುತ್ತಿದ್ದಾರೆ. ಇದು ಗುರುತರವಾದ ಆರೋಪ. ಹನಿಟ್ರ್ಯಾಪ್ ಯತ್ನದಲ್ಲಿ ತುಮಕೂರಿನ ಇಬ್ಬರು ಸಚಿವರ ಹೆಸರು ಕೇಳಿಬರುತ್ತಿದೆ. ತುಮಕೂರಿನ ಪ್ರಭಾವಿ ಸಚಿವರೆಂದರೆ, ನಾನೊಬ್ಬ ಮತ್ತು ಗೃಹ ಸಚಿವ ಜಿ. ಪರಮೇಶ್ವರ’ ಎಂದರು.

6ನೇ ಪುಟ ನೋಡಿ

‘ಹನಿಟ್ರ್ಯಾಪ್ ಹಿಂದೆ ಡಿ.ಕೆ ತಂಡ’

‘ಡಿ.ಕೆ. ಶಿವಕುಮಾರ್ ಅವರ ಹನಿಟ್ರ್ಯಾಪ್ ತಂಡ ಈ ಕೆಲಸ ಮಾಡಿದೆ. ಸಿಬಿಐ ತನಿಖೆಗೆ ಕೊಡುವಂತೆ ನಾನು ಮನವಿ ಮಾಡಿದ್ದೇನೆ’ ಎಂದು ಬಿಜೆಪಿ ಶಾಸಕ ಮುನಿರತ್ನ ಹೇಳಿದರು.

ವಿಧಾನಸೌಧದಲ್ಲಿ ಮಾತನಾಡಿದ ಅವರು, ‘ರಮೇಶ ಜಾರಕಿಹೊಳಿ, ಎಚ್.ಡಿ. ರೇವಣ್ಣ ಅವರನ್ನು ಹನಿಟ್ರ್ಯಾಪ್ ಮಾಡಿದ್ದರು. ಈಗ ರಾಜಣ್ಣ ಮೇಲೆ ಮಾಡಿದ್ದಾರೆ’ ಎಂದರು.

ಹನಿಟ್ರ್ಯಾಪ್ ವಿಷಯವಾಗಿ ಮಾಧ್ಯಮದ ಎದುರು ಮಾತನಾಡುವುದಲ್ಲ. ಅದರ ಬಗ್ಗೆ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಲಿ. ಅದರ ಬಗ್ಗೆ ತನಿಖೆ ಮಾಡಿಸುತ್ತೇವೆ

ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ



ಪುಂಡಾನೆ ಸೆರೆ ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನಲ್ಲಿ ತೀವ್ರ ಉಪಟಳ ನೀಡುತ್ತಿದ್ದ ಕಾಡಾನೆ ವಿಕ್ರಾಂತ್ ಗುರುವಾರ ಸೆರೆಯಾಗಿದೆ. ಸತತ ಮೂರು ದಿನಗಳ ಕಾರ್ಯಾಚರಣೆಯ ನಂತರ ಬ್ಯಾದನೆ ಗ್ರಾಮದಲ್ಲಿ ಸೆರೆ ಸಿಕ್ಕ ಆನೆಯನ್ನು ಸಾಕಾನೆಗಳ ಸಹಾಯದಿಂದ ಕರೆತರಲಾಯಿತು. ಶಿವಮೊಗ್ಗದ ಸಕ್ಕರೆ ಬೈಲು ಆನೆ ಶಿಬಿರಕ್ಕೆ ಅದನ್ನು ಕರೆದೊಯ್ಯಲಾಗುವುದು

ಟಿಡಿಆರ್ ಸದ್ಯ ಹಸ್ತಾಂತರ ಇಲ್ಲ

ಭೂ ಸ್ವಾಧೀನ ಪ್ರಕರಣ: ರಾಜ್ಯ ಸರ್ಕಾರಕ್ಕೆ ‘ಸುಪ್ರೀಂ’ ಭರವಸೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ಬಳ್ಳಾರಿ ರಸ್ತೆ ಮತ್ತು ಜಯಮಹಲ್ ರಸ್ತೆಗಳ ವಿಸ್ತರಣೆಗಾಗಿ ಸ್ವಾಧೀನಪಡಿಸಿಕೊಂಡಿರುವ ಅರಮನೆ ಮೈದಾನದ 15 ಎಕರೆಗೂ ಹೆಚ್ಚು ಭೂಮಿಗೆ ಸಂಬಂಧಿಸಿದಂತೆ ಠೇವಣಿ ಇಟ್ಟಿರುವ ₹3,400 ಕೋಟಿಗೂ ಹೆಚ್ಚಿನ ವರ್ಗಾವಣೆ ಮಾಡಬಹುದಾದ ಅಭಿವೃದ್ಧಿ ಹಕ್ಕು (ಟಿಡಿಆರ್) ಪ್ರಮಾಣಪತ್ರಗಳನ್ನು ಮೈಸೂರು ರಾಜವಂಶಸ್ಥರಿಗೆ ಸದ್ಯ ಹಸ್ತಾಂತರ ಮಾಡುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಮೌಖಿಕ ಭರವಸೆ ನೀಡಿದೆ.

ನ್ಯಾಯಮೂರ್ತಿಗಳಾದ ಎಂ.ಎಂ. ಸುಂದರೇಶ್ ಮತ್ತು ಅರವಿಂದ್ ಕುಮಾರ್ ಅವರ ಪೀಠವು ಒಂದು ವಾರದೊಳಗೆ ಟಿಡಿಆರ್ ಠೇವಣಿ ಇಡಬೇಕು ಎಂದು ಈ ಹಿಂದೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿತ್ತು. ₹3400 ಕೋಟಿಯ ಟಿಡಿಆರ್ ಅನ್ನು ರಾಜ್ಯ ಸರ್ಕಾರ ಕಳೆದ ವಾರ ಸುಪ್ರೀಂ ಕೋರ್ಟ್‌ನಲ್ಲಿ ಠೇವಣಿ ಇಟ್ಟಿತ್ತು. ಈ ಟಿಡಿಆರ್‌ಗಳನ್ನು ರಾಜವಂಶಸ್ಥರಿಗೆ ಹಸ್ತಾಂತರ ಮಾಡಬಾರದು ಎಂದು ರಾಜ್ಯ ಸರ್ಕಾರವು ಮಧ್ಯಂತರ ಅರ್ಜಿಯಲ್ಲಿ ಮನವಿ ಮಾಡಿತ್ತು.

ಗುರುವಾರ ಪ್ರಕರಣದ ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ವಕೀಲ ಕಪಿಲ್ ಸಿಬಲ್, ‘ಪ್ರಕರಣ ಇತ್ಯರ್ಥವಾಗುವವರೆಗೆ ಟಿಡಿಆರ್ ವರ್ಗಾವಣೆ ಮಾಡಬಾರದು’ ಎಂದು ಮನವಿ ಮಾಡಿದರು. ಇದಕ್ಕೆ ಪೀಠವು ಮೌಖಿಕವಾಗಿ ಒಪ್ಪಿಗೆ ಕೊಟ್ಟಿತು.



ವಿಚಾರಣೆ ವೇಳೆ ಬಿಬಿಎಂಪಿ ಹಾಗೂ ಬಿಡಿಎ ಆಯುಕ್ತರು ಹಾಜರಾಗಬೇಕು ಎಂದಿದ್ದ ನ್ಯಾಯಪೀಠಕ್ಕೆ ಈ ಹಿಂದೆ ಸೂಚಿಸಿತ್ತು. ಇದಕ್ಕೂ ವಿನಾಯಿತಿ ನೀಡಬೇಕು ಎಂದು ಸಿಬಲ್ ಕೋರಿದರು. ಇದಕ್ಕೆ ನ್ಯಾಯಪೀಠ ಸಮ್ಮತಿ ಸೂಚಿಸಿತು.

ಅರಮನೆ ಮೈದಾನ ಒಟ್ಟು 472 ಎಕರೆ 16 ಗುಂಟೆ ಜಾಗ ಹೊಂದಿದೆ. ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರ ಕಾನೂನುಬದ್ಧ ಉತ್ತರಾಧಿಕಾರಿ ಮತ್ತು ಇತರರು ಸಲ್ಲಿಸಿದ ನ್ಯಾಯಾಂಗ ನಿಂದನೆ ಅರ್ಜಿಗಳು ಮತ್ತು ಇತರ ಪ್ರಕರಣಗಳಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಡಿಸೆಂಬರ್‌ನಲ್ಲಿ ಆದೇಶ ಹೊರಡಿಸಿತ್ತು.

ಆ ಆದೇಶದ ಪ್ರಕಾರ ಕರ್ನಾಟಕ ಸ್ಟಾಂಪ್ ಕಾಯ್ದೆಯ ಸೆಕ್ಷನ್ 45 ಬಿ ಗೆ ಅನುಗುಣವಾಗಿ ಅರಮನೆ ಮೈದಾನಕ್ಕೆ ಹೊಂದಿಕೊಂಡಿರುವ ಪ್ರದೇಶಗಳಲ್ಲಿ ಚಾಲ್ತಿಯಲ್ಲಿರುವ ಮಾರ್ಗಸೂಚಿ ಮೌಲ್ಯಕ್ಕೆ ಅನುಗುಣವಾಗಿ ರಸ್ತೆ ವಿಸ್ತರಣೆ ಉದ್ದೇಶಕ್ಕಾಗಿ ಅರಮನೆ ಜಾಗವನ್ನು ಮೌಲ್ಯೀಕರಿಸಿ, ವರ್ಗಾವಣೆ ಮಾಡಬಹುದಾದ ಟಿಡಿಆರ್ ನೀಡುವಂತೆ ನಿರ್ದೇಶನ ನೀಡಿತ್ತು.

ರಸ್ತೆ ವಿಸ್ತರಣೆ ಉದ್ದೇಶಕ್ಕಾಗಿ ಬಳಕೆಯಾಗುವ 15.36 ಎಕರೆ ಭೂಮಿಗೆ ಪರಿಹಾರವಾಗಿ ₹3,014 ಕೋಟಿ ಟಿಡಿಆರ್ ನೀಡಬೇಕು ಎಂದು ಸುಪ್ರೀಂ ಕೋರ್ಟ್ ಡಿಸೆಂಬರ್‌ನಲ್ಲಿ ಆದೇಶ ನೀಡಿತ್ತು. ಸಣ್ಣ ಜಾಗಕ್ಕೆ ಭಾರಿ ಮೊತ್ತವನ್ನು ಪಾವತಿಸಬೇಕಾದ ಹೊರೆಯಿಂದ ತಪ್ಪಿಸಿಕೊಳ್ಳಲು ಸುಗ್ರೀವಾಜ್ಞೆಯ ಆಸರೆ ಪಡೆಯಲು ಸರ್ಕಾರ ತೀರ್ಮಾನಿಸಿತ್ತು. ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ-1996ಕ್ಕೆ ಸಂಬಂಧಪಟ್ಟ ಸಿವಿಲ್ ಮೇಲ್ಮನವಿಯನ್ನು ತುರ್ತಾಗಿ ವಿಚಾರಣೆಗೆ ಕೈಗೆತ್ತಿಕೊಳ್ಳಬೇಕು ಎಂದು ಸರ್ಕಾರವು ಮೇಲ್ಮನವಿ ಸಲ್ಲಿಸಿತ್ತು.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ವಿದ್ಯುತ್ ದರ ಏರಿಕೆ: ವಿಪಕ್ಷಗಳ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಪ್ರಸರಣ ಮತ್ತು ಸರಬರಾಜು ಸಂಸ್ಥೆಗಳ ಸಿಬ್ಬಂದಿಯ ಪಿಂಚಣಿ, ಗ್ರಾಚ್ಯುಟಿಯ ಸರ್ಕಾರದ ಪಾಲಿನ ಹೊರೆಯನ್ನು ಗ್ರಾಹಕರ ಮೇಲೆ ಹೊರಿಸುವ ಮೂಲಕ ವಿದ್ಯುತ್ ದರ ಏರಿಸಲು ಮುಂದಾಗಿರುವುದಕ್ಕೆ ಬಿಜೆಪಿ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ.


ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ (ಕೆಇಆರ್‌ಸಿ) ಮುಂದೆ ಅರ್ಜಿ ಸಲ್ಲಿಸಿ, ಆದೇಶ ಪಡೆದು ದರ ಏರಿಕೆಗೆ ಮುಂದಾಗಿರುವ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ(ಕೆಪಿಟಿಸಿಎಲ್) ಮತ್ತು ಎಸ್ಕಾಂ ನಡೆಯ ವಿರುದ್ಧ ಹೋರಾಟ ನಡೆಸುವುದಾಗಿಯೂ ಹೇಳಿದೆ.

ಈ ಕುರಿತು ಸುದ್ದಿಗಾರರಿಗೆ ಗುರುವಾರ ಪ್ರತಿಕ್ರಿಯಿಸಿದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ,

ಇದು ಬಿಜೆಪಿ ಸರ್ಕಾರದ ಅವಧಿಯಲ್ಲಾದ ಬೆಳವಣಿಗೆ. ಹೈಕೋರ್ಟ್ ತೀರ್ಪು ಆಧರಿಸಿ ಕೆಇಆರ್‌ಸಿ ದರ ಹೆಚ್ಚಳದ ಆದೇಶ ಹೊರಡಿಸಿದೆ. ನಮ್ಮ ಸರ್ಕಾರ ವಿದ್ಯುತ್ ದರ ಹೆಚ್ಚಿಸಿಲ್ಲ

ಕೆ.ಜೆ.ಜಾರ್ಜ್, ಇಂಧನ ಸಚಿವ

‘ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗೆ ಹಣ ಹೊಂದಿಸಲು ಸಾಧ್ಯವಾಗದೇ ಸಾಮಾನ್ಯ ಜನರ ಮೇಲೆ ಹೊರೆ ಹಾಕುತ್ತಿದೆ. ಅದರ ಪರಿಣಾಮವೇ ವಿದ್ಯುತ್ ದರ ಏರಿಕೆ’ ಎಂದು ಟೀಕಿಸಿದರು.



‘ಈ ಸರ್ಕಾರ ಒಂದು ಕಡೆ ಉಚಿತ ವಿದ್ಯುತ್ ನೀಡುವುದಾಗಿ ಘೋಷಿಸಿದೆ. ರಾಜ್ಯದಲ್ಲಿ ರೈತರು ಸಂಕಷ್ಟದಲ್ಲಿದ್ದಾರೆ. 3 ಫೇಸ್ ವಿದ್ಯುತ್ತನ್ನು 7 ತಾಸು ಕೊಡಲು ಸರ್ಕಾರಕ್ಕೆ ಆಗುತ್ತಿಲ್ಲ. ಇನ್ನೊಂದೆಡೆ ಸರ್ಕಾರದ ಇಲಾಖೆಗಳೇ ₹6,000 ಕೋಟಿಯಷ್ಟು ವಿದ್ಯುತ್ ಬಿಲ್ ಬಾಕಿ ಉಳಿಸಿಕೊಂಡಿವೆ. ಬೆಲೆ ಏರಿಕೆಯೊಂದನ್ನೇ ಗ್ಯಾರಂಟಿಯಾಗಿ ಕೊಡುತ್ತಿದೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ರಾಜ್ಯದ ಜನರು ಸ್ಮಾರ್ಟ್ ಮೀಟರ್, ಮೆಟ್ರೊ ಪ್ರಯಾಣ ದರ, ಬೆಲೆ ಏರಿಕೆ ಈಗಾಗಲೇ ತತ್ತರಿಸಿದ್ದಾರೆ. ಇಂಥ ವಿಚಾರವನ್ನು ಚರ್ಚಿಸಲು ಸರ್ಕಾರಕ್ಕೆ ಪುರುಸೊತ್ತಿಲ್ಲ. ವಿದ್ಯುತ್ ದರ ಏರಿಕೆಯಾದರೆ ಜನರಿಗೆ ಗಾಯದ ಮೇಲೆ ಬರೆ ಎಳೆದಂತಾಗಲಿದೆ. ಸದನದಲ್ಲಿ ಈ ಎಲ್ಲ ವಿಚಾರವನ್ನು ಚರ್ಚೆ ಮಾಡುತ್ತೇವೆ’ ಎಂದು ಹೇಳಿದರು.

‘ಸುನೀತಾ ಭೂಮಿಗೆ ಇಳಿದರು, ಮೆಟ್ರೊ ದರ ಭೂಮಿಗೆ ಇಳಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗಗನಯಾತ್ರಿ ಸುನೀತಾ ವಿಲಿಯಮ್ಸ್ ಭೂಮಿಗೆ ಇಳಿದರು. ಮೆಟ್ರೊ ಪ್ರಯಾಣ ದರವನ್ನು ಭೂಮಿಗೆ ಇಳಿಸಿ...’

ಸುನೀತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್‌ಗೆ ಶುಭ ಕೋರಿ ‘ಎಕ್ಸ್’, ‘ಇನ್‌ಸ್ಟಾಗ್ರಾಂ’ಗಳಲ್ಲಿ ಬಿಎಂಆರ್‌ಸಿಎಲ್ ಹಾಕಿದ್ದ ಪೋಸ್ಟರ್‌ಗೆ ನೆಟ್ಟಿಗರು ಪ್ರತಿಕ್ರಿಯಿಸಿ ಕಾಲೆಳೆದ ಪರಿ ಇದು.

ನೆಟ್ಟಿಗರ ಕೆಲವು ಪ್ರತಿಕ್ರಿಯೆಗಳು ಹೀಗಿದ್ದವು: ‘ಸುನೀತಾ ಹೆಸರಲ್ಲಿ ಮೆಟ್ರೊ ಪ್ರಯಾಣದರ ಇನ್ನಷ್ಟು ಹೆಚ್ಚಿಸಿ’.

‘ಮೊದಲು ಸಿಲ್ಕ್‌ಬೋರ್ಡ್, ಔಟರ್‌ರಿಂಗ್‌ರೋಡ್, ಎಚ್‌ಎಸ್‌ಆರ್ ಇಬ್ಬಲೂರ್‌ನಲ್ಲಿ ನಿಮ್ಮ ನಿರ್ಮಾಣಗಳು ಸೃಷ್ಟಿಸಿರುವ ಭಗ್ನಾವಶೇಷ ಮತ್ತು ಕೊಳೆಯನ್ನು ತೆರವುಗೊಳಿಸಿ. ಆನಂತರ ಅವರನ್ನು ಸ್ವಾಗತಿಸಿ’.

‘ಸುನೀತಾರನ್ನು ಭೂಮಿಗೆ ಸ್ವಾಗತಿಸಲು ನೀವು ಯಾರು? ಮೆಟ್ರೊ ಕಂಬಗಳನ್ನು ವೇಗವಾಗಿ ನಿರ್ಮಿಸುವುದು, ದರಗಳನ್ನು ಕಡಿಮೆ ಮಾಡುವುದು, ಜಾಹೀರಾತು ಆದಾಯವನ್ನು ಹೆಚ್ಚಿಸುವುದು ಮತ್ತು ನಿಲ್ದಾಣಗಳನ್ನು ಸ್ವಚ್ಛವಾಗಿಡುವತ್ತ ನೀವು ಗಮನಹರಿಸಿ’.

‘ಭಾರಿ ಪ್ರಯತ್ನದಿಂದ, ಮೆಟ್ರೊ ಬೆಲೆಗಳನ್ನು ಹೆಚ್ಚಿಸಲಾಗಿದೆ. ಹಳದಿ ಮಾರ್ಗ ಮತ್ತು ಇತರ ಮೆಟ್ರೊ ಯೋಜನೆಗಳ ಕುರಿತು ಮಾಹಿತಿ ನೀಡುವ ಬದಲು ಸುನೀತಾ ವಿಲಿಯಮ್ಸ್ ಸುದ್ದಿಗಳಲ್ಲಿ ನಿರತರಾಗಿದ್ದೀರಿ. ನಿಮಗೆ ಯಾವುದೇ ಜವಾಬ್ದಾರಿ ಇಲ್ಲ ಎಂಬುದೇ ಹೆಮ್ಮೆಯ ವಿಚಾರ’.

‘ಗಗನಯಾತ್ರಿಗಳ ಬಗ್ಗೆ ಚಿಂತಿಸಬೇಡಿ. ಅವರನ್ನು ನೋಡಿಕೊಳ್ಳಲು ಜನರಿದ್ದಾರೆ. ನೀವು ಬೆಂಗಳೂರಿನಲ್ಲಿ ಜನದಟ್ಟಣೆ ಕಡಿಮೆ ಮಾಡಲು ಕೈಗೆಟಕುವ ದರದಲ್ಲಿ ಮೆಟ್ರೊ ಸಂಚಾರ ವ್ಯವಸ್ಥೆ ಮಾಡಿ’.

‘ಮೆಟ್ರೊ ಪ್ರಯಾಣ ದರ ಹೆಚ್ಚಿಸಿರುವುದು, ಪ್ರಯಾಣಿಕರ ಸಂಖ್ಯೆ ಕಡಿಮೆ ಮಾಡಿರುವುದು ಗಗನಯಾತ್ರಿಗಳ ಸಾಧನೆಗಿಂತ ದೊಡ್ಡದು’.

‘ಅವರನ್ನು ಅಮೆರಿಕ ನೋಡಿಕೊಂಡಿದೆ. ಭೂಮಿಗೆ ಕರೆತಂದಿದೆ. ಆದರೆ, ಇಲ್ಲಿ ಮೆಟ್ರೊ ಮಾರ್ಗಗಳ ಕೆಳಗೆ ರಸ್ತೆ ದಾಟಲು ಸಮಸ್ಯೆಯಾಗಿದೆ. ಬಾಹ್ಯಾಕಾಶ ಪ್ರಯಾಣಕ್ಕಿಂತ ಮೆಟ್ರೊ ಪ್ರಯಾಣವೇ ಕಷ್ಟವಾಗಿದೆ’. ಇದೇ ರೀತಿ ಅನೇಕರು ಬಿಎಂಆರ್‌ಸಿಎಲ್ ಅನ್ನು ಗೇಲಿ ಮಾಡಿ, ಅಣಕವಾಡಿದ್ದಾರೆ.

ಇದು ಸರ್ಕಾರದ ಕಾರ್ಯಕ್ರಮವೇ ಹೊರತು ರಾಜಕೀಯ ಕಾರ್ಯಕ್ರಮವಲ್ಲ: ಉಪಮುಖ್ಯಮಂತ್ರಿ ಡಿಕೆಶಿ

ಸ್ಯಾಂಕಿ ಕೆರೆಯಲ್ಲಿ ‘ಕಾವೇರಿ ಆರತಿ’ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಜಲ ದಿನದ ಪ್ರಯುಕ್ತ ಜಲಮಂಡಳಿಯು ಸದಾಶಿವನಗರದಲ್ಲಿರುವ ಸಾಂಕ್ಯಿ ಕೆರೆಯಲ್ಲಿ ಶುಕ್ರವಾರ ಸಂಜೆ 5 ಗಂಟೆಯಿಂದ 'ಕಾವೇರಿ ಆರತಿ' ಕಾರ್ಯಕ್ರಮ ಹಮ್ಮಿಕೊಂಡಿದೆ.

ಇದರ ಸಿದ್ಧತೆಯನ್ನು ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಗುರುವಾರ ಪರಿಶೀಲಿಸಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕಾವೇರಿ ಆರತಿ ಸರ್ಕಾರದ ಕಾರ್ಯಕ್ರಮವೇ ಹೊರತು ರಾಜಕೀಯ ಕಾರ್ಯಕ್ರಮವಲ್ಲ. ಇದಕ್ಕೆ ಸಾರ್ವಜನಿಕರಿಗೆ ಮುಕ್ತ ಅವಕಾಶ ಕಲ್ಪಿಸಲಾಗಿದ್ದು, ಜನರು ಈ ಆರತಿಯನ್ನು ಕಣ್ತುಂಬಿಕೊಳ್ಳಬಹುದು’ ಎಂದು ತಿಳಿಸಿದರು.

‘ಬೇಸಿಗೆ ಸಮಯದಲ್ಲಿ ನೀರಿನ ಸಂರಕ್ಷಣೆಯ ಅಭಿಯಾನದ ಜತೆಗೆ, ಬೆಂಗಳೂರು ಹಾಗೂ ರಾಜ್ಯದಲ್ಲಿ ನೀರಿನ ಅಭಾವ ಎದುರಾಗದಿರಲಿ ಎಂದು ಪ್ರಾರ್ಥಿಸುವುದಕ್ಕಾಗಿ ಕಾವೇರಿ ಆರತಿ ಮಾಡಲು ಸರ್ಕಾರ ತೀರ್ಮಾನಿಸಿದೆ’ ಎಂದರು.

‘ಬೆಂಗಳೂರಿಗೆ ಕಾವೇರಿ ನೀರು ಆಧಾರ. ಆದ್ದರಿಂದ ಶುಕ್ರವಾರ ಭಾಗಮಂಡಲಕ್ಕೆ ತೆರಳಿ, ಅಲ್ಲಿನ ಸ್ಥಳೀಯ ಶಾಸಕರ ಜತೆಗೆ ತಲಕಾವೇರಿಗೆ ಪೂಜೆ ನೆರವೇರಿಸಲಿದ್ದೇನೆ. ಸಂಜೆ 5 ಗಂಟೆಗೆ ಇಲ್ಲಿ ಕಾರ್ಯಕ್ರಮ ಆರಂಭವಾಗಲಿದ್ದು, 7 ಗಂಟೆ ಬಳಿಕ ಆರತಿ ನಡೆಯಲಿದೆ’ ಎಂದರು.

‘ಬೆಂಗಳೂರಿನ ಇತಿಹಾಸದಲ್ಲಿ ಎಂದೂ ಕಾವೇರಿ ಆರತಿ ನಡೆದಿಲ್ಲ. ಬೆಂಗಳೂರಿನಲ್ಲಿ ಮುಂದೆಂದೂ ನೀರಿಗೆ ತೊಂದರೆಯಾಗ ಬಾರದು, ಅಂತರ್ಜಲ ಹೆಚ್ಚಿಸಬೇಕು ಎಂಬ ಉದ್ದೇಶದಿಂದ ಈ ಕಾರ್ಯಕ್ರಮ ಮಾಡಲಾಗುತ್ತಿದೆ. ನಮ್ಮ ಪ್ರಯತ್ನ ವಿಫಲವಾದರೂ ಪ್ರಾರ್ಥನೆ ವಿಫಲವಾಗುವುದಿಲ್ಲ ಎಂದು ನಂಬಿದ್ದೇವೆ’ ಎಂದು ಹೇಳಿದರು.

‘ಈ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಗೆ ಮುಕ್ತ ಅವಕಾಶವಿದ್ದು, ಯಾವುದೇ ಪಾಸ್, ಶುಲ್ಕ ಇರುವುದಿಲ್ಲ’ ಎಂದು ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದರು.



ಕಾವೇರಿ ಆರತಿಯ ಮುನ್ನಾದಿನವಾದ ಗುರುವಾರ ಸ್ಯಾಂಕಿ ಕೆರೆಯಲ್ಲಿ ಅಂತಿಮ ಸಿದ್ಧತೆ ನಡೆಸಲಾಯಿತು ಚಿತ್ರ: ಬಿ.ಕೆ.ಜನಾರ್ದನ್

ಸಂಗೀತ ಕಾರ್ಯಕ್ರಮ

‘ಸಂಜೆ 5.30ಕ್ಕೆ ಅನನ್ಯ ಭಟ್ ಹಾಗೂ ರಘು ದೀಕ್ಷಿತ್ ಅವರ ಸಂಗೀತ ಕಾರ್ಯಕ್ರಮ ಇರಲಿದೆ. ಬೆಂಗಳೂರಿನಲ್ಲಿ ಇದೇ ಮೊದಲ ಬಾರಿಗೆ ತೇಲುವ ವೇದಿಕೆ ಸಿದ್ಧಪಡಿಸಲಾಗಿದೆ. ಇದನ್ನು ಮುಂಬೈನಿಂದ ತರಿಸಲಾಗಿದೆ. ಎರಡು ತಂಡಗಳು ಸುಮಾರು 50 ನಿಮಿಷಗಳು ವಿಜೃಂಭಣೆಯಿಂದ ಕಾವೇರಿ ಆರತಿ ನಡೆಸಲಿವೆ. ಇದರ ಜತೆಗೆ ದೀಪಾಲಂಕಾರ ವ್ಯವಸ್ಥೆ ಮಾಡಲಾಗಿದೆ’ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ನಿರ್ಬಂಧಕ್ಕೆ ಹೈಕೋರ್ಟ್ ನಕಾರ

ಸ್ಯಾಂಕಿ ಕೆರೆಯ ಬಫರ್ ವಲಯದಲ್ಲಿ ಇದೇ 21ಕ್ಕೆ ಆಯೋಜಿಸಲಾಗಿರುವ ಕಾವೇರಿ ಆರತಿ ಕಾರ್ಯಕ್ರಮ ನಡೆಸಲು ಹೈಕೋರ್ಟ್, ಬೆಂಗಳೂರು ಜಲಮಂಡಳಿಗೆ ಷರತ್ತುಬದ್ಧ ಅನುಮತಿ ನೀಡಿದೆ.

‘ಕಾವೇರಿ ಆರತಿ’ ಆಕ್ಷೇಪಿಸಿ ಹೈಕೋರ್ಟ್ ವಕೀಲೆ ಗೀತಾ ಮಿಶ್ರಾ ಸಲ್ಲಿಸಿದ್ದ ಮಧ್ಯಂತರ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

‘ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆಯ ನಿಯಮಗಳು ಉಲ್ಲಂಘನೆಯಾಗದಂತೆ ಕಾವೇರಿ ಆರತಿ ಕಾರ್ಯಕ್ರಮ ನಡೆಸಬೇಕು. ಕಾನೂನು ಮತ್ತು ಸಾರ್ವಜನಿಕ ಸುವ್ಯವಸ್ಥೆ ಕಾಪಾಡಬೇಕು. ಯಾವುದೇ ರೀತಿಯ ವಾಣಿಜ್ಯ ಚಟುವಟಿಕೆಗಳಿಗೆ ಅವಕಾಶ ನೀಡಬಾರದು’ ಎಂದು ರಾಜ್ಯ ಸರ್ಕಾರ ಮತ್ತು ಜಲಮಂಡಳಿಗೆ ನಿರ್ದೇಶಿಸಿದ ನ್ಯಾಯಪೀಠ ಅರ್ಜಿ ವಿಲೇವಾರಿ ಮಾಡಿದೆ.



ಮಗು ಕೈ ಮೇಲೆ ಬರೆ

ಕನಕಪುರ: ಮಹಾರಾಜರಕಟ್ಟೆ ಅಂಗನವಾಡಿ ಸಹಾಯಕಿ ಚಂದ್ರಮ್ಮ ಎಂಬುವರು ಎರಡೂವರೆ ವರ್ಷದ ಪುಟ್ಟ ಮಗುವಿನ ಕೈಮೇಲೆ ಬರೆ ಹಾಕಿ, ಡೈಪರ್‌ಗೆ ಖಾರದ ಪುಡಿ ತುಂಬಿದ್ದಾರೆ ಎಂದು ಆರೋಪಿಸಲಾಗಿದೆ.

ನಗರಸಭೆ ವ್ಯಾಪ್ತಿಯ ಮಹಾರಾಜರ ಕಟ್ಟೆ ಗ್ರಾಮದ ರಮೇಶ್ ನಾಯ್ಕ್ ಅವರ ಮಗ ದೀಕ್ಷಿತ್ ಸಂತ್ರಸ್ತ ಬಾಲಕ. ಕೃತ್ಯ ಎಸಗಿದ ಅಂಗನವಾಡಿ ಸಹಾಯಕಿ ಚಂದ್ರಮ್ಮ ವಿರುದ್ಧ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯುವಪಥದಲ್ಲಿ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳ ಸಮಾಗಮ

ಯುವಜನರ ಪ್ರತಿಭಾ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಸಾಹಿತ್ಯದ ಬಗ್ಗೆ ಚಿಂತನ-ಮಂಥನ, ಪುಸ್ತಕಗಳ ಬಗ್ಗೆ ಚರ್ಚೆ, ವಿಷಯ ತಜ್ಞರಿಂದ ಮಾರ್ಗದರ್ಶನ, ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ, ಸಿನಿಮಾ ಪ್ರದರ್ಶನ...

ಹೀಗೆ ವಿವಿಧ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಜತೆಗೆ ವಿದ್ಯಾರ್ಥಿಗಳ ಪ್ರತಿಭಾ ಪ್ರದರ್ಶನಕ್ಕೆ ಜಯನಗರದ ‘ಯುವಪಥ ಸಭಾಂಗಣ’ ವೇದಿಕೆ ಒದಗಿಸಿಕೊಟ್ಟಿತು. ‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ಸಹಯೋಗದಲ್ಲಿ ಯುವಕ ಸಂಘ ಹಮ್ಮಿಕೊಂಡಿದ್ದ ಎರಡು ದಿನಗಳ ವಿದ್ಯಾರ್ಥಿ ಸಾಹಿತ್ಯ ಸಂಭ್ರಮಕ್ಕೆ ಗುರುವಾರ ಚಾಲನೆ ದೊರೆಯಿತು.

ಸಮಾರಂಭವನ್ನು ರಂಗಕರ್ಮಿ ಪ್ರಕಾಶ್ ಬೆಳವಾಡಿ, ನಟಿ ಪ್ರಣೀತಾ ಸುಭಾಷ್, ಪ್ರಧಾನ ಮಂತ್ರಿ ಆರ್ಥಿಕ ಸಲಹಾ ಮಂಡಳಿಯ ಸಮಾಲೋಚಕ ಅಪೂರ್ವ ಕುಮಾರ್ ಮಿಶ್ರಾ, ಯುವಕ ಸಂಘದ ಅಧ್ಯಕ್ಷ ಟಿ.ವಿ.ರಾಜು ಹಾಗೂ ಚಾಣಕ್ಯ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಸಂದೀಪ್ ನಾಯರ್ ಉದ್ಘಾಟಿಸಿದರು.

‘ಆಧುನಿಕ ತಂತ್ರಜ್ಞಾನವನ್ನು ಸದುಪಯೋಗ ಮಾಡಿಕೊಳ್ಳಬೇಕು. ಸಮಯವನ್ನು ಸದ್ಬಳಕೆ ಮಾಡಿಕೊಂಡು, ಎಲ್ಲ ಮೂಲಗಳಿಂದ ಜ್ಞಾನ ಸಂಪಾದಿಸಬೇಕು. ಹಿಂದೆ ಗ್ರಂಥಾಲಯಗಳ ಬಾಗಿಲು ತೆರೆಯುವ ಮುನ್ನವೇ ಪುಸ್ತಕಕ್ಕಾಗಿ ಕಾಯುತ್ತಾ ನಿಲ್ಲುತ್ತಿದ್ದೆವು. ಈಗ ಮೊಬೈಲ್ ಫೋನ್‌ನಲ್ಲಿಯೇ ಪುಸ್ತಕಗಳು ಸಿಗುತ್ತಿವೆ. ಆದರೆ, ಏಕಾಗ್ರತೆಯ ಓದು ಸಾಧ್ಯವಾಗುತ್ತಿಲ್ಲ. ವಿಮರ್ಶಾತ್ಮಕ ಚಿಂತನಾ ಕ್ರಮಕ್ಕೆ ಸಾಹಿತ್ಯದ ಓದು ಸಹಕಾರಿ’ ಎಂದು ಪ್ರಕಾಶ್ ಬೆಳವಾಡಿ ಕಿವಿಮಾತು ಹೇಳಿದರು.

ನಗರದ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ವಿಚಾರ ಗೋಷ್ಠಿಗಳಲ್ಲಿ ಪಾಲ್ಗೊಳ್ಳುವ ಜತೆಗೆ ತಮ್ಮಿಷ್ಟದ ಲೇಖಕರ ಪುಸ್ತಕಗಳನ್ನು ಖರೀದಿಸಿದರು. ‘ಡಿಜಿಟಲ್ ಯುಗದಲ್ಲಿ ಧರ್ಮ’ ವಿಷಯದ ಮೇಲೆ ನಡೆದ ವಿಚಾರ ಗೋಷ್ಠಿಯಲ್ಲಿ ಲೇಖಕರಾದ ಅಕ್ಷತ್ ಗುಪ್ತಾ ಹಾಗೂ ಸಾಯಿ ಸ್ವರೂಪ ಅಯ್ಯರ್ ವಿಷಯ ಮಂಡಿಸಿದರು.

‘ಸ್ವಯಂ ಅಭಿವ್ಯಕ್ತಿಯ ಮಾಧ್ಯಮವಾಗಿ ಛಾಯಾಗ್ರಹಣ’ ವಿಷಯದ ಬಗ್ಗೆ ಕಥೆಗಾರ ಮಯೂರ್ ಚನ್ನಗೆರೆ, ಸ್ವಯಂ ಪ್ರಕಾಶನದ ಬಗ್ಗೆ ಲೇಖಕ ಹರಿ ರವಿಕುಮಾರ್, ‘21ನೇ ಶತಮಾನದಲ್ಲಿ ಸಂಸ್ಕೃತ’ ವಿಷಯದ ಬಗ್ಗೆ ಸಮಷ್ಟಿ ಗುಬ್ಬಿ, ಅವಧಾನದ ಬಗ್ಗೆ ಲೇಖಕ ತಿಮ್ಮಪ್ಪಭಟ್ಟ, ಪಾಡ್‌ಕಾಸ್ಟ್ ಬಗ್ಗೆ ರೇಡಿಯೊ ಜಾಕಿ ಮಯೂರ ರಾಘವೇಂದ್ರ, ಕೃತಕ ಬುದ್ಧಿಮತ್ತೆ ಬಗ್ಗೆ ಚಿತ್ರ ನಿರ್ದೇಶಕ ಆನಂದ ವರದರಾಜ್, ವ್ಯಂಗ್ಯಚಿತ್ರದ ಬಗ್ಗೆ ವ್ಯಂಗ್ಯಚಿತ್ರಕಾರ ನಾಗನಾಥ್ ಜಿ.ಎಸ್. ಮಾಸ್ಟರ್ ಕ್ಲಾಸ್ ನಡೆಸಿಕೊಟ್ಟರು.

ಈ ಉತ್ಸವದಲ್ಲಿ ‘ನಮ್ಮ ಊರಿನ ಕಥೆಗಳು’ ಕಿರುಚಿತ್ರವನ್ನೂ ಪ್ರದರ್ಶಿಸಲಾಯಿತು. ವಿದ್ಯಾರ್ಥಿಗಳಿಗೆ ಚರ್ಚೆ ಸೇರಿ ವಿವಿಧ ಸ್ಪರ್ಧೆಗಳನ್ನೂ ನಡೆಸಲಾಯಿತು. ವಿದ್ಯಾರ್ಥಿಗಳು ರಚಿಸಿದ ವಿವಿಧ ಪುಸ್ತಕಗಳನ್ನೂ ಈ ಉತ್ಸವದಲ್ಲಿ ಬಿಡುಗಡೆ ಮಾಡಲಾಯಿತು. ಕಾರ್ತಿಕ್ ಪತ್ತಾರ್ ಅವರ ‘ಸ್ಟ್ಯಾಂಡ್ ಅಪ್ ಕಾಮಿಡಿ’ ಹಾಗೂ ಸಂಜೆ ನಡೆದ ಸಾಂಸ್ಕೃತಿಕ ಕಾರ್ಯಕ್ರಮ ವಿದ್ಯಾರ್ಥಿಗಳನ್ನು ರಂಜಿಸಿತು.

ವಿದ್ಯಾರ್ಥಿಗಳು ಒಂದೆಡೆ ಸೇರಿ, ವಿಚಾರ ವಿನಿಮಯ ಮಾಡಲು ಉತ್ಸವದ ವೇದಿಕೆ ಸಹಕಾರಿಯಾಯಿತು. ಆಧುನಿಕ ಯುಗದಲ್ಲಿ ಡಸಾಹಿತ್ಯ ಹಾಗೂ ಪುಸ್ತಕಗಳ ಓದಿನ ಮಹತ್ವವನ್ನು ವಿಷಯ ತಜ್ಞರು ನೆರೆದಿದ್ದ ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಸಿದರು.



ಸಮಾರಂಭದಲ್ಲಿ (ಎಡದಿಂದ) ಅಪೂರ್ವ ಕುಮಾರ್ ಮಿಶ್ರಾ, ಪ್ರಕಾಶ್ ಬೆಳವಾಡಿ, ಸಂದೀಪ್ ನಾಯರ್, ಪ್ರದ್ಯುಮ್ನ ಮತ್ತು ಪ್ರಣೀತಾ ಸುಭಾಷ್ ಅವರು ಸ್ವರಸ್ವತಿ ಮತ್ತು ಸ್ವಾಮಿ ವಿವೇಕಾನಂದ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು

ಪ್ರಜಾವಾಣಿ ಚಿತ್ರ

ಪುಸ್ತಕ ಓದು ಜ್ಞಾನವನ್ನು ವೃದ್ಧಿಸುವ ಜತೆಗೆ ಕಲ್ಪನಾ ಶಕ್ತಿ ಹೆಚ್ಚಿಸುತ್ತದೆ. ಒಬ್ಬಂಟಿತನವನ್ನು ಹೋಗಲಾಡಿಸಲು ಪುಸ್ತಕ ಸಹಕಾರಿಯಾಗಲಿದೆ

ಅಪೂರ್ವ ಕುಮಾರ್ ಮಿಶ್ರಾ, ಪ್ರಧಾನಿ ಆರ್ಥಿಕ ಸಲಹಾ ಮಂಡಳಿ ಸಮಾಲೋಚಕ

ಡಿಜಿಟಲೀಕರಣದಿಂದ ದೊರೆಯುತ್ತಿರುವ ಅವಕಾಶಗಳನ್ನು ಪ್ರತಿಭಾವಂತರು ಸದುಪಯೋಗ ಮಾಡಿಕೊಂಡು ದೇಶಕ್ಕೆ ಕೊಡುಗೆ ನೀಡಬೇಕು

ಪ್ರಣೀತಾ ಸುಭಾಷ್, ನಟಿ

ಪ್ರತಿಭೆಯ ಅನಾವರಣ, ವ್ಯಕ್ತಿತ್ವದ ಬೆಳವಣಿಗೆಗೆ ಇಂತಹ ವೇದಿಕೆ ಸಹಕಾರಿ. ಸಾಹಿತ್ಯಿಕ ಓದು ರಚನಾತ್ಮಕ, ವಿಮರ್ಶಾತ್ಮಕ ಚಿಂತನೆಗೆ ನೆರವಾಗಲಿದೆ

ಟಿ.ವಿ. ರಾಜು, ಯುವಕ ಸಂಘ ಅಧ್ಯಕ್ಷ

ವರ್ತುಲ ರಸ್ತೆಗೆ ಶೀಘ್ರವೇ ಸಂಪುಟ ಒಪ್ಪಿಗೆ: ಎಚ್‌ಡಿಕೆ

ನವದೆಹಲಿ: ‘ಬೆಂಗಳೂರು ನಗರದ ವಾಹನ ದಟ್ಟಣೆಯನ್ನು ಗಣನೀಯ ತಗ್ಗಿಸುವ ಉಪ ನಗರ ವರ್ತುಲ ರಸ್ತೆ ಯೋಜನೆ (ಎಸ್‌ಟಿಆರ್‌ಆರ್) ಕೇಂದ್ರ ಸಂಪುಟ ಸಭೆಯ ಮುಂದೆ ಬರಲಿದೆ. ಯೋಜನೆಗೆ 'ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಮೌಲ್ಯಮಾಪನ ಸಮಿತಿ' ಒಪ್ಪಿಗೆ ನೀಡಿದೆ’ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರನ್ನು ಗುರುವಾರ ಇಲ್ಲಿ ಭೇಟಿ ಮಾಡಿದ ಕುಮಾರಸ್ವಾಮಿ, ಶೀಘ್ರವೇ ಈ ಯೋಜನೆಗೆ ಸಂಪುಟದ ಅನುಮೋದನೆ ಕೊಡಿಸುವಂತೆ ಮನವಿ ಮಾಡಿದರು.

‘ಉಪನಗರ ವರ್ತುಲ ರಸ್ತೆ ಯೋಜನೆ 2013ರಲ್ಲಿಯೇ ಚಾಲನೆ ಪಡೆದಿತ್ತು. ಆದರೆ, ಹಲವಾರು ಕಾರಣಗಳಿಂದ ನನೆಗುದಿಗೆ ಬಿದ್ದಿತ್ತು. ಬೆಂಗಳೂರು ಸುತ್ತಮುತ್ತ ಇರುವ ಎಂಟು ಕೈಗಾರಿಕಾ ಪಟ್ಟಣಗಳಿಗೆ ಸಂಪರ್ಕ ಕಲ್ಪಿಸುವ ಯೋಜನೆ ಇದಾಗಿದೆ. ಈ ಯೋಜನೆಯ ಕಾರ್ಯಗತಕ್ಕೆ ಮಾಜಿ ಪ್ರಧಾನಿ ದೇವೇಗೌಡರು ಸಾಕಷ್ಟು ಪ್ರಯತ್ನ ಮಾಡಿದ್ದಾರೆ. ಈ ಬಗ್ಗೆ ಅವರು ಬರೆದಿದ್ದ ಪತ್ರವನ್ನು ಗಡ್ಕರಿ ಅವರಿಗೆ ನೀಡಲಾಯಿತು’ ಎಂದು ಕುಮಾರಸ್ವಾಮಿ ಹೇಳಿದರು.

ಈ ಯೋಜನೆಯು ಕರ್ನಾಟಕ ರಾಜ್ಯದಲ್ಲಿ ಸುಮಾರು 135 ಕಿ.ಮೀ. ದೂರ ಹಾದು ಹೋಗಲಿದ್ದು, ಸುಮಾರು ₹4,750 ಕೋಟಿ ವೆಚ್ಚದಲ್ಲಿ ಕಾರ್ಯಗತವಾಗಲಿದೆ.

ಸಂಕ್ಷಿಪ್ತ ಸುದ್ದಿಗಳು

ರೈಲುಗಳ ತಾತ್ಕಾಲಿಕ ನಿಲುಗಡೆ ಮುಂದುವರಿಕೆ


ಬೆಂಗಳೂರು: ಪ್ರಯಾಣಿಕರ ಅನುಕೂಲಕ್ಕಾಗಿ ಸಂಪಿಗೆ ರೋಡ್ ಮತ್ತು ಮಲ್ಲೇಶ್ವರ ನಿಲ್ದಾಣಗಳಲ್ಲಿ ಕೆಲವು ರೈಲುಗಳ ತಾತ್ಕಾಲಿಕ ನಿಲುಗಡೆಯನ್ನು ಮುಂದುವರಿಸಲು ನೈಋತ್ಯ ರೈಲ್ವೆಯು ನಿರ್ಧರಿಸಿದೆ.

ಚಿಕ್ಕಮಗಳೂರು-ಯಶವಂತಪುರ-ಚಿಕ್ಕಮಗಳೂರು ಡೈಲಿ ಎಕ್ಸ್‌ಪ್ರೆಸ್ ರೈಲು ಏಪ್ರಿಲ್ 1ರಿಂದ ಜೂನ್ 30ರವರೆಗೆ ಸಂಪಿಗೆ ರೋಡ್ ನಿಲ್ದಾಣದಲ್ಲಿ ನಿಲುಗಡೆ ಮುಂದುವರಿಸಲಿದೆ. ತಾಳಗುಪ್ಪ-ಮೈಸೂರು ಡೈಲಿ ಎಕ್ಸ್‌ಪ್ರೆಸ್ ರೈಲು ಏಪ್ರಿಲ್ 1ರಿಂದ ಜೂನ್ 30ರವರೆಗೆ ಮಲ್ಲೇಶ್ವರ ನಿಲ್ದಾಣದಲ್ಲಿ ನಿಲುಗಡೆ ಮುಂದುವರಿಸಲಿದೆ.

ಜೆನ್ನಿ ಕುರಿಯಾಕೋಸ್ ಅಧಿಕಾರ ಸ್ವೀಕಾರ

ಬೆಂಗಳೂರು: ಅಂತರರಾಷ್ಟ್ರೀಯ ಕ್ಯಾಥೋಲಿಕ್ ಧಾರ್ಮಿಕ ಸಂಘಟನೆಯಾದ ಮಾಂಟ್‌ಫೋರ್ಟ್ ಬ್ರದರ್ಸ್‌ನ ಬೆಂಗಳೂರು ಪ್ರಾಂತ್ಯದ ‘ಪ್ರೊವಿನ್ಸಿಯಲ್ ಸುಪೀರಿಯರ್’ ಆಗಿ ಜೆನ್ನಿ ಕುರಿಯಾಕೋಸ್ ಅಧಿಕಾರ ವಹಿಸಿಕೊಂಡಿದ್ದಾರೆ.

ಈ ಸಂಘಟನೆಯು ಶೈಕ್ಷಣಿಕ ಚಟುವಟಿಕೆಯ ಜತೆಗೆ ಬಡ ಹಾಗೂ ದುರ್ಬಲ ವರ್ಗದವರಿಗೆ ನೆರವಾಗುತ್ತಿದೆ. ಜೆನ್ನಿ ಕುರಿಯಾಕೋಸ್ ಅವರು ಮೇಡಹಳ್ಳಿಯಲ್ಲಿ ಇರುವ ಲೇಕ್ ಮಾಂಟ್‌ಫೋರ್ಟ್ ಶಾಲೆಯ ಮುಖ್ಯಸ್ಥರಾಗಿದ್ದಾರೆ.



ಜೆನ್ನಿ ಕುರಿಯಾಕೋಸ್

ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಬೇಕಿಂಗ್ ತಂತ್ರಜ್ಞಾನ ಮತ್ತು ಮೌಲ್ಯವರ್ಧನಾ ಸಂಸ್ಥೆಯಿಂದ ಹದಿನಾಲ್ಕು ವಾರಗಳ ಬೇಕರಿ ಟೆಕ್ನಾಲಜಿ ಸರ್ಟಿಫಿಕೇಟ್ ಕೋರ್ಸ್‌ಗೆ ಅರ್ಜಿ ಆಹ್ವಾನಿಸಿದೆ.

ಎಸ್ಸೆಸ್ಸೆಲ್ಸಿ ಉತ್ತೀರ್ಣರಾದ ಅಥವಾ ಅನುತ್ತೀರ್ಣರಾದ ಆಸಕ್ತರು ಮಾರ್ಚ್ 29ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಸಂಯೋಜಕರು ಮತ್ತು ಮುಖ್ಯಸ್ಥರು, ಬೇಕಿಂಗ್ ತಂತ್ರಜ್ಞಾನ ಮತ್ತು ಮೌಲ್ಯವರ್ಧನಾ ಸಂಸ್ಥೆ, ಕೃಷಿ ವಿಶ್ವವಿದ್ಯಾಲಯ, ಜಿಕೆವಿಕೆ, ಬೆಂಗಳೂರು-560065, ಮಾಹಿತಿಗೆ: 080-23513370

ಆರಗ ವಿಮರ್ಶಾ ಪ್ರಶಸ್ತಿಗೆ ಪುಸ್ತಕ ಆಹ್ವಾನ

ಬೆಂಗಳೂರು: ಬಿ.ಎಂ.ಶ್ರೀ. ಪ್ರತಿಷ್ಠಾನವು ‘ಸೂ.ವೆಂ. ಆರಗ ವಿಮರ್ಶಾ ಪ್ರಶಸ್ತಿ’ಗೆ ವಿಮರ್ಶಾ ಕೃತಿಗಳನ್ನು ಆಹ್ವಾನಿಸಿದೆ.

ಪ್ರಶಸ್ತಿಯು ₹ 10 ಸಾವಿರ ನಗದು ಹಾಗೂ ಫಲಕ ಒಳಗೊಳ್ಳಲಿದೆ. 2024ರ ಜನವರಿಯಿಂದ ಡಿಸೆಂಬರ್ ಅವಧಿಯಲ್ಲಿ ಮೊದಲ ಆವೃತ್ತಿಯಾಗಿ ಪ್ರಕಟಗೊಂಡ ಉತ್ತಮ ವಿಮರ್ಶಾ ಕೃತಿಗೆ ಈ ಪ್ರಶಸ್ತಿ ನೀಡಲಾಗುತ್ತದೆ.

ಆಸಕ್ತರು 2024ರಲ್ಲಿ ಪ್ರಕಟಗೊಂಡ ವಿಮರ್ಶಾ ಕೃತಿಯ ಮೂರು ಪ್ರತಿಗಳು ಹಾಗೂ ವಿಳಾಸ ಸಹಿತ ಅಗತ್ಯ ವಿವರವನ್ನು ಏ.5ರೊಳಗೆ ಗೌರವ ಕಾರ್ಯದರ್ಶಿ, ಬಿ.ಎಂ.ಶ್ರೀ. ಪ್ರತಿಷ್ಠಾನ, ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ, 3ನೇ ಮುಖ್ಯರಸ್ತೆ, ನರಸಿಂಹರಾಜ ಕಾಲೊನಿ, ಬೆಂಗಳೂರು -560004 ಈ ವಿಳಾಸಕ್ಕೆ ಕಳುಹಿಸಬೇಕು. ವಿವರಕ್ಕೆ ಮೊ. 9972812127ಕ್ಕೆ ಸಂಪರ್ಕಿಸಬಹುದು ಎಂದು ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಶಾಂತರಾಜು ತಿಳಿಸಿದ್ದಾರೆ.

ನಗರದಲ್ಲಿ ಇಂದು

ಭಾರತ ಯೋಗ ಯಾತ್ರಾ-2025: ಸ್ವಾಮಿ ನಿರಂಜನಾನಂದ ಸರಸ್ವತಿ, ಸ್ಥಳ: ಶಾಲಿನಿ ಮೈದಾನ, 11ನೇ ಮುಖ್ಯರಸ್ತೆ, ಐದನೇ ಹಂತ, ಜಯನಗರ, ಬೆಳಿಗ್ಗೆ 6.30ರಿಂದ

ವಿದ್ಯಾರ್ಥಿ ಸಾಹಿತ್ಯ ಸಂಭ್ರಮ: ಕ್ಯಾಲಿಗ್ರಫಿ: ಸುರೇಶ್ ವಾಗ್ಮೋರೆ, ಅನಿಮಿಶಾ ಎಸ್. ನಾಗನೂರ್, ವಿಷನ್ ಫಾರ್ ಸಿನಿಮಾ: ಹೇಮಂತ್ ರಾವ್, ‘ನಮ್ಮ ಅಭಿವ್ಯಕ್ತಿ ಮತ್ತು ನಮ್ಮ ಭಾಷೆ’ ಸಂವಾದ: ಪಿ. ಶೇಷಾದ್ರಿ, ವಿನಯಚಂದ್ರ ಬನಾವತಿ, ಅಭಿಷೇಕ ಅಯ್ಯಂಗಾರ್, ಆಯೋಜನೆ: ಯುವಕ ಸಂಘ, ಸ್ಥಳ: ಯುವಪಥ, ಜಯನಗರ, ಬೆಳಿಗ್ಗೆ 10ರಿಂದ

ಕಾಫಿ ಸಂತೆ: ಆಯೋಜನೆ: ಭಾರತೀಯ ಮಹಿಳಾ ಕಾಫಿ ಒಕ್ಕೂಟ, ಸ್ಥಳ: ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 10

ವಿಶ್ವ ಕವಿತಾ ದಿನದ ಅಂಗವಾಗಿ ‘ಬಹುಭಾಷಾ ಕವಿಗೋಷ್ಠಿ’: ಕವಿತಾ ವಾಚನ: ಉಷಾರಾಣಿ ರಾವ್, ವಿ.ಎಂ. ಮಂಜುನಾಥ, ಆಶ್ ಅಶಿತಾ, ಅಭಿಲಾಷ್ ಚಂದ್ರನ್, ಮಾನಸ ಚಾಮರ್ತಿ, ಆಯೋಜನೆ ಮತ್ತು ಸ್ಥಳ: ಕೇಂದ್ರ ಸಾಹಿತ್ಯ ಅಕಾಡೆಮಿ, ದಕ್ಷಿಣ ಪ್ರಾದೇಶಿಕ ಕಚೇರಿ ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 11

‘ಭಾವಾಭಿಯಾನ’ ಗೀತೆಗಳ ಗಾಯನ: ಉದ್ಘಾಟನೆ: ಎ.ವಿ. ಲಕ್ಷ್ಮೀನಾರಾಯಣ, ಅಧ್ಯಕ್ಷತೆ: ಕಾ.ವೆಂ. ಶ್ರೀನಿವಾಸಮೂರ್ತಿ, ಆಯೋಜನೆ: ಅಖಿಲ ಕರ್ನಾಟಕ ಸುಗಮ ಸಂಗೀತ ಸಂಸ್ಥೆಗಳ ಒಕ್ಕೂಟ, ಸ್ಥಳ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆಂಗೇರಿ ಉಪನಗರ, ಮಧ್ಯಾಹ್ನ 2

ಹೆಬ್ಬಾಲೆ ಕೆ. ನಾಗೇಶ್ ಅವರ ಆರು ಪುಸ್ತಕಗಳ ಬಿಡುಗಡೆ: ಎಸ್.ಜಿ. ಸಿದ್ಧರಾಮಯ್ಯ, ಅಧ್ಯಕ್ಷತೆ: ಮಾವಳ್ಳಿ ಶಂಕರ್, ಪುಸ್ತಕಗಳ ಕುರಿತು: ಸಿದ್ಧನಗೌಡ ಪಾಟೀಲ, ಎಚ್. ಲಕ್ಷ್ಮೀನಾರಾಯಣಸ್ವಾಮಿ, ಲಿಂಗರಾಜು ಹೆಬ್ಬಾಲೆ, ಎಸ್.ಟಿ. ಸೋಮಶೇಖರ್, ಉಪಸ್ಥಿತಿ: ಸುಬ್ಬು ಹೊಲೆಯಾರ್, ಆಯೋಜನೆ: ದಲಿತ ಸಾಹಿತ್ಯ ಪರಿಷತ್ತು, ಕರ್ನಾಟಕ ದಲಿತ ಸಂಘರ್ಷ ಸಮಿತಿ ಬೆಂಗಳೂರು ಜಿಲ್ಲಾ ಘಟಕ (ಅಂಬೇಡ್ಕರ್ ವಾದ), ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಸಂಜೆ 4.30



ಎಸ್.ಜಿ. ಸಿದ್ಧರಾಮಯ್ಯ

ತಿಂಗಳ ಉಪನ್ಯಾಸ ಕಾರ್ಯಕ್ರಮ: ‘ಭಾಷಾಂತರ ಪ್ರದೇಶಗಳು- ಕನ್ನಡ ನಾಡುನುಡಿಯ ಉದಯ ಕಾಲದಲ್ಲಿ’: ಆರ್. ತಾರಿಣಿ ಶುಭದಾಯಿನಿ, ಅಧ್ಯಕ್ಷತೆ: ಚನ್ನಪ್ಪ ಕಟ್ಟಿ, ಆಯೋಜನೆ ಮತ್ತು ಸ್ಥಳ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಚೇರಿ, ಮಲ್ಲತ್ತಹಳ್ಳಿ, ಕಲಾಗ್ರಾಮ, ಸಂಜೆ 5

2023ನೇ ಸಾಲಿನ ವಿವಿಧ ಕೃತಿಗಳಿಗೆ ದತ್ತಿ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಬಸವರಾಜು, ಅಧ್ಯಕ್ಷತೆ: ಮಹೇಶ ಜೋಶಿ, ಪ್ರಶಸ್ತಿ ಪ್ರದಾನ: ಎಲ್.ಎನ್. ಮುಕುಂದರಾಜ್, ಆಯೋಜನೆ ಮತ್ತು ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

‘ಸಾಂಸ್ಕೃತಿಕ ಉತ್ಸವ, ಸಮಾಜ ಸೇವಾರತ್ನ ಪ್ರಶಸ್ತಿ’ ಪ್ರದಾನ: ಉದ್ಘಾಟನೆ: ಸತೀಶ್ ಜಾರಕಿಹೊಳಿ, ಪ್ರಶಸ್ತಿ ಪ್ರದಾನ: ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ಎಂ. ಕೃಷ್ಣಪ್ಪ, ಟ್ರಸ್ಟಿನ ವಾರ್ಷಿಕ ವಿಶೇಷ ಸಂಚಿಕೆ ಬಿಡುಗಡೆ: ಎಚ್. ವಿಶ್ವನಾಥ್, ಪ್ರಾಸ್ತಾವಿಕ ನುಡಿ: ಜಾಣಗೆರೆ ವೆಂಕಟರಾಮಯ್ಯ, ಅತಿಥಿಗಳು: ಪ್ರಿಯಕೃಷ್ಣ, ಅಗ್ರಹಾರ ಕೃಷ್ಣಮೂರ್ತಿ, ಆಯೋಜನೆ: ದಿವ್ಯ ಚೇತನ ಚಾರಿಟಬಲ್ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5.30

ಸಮನ್ವಯ ಕಲಾಉತ್ಸವ ‘ಭಕ್ತಿ ಶಕ್ತಿ’: ಅತಿಥಿಗಳು: ಸುಶೀಲಾ ಮೆಹ್ತಾ, ನಂದಿನಿ ರಮಣಿ, ಡಾ.ಸಿ.ಎನ್. ಅಶ್ವತ್ಥನಾರಾಯಣ, ಆಯೋಜನೆ: ರಾಜರಾಜೇಶ್ವರಿ ಕಲಾನಿಕೇತನ, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಸಂಜೆ 6

‘ಹರಿದಾಸರ ಮುಂಡಿಗೆಗಳು’ ಧಾರ್ಮಿಕ ಪ್ರವಚನ: ಪ್ರಶಾಂತ ಭಾರ್ಗವಾಚಾರ್ಯ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಆರನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಸಂಜೆ 7

‘ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ’ಯಿಂದ ಬಿಬಿಎಂಪಿ ವಿಭಜನೆ, ಪ್ರಾಧಿಕಾರದ ಕೈಗೆ ಅಧಿಕಾರ

ಜಿಬಿಎ ಮುಷ್ಟಿಗೆ ‘ಗ್ರೇಟರ್’ ಆಡಳಿತ

• ಆರ್. ಮಂಜುನಾಥ್


ಬೆಂಗಳೂರು: ನಗರ ಜಿಲ್ಲೆಯಲ್ಲಿ ಸ್ಥಳೀಯ ಸಂಸ್ಥೆಗಳ ಅಧಿಕಾರ ಮೊಟಕುಗೊಂಡು, ಎಲ್ಲ ರೀತಿಯ ಯೋಜನೆಗಳು, ಆರ್ಥಿಕ ಶಕ್ತಿ, ಆಡಳಿತದ ಸಂಪೂರ್ಣ ನಿಯಂತ್ರಣ ‘ಗ್ರೇಟರ್ ಬೆಂಗಳೂರು ಪ್ರಾಧಿಕಾರ’ದ (ಜಿಬಿಎ) ಹಿಡಿತಕ್ಕೆ ಬರಲಿದೆ.

ವಿಧಾನಮಂಡಲದಲ್ಲಿ ‘ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ–2024’ ಅನುಮೋದನೆಯಾಗಿದ್ದು, ಇದರಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವಿಭಜನೆಯಾಗಲಿದೆ. ಬಿಬಿಎಂಪಿ ಗಡಿಗೆ ಹೊಂದಿಕೊಂಡಂತಿರುವ ಹಲವು ಗ್ರಾಮ ಪಂಚಾಯಿತಿಗಳೂ ಜಿಬಿಎ ವ್ಯಾಪ್ತಿಗೆ ಸೇರಿಕೊಳ್ಳುವ ನಿರೀಕ್ಷೆ ಇದೆ. ಜಿಬಿಎ ವ್ಯಾಪ್ತಿಯಲ್ಲಿ ತಲಾ 150 ವಾರ್ಡ್‌ಗಳ ಏಳು ನಗರ ಪಾಲಿಕೆಗಳನ್ನು ಸೃಜಿಸುವ ಅವಕಾಶವಿದೆ. ಹೀಗಾಗಿ, ಬಿಬಿಎಂಪಿ ವಿಭಜನೆ ಅಥವಾ ವಿಭಾಗವಾಗುತ್ತದೆ ಎನ್ನುವ ಬದಲು ರದ್ದಾಗಲಿದೆ ಎನ್ನಬಹುದು.

ಮಸೂದೆ ಪ್ರಕಾರ, ಬೆಂಗಳೂರು ನಗರ ಜಿಲ್ಲೆ ಮಾತ್ರವಲ್ಲ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪ್ರದೇಶಗಳು ಸೇರಿದಂತೆ ಸರ್ಕಾರ ಅಧಿಸೂಚಿಸುವ ಪ್ರದೇಶಗಳೂ ಜಿಬಿಎ ವ್ಯಾಪ್ತಿಗೆ ಬರಲಿವೆ. ಹೀಗಾಗಿ, ಜಿಬಿಎಗೆ ನಗರ ಜಿಲ್ಲೆ ಹಾಗೂ ಗ್ರಾಮಾಂತರ ಜಿಲ್ಲೆಗಳ ಜೊತೆಗೆ ರಾಮನಗರ ಜಿಲ್ಲೆಯ ಪ್ರದೇಶಗಳೂ ಸೇರಿಕೊಳ್ಳುವ ಸಾಧ್ಯತೆ ಇದೆ.

‘ಆರ್ಥಿಕವಾಗಿ ಬಲಹೊಂದಿರುವ ನಗರ ಜಿಲ್ಲೆಯ ಗ್ರಾಮ ಪಂಚಾಯಿತಿಗಳನ್ನೂ ಜಿಬಿಎಗೆ ಸೇರಿಸಿಕೊಳ್ಳಬಹುದು’ ಎಂದು ಮಸೂದೆಯನ್ನು ಪರಿಶೀಲಿಸಿದ ‘ವಿಧಾನ ಮಂಡಲದ ಜಂಟಿ ಪರಿಶೀಲನಾ ಸಮಿತಿ’ ಕೂಡ ಸಲಹೆ ನೀಡಿದೆ. ಆದ್ದರಿಂದ, ಸರ್ಕಾರ ಆಗಾಗ್ಗೆ ಹೊರಡಿಸುವ ಅಧಿಸೂಚನೆಗಳಂತೆ ಜಿಬಿಎ ವ್ಯಾಪ್ತಿ ವಿಸ್ತಾರಗೊಳ್ಳುತ್ತದೆ. ಸಂವಿಧಾನದ 74ನೇ ತಿದ್ದುಪಡಿಯಂತೆ ನಗರ ಪಾಲಿಕೆಗಳು ಹೊಂದಿರಬೇಕಾದ ಬಹುತೇಕ ಅಧಿಕಾರವನ್ನು ಜಿಬಿಎಯೇ ನಿರ್ವಹಿಸಲಿದೆ. ನಗರ ಪಾಲಿಕೆಗಳ ಆಡಳಿತಾತ್ಮಕ ಪ್ರಕಾರ್ಯಗಳನ್ನು ನಿರ್ವಹಿಸುವ ಮತ್ತು ಅಧಿಕಾರ ಚಲಾಯಿಸುವುದನ್ನೂ ಮಸೂದೆ ಜಿಬಿಎಗೆ ನೀಡಿದೆ.

ನಗರ ಪಾಲಿಕೆಗಳಿಗೆ ಸಾಮಾನ್ಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಜಿಬಿಎ ಅಂತಿಮಗೊಳಿಸುತ್ತದೆ. ಗ್ರೂಪ್ ಎ ಮತ್ತು ಗ್ರೂಪ್ ಬಿ ನೌಕರರನ್ನೂ ಜಿಬಿಎಯೇ ನೇಮಕ ಮಾಡುತ್ತದೆ. ಸಿ ಮತ್ತು ಡಿ ನೌಕರರನ್ನು ನಗರ ಪಾಲಿಕೆಗಳ ಆಯುಕ್ತರು ನೇಮಕ ಮಾಡಿಕೊಳ್ಳಬಹುದಾದರೂ ಅವರ ಮೇಲೆ ಯಾವ ರೀತಿಯ ಶಿಸ್ತು ಕ್ರಮವನ್ನೂ ತೆಗೆದುಕೊಳ್ಳುವಂತಿಲ್ಲ. ಸಂವಿಧಾನದ ಅನುಚ್ಛೇದ 243 ಜೆಡ್‌ಇನಲ್ಲಿ ನಗರ ಪಾಲಿಕೆಗೆ ನೀಡಲಾಗಿರುವ ನಗರ ಯೋಜನೆ ಸಿದ್ಧಪಡಿಸುವ ಜವಾಬ್ದಾರಿಗಳನ್ನೂ, ಮುಖ್ಯಮಂತ್ರಿಯವರ ನೇತೃತ್ವದಲ್ಲಿ ಸೃಜಿಸಲಾಗುವ ‘ಬೆಂಗಳೂರು ಮಹಾನಗರ ಯೋಜನಾ ಸಮಿತಿ’ಗೆ (ಬಿಎಂಪಿಸಿ) ನೀಡಲಾಗಿದೆ.



ಗ್ರೇಟರ್ ಬೆಂಗಳೂರು ಏನೇನಾಗುತ್ತೆ?

ಜಿಬಿಎನಲ್ಲಿ ಯಾರು ಇರಲಿದ್ದಾರೆ?

ಮುಖ್ಯಮಂತ್ರಿಯವರು ಪದನಿಮಿತ್ತ ‘ಗ್ರೇಟರ್ ಬೆಂಗಳೂರು ಪ್ರಾಧಿಕಾರ’ದ ಅಧ್ಯಕ್ಷರಾಗಿರುತ್ತಾರೆ. ಬೆಂಗಳೂರು ಅಭಿವೃದ್ಧಿ ಮಂತ್ರಿ ಉಪಾಧ್ಯಕ್ಷರಾಗಲಿದ್ದು, ಜಿಬಿಎ ವ್ಯಾಪ್ತಿಯ ವಿಧಾನಸಭೆ ಕ್ಷೇತ್ರಗಳ ಶಾಸಕರು ಸದಸ್ಯರಾಗಿರುತ್ತಾರೆ. ಜಿಬಿಎ ಮುಖ್ಯ ಆಯುಕ್ತ ಸದಸ್ಯ ಕಾರ್ಯದರ್ಶಿಯಾಗಲಿದ್ದಾರೆ. ನಗರಪಾಲಿಕೆಗಳ ಸದಸ್ಯರು, ಬಿಡಿಎ ಆಯುಕ್ತ, ಬೆಂಗಳೂರು ಜಲಮಂಡಳಿ ಅಧ್ಯಕ್ಷ, ಬಿಎಂಟಿಸಿ, ನಮ್ಮ ಮೆಟ್ರೊ, ಬೆಸ್ಕಾಂನ ವ್ಯವಸ್ಥಾಪಕ ನಿರ್ದೇಶಕ, ಜಿಲ್ಲಾಧಿಕಾರಿ, ಪೊಲೀಸ್ ಆಯುಕ್ತ, ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ವ್ಯವಸ್ಥಾಪಕ ನಿರ್ದೇಶಕ, ಜಿಬಿಎನ ಮುಖ್ಯ ನಗರ ಯೋಜಕ, ಮುಖ್ಯ ಎಂಜಿನಿಯರ್, ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ನಿರ್ದೇಶಕ, ನಗರ ಪಾಲಿಕೆಗಳ ಆಯುಕ್ತರು, ಜಿಬಿಎ ವ್ಯಾಪ್ತಿಯ ಲೋಕಸಭೆ, ರಾಜ್ಯಸಭೆ, ವಿಧಾನಸಭೆ, ವಿಧಾನ ಪರಿಷತ್ತಿನ ಸದಸ್ಯರು, ಸಂಚಾರ ಪೊಲೀಸ್, ರೈಲು ಮೂಲಸೌಕರ್ಯ ಅಭಿವೃದ್ಧಿ ನಿಗಮ, ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಮಂಡಳಿ ಪ್ರತಿನಿಧಿಗಳು ಸದಸ್ಯರಾಗಿರುತ್ತಾರೆ. ಅಲ್ಲದೆ, ಯಾವುದೇ ಏಜೆನ್ಸಿ ಅಥವಾ ಇಲಾಖೆಯ ಅಧಿಕಾರಿಯನ್ನು ಸರ್ಕಾರ ಸದಸ್ಯರನ್ನಾಗಿಸಬಹುದು.

‘ಗ್ರೇಟರ್ ಬೆಂಗಳೂರು’: ನೀವೇನನ್ನುತ್ತೀರಿ?

ರಾಜ್ಯ ಸರ್ಕಾರ ‘ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ– 2024’ ಮೂಲಕ ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚಿಸಿ, ಅದರಡಿ ನಗರಪಾಲಿಕೆಗಳನ್ನು ರಚಿಸಲು ಮುಂದಾಗಿದೆ. ಈ ಬಗ್ಗೆ ನಿಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ‘ಪ್ರಜಾವಾಣಿ’ಗೆ ಕಳುಹಿಸಬಹುದು. ನಿಮ್ಮ ಹೆಸರು, ವಿಳಾಸ ಹಾಗೂ ಭಾವಚಿತ್ರದೊಂದಿಗೆ ವ್ಯಾಟ್ಸ್ ಆ್ಯಪ್‌ಗೆ ಕಳುಹಿಸಿ.

96060 38256

ಸಂವಿಧಾನ ಬಾಹಿರ: ಪದ್ಮನಾಭರೆಡ್ಡಿ



‘ಸಂವಿಧಾನದ ಪಾರ್ಟ್ IXA ಆರ್ಟಿಕಲ್ 243ಪಿಯಿಂದ ಆರ್ಟಿಕಲ್ 243ಜಡ್‌ಜಿವರೆಗೆ ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರ ನೀಡಲಾಗಿದೆ. ಅದಕ್ಕೆ ಬದಲಾಗಿ, ‘ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ– 2024’ ಮೂಲಕ ಪ್ರಾಧಿಕಾರ ರಚಿಸಿ, ಅದಕ್ಕೆ ಅಧಿಕಾರ ನೀಡಲು ಕಾನೂನಿನಲ್ಲಿ ಅವಕಾಶವಿಲ್ಲ’ ಎಂದು ಬಿಬಿಎಂಪಿಯ ಮಾಜಿ ಸದಸ್ಯ ಪದ್ಮನಾಭರೆಡ್ಡಿ ತಿಳಿಸಿದರು. ‘ಸಂವಿಧಾನದ ವಾರಸುದಾರರು ಎಂದು ಬಿಂಬಿಸಿಕೊಳ್ಳುವ ಮುಖ್ಯಮಂತ್ರಿಯವರು, ಪ್ರಜಾಪ್ರಭುತ್ವವನ್ನು ಎತ್ತಿಹಿಡಿಯಲು ಕೂಡಲೇ ಬಿಬಿಎಂಪಿಗೆ ಚುನಾವಣೆ ನಡೆಸಬೇಕು. ಸಂವಿಧಾನಕ್ಕೆ ಗೌರವ ನೀಡಬೇಕು. ಬಿಬಿಎಂಪಿಗೆ ಜನಪ್ರತಿನಿಧಿಗಳು ಆಯ್ಕೆಯಾದ ಮೇಲೆ, ಅವರು ನಗರದ ಆಡಳಿತಕ್ಕೆ ಅಗತ್ಯವಾದದ್ದನ್ನು ಚರ್ಚಿಸಿ, ಸಲಹೆ ನೀಡಲು ಅವಕಾಶ ನೀಡುವಂತಾಗಲಿ’ ಎಂದರು.

ಬಿಬಿಎಂಪಿಯಲ್ಲಿ 2.71 ಲಕ್ಷ ಅಂತಿಮ ಇ-ಖಾತಾಗಳ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ 25 ಲಕ್ಷ ಕರಡು ಇ-ಖಾತಾಗಳು ಆನ್‌ಲೈನ್‌ನಲ್ಲಿ ಲಭ್ಯವಿದ್ದು, 2,71 ಲಕ್ಷ ಅಂತಿಮ ಇ-ಖಾತಾಗಳನ್ನು ವಿತರಿಸಲಾಗಿದೆ ಎಂದು ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಅವರು ತಿಳಿಸಿದರು.

ಅಂತಿಮ ಇ-ಖಾತಾಗಳಿಗಾಗಿ ನಾಗರಿಕರು 2.87 ಲಕ್ಷ ಅರ್ಜಿ ಸಲ್ಲಿಸಿದ್ದಾರೆ. ಸರಾಸರಿ ಎರಡು ದಿನದಲ್ಲಿ ಅಂತಿಮ ಇ–ಖಾತಾ ನೀಡಲಾಗುತ್ತಿದೆ. ಇ-ಖಾತಾ ಅರ್ಜಿಗಳ ದೈನಂದಿನ ವಿಲೇವಾರಿಯು, ದಿನನಿತ್ಯದ ಸ್ವೀಕೃತಿಗಿಂತ ಹೆಚ್ಚಾಗಿದೆ ಎಂದರು.

ನಾಗರಿಕರು https://BBMPeAasthi.karnataka.gov.in ಮೂಲಕ ಅರ್ಜಿಗಳನ್ನು ಸಲ್ಲಿಕೆ ಮಾಡಬಹುದಾಗಿದೆ. ಪಾಲಿಕೆ ಕಚೇರಿಗಳಿಗೆ ಭೇಟಿ ನೀಡುವ ಅಗತ್ಯವಿಲ್ಲ. ಪಾಲಿಕೆ ಸಹಾಯಕ ಕಂದಾಯ ಅಧಿಕಾರಿಗಳು ಇ-ಖಾತಾಗಾಗಿ ಸಲ್ಲಿಸಿದ ಅರ್ಜಿಗಳನ್ನು ಪರಿಶೀಲಿಸಿ, ಅಂತಿಮ ಇ-ಖಾತಾ ಸಿಗುವ ವ್ಯವಸ್ಥೆ ಮಾಡಲಿದ್ದಾರೆ ಎಂದು ತಿಳಿಸಿದರು.

ಇ-ಖಾತಾ ಅರ್ಜಿಗಳ ವಿಲೇವಾರಿಗೆ ಸಂಬಂಧಿಸಿದಂತೆ ಎಂಟು ವಲಯಗಳು ಮತ್ತು ಎಲ್ಲ 64 ಸಹಾಯಕ ಕಂದಾಯ ಅಧಿಕಾರಿಗಳ ಜೊತೆ ಪ್ರತಿನಿತ್ಯ ವರ್ಚ್ಯುವಲ್ ಮೂಲಕ ಸಭೆ ನಡೆಸಿ, ಅರ್ಜಿಗಳ ವಿಲೇವಾರಿ ಕುರಿತು ಪರಿಶೀಲಿಸಲಾಗುವುದು. ಜೊತೆಗೆ ಅಗತ್ಯ ನಿರ್ದೇಶನಗಳನ್ನು ನೀಡಲಾಗುವುದು ಎಂದರು.

ಅಂತಿಮ ಇ-ಖಾತಾ ವಿತರಣೆ

ವಲಯ	ಸಂಖ್ಯೆ
ಬೊಮ್ಮನಹಳ್ಳಿ	46,025
ರಾಜರಾಜೇಶ್ವರಿ ನಗರ	42,191
ಯಲಹಂಕ	38,494
ಮಹದೇವಪುರ	37,793
ದಕ್ಷಿಣ	37,738
ಪಶ್ಚಿಮ	27,020
ಪೂರ್ವ	25,848
ದಾಸರಹಳ್ಳಿ	16,818
ಒಟ್ಟು	2,71,927

‘ಕಾವೇರಿ: ಕುಡಿಯುವ ನೀರಿನ ಬಾಧೆ ಇಲ್ಲ’

ನವದೆಹಲಿ: ಕಾವೇರಿ ಜಲಾನಯನ ಪ್ರದೇಶದ ನಾಲ್ಕು ಜಲಾಶಯಗಳಲ್ಲಿ ಈ ಸಲ ನೀರಿನ ಸಂಗ್ರಹ ಸಾಕಷ್ಟು ಇದೆ. ಹೀಗಾಗಿ, ಬೆಂಗಳೂರು ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ಕುಡಿಯುವ ನೀರು, ಪರಿಸರ ಹಾಗೂ ಕೈಗಾರಿಕಾ ಬಳಕೆಗೆ ಯಾವುದೇ ಸಮಸ್ಯೆ ಆಗುವುದಿಲ್ಲ ಎಂದು ಜಲಶಕ್ತಿ ಖಾತೆ ರಾಜ್ಯ ಸಚಿವ ರಾಜ್ ಭೂಷಣ್ ಚೌಧರಿ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಗುರುವಾರ ಪ್ರಶ್ನೋತ್ತರ ಅವಧಿಯಲ್ಲಿ ಚಿಕ್ಕಬಳ್ಳಾಪುರ ಸಂಸದ ಡಾ.ಕೆ. ಸುಧಾಕರ್ ಅವರು ಕೇಳಿದ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಸಚಿವರು, ‘ನಾಲ್ಕು ಜಲಾಶಯಗಳಲ್ಲಿ ನೀರಿನ ಒಟ್ಟು ಸಂಗ್ರಹ 104 ಟಿಎಂಸಿ ಅಡಿ. ಪ್ರಸ್ತುತ 59.26 ಟಿಎಂಸಿ ಅಡಿಯಷ್ಟು ನೀರಿದೆ. ಬೇಸಿಗೆ ಅಂತ್ಯದವರೆಗೆ ನೀರಿನ ಕೊರತೆ ಆಗುವುದಿಲ್ಲ’ ಎಂದು ಸ್ಪಷ್ಟಪಡಿಸಿದ್ದಾರೆ.

ಅಂತರ್ಜಲ ಸಂರಕ್ಷಣೆ ರಾಜ್ಯ ಸರ್ಕಾರದ ಜವಾಬ್ದಾರಿ. ಅಂತರ್ಜಲ ಅತಿ ಬಳಕೆಗೆ ಕಡಿವಾಣ ಹಾಕಲು ಕರ್ನಾಟಕ ಸರ್ಕಾರವು ಕಾಯ್ದೆ ಅನುಷ್ಠಾನಗೊಳಿಸಿದೆ. ನಿಯಮ ಉಲ್ಲಂಘಿಸಿದವರಿಗೆ ₹5 ಸಾವಿರ ದಂಡ ಹಾಗೂ ಆರು ತಿಂಗಳ ಜೈಲು ಶಿಕ್ಷೆ ವಿಧಿಸಲು ಈ ಕಾಯ್ದೆಯಲ್ಲಿ ಅವಕಾಶ ಇದೆ ಎಂದು ಅವರು ಮಾಹಿತಿ ನೀಡಿದ್ದಾರೆ. ರಾಜ್ಯದ ಜಲಾಶಯಗಳಲ್ಲಿ ಪ್ರಸ್ತುತ ನೀರಿನ ಸಂಗ್ರಹದ ಬಗ್ಗೆ ಸುಧಾಕರ್ ಪ್ರಶ್ನೆಗೆ ಸಚಿವರು ನಾಲ್ಕು ಜಲಾಶಯಗಳ ಮಾಹಿತಿ ಒದಗಿಸಿದ್ದಾರೆ.

ನೀರಿನ ಸಂಗ್ರಹ

ಜಲಾಶಯ	ಪ್ರಸ್ತುತ ಸಂಗ್ರಹ (ಟಿಎಂಸಿ)
ಕೆಆರ್‌ಎಸ್	28.27
ಕಬಿನಿ	8.8
ಹಾರಂಗಿ	3.19
ಹೇಮಾವತಿ	18.96
ಒಟ್ಟು	59.26

ಗ್ಲೋಬಲ್ ಅಕಾಡೆಮಿ ಆಫ್ ಟೆಕ್ನಾಲಜಿಯಲ್ಲಿ ‘ಬ್ರ್ಯಾಂಡ್ ಕರ್ನಾಟಕ’ದಡಿ ಕಲೆ, ಸಂಸ್ಕೃತಿ ಅನಾವರಣ

ವಿಶ್ವೇಶ್ವರಯ್ಯ ತಾಂತ್ರಿಕ ವಿ.ವಿ ಯುವ ಉತ್ಸವ 24ರಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ‘24ನೇ ವಿಟಿಯು ಯುವ ಉತ್ಸವ–ಇಂಟರ‍್ಯಾಕ್ಟ್– 2025’ ಅನ್ನು ರಾಜರಾಜೇಶ್ವರಿ ನಗರದಲ್ಲಿರುವ ಗ್ಲೋಬಲ್ ಅಕಾಡೆಮಿ ಆಫ್ ಟೆಕ್ನಾಲಜಿಯಲ್ಲಿ ಮಾರ್ಚ್ 24ರಿಂದ ನಾಲ್ಕು ದಿನ ಆಯೋಜಿಸಲಾಗಿದೆ.

‘ನಮ್ಮ ರಾಜ್ಯದ ಕಲೆ–ಸಂಸ್ಕೃತಿ ಅನಾವರಣಗೊಳಿಸುವ ಉತ್ಸವವನ್ನಾಗಿ ಆಯೋಜಿಸಲಾಗುತ್ತಿದ್ದು, ‘ಬ್ರ್ಯಾಂಡ್ ಕರ್ನಾಟಕ’ ಶೀರ್ಷಿಕೆಯಡಿ ರಾಜ್ಯದ ನಾಲ್ಕು ಭಾಗಗಳ ಸಂಸ್ಕೃತಿಯನ್ನು ವಿದ್ಯಾರ್ಥಿಗಳು ಪ್ರದರ್ಶಿಸಲಿದ್ದಾರೆ’ ಎಂದು ನ್ಯಾಷನಲ್ ಎಜ್ಯುಕೇಷನ್ ಫೌಂಡೇಷನ್‌ನ (ಎನ್‌ಇಎಫ್) ಟ್ರಸ್ಟಿ ಕಾರ್ಯದರ್ಶಿ ಐಶ್ವರ್ಯ ಡಿಕೆಎಸ್ ಹೆಗ್ಡೆ ಅವರು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಗ್ಲೋಬಲ್ ಅಕಾಡೆಮಿ ಆಫ್ ಟೆಕ್ನಾಲಜಿ ತನ್ನ 25ನೇ ವಾರ್ಷಿಕೋತ್ಸವದ ಅಂಗವಾಗಿ ವಿಟಿಯು ಉತ್ಸವವನ್ನು ತನ್ನ ಕ್ಯಾಂಪಸ್‌ನಲ್ಲಿ ನಿರ್ವಹಿಸುತ್ತಿರುವುದು ಹೆಮ್ಮೆಯ ಸಂಗತಿ. 100ಕ್ಕೂ ಹೆಚ್ಚು ಕಾಲೇಜುಗಳಿಂದ ಮೂರೂವರೆ ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸುತ್ತಿದ್ದಾರೆ’ ಎಂದರು.

‘ರಾಜ್ಯದ ವಿವಿಧ ಭಾಗಗಳಿಂದ ಉತ್ಸವಕ್ಕೆ ಬರುವ ಸುಮಾರು 1,800 ವಿದ್ಯಾರ್ಥಿಗಳಿಗೆ ಗ್ಲೋಬಲ್ ಅಕಾಡೆಮಿ ಆಫ್ ಟೆಕ್ನಾಲಜಿ ವತಿಯಿಂದ ವಸತಿ ಸೌಲಭ್ಯ ಕಲ್ಪಿಸಲಾಗುತ್ತದೆ. ಪ್ರತಿದಿನ ನಾಲ್ಕು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಊಟೋಪಚಾರ ವ್ಯವಸ್ಥೆ ಮಾಡಲಾಗಿದೆ’ ಎಂದು ತಿಳಿಸಿದರು.

‘ನಟ ಧ್ರುವ ಸರ್ಜಾ ಅವರು ಉತ್ಸವ ಉದ್ಘಾಟಿಸಲಿದ್ದಾರೆ. ಉಪ ಮುಖ್ಯಮಂತ್ರಿ ಹಾಗೂ ಎನ್‌ಇಎಫ್‌ನ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಟಿಯು ಕುಲಪತಿ ವಿದ್ಯಾಶಂಕರ್ ಭಾಗವಹಿಲಿದ್ದಾರೆ. ಎರಡನೇ ದಿನದ ಉತ್ಸವದಲ್ಲಿ ಗಾಯಕ ವಿಜಯಪ್ರಕಾಶ್ ಅವರ ಸಂಗೀತ ಕಾರ್ಯಕ್ರಮವಿದೆ. ಮೂರನೇ ದಿನ ಡಿಜೆ ವಿನಯ್ ಕಾರ್ಯಕ್ರಮ ಹಾಗೂ ಸಮಾರೋಪದಲ್ಲಿ ನಟ ವಿಜಯ ರಾಘವೇಂದ್ರ ಭಾಗವಹಿಸಲಿದ್ದಾರೆ’ ಎಂದು ವಿವರ ನೀಡಿದರು.

‘ನಾಲ್ಕು ದಿನಗಳ ಉತ್ಸವದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿವೆ ಎಂದು ತಿಳಿಸಿದರು.



ವಿದ್ಯಾರ್ಥಿಗಳಿಗೆ ಉತ್ಸವದ ಸಾರಥ್ಯ

ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣವನ್ನು ಬೆಳೆಸುವ ಉದ್ದೇಶದಿಂದ ‘24ನೇ ವಿಟಿಯು ಯುವ ಉತ್ಸವ– ಇಂಟರ‍್ಯಾಕ್ಟ್– 2025’ರ ಆಯೋಜನೆ ಹಾಗೂ ನಿರ್ವಹಣೆಯ ಜವಾಬ್ದಾರಿಯನ್ನು ನಮ್ಮ ಕಾಲೇಜಿನ ವಿದ್ಯಾರ್ಥಿಗಳಿಗೆ ವಹಿಸಲಾಗಿದೆ. ಕಾಲೇಜಿನ ಆಡಳಿತ ಮಂಡಳಿ ಅವರಿಗೆ ಆರ್ಥಿಕ ನೆರವು ಹಾಗೂ ಇತರೆ ಸೌಲಭ್ಯಗಳೆಲ್ಲವನ್ನೂ ನೀಡುತ್ತಿದೆ’ ಎಂದು ಐಶ್ವರ್ಯ ಡಿಕೆಎಸ್ ಹೆಗ್ಡೆ ತಿಳಿಸಿದರು. ‘ಐದಾರು ಸಾವಿರ ಯುವಕರ ಸಮ್ಮುಖದಲ್ಲಿ ವಿದ್ಯಾರ್ಥಿಗಳಿಗೆ ತಮ್ಮ ಪ್ರತಿಭೆಯನ್ನು ಅನಾವರಣಗೊಳಿಸುವ ಅವಕಾಶವನ್ನು ಈ ವೇದಿಕೆ ನೀಡುತ್ತಿದೆ. ಉತ್ಸವದ ನಾಲ್ಕೂ ದಿನಗಳ ಕಾರ್ಯಕ್ರಮವನ್ನು ಕಾಲೇಜಿನ ಯೂಟ್ಯೂಬ್ ಚಾನೆಲ್‌ನಲ್ಲಿ ನೇರ ಪ್ರಸಾರ ಮಾಡಲಾಗುತ್ತದೆ’ ಎಂದರು.

ಐದು ವಿಭಾಗಗಳಲ್ಲಿ ಸ್ಪರ್ಧೆ

ಐದು ವಿಭಾಗಗಳ ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳು ಪ್ರತಿಭೆ ಪ್ರದರ್ಶಿಸಲಿದ್ದಾರೆ. ಸಂಗೀತ, ನೃತ್ಯ, ರಂಗಭೂಮಿ, ಸಾಹಿತ್ಯ, ಫೈನ್ ಆರ್ಟ್ ವಿಭಾಗದಲ್ಲಿ 25 ಸ್ಪರ್ಧೆಗಳು ನಡೆಯಲಿವೆ. ವಿಜೇತರಾದವರಿಗೆ ಉತ್ತಮ ಬಹುಮಾನದ ಜೊತೆಗೆ, ಅಂತರ್ ವಿಶ್ವವಿದ್ಯಾಲಯ, ದೇಶ–ವಿದೇಶಗಳ ಸ್ಪರ್ಧೆಗಳಲ್ಲಿ ಭಾಗವಹಿಸುವ ಅವಕಾಶ ಸಿಗಲಿದೆ ಎಂದು ಗ್ಲೋಬಲ್ ಅಕಾಡೆಮಿ ಆಫ್ ಟೆಕ್ನಾಲಜಿ ಪ್ರಾಂಶುಪಾಲ ಎಚ್.ಬಿ. ಬಾಲಕೃಷ್ಣ ತಿಳಿಸಿದರು.



ಕರುನಾಡ ವಿಜಯಸೇನೆ ವತಿಯಿಂದ ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮಹಿಳಾ ಸಾಧಕರಿಗೆ 'ಬೆಳವಾಡಿ ಮಲ್ಲಮ್ಮ ರಾಜ್ಯ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಸುಮಂಗಲಿ ಸೇವಾಶ್ರಮದ ಅಧ್ಯಕ್ಷೆ ಎಸ್‌.ಜಿ.ಸುಶೀಲಮ್ಮ, ಕರುನಾಡ ವಿಜಯಸೇನೆ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಎನ್‌.ದೀಪಕ್‌, ಮಾಜಿ ಸಚಿವೆ ರಾಣಿ ಸತೀಶ್‌, ವಿಜಯ ಸೇನೆ ಮಹಿಳಾ ಘಟಕದ ಅಧ್ಯಕ್ಷೆ ಕೆ.ಗಂಗರಾಜಮ್ಮ ಮತ್ತಿತರರು ಕಾರ್ಯಕ್ರಮದಲ್ಲಿ ಹಾಜರಿದ್ದರು

ನಗರದಲ್ಲಿ ಪ್ರತ್ಯೇಕ ರಸ್ತೆ ಅಪಘಾತ ಪ್ರಕರಣಗಳು: ಹೆಲ್ಮೆಟ್ ಧರಿಸದೆ ವಾಹನ ಸವಾರಿ

ಸಹೋದರರಿಬ್ಬರು ಸೇರಿ ನಾಲ್ವರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸಂಭವಿಸಿದ ಪ್ರತ್ಯೇಕ ರಸ್ತೆ ಅಪಘಾತಗಳಲ್ಲಿ ಸಹೋದರರಿಬ್ಬರು ಸೇರಿ ನಾಲ್ವರು ಮೃತಪಟ್ಟಿದ್ದಾರೆ.

ಅತಿವೇಗವಾಗಿ ಬೈಕ್‌ನಲ್ಲಿ ಹೋಗುತ್ತಿದ್ದ ವೇಳೆ ನಿಯಂತ್ರಣ ತಪ್ಪಿ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದ ಪರಿಣಾಮ ಸಹೋದರರಿಬ್ಬರು ಗುರುವಾರ ಮೃತಪಟ್ಟಿದ್ದಾರೆ. ನೀಲಸಂದ್ರ ನಿವಾಸಿಗಳಾದ ಶಕೀಲ್ ಬಶೀರ್ (23) ಮತ್ತು ಅಸ್ಲಂ ಬಶೀರ್ (22) ಮೃತ ಸಹೋದರರು.

ಅಶೋಕ್ ನಗರದ ಬಜಾಜ್ ಸ್ಟ್ರೀಟ್‌ನಲ್ಲಿ ಹೋಟೆಲ್ ನಡೆಸುತ್ತಿದ್ದ ಬಶೀರ್ ಸಹೋದರರು, ಬೆಳಗಿನ ಜಾವ 4.30ರ ವೇಳೆ ಬೈಕ್‌ನಲ್ಲಿ ಹೋಗುವಾಗ ಆನೆಪಾಳ್ಯ ಜಂಕ್ಷನ್ ಬಳಿ ನಿಯಂತ್ರಣ ತಪ್ಪಿ ರಸ್ತೆಬದಿಯ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದು ರಸ್ತೆಗೆ ಉರುಳಿ ಬಿದ್ದಿದ್ದಾರೆ.

ಪರಿಣಾಮ ಇಬ್ಬರ ತಲೆ ಹಾಗೂ ಇತರೆ ಭಾಗಗಳಿಗೆ ಗಂಭೀರ ಪೆಟ್ಟಾಗಿದೆ. ತಕ್ಷಣ ಇಬ್ಬರನ್ನು ಸಮೀಪದ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ ಚಿಕಿತ್ಸೆಗೆ ಸ್ಪಂದಿಸಲಿಲ್ಲ.

'ಬೈಕ್‌ನಲ್ಲಿ ಸಹೋದರರು ವೇಗವಾಗಿ ಹೋಗುವಾಗ ನಿಯಂತ್ರಣ ತಪ್ಪಿ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿರುವುದು ಪ್ರಾಥಮಿಕ ತನಿಖೆ ವೇಳೆ ಗೊತ್ತಾಗಿದೆ. ಇಬ್ಬರು ಹೆಲ್ಮೆಟ್ ಧರಿಸಿರಲಿಲ್ಲ. ಈ ಬೈಕ್ ಮೃತರ ಸ್ನೇಹಿತನದು' ಎಂದು ಪೊಲೀಸರು ತಿಳಿಸಿದರು.

ಅಶೋಕ ನಗರ ಸಂಚಾರಿ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಭದ್ರತಾ ಸಿಬ್ಬಂದಿ ಸಾವು: ಚಿಕ್ಕಜಾಲ ಸಂಚಾರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕ್ಯಾಬ್ ಹಾಗೂ ಬೈಕ್ ನಡುವೆ ಅಪಘಾತ ಸಂಭವಿಸಿ ಅಸ್ಸಾಂ ಮೂಲದ ಭದ್ರತಾ ಸಿಬ್ಬಂದಿ ರಕ್ಮಿಮ್ ಸೈಕಿಯ (23) ಮೃತಪಟ್ಟಿದ್ದು, ಹಿಂಬದಿ ಸವಾರ ಬಿಸ್ಲಾ ಬೋರಾಜ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

'ಬುಧವಾರ ಸಂಜೆ ಇಬ್ಬರು ಬೈಕ್‌ನಲ್ಲಿ ಹೋಗುವಾಗ ಮೈಲನಹಳ್ಳಿ–ಹುಣಸೂರು ರಸ್ತೆಯ ಸ್ಟರ್ಲಿಂಗ್ ಶಾಲೆ ಬಳಿ ವೇಗವಾಗಿ ಬಂದ ಕ್ಯಾಬ್ ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡ ಇಬ್ಬರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ರಕ್ಮಿಮ್ ಸೈಕಿಯ ಚಿಕಿತ್ಸೆಗೆ ಸ್ಪಂದಿಸಲಿಲ್ಲ' ಎಂದು ಪೊಲೀಸರು ತಿಳಿಸಿದ್ದಾರೆ.

ವೆಲ್ಡರ್ ಸಾವು: ಜಾಲಹಳ್ಳಿ ಸಂಚಾರಿ ಠಾಣೆ ವ್ಯಾಪ್ತಿಯ ಹೊಸ ಬಡಾವಣೆ ನಿರ್ಮಾಣದ ರಸ್ತೆಯಲ್ಲಿ ನಿಯಂತ್ರಣ ತಪ್ಪಿ ಬೈಕ್‌ನಿಂದ ಬಿದ್ದು ತಮಿಳುನಾಡು ಮೂಲದ ವೆಲ್ಡರ್ ವಿಮಲ್ ಕುಮಾರ್ (33) ಮೃತಪಟ್ಟಿದ್ದಾರೆ. ಕೆಲಸದ ನಿಮಿತ್ತ ಹೊರಗೆ ಹೋಗಿದ್ದ ವಿಮಲ್ ಕುಮಾರ್ ರಾತ್ರಿ 12.30ರಲ್ಲಿ ಬೈಕ್‌ನಲ್ಲಿ ಲಕ್ಷ್ಮೀಪುರದಲ್ಲಿರುವ ಮನೆಗೆ ವಾಪಸ್ ಆಗುವಾಗ ಶಿವರಾಮಕಾರಂತ ಬಡಾವಣೆ ಹೊಸ ರಸ್ತೆಯಲ್ಲಿ ನಿಯಂತ್ರಣ ತಪ್ಪಿ ಕೆಳಗೆ ಬಿದ್ದರು.

ಮಾದಕ ವಸ್ತು ಮಾರಾಟ: ಮೂವರಿಗೆ ಜೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾದಕ ವಸ್ತು ಮಾರಾಟ ಆರೋಪ ಸಾಬೀತಾದ ಕಾರಣ ಮೂವರು ಅಪರಾಧಿಗಳಿಗೆ 14 ವರ್ಷಗಳ ಜೈಲು ಶಿಕ್ಷೆ ಹಾಗೂ ₹1.5 ಲಕ್ಷ ದಂಡ ವಿಧಿಸಿ ನಗರದ 33ನೇ ಸಿಸಿಎಚ್ ನ್ಯಾಯಾಲಯ ನ್ಯಾಯಾಧೀಶ ವಿಜಯ ದೇವರಾಜ ಅರಸು ಆದೇಶ ಹೊರಡಿಸಿದ್ದಾರೆ.

ಜೆ. ಜೆ ನಗರ ನಿವಾಸಿಗಳಾದ ಸೈಯದ್ ಯಾರಬ್, ಶಾಬಾಜ್ ಖಾನ್, ಇಮ್ರಾನ್ ಪಾಷಾ ಶಿಕ್ಷೆಗೊಳಗಾದವರು. ಬಂಧಿತ ಮತ್ತೊಬ್ಬ ಆರೋಪಿಯ ಸಾಕ್ಷ್ಯಾಧಾರ ಸಿಗದ ಕಾರಣ ಅವರನ್ನು ಖುಲಾಸೆಗೊಳಿಸಲಾಗಿದೆ.

ಗುಡ್ಡದಹಳ್ಳಿ ಮುಖ್ಯರಸ್ತೆಯ ಈದ್ಗಾ ಮೈದಾನದ ಬಳಿ 2023 ಜ.ರಂದು ಸಿಸಿಬಿ ಸಂಘಟಿತ ಅಪರಾಧ ದಳದ ಇನ್‌ಸ್ಪೆಕ್ಟರ್ ಎಸ್.ಮಹದೇವಸ್ವಾಮಿ ನೇತೃತ್ವದ ಆರೋಪಿಗಳನ್ನು ಬಂಧಿಸಿತ್ತು.

ಸೈಯದ್, ಶಾಬಾಜ್, ಇಮ್ರಾನ್ ಬಳಿ ಮಾರಾಟಕ್ಕೆ ತಂದಿದ್ದ 1 ಕೆ.ಜಿ. ಗಾಂಜಾ, 22 ಎಲ್‌ಎಸ್‌ಡಿ ಸ್ಟ್ರಿಪ್ಸ್, 25 ಗ್ರಾಂ ಮೆಥಾಮಫೆಟಮಿನ್ ಪತ್ತೆಯಾಗಿತ್ತು. ಆರೋಪಿಗಳು ಡ್ರಗ್ಸ್ ಮಾರಾಟ ದಂಧೆಯಲ್ಲಿ ಭಾಗಿಯಾಗಿರುವ ಬಗ್ಗೆ ಸಾಕ್ಷ್ಯಾಧಾರ ಸಮೇತ ಎನ್‌ಡಿಪಿಎಸ್ ಕಾಯಿದೆ ಅನ್ವಯ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಲಾಗಿತ್ತು. ಆರೋಪ ಸಾಬೀತಾದ ಕಾರಣ ಶಿಕ್ಷೆ ವಿಧಿಸಲಾಗಿದೆ.

ಸರ್ಕಾರಿ ಅಭಿಯೋಜಕ ಕೆ.ವಿ. ಅಶ್ವತ್ಥನಾರಾಯಣ ವಾದಿಸಿದ್ದರು.

ಪಾದಯಾತ್ರೆ: ಹಲವರು ವಶಕ್ಕೆ

ಬೆಂಗಳೂರು: ಪರಿಶಿಷ್ಟ ಜಾತಿಯ ಒಳಮೀಸಲಾತಿ ಜಾರಿಗೆ ಆಗ್ರಹಿಸಿ ನಗರಕ್ಕೆ ಪಾದಯಾತ್ರೆ ಕೈಗೊಂಡಿದ್ದ ನೂರಕ್ಕೂ ಹೆಚ್ಚು ಜನರನ್ನು ಪೀಣ್ಯ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ನೆಲಮಂಗಲದಿಂದ ಹೊರಟ ನೂರಾರು ಜನರು ಸರ್ವಿಸ್ ರಸ್ತೆ ಮೂಲಕ ನಗರಕ್ಕೆ ಬರುತ್ತಿದ್ದ ವೇಳೆ ಪೊಲೀಸ್ ಸಿಬ್ಬಂದಿ ಅವರನ್ನು ವಶಕ್ಕೆ ಪಡೆದು, ಕೃಷ್ಣಚಂದ್ರ ಕನ್ವೆಷನ್ ಸಭಾಂಗಣಕ್ಕೆ ತಂದು ಬಿಟ್ಟಿದ್ದಾರೆ.

'ದಾವಣಗೆರೆಯ ಹರಿಹರದಿಂದ ಈ ಪಾದಯಾತ್ರೆ ಆರಂಭವಾಗಿದೆ. ಗುರುವಾರ ನೆಲಮಂಗಲದಿಂದ ಹೊರಟ ಪಾದಯಾತ್ರೆಗೆ ಮಾರ್ಗಮಧ್ಯೆ ಪೊಲೀಸರು ತಡೆವೊಡ್ಡಿದ್ದಾರೆ. ಯಾರಿಗೂ ತೊಂದರೆ ಮಾಡಿರಲಿಲ್ಲ. ಆದರೂ ಬಲವಂತವಾಗಿ ನಮ್ಮನ್ನು ವಶಕ್ಕೆ ಪಡೆದಿದ್ದಾರೆ. ಶುಕ್ರವಾರ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಯಲಿದೆ' ಎಂದು ಮುಖಂಡ ಗುರುಮೂರ್ತಿ ತಿಳಿಸಿದರು.

ಚಾಲಕನ ಮೇಲೆ ಹಲ್ಲೆ: ಆರು ಮಂದಿ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲಾ ವಾಹನದ ಮೇಲೆ ಕಲ್ಲು ಎಸೆದು, ಚಾಲಕನ ಮೇಲೆ ಹಲ್ಲೆ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಬ್ಯಾಡರಹಳ್ಳಿ ಠಾಣೆ ಪೊಲೀಸರು ಆರು ಮಂದಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಘಟನೆಯಲ್ಲಿ ಗಾಯಗೊಂಡಿರುವ ಚಿಕ್ಕಗೊಲ್ಲರಹಟ್ಟಿ ನಿವಾಸಿ, ಚಾಲಕ ಸುರೇಶ್ ಅವರ ದೂರು ಆಧರಿಸಿ ಆರು ಮಂದಿಗೆ ನೋಟಿಸ್ ನೀಡಿ, ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಮಾರ್ಚ್ 14ರಂದು ದೊಡ್ಡ ಗೊಲ್ಲರಹಟ್ಟಿಯ ರಾಗಿ ಮಿಲ್ ರಸ್ತೆಯಲ್ಲಿ ಸಮೀಪದ ವಾಟರ್ ಬಾಟಲ್ ಕಂಪನಿಯ ಉದ್ಯೋಗಿಗಳು ಹೋಳಿ ಆಟ ಆಡುತ್ತಿದ್ದರು. ಇದೇ ಮಾರ್ಗವಾಗಿ ಬಂದ ಸುರೇಶ್ ಅವರ ವಾಹನಕ್ಕೆ ಅಡ್ಡ ಬಂದರು. ಹಾರ್ನ್ ಮಾಡಿದರೂ ಲೆಕ್ಕಿಸದೆಯೇ ಕುಣಿಯುತ್ತಿದ್ದರು. ಈ ವೇಳೆ ಕಿಡಿಗೇಡಿಗಳು ಶಾಲಾ ವಾಹನಕ್ಕೆ ಕಲ್ಲು ಎಸೆದು, ಚಾಲಕನ ಮೇಲೆ ಹಲ್ಲೆ ನಡೆಸಿದ್ದಾರೆ' ಎಂದು ಪೊಲೀಸರು ತಿಳಿಸಿದರು.

ಕಳ್ಳರ ಹಿಡಿದುಕೊಟ್ಟ ಕಂದಾಯ ಸಿಬ್ಬಂದಿ

ಬೆಂಗಳೂರು: ನಗರ ಜಿಲ್ಲೆಯ ಉತ್ತರ ಉಪ ವಿಭಾಗಾಧಿಕಾರಿ ಕಚೇರಿಯಲ್ಲಿ ಹಣ ಕಳವು ಮಾಡುತ್ತಿದ್ದ ಇಬ್ಬರು ವ್ಯಕ್ತಿಗಳನ್ನು ಕಂದಾಯ ಇಲಾಖೆ ಸಿಬ್ಬಂದಿ ಹಿಡಿದು ಪೊಲೀಸರಿಗೆ ಒಪ್ಪಿಸಿದರು.

ಎರಡು ದಿನಗಳಿಂದ ಮಹಿಳಾ ಸಿಬ್ಬಂದಿಯ ಬ್ಯಾಗ್‌ನಿಂದ ಈ ಇಬ್ಬರು ₹1,230 ಕಳ್ಳತನ ಮಾಡಿದ್ದಾರೆ ಎಂದು ಕಚೇರಿ ಗುಮಾಸ್ತ ಅಶ್ವತ್ಥ್ ಅವರು ದೂರಿನಲ್ಲಿ ತಿಳಿಸಿದ್ದಾರೆ.

ಅಪರಾಧ ಸುದ್ದಿ

'ಟೇಬಲ್ ಬಳಿ ಬ್ಯಾಗ್ ಇಟ್ಟು ಊಟಕ್ಕೆ ಸಿಬ್ಬಂದಿ ತೆರಳಿದ್ದಾಗ ಯಾರೂ ಇಲ್ಲದ್ದನ್ನು ಗಮನಿಸಿ ಬ್ಯಾಗ್‌ನಿಂದ ಹಣ ಕಳವು ಮಾಡುತ್ತಿದ್ದರು. ಈ ದೃಶ್ಯ ಕಚೇರಿಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಕೆಲಸದ ನಿಮಿತ್ತ ಕಚೇರಿಗೆ ಬರುವವರ ಮೇಲೆ ಸಹಜವಾಗಿ ಅನುಮಾನಗೊಂಡು ಸಿಸಿಟಿವಿ ಪರಿಶೀಲನೆ ನಡೆಸಲಾಯಿತು. ಕಚೇರಿ ಆವರಣದಲ್ಲಿ ಓಡಾಡುತ್ತಿದ್ದ ಇಬ್ಬರನ್ನು ಹಿಡಿದು ಪೊಲೀಸರಿಗೆ ಒಪ್ಪಿಸಲಾಗಿದೆ' ಎಂದು ಅಶ್ವತ್ಥ್ ತಿಳಿಸಿದ್ದಾರೆ.

ಹಲಸೂರು ಗೇಟ್ ಪೊಲೀಸರು ಈ ಇಬ್ಬರ ವಿಚಾರಣೆ ನಡೆಸುತ್ತಿದ್ದಾರೆ.

ವಿದ್ಯುತ್ ದರ ಹೆಚ್ಚಳ: ಇಂಧನ ಸಚಿವ ಜಾರ್ಜ್ ಆರೋಪ

'ಬಿಜೆಪಿ ಸರ್ಕಾರದ ಅವಧಿಯ ನಿರ್ಧಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ಮತ್ತು ಎಸ್ಕಾಂ ಸಿಬ್ಬಂದಿಯ ಪಿಂಚಣಿ, ಗ್ರಾಚ್ಯುಟಿ ಹಣದ ವಿಷಯವಾಗಿ ಹೈಕೋರ್ಟ್ 2024ರ ಮಾರ್ಚ್‌ನಲ್ಲಿ ನೀಡಿದ್ದ ತೀರ್ಪನ್ನು ಆಧರಿಸಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ದರ ಹೆಚ್ಚಳದ ಆದೇಶ ಹೊರಡಿಸಿದೆ' ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿದ್ದಾರೆ.

> **ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲು ಯೋಗ್ಯತೆ ಇಲ್ಲದೇ, ಹೀಗೆ ಪರೋಕ್ಷವಾಗಿ ದರ ಏರಿಕೆ ಮಾಡುತ್ತಿದ್ದಾರೆ. ದರ ಏರಿಕೆ ಸಿದ್ದರಾಮಯ್ಯ ಅವರ ಕಾರ್ಯಸೂಚಿ**
>
> **ಆರ್. ಅಶೋಕ,** ವಿರೋಧ ಪಕ್ಷದ ನಾಯಕ

'ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ(ಕೆಇಬಿ)ಯನ್ನು ರದ್ದುಗೊಳಿಸಿ ಕೆಪಿಟಿಸಿಎಲ್ ಹಾಗೂ ಐದು ಎಸ್ಕಾಂಗಳನ್ನು ರಚಿಸಲಾಯಿತು. 2022ರ ಮಾರ್ಚ್‌ನಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಪಿಂಚಣಿ ಮತ್ತು ಗ್ರಾಚ್ಯುಟಿಯ ಸರ್ಕಾರದ ಪಾಲನ್ನು ಗ್ರಾಹಕರಿಂದ ಪಡೆಯಲು ಆದೇಶಿಸುವಂತೆ ಕೆಇಆರ್‌ಸಿ ಮುಂದೆ ಮೊದಲ ಬಾರಿಗೆ ಪ್ರಸ್ತಾವ ಸಲ್ಲಿಸಿತ್ತು. ಇದನ್ನು ಕೆಇಆರ್‌ಸಿ ಪುರಸ್ಕರಿಸಿರಲಿಲ್ಲ' ಎಂದು ಅವರು ವಿವರಿಸಿದರು.

'ಈ ಪ್ರಸ್ತಾವವನ್ನು ಪ್ರಶ್ನಿಸಿ ಎಫ್‌ಕೆಸಿಸಿಐ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಹೈಕೋರ್ಟ್ 2024ರ ಮಾರ್ಚ್ 25ರಂದು ಅರ್ಜಿಯನ್ನು ತಿರಸ್ಕರಿಸಿತ್ತು. ಇದನ್ನು ಆಧರಿಸಿ 2024ರ ನವೆಂಬರ್ 30ರಂದು ಕೆಪಿಟಿಸಿಎಲ್ ಮತ್ತು ಎಸ್ಕಾಂಗಳು ಮತ್ತೆ ಕೆಇಆರ್‌ಸಿಗೆ ಅರ್ಜಿ ಸಲ್ಲಿಸಿದ್ದವು. ಅದನ್ನು ಪುರಸ್ಕರಿಸಿ ಕೆಇಆರ್‌ಸಿ ಆದೇಶ ಹೊರಡಿಸಿದೆ' ಎಂದು ಅವರು ಮಾಹಿತಿ ನೀಡಿದರು.

'2022ರಲ್ಲಿ ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ಕರ್ನಾಟಕ ವಿದ್ಯುತ್ ಸುಧಾರಣಾ ನಿಯಮಗಳಿಗೆ ತಿದ್ದುಪಡಿ ತರಲಾಗಿತ್ತು. ಕೆಪಿಟಿಸಿಎಲ್ ಮತ್ತು ಎಸ್ಕಾಂಗಳ ಸಿಬ್ಬಂದಿಯ ಪಿಂಚಣಿ, ಗ್ರಾಚ್ಯುಟಿಯ ಪಾಲನ್ನು ಗ್ರಾಹಕರಿಂದ ಪಡೆಯಲು ಕೆಇಆರ್‌ಸಿ ಮುಂದೆ ಅರ್ಜಿ ಸಲ್ಲಿಸಬಹುದು ಎಂದು ತಿದ್ದುಪಡಿಯಲ್ಲಿ ಹೇಳಲಾಗಿತ್ತು. ಇದು ಮತ್ತು ಹೈಕೋರ್ಟ್ ತೀರ್ಪು ಆಧರಿಸಿ ಕೆಇಆರ್‌ಸಿ ದರ ಹೆಚ್ಚಳ ಮಾಡಿದೆ' ಎಂದು ಮಾಹಿತಿ ನೀಡಿದರು.

ಕಸಾಪ ಅಧ್ಯಕ್ಷ ಜೋಶಿಗೆ ಭದ್ರತೆ: ವರದಿಗೆ ಹೈಕೋರ್ಟ್ ನಿರ್ದೇಶನ

ಬೆಂಗಳೂರು: 'ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ್ ಜೋಶಿ ಅವರಿಗೆ ಜೀವ ಬೆದರಿಕೆ ಇರುವ ಬಗ್ಗೆ ಪರಿಶೀಲಿಸಿ ವರದಿ ನೀಡಿ' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಈ ಸಂಬಂಧ, ಮಹೇಶ್ ಜೋಶಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ ಗುರುವಾರ ವಿಚಾರಣೆ ನಡೆಸಿತು.

ಜೋಶಿ ಪರ ಹಿರಿಯ ವಕೀಲ ಎಸ್. ಬಸವರಾಜು, 'ಕಳೆದ ವರ್ಷ ಮಂಡ್ಯದಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಜರುಗಿದ ಗಳಿಗೆಯಿಂದ ಅರ್ಜಿದಾರರಿಗೆ ಜೀವ ಬೆದರಿಕೆಯ ಕರೆಗಳು ಬರುತ್ತಿವೆ. ಇದರಿಂದ ಅವರ ಜೀವಕ್ಕೆ ಅಪಾಯವಿದ್ದು, 24X7 ಭದ್ರತೆ ಒದಗಿಸುವಂತೆ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿದರು.

ಮನವಿ ಪರಿಗಣಿಸಿದ ನ್ಯಾಯಪೀಠ, ಡಿಜಿ–ಐಜಿಪಿ ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ಅಂತೆಯೇ, 'ಈ ಬಗ್ಗೆ ವರದಿ ಸಲ್ಲಿಸಿ' ಎಂದು ಹೆಚ್ಚುವರಿ ಅಡ್ವೊಕೇಟ್ ಜನರಲ್ ಪ್ರತಿಮಾ ಹೊನ್ನಾಪುರ ಅವರಿಗೆ ನಿರ್ದೇಶಿಸಿ ವಿಚಾರಣೆಯನ್ನು ಇದೇ 27ಕ್ಕೆ ಮುಂದೂಡಿತು.

ನಿಧನ ವಾರ್ತೆ

ಪಿಳ್ಳಮ್ಮ



ಯಲಹಂಕ: ಯಲಹಂಕ ಉಪನಗರದ ಸೋಮೇಶ್ವರ ನಗರ ನಿವಾಸಿ ಪಿಳ್ಳಮ್ಮ(105) ಅವರು ವಯೋಸಹಜ ಕಾಯಿಲೆಯಿಂದ ಗುರುವಾರ ನಿಧನರಾದರು.

ಮೃತರಿಗೆ ಉದ್ಯಮಿ ಹಾಗೂ ಕೆಪಿಸಿಸಿ ಕಾರ್ಯದರ್ಶಿ ಡಾ.ಆನಂದ್‌ಕುಮಾರ್ ಸೇರಿ ಇಬ್ಬರು ಪುತ್ರರು ಹಾಗೂ ಒಬ್ಬ ಪುತ್ರಿ ಇದ್ದಾರೆ.

ದಾಸರಹಳ್ಳಿಯ ರುದ್ರಭೂಮಿಯಲ್ಲಿ ಗುರುವಾರ ಅಂತ್ಯಕ್ರಿಯೆ ನೆರವೇರಿತು.

ಶೋಷಿತರ ಸಂಘರ್ಷ ದಿನಾಚರಣೆಯಲ್ಲಿ ಬರಗೂರು

'ಸಾಮಾಜಿಕ ನಿಷೇಧ ಅಮಾನವೀಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧಾರ್ಮಿಕತೆಯ ಹೆಸರಲ್ಲಿರುವ ಸಾಮಾಜಿಕ ನಿಷೇಧಗಳು ಅಮಾನವೀಯ. ಶೋಷಿತ ಸಮುದಾಯಗಳಿಗೆ ಪಂಚಭೂತಗಳನ್ನೂ ನಿಷೇಧಿಸಲಾಗಿತ್ತು ಎಂದು ಚಿಂತಕ ಬರಗೂರು ರಾಮಚಂದ್ರಪ್ಪ ಹೇಳಿದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್‌ವಾದ) ಗುರುವಾರ ಮಹಾಡ್ ಸತ್ಯಾಗ್ರಹದ ನೆನಪಿನಲ್ಲಿ ಹಮ್ಮಿಕೊಂಡಿದ್ದ ಶೋಷಿತರ ಸಂಘರ್ಷ ದಿನಾಚರಣೆಯಲ್ಲಿ ಅವರು ಮಾತನಾಡಿದರು.

ಶೋಷಿತರಿಗೆ ಭೂಮಿ ಮೇಲೆ ಹಕ್ಕುಗಳು ಇರಲಿಲ್ಲ. ನೀರು ನಿರಾಕರಿಸಲಾಗಿತ್ತು. ಉತ್ತಮ ಗಾಳಿ ಇರುವಲ್ಲಿ ಅವರ ಮನೆಗಳು ಇರುವಂತಿರಲಿಲ್ಲ. ಬೆಂಕಿ ಶೋಷಿತರ ಮನೆಗಳನ್ನು ಸುಡಲು ಬಳಕೆ ಆಗುತ್ತಿತ್ತು. ಆಕಾಶ ಎಂದರೆ ಕನಸು. ಕನಸುಗಳೇ ಇಲ್ಲದ ಬದುಕು ಅವರದ್ದಾಗಿತ್ತು ಎಂದು ವಿಶ್ಲೇಷಿಸಿದರು.

ಸರ್ಕಾರ ನಿರ್ಮಿಸಿರುವ ಮತ್ತು ನಿರ್ವಹಿಸುತ್ತಿರುವ ಸಾರ್ವಜನಿಕ ಕೆರೆಗಳ ನೀರನ್ನು ಎಲ್ಲರಿಗೂ ಬಳಸಿಕೊಳ್ಳಲು ಅವಕಾಶ ಇದೆ ಎಂದು ಬಾಂಬೆ ಶಾಸಕಾಂಗ 1923ರಲ್ಲಿ ಆದೇಶ ಹೊರಡಿಸಿತ್ತು. ಈ ಆದೇಶವನ್ನು ಅನುಷ್ಠಾನಕ್ಕೆ ತರಲಾಗುವುದು ಎಂದು ಮಹಾಡ್ ಪುರಸಭೆಯವರು ತಿಳಿಸಿದ್ದರೂ ಮೇಲ್ಜಾತಿ ಜನರ ವಿರೋಧದಿಂದಾಗಿ ಎಲ್ಲ ಜಾರಿಗೆ ತರಲಾಗಿರಲಿಲ್ಲ. ಅದಕ್ಕಾಗಿ 1927ರ ಮಾರ್ಚ್ 20ರಂದು ಅಂಬೇಡ್ಕರ್ ನೇತೃತ್ವದಲ್ಲಿ ನೀರು ಕುಡಿಯುವ ಚಳವಳಿ ನಡೆದಿತ್ತು ಎಂದು ವಿವರಿಸಿದರು.

ಪ್ರಾಮಾಣಿಕ ಶಕ್ತಿ, ವಿಚಾರಶಕ್ತಿ, ಸಂಘಟನಾ ಶಕ್ತಿ ಮತ್ತು ಬೌದ್ಧಿಕ ಬದ್ಧತೆಯೊಂದಿಗೆ ಸಾಮಾಜಿಕ ಹೋರಾಟವನ್ನು ರೂಪಿಸಿದ ಮಹಾನ್ ಚೇತನ ಅಂಬೇಡ್ಕರ್. ಇಂದಿನ ಹೋರಾಟಗಾರರಿಗೂ ಇಂಥ ನಡೆತೆ, ತತ್ವಗಳು ಇರಬೇಕು. ಅಂಬೇಡ್ಕರ್ ಅವರು ನಡೆಸಿದ ಎಲ್ಲ ಚಳವಳಿಗಳು ಅಹಿಂಸಾ ಮಾರ್ಗದಲ್ಲಿದ್ದವು. ಕಾನೂನು ಹೋರಾಟಗಳಾಗಿದ್ದವು. ಅವರ ಆಶಯದಂತೆ ಸಾಮಾಜಿಕ ಪ್ರಜಾಪ್ರಭುತ್ವ ಬರಬೇಕಿದೆ ಎಂದರು.

ಡಿಎಸ್‌ಎಸ್ ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಮಾತನಾಡಿ, 'ಈ ದಿನವನ್ನು ಸಾಮಾಜಿಕ ಸಬಲೀಕರಣ ದಿನ ಎಂದು ಅಂಬೇಡ್ಕರ್ ಘೋಷಿಸಿದ್ದರು. ಆದರೆ, ಸ್ವಾತಂತ್ರ್ಯ ನಂತರ ಸರ್ಕಾರಗಳು ಆಚರಣೆ ಮಾಡಿರಲಿಲ್ಲ. ಗಾಂಧೀಜಿಯವರು ನಡೆಸಿದ ಉಪ್ಪಿನ ಸತ್ಯಾಗ್ರಹಕ್ಕೆ ಸಿಕ್ಕಿದ ಮಹತ್ವ ಜನರ ಘನತೆಗಾಗಿ ನಡೆದ ಮಹಾಡ್ ಸತ್ಯಾಗ್ರಹಕ್ಕೆ ಸಿಕ್ಕಿಲ್ಲ. ಈಗ ಸರ್ಕಾರ ಯಾವುದೇ ಪೂರ್ವ ಸಿದ್ಧತೆ ಮಾಡಿಕೊಳ್ಳದೇ ಸಾಮಾಜಿಕ ಸಬಲೀಕರಣ ದಿನ ಎಂದು ತರಾತುರಿಯಲ್ಲಿ ಪ್ರಕಟಣೆ ಹೊರಡಿಸಿದೆ. ಹೃದಯಪೂರ್ವಕವಾಗಿ ಮಾಡದೇ ತೋರಿಕೆಗಾಗಿ ಮಾಡಿದರೆ ಅದಕ್ಕೆ ಗೌರವ ಇರುವುದಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ದಲಿತ ಸಮುದಾಯಗಳ ಜನಸಂಖ್ಯೆ ಬಗ್ಗೆ ಸರಿಯಾದ ಸಮೀಕ್ಷೆ ಮಾಡಬೇಕು. ಆದಿ ಕರ್ನಾಟಕ, ಆದಿ ಆಂಧ್ರ, ಆದಿ ದ್ರಾವಿಡ ಗೊಂದಲಗಳನ್ನು ಸರಿಪಡಿಸಬೇಕು. ವೈಜ್ಞಾನಿಕವಾಗಿ ಒಳಮೀಸಲಾತಿ ಜಾರಿಗೆ ತರಬೇಕು ಎಂದು ಆಗ್ರಹಿಸಿದರು.



'ಶೋಷಿತರ ಸಂಘರ್ಷ ದಿನಾಚರಣೆ'ಯಲ್ಲಿ ಬರಗೂರು ರಾಮಚಂದ್ರಪ್ಪ ಅವರು ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಬಿ. ರಾಜಶೇಖರಮೂರ್ತಿ, ಶ್ರೀಪಾದ್ ಭಟ್, ಸುಬ್ಬು ಹೊಲೆಯಾರ್, ಮಾವಳ್ಳಿ ಶಂಕರ್, ಬಿ.ಪಿ. ತಿಪ್ಪೇಸ್ವಾಮಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ನೀರಿಗಾಗಿ ಹೋದ ಜೀವ

ಮಹಾಡ್ ಚಳವಳಿಗೆ ಇನ್ನೆರಡು ವರ್ಷಕ್ಕೆ ನೂರು ವರ್ಷ ತುಂಬಲಿದೆ. ಆದರೂ ನೀರು ನಿರಾಕರಣೆ ಇನ್ನೂ ನಿಂತಿಲ್ಲ. ಮಾಗಡಿ ಬಳಿ ಕೆಲವು ವರ್ಷಗಳ ಹಿಂದೆ ನೀರಿಗಾಗಿ ಜೀವವೇ ಹೋಗಿದೆ. ದಂಡ, ಬಹಿಷ್ಕಾರದ ಅವಮಾನ ಸಹಿಸಲಾಗದೇ ದಲಿತ ಮಹಿಳೆಯೊಬ್ಬರು ಅಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು ಎಂದು ಕವಿ ಸುಬ್ಬು ಹೊಲೆಯಾರ್ ನೆನಪಿಸಿಕೊಂಡರು.

ಶೀಘ್ರ ಸೂಕ್ತ ನಿರ್ಧಾರ: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭರವಸೆ

ಸ್ವರೂಪ ಕಳೆದುಕೊಂಡ ಕೆರೆ; ಗೊಂದಲಕ್ಕೆ ತೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವರೂಪ ಕಳೆದುಕೊಂಡ ಬೆಂಗಳೂರಿನ ಕೆರೆಗಳಲ್ಲಿ ನಿರ್ಮಾಣವಾದ ಬಡಾವಣೆಗಳಿಗೆ ಮಾನ್ಯತೆ ನೀಡುವ, ಬಫರ್ ಜೋನ್ ಗೊಂದಲ ಬಗೆಹರಿಸುವ ಕುರಿತು ಚರ್ಚಿಸಿ, ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ದಶಕಗಳ ಹಿಂದೆಯೇ ಬೆಂಗಳೂರಿನ ಅನೇಕ ಕೆರೆಗಳು ಒತ್ತುವರಿಯಾಗಿ, ಅಭಿವೃದ್ಧಿಯಾಗಿವೆ. ಆದರೆ, ಅದರ ಪಕ್ಕದ ಪ್ರದೇಶಗಳನ್ನು ಕೆರೆ ಬಫರ್ ಜೋನ್ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಕೆರೆಯೇ ಇಲ್ಲದ ಮೇಲೆ ಬಫರ್ ಜೋನ್ ಏಕೆ' ಎಂಬ ಜೆಡಿಎಸ್‌ನ ಟಿ.ಎ. ಶರವಣ ಅವರ ಪ್ರಶ್ನೆಗೆ ಉತ್ತರ ನೀಡಿದ ಅವರು, ಕೆರೆಗಳ ಒತ್ತುವರಿ ಕುರಿತು ಪರಿಶೀಲನೆ ನಡೆಸಲು 1985ರಲ್ಲಿ ಲಕ್ಷ್ಮಣ್ ರಾವ್ ಸಮಿತಿ ರಚಿಸಲಾಗಿತ್ತು. ವರದಿ ಆಧಾರದಲ್ಲಿ ನಿರ್ಜೀವ ಕೆರೆಗಳಲ್ಲಿ ನಿರ್ಮಿಸಿದ ಬಡಾವಣೆಗಳನ್ನು ಅಭಿವೃದ್ಧಿಗೊಳಿಸಲಾಗಿತ್ತು. ಪ್ರಸ್ತುತ ಯಾವುದೇ ಕೆರೆಗಳಲ್ಲಿ ಬಡಾವಣೆ ನಿರ್ಮಾಣಕ್ಕೆ ಅವಕಾಶ ನೀಡುತ್ತಿಲ್ಲ ಎಂದರು.

ಕೆರೆಯ ಸ್ವರೂಪ ಕಳೆದುಕೊಂಡು ಅಲ್ಲಿ ಬಡಾವಣೆಗಳು ತಲೆ ಎತ್ತಿದ್ದರೂ ಕಂದಾಯ ದಾಖಲೆಗಳಲ್ಲಿ ಕೆರೆ ಎಂದು ನಮೂದಾಗಿದ್ದರೆ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆಯ ಅನ್ವಯ ಅದನ್ನು ಕೆರೆ ಎಂದೇ ಪರಿಗಣಿಸಬೇಕಾಗುತ್ತದೆ. ಅಂತಹ ಪ್ರದೇಶದಲ್ಲಿ ಅನುಮೋದಿತ ಯೋಜನೆಗಳಿಗೆ ಕೆರೆಯ ಅಂಚಿನಿಂದ 30 ಮೀಟರ್ ಬಫರ್ ಜೋನ್ ಬಿಡಬೇಕಾಗುತ್ತದೆ. 2007ಕ್ಕಿಂತ ಮೊದಲು ಅನುಮೋದನೆಗೊಂಡ ಯೋಜನೆಗಳಿಗೆ ಬಫರ್ ಜೋನ್ ನಿಯಮ ಅನ್ವಯವಾಗದು ಎಂದು ಸ್ಪಷ್ಟಪಡಿಸಿದರು.

ಸ್ವರೂಪ ಕಳೆದುಕೊಂಡ ಕೆರೆ ಪ್ರದೇಶಗಳಲ್ಲಿ ಜನವಸತಿ, ಬಡಾವಣೆಗಳ ಅಭಿವೃದ್ಧಿ ಕುರಿತು ಹೈಕೋರ್ಟ್, ಸುಪ್ರೀಂಕೋರ್ಟ್ ತೀರ್ಪುಗಳನ್ನು ಪರಿಶೀಲಿಸಿದ ನಂತರ ನಿಯಮದಂತೆ ಕ್ರಮಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಪಬ್‌ಗಳಿಗೆ ಕಿರುಕುಳ; ತಡೆಗೆ ಕ್ರಮ



ಬೆಂಗಳೂರು ಪಬ್‌ಗಳ ಮಾಲೀಕರಿಗೆ ಅಬಕಾರಿ ಅಧಿಕಾರಿಗಳು, ಪೊಲೀಸರು ಕಿರುಕುಳ ನೀಡುತ್ತಿರುವ ಕುರಿತು ಗೃಹ, ಅಬಕಾರಿ ಸಚಿವರ ಜತೆ ಸಭೆ ನಡೆಸಿ, ಸಮಸ್ಯೆ ಬಗೆಹರಿಸಲಾಗುವುದು ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ಬಿಜೆಪಿಯ ಎಚ್.ಎಸ್. ಗೋಪಿನಾಥ್ ಅವರ ಪ್ರಶ್ನೆಗೆ ಉತ್ತರ ನೀಡಿದ ಅವರು, ರಾತ್ರಿ 11.30ರ ನಂತರ ಬಂದ್ ಮಾಡಿಸುವ ನೆಪದಲ್ಲಿ 'ವ್ಯವಹಾರ' ನಡೆಸಲು ಅವಕಾಶ ನೀಡುವುದಿಲ್ಲ. 57 ಪಬ್‌ಗಳಿಗೆ ರಾತ್ರಿ 1ರವರೆಗೆ ಕಾರ್ಯನಿರ್ವಹಿಸಲು ನೀಡಿರುವ ಅವಕಾಶವನ್ನು ಉಳಿದ 699 ಪಬ್‌ಗಳಿಗೂ ವಿಸ್ತರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಅಬಕಾರಿ ಸಚಿವ ಆರ್.ಬಿ. ತಿಮ್ಮಾಪೂರ ಮಾತನಾಡಿ, ಪರವಾನಗಿ ಪಡೆಯದೆ ಕಾರ್ಯನಿರ್ವಹಿಸುವ ಪಬ್‌ಗಳ ವಿರುದ್ಧ ಪ್ರಕರಣ ದಾಖಲಿಸಲಾಗುವುದು, ಮಾಲೀಕರನ್ನು ಬಂಧಿಸಲಾಗುವುದು ಎಂದು ಹೇಳಿದರು.

ಕಬ್ಬನ್ ಉದ್ಯಾನ: ಯಥಾಸ್ಥಿತಿ ಮುಂದುವರಿಕೆ



ರಜಾ ದಿನಗಳಲ್ಲೂ ಕಬ್ಬನ್ ಉದ್ಯಾನದಲ್ಲಿ ವಾಹನಗಳ ಸಂಚಾರಕ್ಕೆ ಅವಕಾಶ ನೀಡಲು ಸಾಧ್ಯವಿಲ್ಲ ಎಂದು ಸಭಾನಾಯಕ ಎನ್.ಎಸ್. ಬೋಸರಾಜು ಹೇಳಿದರು.

ಬಿಜೆಪಿಯ ಡಿ.ಎಸ್. ಅರುಣ್ ಅವರ ಪ್ರಶ್ನೆಗೆ ಮುಖ್ಯಮಂತ್ರಿ ಪರವಾಗಿ ಉತ್ತರ ನೀಡಿದ ಅವರು, ಸರ್ಕಾರಿ ರಜಾ ದಿನಗಳಂದು ಮಕ್ಕಳು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ಅದಕ್ಕಾಗಿಯೇ 2023ರಲ್ಲಿ ಆದೇಶ ಹೊರಡಿಸಲಾಗಿದೆ. ತುರ್ತು ಸೇವಾ ವಾಹನಗಳ ಸಂಚಾರಕ್ಕೆ ಅವಕಾಶವಿದೆ ಎಂದರು. ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್ ಮಾತನಾಡಿ, ಅಪರೂಪದ ಪಕ್ಷಿಗಳು, ಹಾವು, ಕಪ್ಪೆಗಳ ದೃಷ್ಟಿಯಿಂದಲೂ ಈ ನಿರ್ಬಂಧ ಅನಿವಾರ್ಯ ಎಂದು ಹೇಳಿದರು.

'ಬಿಬಿಎಂಪಿ ತೆರಿಗೆ ಕಿರುಕುಳ ತಪ್ಪಿಸಿ'

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯ ಆಸ್ತಿ ಮಾಲೀಕರಿಗೆ ತೆರಿಗೆ ಹೆಸರಿನಲ್ಲಿ ಕಿರುಕುಳ ನೀಡಲಾಗುತ್ತಿದೆ. ಅಲ್ಪ ಮೊತ್ತದ ತೆರಿಗೆ ಬಾಕಿ ಇದ್ದರೂ ಮನೆ ಮುಂದೆ ತಮಟೆ ಬಾರಿಸಿ, ಬ್ಯಾನರ್ ಕಟ್ಟಿ ಕಿರುಕುಳ ನೀಡಲಾಗುತ್ತಿದೆ ಎಂದು ಬಿಜೆಪಿಯ ಸಿ.ಕೆ. ರಾಮಮೂರ್ತಿ ಅವರು ವಿಧಾನಸಭೆಯಲ್ಲಿ ಗುರುವಾರ ಅಸಮಾಧಾನ ವ್ಯಕ್ತಪಡಿಸಿದರು.

ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, '₹ 7,000, ₹ 8,000 ತೆರಿಗೆ ಬಾಕಿ ಇರುವವರ ಮನೆಗಳನ್ನೂ ಹರಾಜು ಮಾಡಲು ಅಧಿಕಾರಿಗಳು ಹೊರಟಿದ್ದಾರೆ. ಮನೆ ಮುಂದೆ ಭಿತ್ತಿಪತ್ರ ಅಂಟಿಸುತ್ತಿದ್ದಾರೆ. ಈ ರೀತಿಯ ಕಿರುಕುಳ ನೀಡದಂತೆ ಸರ್ಕಾರ ತಡೆಯಬೇಕು' ಎಂದು ಆಗ್ರಹಿಸಿದರು.

ಈ ರೀತಿ ಬಿಬಿಎಂಪಿ ಅಧಿಕಾರಿಗಳು ಅವಮಾನ ಮಾಡಿದರೆ, ಜನರು ಸಹಿಸಿಕೊಳ್ಳು-ವುದು ಹೇಗೆ. ಸಾರ್ವಜನಿಕವಾಗಿ ಆದ ಅವಮಾನ ತಾಳಲಾರದೇ ಆತ್ಮಹತ್ಯೆಯ ಹಾದಿ ಹಿಡಿಯುವ ಅಪಾಯವಿದೆ. ಸರ್ಕಾರ ತಕ್ಷಣವೇ ಎಚ್ಚೆತ್ತುಕೊಂಡು, ಕ್ರಮ ಕೈಗೊಳ್ಳಬೇಕು ಎಂದರು.



ರಾಮಮೂರ್ತಿ

ಮೀಟರ್ ಬಡ್ಡಿಗೂ ಮಿಗಿಲು: 'ಮುಂದಿನ ವರ್ಷದಿಂದ ಹೊಸ ತೆರಿಗೆ ನಿಯಮ ಜಾರಿಗೊಳಿಸಲು ಬಿಬಿಎಂಪಿ ಹೊರಟಿದೆ. ಒಂದು ದಿನ ದಡವಾದರೂ ದುಪ್ಪಟ್ಟು ತೆರಿಗೆ ಮತ್ತು ಶೇಕಡ 15ರಷ್ಟು ದಂಡ ವಿಧಿಸಲಾಗುತ್ತದೆ. ಇದು ಬೆಂಗಳೂರಿನ ಜನರ ಶೋಷಣೆಗೆ ಕಾರಣವಾಗಲಿದೆ' ಎಂದು ದೂರಿದರು.

ಅದಕ್ಕೆ ದನಿಗೂಡಿಸಿದ ವಿರೋಧ ಪಕ್ಷದ ನಾಯಕ ಆರ್. ಅಶೋಕ, 'ಬಿಬಿಎಂಪಿಯವರು ಮೈಕ್ರೊ ಫೈನಾನ್ಸ್ ಕಂಪನಿಗಳನ್ನು ಮೀರಿಸಲು ಹೊರಟಿ ದ್ದಾರೆ. ಇವರು ಮೀಟರ್ ಬಡ್ಡಿಗೂ ಮಿಗಿಲು' ಎಂದರು.

ಪಡಿತರ ಅಕ್ಕಿ ದಂಧೆ

● ಹರಿಶಂಕರ್ ಆರ್.

ಬಳ್ಳಾರಿ: ರಾಜ್ಯದ ಹಲವು ಜಿಲ್ಲೆಗಳಲ್ಲಿ ಅನ್ನಭಾಗ್ಯದ ಅಕ್ಕಿ ಪೂರೈಕೆಯಲ್ಲಿ ಭಾರಿ ವ್ಯತ್ಯಯವಾದ ನಡುವೆಯೇ ಬಳ್ಳಾರಿ ಜಿಲ್ಲೆಯಲ್ಲಿ ಪಡಿತರ ಅಕ್ಕಿಯನ್ನು ಅಕ್ರಮವಾಗಿ ಸಂಗ್ರಹಿಸಿ, ಮಾರುವ ದಂಧೆ ಮತ್ತಷ್ಟು ಬಿರುಸುಗೊಂಡಿದೆ.



ಅಕ್ಕಿ ಕೊರತೆ ಕಾರಣ ಸರ್ಕಾರ ಈವರೆಗೆ ರಾಜ್ಯದಾದ್ಯಂತ 5 ಕೆ.ಜಿ ಅಕ್ಕಿ ಮತ್ತು ಇನ್ನು 5 ಕೆ.ಜಿ ಅಕ್ಕಿಗೆ ಹಣ ಸಂದಾಯ ಮಾಡುತ್ತಿತ್ತು. ಫೆಬ್ರುವರಿಯಲ್ಲಿ 5 ಕೆ.ಜಿ ಅಕ್ಕಿ ಮಾತ್ರ ವಿತರಣೆಯಾಗಿದೆ. ಬಾಕಿಯಿರುವ 5 ಕೆ.ಜಿ ಅಕ್ಕಿಯನ್ನು 10 ಕೆ.ಜಿಯೊಂದಿಗೆ ಸೇರಿಸಿ ಒಟ್ಟು 15 ಕೆ.ಜಿ ಅಕ್ಕಿಯನ್ನು ಈ ತಿಂಗಳು ಕೊಡಲಾಗುತ್ತಿದೆ.

ಮಾರ್ಚ್ 19ರಂದು ಬಳ್ಳಾರಿಯ ಕೌಲ್‌ಬಜಾರ್, ಸಿರುಗುಪ್ಪ ಠಾಣೆ ಸೇರಿ ಮೂರು ಕಡೆ ಕ್ವಿಂಟಲ್‌ಗಟ್ಟಲೇ ಅಕ್ರಮ ಅಕ್ಕಿ ದಾಸ್ತಾನನ್ನು ಪೊಲೀಸರು ಮತ್ತು ಆಹಾರ ಇಲಾಖೆ ಅಧಿಕಾರಿಗಳು ವಶಪ-ಡಿಸಿಕೊಂಡಿದ್ದಾರೆ. ಸಿರುಗುಪ್ಪ ಠಾಣೆಯಲ್ಲಿ 211 ಕ್ವಿಂಟಲ್, ಕೌಲ್ ಬಜಾರ್ ಠಾಣೆಯಲ್ಲಿ 50 ಕ್ವಿಂಟಲ್‌ಗೂ ಹೆಚ್ಚಿನ ಅಕ್ಕಿ ವಶಕ್ಕೆ ಪಡೆಯಲಾಗಿದೆ. ಇನ್ನೊಂದೆಡೆ, ದಂಧೆಕೋರರೊಂದಿಗೆ ಶಾಮೀಲಾದ ಆರೋಪದ ಮೇಲೆ ಬಳ್ಳಾರಿಯಲ್ಲಿ ಆಹಾರ ಇಲಾಖೆ ಅಧಿಕಾರಿಗಳು ಎರಡು ಪಡಿತರ ಅಂಗಡಿಗಳ ಬಾಗಿಲು ಮುಚ್ಚಿಸಿದ್ದಾರೆ.

ರಾಜ್ಯದಲ್ಲಿ 2024ರ ಏಪ್ರಿಲ್‌ನಿಂದ 2025ರ ಫೆಬ್ರುವರಿವರೆಗಿನ 8 ತಿಂಗಳಲ್ಲಿ ಅಕ್ಕಿ ಅಕ್ರಮ ಸಂಗ್ರಹ–ಮಾರಾಟದ ಒಟ್ಟು 346 ಪ್ರಕರಣ ಪತ್ತೆಯಾಗಿದ್ದು, 285 ಪ್ರಕರಣಗಳು ದಾಖಲಾಗಿವೆ. 308 ಜನರ ಬಂಧನವಾಗಿದೆ. ಒಟ್ಟು ₹14.17 ಕೋಟಿ ಮೌಲ್ಯದ 8,42,711 ಕೆ.ಜಿ ಅಕ್ಕಿ ವಶಕ್ಕೆ ಪಡೆದಿರುವುದು ಸರ್ಕಾರದ ದಾಖಲೆಯಲ್ಲೇ ಇದೆ.

ಬಳ್ಳಾರಿಯೊಂದರಲ್ಲೇ 37 ಪ್ರಕರಣಗಳು ದಾಖಲಾಗಿವೆ. ಒಟ್ಟು ₹34.28 ಲಕ್ಷ ಮೌಲ್ಯದ 1,15,000 ಕೆ.ಜಿ ಅಕ್ಕಿ ವಶಪಡಿಸಿಕೊಳ್ಳಲಾಗಿದೆ. 55 ಜನರನ್ನು ಬಂಧಿಸಲಾಗಿದೆ. 25 ವಾಹನಗಳನ್ನು ವಶಕ್ಕೆ ಪಡೆಯಲಾಗಿದೆ. ಇದರೊಂದಿಗೆ ಅಕ್ರಮದಲ್ಲಿ ಬಳ್ಳಾರಿ ಜಿಲ್ಲೆ ರಾಜ್ಯದಲ್ಲೇ ಪ್ರಥಮ ಸ್ಥಾನದಲ್ಲಿದೆ. ಇದನ್ನು ಹೊರ-ತುಪಡಿಸಿದರೆ ಬೀದರ್‌ನಲ್ಲಿ ಅತ್ಯಧಿಕ 40 ಪ್ರಕರಣಗಳು ಪತ್ತೆಯಾಗಿದ್ದು, 47 ಪ್ರಕರಣಗಳು ದಾಖ ಲಾಗಿವೆ. 87 ಜನರನ್ನು ಬಂಧಿಸಲಾಗಿದೆ. ಆದರೆ, ಅಲ್ಲಿ ವಶಕ್ಕೆ ಪಡೆದ ಅಕ್ಕಿ 74,100 ಕೆ.ಜಿ.


'ಸಾರ್ವಜನಿಕರಿಂದ ಕಡಿಮೆ ಹಣಕ್ಕೆ ಅಕ್ಕಿ ಸಂಗ್ರಹಿಸುವ ದಂಧೆಕೋರರು ಅದನ್ನು ಮಿಲ್, ಹೋಟೆಲ್, ಕಾಳ ಸಂತೆಯಲ್ಲಿ ಕೆ.ಜಿಗೆ ₹40ರಿಂದ ₹60ರವರೆಗೆ ಮಾರುತ್ತಿದ್ದಾರೆ. ಅಂಥವರನ್ನು ಹಿಡಿದ ಕೂಡಲೇ ಪ್ರಭಾವಿಗಳು ಕರೆ ಮಾಡುತ್ತಾರೆ. ದಂಧೆಕೋರರು ಬೆದರಿಸುತ್ತಾರೆ' ಎಂದು ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಈ ಬಾರಿ 15 ಕೆ.ಜಿ ಅಕ್ಕಿ ನೀಡಲಾಗುತ್ತಿದೆ. ಹೀಗಾಗಿ ಅಕ್ಕಿ ಅಕ್ರಮ ಸಂಗ್ರಹ, ಮಾರಾಟ ಚುರುಕಿನಿಂದ ನಡೆಯುತ್ತಿದೆ. 2 ದಿನಗಳಲ್ಲಿ 3 ಲೋಡ್ ಹಿಡಿದಿದ್ದೇವೆ. ಅಕ್ರಮ ನಡೆಯುವುದನ್ನು ತಡೆಯುತ್ತೇವೆ

ಸಕೀನಾ, ಉಪ ನಿರ್ದೇಶಕಿ, ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ, ಬಳ್ಳಾರಿ

ಕೆಪಿಎಸ್‌ಸಿ ಸದಸ್ಯರು ಆತ್ಮಸಾಕ್ಷಿಯಂತೆ ರಾಜೀನಾಮೆ ನೀಡಲಿ: ಸಚಿವ

ಪ್ರಜಾವಾಣಿ ವಾರ್ತೆ



ಎಚ್‌.ಕೆ.ಪಾಟೀಲ

ಬೆಂಗಳೂರು: ಜನರ ವಿಶ್ವಾಸಾರ್ಹತೆ ಕಳೆದುಕೊಂಡಿರುವ ಕೆಪಿಎಸ್‌ಸಿಯನ್ನು ಸ್ವಚ್ಛ ಮಾಡಲು ಮಸೂದೆ ಸಿದ್ಧಪಡಿಸಲಾಗಿದ್ದು, ಆಯೋಗದ ಎಲ್ಲ ಸದಸ್ಯರೂ ಆತ್ಮಸಾಕ್ಷಿಗೆ ಅನುಗುಣವಾಗಿ ರಾಜೀನಾಮೆ ನೀಡಬೇಕು ಎಂದು ಕಾನೂನು ಸಚಿವ ಎಚ್‌.ಕೆ. ಪಾಟೀಲ ಹೇಳಿದರು.

ಕರ್ನಾಟಕ ಲೋಕಸೇವಾ ಆಯೋಗ (ವ್ಯವಹಾರ ನಿರ್ವಹಣೆ ಮತ್ತು ಹೆಚ್ಚುವರಿ ಪ್ರಕಾರ್ಯಗಳು) ಮಸೂದೆಯನ್ನು ವಿಧಾನಪರಿಷತ್‌ನಲ್ಲಿ ಗುರುವಾರ ಮಂಡಿಸಿ ಮಾತನಾಡಿದ ಅವರು, ಕರ್ನಾಟಕ ಲೋಕಸೇವಾ ಆಯೋಗದ ಪರೀಕ್ಷಾ ಅವಾಂತರ ಮತ್ತು ಆಯ್ಕೆ ವಿಚಾರದಲ್ಲಿ ಕೋರ್ಟ್ ಛೀಮಾರಿ ಹಾಕಿದೆ. ಮಾಧ್ಯಮಗಳಲ್ಲೂ ಬಂದಿದೆ. ಸಾರ್ವಜನಿಕ ವಲಯದಲ್ಲೂ ಚರ್ಚೆ ನಡೆಯುತ್ತಿದೆ. ಶ್ರೀಮಂತರ ಮಿತ್ರ, ಸಾಮಾನ್ಯರ ಶತ್ರುವಾಗಿರುವ ಆಯೋಗದ ದಕ್ಷತೆಯನ್ನು ಮಸೂದೆ ಹೆಚ್ಚಿಸಲಿದೆ ಎಂದರು.

ವಿರೋಧ ಪಕ್ಷದ ಮುಖ್ಯಸಚೇತಕ ಎನ್. ರವಿಕುಮಾರ್, ಬಿಜೆಪಿಯ ಸಿ.ಟಿ. ರವಿ, ಎಸ್. ವಿ. ಸಂಕನೂರ, ಕೇಶವ ಪ್ರಸಾದ್, ಕಾಂಗ್ರೆಸ್‌ನ ಐವನ್ ಡಿಸೋಜ ಮಾತನಾಡಿ, ಕರ್ನಾಟಕ ಲೋಕಸೇವಾ ಆಯೋಗವನ್ನು ಕೇಂದ್ರ ಲೋಕಸೇವಾ ಆಯೋಗದ ರೀತಿಯಲ್ಲಿ ರೂಪಿಸಬೇಕು ಎಂದು ಸಲಹೆ ನೀಡಿದರು. ಸುದೀರ್ಘ ಚರ್ಚೆಯ ನಂತರ ಮಸೂದೆ ಅಂಗೀಕಾರವಾಯಿತು.

ಪರಿಷತ್‌ನಲ್ಲಿ ಅಂಗೀಕಾರವಾದ ಮಸೂದೆಗಳು

- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಸೂದೆ
- ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಮಸೂದೆ
- ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಮಸೂದೆ
- ಕರ್ನಾಟಕ ಸ್ಟಾಂಪು ಮಸೂದೆ
- ನೋಂದಣಿ (ಕರ್ನಾಟಕ ತಿದ್ದುಪಡಿ) ಮಸೂದೆ
- ಕರ್ನಾಟಕ ಭೂ ಕಂದಾಯ ಮಸೂದೆ
- ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ ಮಸೂದೆ
- ಕರ್ನಾಟಕ ಭೂಕಬಳಿಕೆ ನಿಷೇಧ ಮಸೂದೆ
- ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಮಸೂದೆ



ಮೈಂಡ್‌ಸ್ಪಾರ್ಕ್ಸ್ ಸಂಸ್ಥೆಯ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ಅಡಿಯಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ 821 ವಸತಿ ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ತಂತ್ರಜ್ಞಾನ ಆಧಾರಿತ ಕಲಿಕಾ ಕಾರ್ಯಕ್ರಮಕ್ಕೆ ಸಮಾಜ ಕಲ್ಯಾಣ ಇಲಾಖೆ ಸಚಿವ ಎಚ್‌.ಸಿ. ಮಹದೇವಪ್ಪ ಗುರುವಾರ ಚಾಲನೆ ನೀಡಿದರು. ಇದೇ ಸಂದರ್ಭದಲ್ಲಿ ಮಕ್ಕಳಿಗೆ ಲ್ಯಾಪ್‌ಟಾಪ್‌ಗಳನ್ನು ವಿತರಿಸಲಾಯಿತು. ಮೈಂಡ್‌ಸ್ಪಾರ್ಕಸ್ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು

ಕ್ಷೇತ್ರ ಪುನರ್ ವಿಂಗಡಣೆ ವಿರುದ್ಧ ನಿರ್ಣಯ ಇಂದು

ಬೆಂಗಳೂರು: ಹೊಸ ಜನಗಣತಿ ಆಧಾರದ ಮೇಲೆ ಕೈಗೊಳ್ಳುವ ಯಾವುದೇ ಕ್ಷೇತ್ರ ಪುನರ್ ವಿಂಗಡಣೆ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ತಿರಸ್ಕರಿಸಲು ವಿಧಾನಸಭೆಯಲ್ಲಿ ಶುಕ್ರವಾರ ನಿರ್ಣಯ ಕೈಗೊಳ್ಳಲು ಸರ್ಕಾರ ನಿರ್ಧರಿಸಿದೆ.

'ಲೋಕಸಭೆ ಮತ್ತು ವಿಧಾನಸಭೆಗಳ ಸ್ಥಾನವನ್ನು ಹೆಚ್ಚಿಸುವ ಸಂದರ್ಭದಲ್ಲಿ ಹೊಸ ಜನಗಣತಿಯ ಜನಸಂಖ್ಯೆಯನ್ನು ಆಧರಿಸಿ ಮಾಡಬಾರದು. 1971ರ ಜನಗಣತಿಯನ್ನು ಆಧರಿಸಿಯೇ ಪ್ರತಿ ರಾಜ್ಯಗಳಿಗೆ ಲೋಕಸಭಾ ಸ್ಥಾನಗಳ ಸಂಖ್ಯೆಯನ್ನು ನಿಗದಿಪಡಿಸಬೇಕು' ಎಂದು ಒತ್ತಾಯಿಸಲಿದೆ.

'ಹೊಸ ಜನಗಣತಿ ಆಧಾರದ ಮೇಲೆ ನಡೆಯುವ ಕ್ಷೇತ್ರ ಪುನರ್‌ವಿಂಗಡಣೆಯು ಅವೈಜ್ಞಾನಿಕವಾಗಲಿದೆ' ಎಂದು ನಿರ್ಣಯದಲ್ಲಿ ಉಲ್ಲೇಖಿಸಲು ಉದ್ದೇಶಿಸಲಾಗಿದೆ.

'ಪರಿಚಿತರಿಗೆ ಸರ್ವರ್ ಕೈಕೊಡುವುದಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉಪನೋಂದಣಿ ಕಚೇರಿಯಲ್ಲಿ ಸದಾ ಸರ್ವರ್ ಸಮಸ್ಯೆ ಇದೆ ಎನ್ನುತ್ತಾರೆ. ಆದರೆ ಅಧಿಕಾರಿಗಳಿಗೆ ಪರಿಚಯವಿದ್ದರೆ ಸರ್ವರ್ ಕೈಕೊಡುವುದೇ ಇಲ್ಲ. ನೋಂದಣಿಯೂ ತಕ್ಷಣವೇ ಆಗುತ್ತದೆ' ಎಂದು ವಿಧಾನ ಪರಿಷತ್ತಿನಲ್ಲಿ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ಹೇಳಿದರು.

ವಿಧಾನ ಪರಿಷತ್ತಿನಲ್ಲಿ ಗುರುವಾರ ಮಂಡಿಸಲಾದ 'ನೋಂದಣಿ (ಕರ್ನಾಟಕ ತಿದ್ದುಪಡಿ) ಮಸೂದೆ' ಮೇಲಿನ ಚರ್ಚೆ ವೇಳೆ ಹಲವು ಸದಸ್ಯರು, ಸರ್ವರ್ ಸಮಸ್ಯೆ ವಿಪರೀತವಾಗಿದೆ. ಅದನ್ನು ಸರಿಪಡಿಸಬೇಕು ಎಂದು ಒತ್ತಾಯಿಸಿದರು.

ಅದಕ್ಕೆ ಪ್ರತಿಕ್ರಿಯಿಸಿದ ಕಂದಾಯ ಸಚಿವ ಕೃಷ್ಣ ಬೈರೇಗೌಡ, 'ಸರ್ವರ್ ಹ್ಯಾಕ್ ಮಾಡಿದ್ದರಿಂದ ಈ ಸಮಸ್ಯೆ ಎದುರಾಗಿತ್ತು. ಅದನ್ನು ಸರಿಪಡಿಸಲಾಗುತ್ತಿದೆ' ಎಂದರು. ಆಗ ರವಿಕುಮಾರ್ ಅವರು, 'ಪರಿಚಯವಿದ್ದರೆ ಸರ್ವರ್ ಡೌನ್ ಆಗುವುದಿಲ್ಲ' ಎಂದು ಆರೋಪಿಸಿದರು.

ಸಭಾಪತಿ ಬಸವರಾಜ ಹೊರಟ್ಟಿ, 'ಪರಿಚಯದ ಮೇಲೆ ಕೆಲಸ ಆಗುವುದು ಎಲ್ಲ ಕಾಲದಲ್ಲೂ ಇತ್ತು' ಎಂದರು. ಸಚಿವ ಕೃಷ್ಣ ಬೈರೇಗೌಡ, 'ಇದನ್ನು ನಾನು ಅಲ್ಲಗೆಳೆಯುವುದಿಲ್ಲ. ನನ್ನ ಗಮನಕ್ಕೂ ಇದು ಬಂದಿದೆ. ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ' ಎಂದರು.

ಇ–ಖಾತಾಗೆ ₹25,000: 'ಕರ್ನಾಟಕ ಸ್ಟಾಂಪು (ತಿದ್ದುಪಡಿ) ಮಸೂದೆ' ಮೇಲಿನ ಚರ್ಚೆಯ ವೇಳೆ ಜೆಡಿಎಸ್‌ನ ಕೆ.ವಿವೇಕಾನಂದ, 'ಇ–ಖಾತಾ ನೀಡಲು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ₹25,000 ಲಂಚ ನಿಗದಿ ಮಾಡಿದ್ದಾರೆ. ಅದನ್ನು ನೀಡಿದರಷ್ಟೇ ಕೆಲಸ ಆಗುತ್ತದೆ' ಎಂದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ, 'ಈ ಬಗ್ಗೆ ದೂರು ನೀಡಿದರೆ ಕ್ರಮ ತೆಗೆದುಕೊಳ್ಳುತ್ತೇವೆ' ಎಂದು ಹೇಳಿದರು.

ಸಿನಿಮಾ ಪುರವಣಿ



ವಿನಯ್ ರಾಜ್‌ಕುಮಾರ್

‘ಒಂದೇ ರೀತಿ ಪಾತ್ರ ಮಾಡುವುದು ಇಷ್ಟವಿಲ್ಲ’

ವಿನಾಯಕ ಕೆ.ಎಸ್

ವಿನಯ್ ರಾಜ್‌ಕುಮಾರ್ ನಟನೆಯ ‘ಅಂದೊಂದಿತ್ತು ಕಾಲ’ ಚಿತ್ರ ಬಿಡುಗಡೆಗೆ ಸಿದ್ಧವಿದೆ. ಜೊತೆಗೆ, ದುನಿಯಾ ವಿಜಯ್ ನಿರ್ದೇಶನದ ‘ಸಿಟಿ ಲೈಟ್ಸ್’ ಚಿತ್ರದಲ್ಲಿ ನಟಿಸುತ್ತಿರುವ ಅವರು, ತಮ್ಮ ಸಿನಿ ಪಯಣ ಕುರಿತು ಮಾತನಾಡಿದ್ದಾರೆ.

- **‘ಅಂದೊಂದಿತ್ತು ಕಾಲ’ ಯಾವ ಜಾನರ್‌ನ ಸಿನಿಮಾ?**

ನಿರ್ದೇಶಕನ ಬದುಕಿನ ಕಥೆ ಹೇಳುವ ಚಿತ್ರ. ಸಾಕಷ್ಟು ಜನ ನಿರ್ದೇಶಕರಾಗಬೇಕು ಎಂದುಕೊಂಡು ಚಿತ್ರೋದ್ಯಮಕ್ಕೆ ಬರುತ್ತಾರೆ. ಆದರೆ ಇಲ್ಲಿನ ಕಥೆ ಬೇರೆಯೇ ಇರುತ್ತದೆ. ಚಿತ್ರರಂಗದಲ್ಲಿ ನೆಲೆ ಕಂಡುಕೊಳ್ಳಲು ಯತ್ನಿಸುತ್ತಾರೆ. ಸಾಕಷ್ಟು ಸವಾಲುಗಳನ್ನು ಎದುರಿಸುತ್ತಾರೆ. ಏನೇನೋ ಸಂಘರ್ಷಗಳು ನಡೆಯುತ್ತವೆ. ವೃತ್ತಿಯಲ್ಲಿ ಮಾತ್ರವಲ್ಲದೆ ಬದುಕಿನ ಸಂಘರ್ಷದ ಕಥೆಯೂ ತೆರೆದುಕೊಳ್ಳುತ್ತದೆ.

- **ಚಿತ್ರದ ಟೀಸರ್ ಪ್ರೇಮಕಥೆಯ ಸುಳಿವು ನೀಡುತ್ತಿದೆಯಲ್ಲಾ?**

ಹೌದು, ಬದುಕಿನ ಹೋರಾಟದ ಜೊತೆಗೆ ಒಂದು ಸುಮಧುರ ಪ್ರೇಮಕಥೆಯೂ ನಡೆಯುತ್ತದೆ. ಸಂಘರ್ಷ, ಪ್ರೀತಿ, ನಗು ಎಲ್ಲವನ್ನೂ ಹೊಂದಿರುವ ಕೌಟಂಬಿಕ ಮನರಂಜನೆ ಚಿತ್ರವಿದು.

- **‘ಗ್ರಾಮಾಯಣ’ ಚಿತ್ರ ಯಾವ ಹಂತದಲ್ಲಿದೆ?**

20 ದಿನದ ಚಿತ್ರೀಕರಣ ಬಾಕಿ ಇದೆ. ಈಗ ಅದರ ಚಿತ್ರೀಕರಣದ ಸಿದ್ಧತೆ ನಡೆಯುತ್ತಿದೆ. ಏಪ್ರಿಲ್‌ನಲ್ಲಿ ಚಿತ್ರೀಕರಣ ಪೂರ್ಣಗೊಂಡು ಈ ವರ್ಷ ತೆರೆಗೆ ಬರಲಿದೆ.

- **ದುನಿಯಾ ವಿಜಯ್ ನಿರ್ದೇಶನದ ‘ಸಿಟಿ ಲೈಟ್ಸ್’ನಲ್ಲಿ ನಿಮ್ಮ ಪಾತ್ರ...**

ಪಾತ್ರ ಕುರಿತು ಈಗಲೇ ಹೆಚ್ಚು ಹೇಳುವುದು ಕಷ್ಟ. ಒಂದು ಹಂತದ ಚಿತ್ರೀಕರಣ ಮುಗಿದಿದೆ. ಈಗ ನಾನು ಇಲ್ಲದ ಭಾಗದ ಚಿತ್ರೀಕರಣ ನಡೆಯುತ್ತಿದೆ. ಇಂದೊಂದು ‘ರಾ’ ಮಾದರಿಯ ಸಿನಿಮಾ. ಒಂದು ನಗರ ಸಾವಿರಾರು ಜನರನ್ನು ಕೈಬೀಸಿ ಕರೆಯುತ್ತದೆ. ಹಾಗೆ ಮಹಾನಗರಕ್ಕೆ ಬದುಕು ಹುಡುಕಿಕೊಂಡು ಬೇರೆ ಊರಿನಿಂದ ಬಂದ ಇಬ್ಬರ ಕಥೆಯಿದು. ಬೇರೆ ರಾಜ್ಯಗಳಿಂದ ಕರ್ನಾಟಕಕ್ಕೆ ಸಾಕಷ್ಟು ಜನ ಬರುತ್ತಾರೆ. ಅವರೆಲ್ಲ ಎಲ್ಲಿಗೆ ಹೋಗುತ್ತಾರೆ, ಅವರ ಬದುಕಿನ ಪಯಣವೇನು, ಎಂಬಿತ್ಯಾದಿ ಸಂಗತಿಗಳಿವೆ.

- **ನಿಮ್ಮ ಪ್ರತಿ ಸಿನಿಮಾವು ಭಿನ್ನವಾಗಿರುತ್ತದೆ. ಆದರೂ ಜನರಿಂದ ನಿರೀಕ್ಷಿತ ಮಟ್ಟದ ಪ್ರತಿಕ್ರಿಯೆ ಸಿಗುತ್ತಿಲ್ಲ ಏಕೆ?**

ಜನ ಇವತ್ತು ತುಂಬ ಅಥೆಂಟಿಕ್ ಆದ ಸಿನಿಮಾಗಳನ್ನು ಬಯಸುತ್ತಾರೆ. ಅಂಥ ಕಥೆಯೊಂದಿಗೆ ಒಳ್ಳೆಯ ಸಿನಿಮಾ ಮಾಡಿದರೆ ಜನ ಒಪ್ಪಿಕೊಳ್ಳುತ್ತಾರೆ. ಮಾಮೂಲಿ ಆ್ಯಕ್ಷನ್ ಸಿನಿಮಾಗಳು ಬೇಡವಾಗಿವೆ. ಜೊತೆಗೆ ಚಿತ್ರದ ಬಿಡುಗಡೆ, ಪ್ರಚಾರ ಇನ್ನಿತರ ಅಂಶಗಳು ಚಿತ್ರದ ಯಶಸ್ಸಿನ ಮೇಲೆ ಪರಿಣಾಮ ಬೀರುತ್ತವೆ.

- **ವಿಭಿನ್ನ ರೀತಿಯ ಕಥೆಗಳನ್ನು ಆಯ್ದುಕೊಳ್ಳಲು ಕಾರಣ...**

ನನಗೆ ಒಂದೇ ರೀತಿಯ ಪಾತ್ರಗಳನ್ನು ಮಾಡುವುದು ಏಕತಾನತೆ ಅನ್ನಿಸುತ್ತದೆ. ಒಂದು ಭಿನ್ನ ಪಾತ್ರದ ಮೂಲಕ ನಾವು ಬದುಕಿನಲ್ಲಿಯೂ ಒಂದಷ್ಟು ಕಲಿಯುತ್ತೇವೆ. ಈ ರೀತಿ ಸಿನಿಮಾಗಳನ್ನೇ ಮಾಡುವುದರಿಂದ ನನಗೆ ಬರುವ ಕಥೆಗಳು ಹಾಗೇ ಇರುತ್ತವೆ. ಭಿನ್ನ ರೀತಿಯ ಕಥೆಗಳನ್ನು ಹೊಂದಿರುವವರು ಮಾತ್ರ ಬಂದು ಕಥೆ ಹೇಳುತ್ತಾರೆ. ಈ ಕಾರಣಕ್ಕೂ ವಿಭಿನ್ನ ಸಿನಿಮಾಗಳು ಸಿಗುತ್ತಿವೆ. ನಟನಾಗಿ ಪ್ರಯೋಗಗಳನ್ನು ಮಾಡಬೇಕು. ಬೇರೆ ಬೇರೆ ರೀತಿಯ ಪಾತ್ರಗಳನ್ನು ಮಾಡಬೇಕು. ಎಲ್ಲ ರೀತಿಯಿಂದಲೂ ಇದೊಂದು ವಿಶಿಷ್ಟ ಅನುಭವ.

- **ಹೊಸ ಚಿತ್ರಗಳನ್ನು ಒಪ್ಪಿಕೊಂಡಿರುವಿರಾ?**

ಒಂದು ಕಥೆ ಚರ್ಚೆ ಹಂತದಲ್ಲಿದೆ. ಅದನ್ನು ಹೊರತುಪಡಿಸಿ ಬೇರೆ ಸಿನಿಮಾಗಳನ್ನು ಒಪ್ಪಿಕೊಂಡಿಲ್ಲ. ಇರುವ ಸಿನಿಮಾಗಳನ್ನು ಪೂರ್ಣಗೊಳಿಸುವುದರತ್ತ ಗಮನಹರಿಸಿರುವೆ.

ಎರಡು ಚಿತ್ರಗಳು ತೆರೆಗೆ



ಬಿಂಬಿಕಾ

ನಾರಾಯಣ ನಾರಾಯಣ

‘ಮಜಾ ಟಾಕೀಸ್’ ಖ್ಯಾತಿಯ ಪವನ್ ಕುಮಾರ್ ಪ್ರಮುಖ ಪಾತ್ರದಲ್ಲಿರುವ ಈ ಸಿನಿಮಾಕ್ಕೆ ಶ್ರೀಕಾಂತ್ ಕೆಂಚಪ್ಪ ಆ್ಯಕ್ಷನ್ ಕಟ್ ಹೇಳಿದ್ದಾರೆ.

‘ಇದು ನಾಲ್ಕು ವರ್ಷದ ಶ್ರಮ. ಸಿನಿಮಾ ತುಂಬಾ ಚೆನ್ನಾಗಿ ಮೂಡಿಬಂದಿದೆ. ಕೃಷ್ಣನ ಕುರಿತಾದ ಹಾಸ್ಯಮಯ ಕಥಾಹಂದರವಿದೆ’ ಎಂದಿದ್ದಾರೆ ನಿರ್ದೇಶಕರು.

ಎರಡು ಹಾಡುಗಳಿದ್ದು ರಾಧಾಕೃಷ್ಣ ಸಂಗೀತ ನೀಡಿದ್ದಾರೆ. ಕವಿರಾಜ್ ಸಾಹಿತ್ಯವಿದೆ. ಕೃಷ್ಣಪ್ಪ ಬಂಡವಾಳ ಹೂಡಿದ್ದಾರೆ. ಚಿತ್ರದಲ್ಲಿ ಗುರುಕಿರಣ್, ಬಿಂಬಿಕಾ, ಕೀರ್ತಿ ಕೃಷ್ಣ ಸೇರಿದಂತೆ ಅನೇಕ ಕಲಾವಿದರು ನಟಿಸಿದ್ದಾರೆ.

ಬರ್ಗೆಟ್ ಬಸ್ತ್ಯಾ

ರಿಶಿ ಹಿರೇಮಠ್ ತಾವೇ ನಿರ್ದೇಶಿಸಿ ನಾಯಕನಾಗಿಯೂ ಅಭಿನಯಿಸಿದ್ದಾರೆ. ‘ಚಿತ್ರದಲ್ಲಿರುವ ದೃಶ್ಯಗಳು ನಿಜ ಜೀವನದಲ್ಲಿ ನಡೆಯುವಂತಿವೆ. ಎಲ್ಲರೊಳಗೆ ಇನ್ನೊಬ್ಬ ಪಾತ್ರಧಾರಿ ಇರುತ್ತಾನೆ. ಹುಡುಗಿಯರನ್ನು ನೋಡಿದಾಗ ಆ ಪಾತ್ರದಿಂದ ಹೊರಗೆ ಬರುತ್ತಾನೆ. ಈ ಕುರಿತು ಯಾರೂ ಹೇಳಿಕೊಳ್ಳದೆ ಇರುವ ಸಂಗತಿಯನ್ನು ಸಿನಿಮಾದಲ್ಲಿ ತೋರಿಸುವ ಪ್ರಯತ್ನ ಮಾಡಲಾಗಿದೆ’ ಎಂದಿದ್ದಾರೆ ನಿರ್ದೇಶಕರು.

ಯರ್ರಂ ರೆಡ್ಡಿ ಪಿಕ್ಚರ್ಸ್ ಸಂಸ್ಥೆ ಅಡಿಯಲ್ಲಿ ಬಳ್ಳಾರಿಯ ವೈ.ನಾಗಾರ್ಜುನರೆಡ್ಡಿ ಬಂಡವಾಳ ಹೂಡಿದ್ದಾರೆ. ಬೆಂಗಳೂರು, ತೀರ್ಥಹಳ್ಳಿ, ಕೊಪ್ಪ ಮೊದಲಾದೆಡೆ ಚಿತ್ರೀಕರಣಗೊಂಡಿದೆ. ಪ್ರಕಾಶ್ ಜಿ. ಸಾಹಿತ್ಯಕ್ಕೆ ಸಿದ್ಧಾರ್ಥ್ ಕಾಮತ್ ಸಂಗೀತ ಸಂಯೋಜಿಸಿದ್ದಾರೆ. ಶಾಮ್ ಸಾಲ್ವಿನ್ ಛಾಯಾಚಿತ್ರಗ್ರಹಣ, ಸಿದ್ದು ದಳವಾಯಿ ಸಂಕಲನವಿದೆ.

ಎ.10ಕ್ಕೆ ಬರುತ್ತಾನೆ ‘ವಾಮನ’



ಧನ್ವೀರ್, ರೀಷ್ಮಾ ನಾಣಯ್ಯ

ಧನ್ವೀರ್, ರೀಷ್ಮಾ ನಾಣಯ್ಯ ಜೋಡಿಯಾಗಿ ನಟಿಸಿರುವ ‘ವಾಮನ’ ಚಿತ್ರದ ‘ಕಂದ ಕನಸ ರೂಪ’ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಶಂಕರ್ ರಾಮನ್ ಎಸ್. ನಿರ್ದೇಶನದ ಚಿತ್ರ ಬಿಡುಗಡೆಗೆ ಕೊನೆಗೂ ಮುಹೂರ್ತ ಕೂಡಿಬಂದಿದ್ದು, ಎ.10ರಂದು ತೆರೆಗೆ ಬರಲಿದೆ.

‘ಇದು ನನ್ನ ನಾಲ್ಕನೇ ಚಿತ್ರ. ನಟ ದರ್ಶನ್ ಮತ್ತು ವಿಜಯಲಕ್ಷ್ಮಿ ಅವರು ಈ ಚಿತ್ರಕ್ಕೆ ನೀಡಿದ ಬೆಂಬಲಕ್ಕೆ ಧನ್ಯವಾದಗಳು. ವಿಜಯಲಕ್ಷ್ಮಿ ಕೇಳಿದ ತಕ್ಷಣ ಬಂದು ಹಾಡು ಬಿಡುಗಡೆ ಮಾಡಿಕೊಟ್ಟಿದ್ದಾರೆ. ಹಿಂದಿನ ಮೂರು ಸಿನಿಮಾಗಳಲ್ಲಿಯೂ ಭಿನ್ನ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದೆ. ಅದೇ ರೀತಿ ಚಿತ್ರದಲ್ಲಿಯೂ ಮಾಸ್ ಆಗಿರುವ ಒಂದು ಭಿನ್ನ ಪಾತ್ರ ಮಾಡಿರುವೆ. ಸಿನಿಮಾ ಚೆನ್ನಾಗಿ ಮೂಡಿಬಂದಿದೆ. ಹಾಡು ಎಲ್ಲರಿಗೂ ಇಷ್ಟವಾಗುತ್ತದೆ’ ಎಂದರು ನಾಯಕ ಧನ್ವೀರ್.

ತಾಯಿ - ಮಗನ ಬಾಂಧವ್ಯದ ಕಥೆ ಹೇಳುವ ಈ ಗೀತೆಗೆ ಪ್ರಮೋದ್ ಮರವಂತೆ ಸಾಹಿತ್ಯವಿದ್ದು, ಅಜನೀಶ್ ಲೋಕನಾಥ್ ಸಂಗೀತ ನೀಡಿದ್ದಾರೆ. ವೆಂಕಟೇಶ್ ಡಿ.ಸಿ ಈ ಹಾಡನ್ನು ಹಾಡಿದ್ದಾರೆ. ಚೇತನ್ ಗೌಡ ಬಂಡವಾಳ ಹೂಡಿದ್ದಾರೆ. ಪೆಟ್ರೋಲ್ ಪ್ರಸನ್ನ, ಶಿವರಾಜ್ ಕೆ.ಆರ್ ಪೇಟೆ, ಕಾಕ್ರೋಜ್ ಸುಧೀ ಮುಂತಾದವರು ತಾರಾಗಣದಲ್ಲಿದ್ದಾರೆ.

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ
ಸಿನಿಮಾಗಳಿಗೆ ಆಹ್ವಾನ



‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ ಇದು ಚಂದನವನದ ಪ್ರತಿಭೆಗಳನ್ನು ಗುರುತಿಸುವ ಹಾಗೂ ನಮ್ಮ ಶ್ರೀಮಂತ ಸಿನಿಮಾ ಪರಂಪರೆಯನ್ನು ಆಚರಿಸುವ, ಸಂಭ್ರಮಿಸುವ, ಬೆಸೆಯುವ ವೇದಿಕೆ. ಇಂತಹ ‘ಸಿನಿ ಸಮ್ಮಾನ’ದ ಮೂರನೇ ಆವೃತ್ತಿಗೆ ವೇದಿಕೆ ಸಜ್ಜಾಗುತ್ತಿದೆ.



2023ರಲ್ಲಿ ತನ್ನ ಅಮೃತ ಸಂಭ್ರಮದ ಸಂದರ್ಭದಲ್ಲಿ ‘ಪ್ರಜಾವಾಣಿ’ ಪ್ರಾರಂಭಿಸಿದ ಈ ಕಾರ್ಯಕ್ರಮ ಕನ್ನಡ ಚಿತ್ರರಂಗದವರ ಮನಸ್ಸಿನಲ್ಲಿ ಅಚ್ಚೊತ್ತಿದೆ. ಎರಡು ಆವೃತ್ತಿಗಳನ್ನು ಯಶಸ್ವಿಯಾಗಿ, ಅದ್ದೂರಿಯಾಗಿ ನಡೆಸಲಾಗಿದೆ.

ಇದೀಗ 2024ರಲ್ಲಿ ತೆರೆಕಂಡ ಸಿನಿಮಾಗಳನ್ನು ಮೂರನೇ ಆವೃತ್ತಿಗೆ ಪರಿಗಣಿಸಲಾಗುತ್ತಿದೆ. ಕೆಳಕಂಡ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ನೋಂದಣಿ ಮಾಡಿಕೊಂಡು ಸಿನಿಮಾಗಳನ್ನು ಸಲ್ಲಿಸಬಹುದಾಗಿದೆ. ಒಟ್ಟು 26 ವಿಭಾಗಗಳಲ್ಲಿ ಪ್ರಶಸ್ತಿಗಳು ಇರಲಿವೆ.

ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್, ಬೆಂಗಳೂರು ವಿಭಾಗ,
2ನೇ ಮಹಡಿ, ಲೋ.ಇ.ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–01.
ದೂರವಾಣಿ: 080–22133370, ವೆಬ್‌ಸೈಟ್: www.kpwd.karnataka.gov.in

ಟೆಂಡರ್ ಪ್ರಕಟಣೆ ಸಂಖ್ಯೆ: 50/2024–25
ದಿನಾಂಕ: 19.03.2025

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ. ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ **ನೆಲಮಂಗಲ & ಆನೇಕಲ್ ಉಪವಿಭಾಗಗಳಿಗೆ** ಸಂಬಂಧಿಸಿದಂತೆ 03 ಸಂಖ್ಯೆಯ (ರೂ. 100.00 ಲಕ್ಷಗಳ) ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಯ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.

ಕಾಮಗಾರಿಯ ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಶುಲ್ಕವನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.

1. ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಕೆ.ಪಿ.ಪಿ.ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ: **04.04.2025 ಸಂಜೆ 4.00 ಗಂಟೆಯವರೆಗೆ.**
2. ಟೆಂಡರ್‌ಗಳನ್ನು ಕೆ.ಪಿ.ಪಿ.ಪೋರ್ಟಲ್ ಮೂಲಕ ತೆರೆಯುವ ದಿನಾಂಕ **05.04.2025 ಸಂಜೆ 4.30 ಗಂಟೆಗೆ** ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.

ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು

ವಾಸಾಸಂಇ/ಉನಿ–ಸಿ.ಪಿ/5816/ಕೆಎಸ್‌ಎಂಸಿಎ/2024–25

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ.

ಸಂಖ್ಯೆ: ಕಾಇಂ:ಲೋವಿಚಿ: ಜೆಇ–1,ಎಇ–3,:ಟೆಂಡರ್–41:2024–25
ದಿನಾಂಕ: 20.03.2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆ ವಿಭಾಗ ಚಿತ್ರದುರ್ಗ ವಿಭಾಗ ವ್ಯಾಪ್ತಿಯಲ್ಲಿನ ಚಿತ್ರದುರ್ಗ, ಚಳ್ಳಕೆರೆ, ಹಿರಿಯೂರು, ಮತ್ತು ಹಾನಗಲ್, ಮೊಳಕಾಲ್ಮೂರು ತಾಲ್ಲೂಕುಗಳಿಗೆ ಸಂಬಂಧಿಸಿದಂತೆ, ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ರಾಜ್ಯಪಾಲರ ಪರವಾಗಿ ಕೆಟಿಪಿಪಿ–2000ರನ್ವಯ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಲೆಕ್ಕ ಶೀರ್ಷಿಕೆ: **3054–03–102–0–01–200 ರಾಜ್ಯ ಹೆದ್ದಾರಿಗಳ ಸೇತುವೆಗಳ ನಿರ್ವಹಣೆ** ಅಡಿ **03** ಕಾಮಗಾರಿಗಳಿಗೆ ಕನಿಷ್ಠ ಅಂದಾಜು ಮೊತ್ತ ರೂ. 5.30 ಲಕ್ಷ ಗರಿಷ್ಠ ಅಂದಾಜು ಮೊತ್ತ 9.90 ಲಕ್ಷ, ಲೆಕ್ಕ ಶೀರ್ಷಿಕೆ: **3054–04–105–0–01–200 ಜಿಲ್ಲಾ ಮತ್ತು ಇತರೆ ರಸ್ತೆ ಸೇತುವೆಗಳ ನಿರ್ವಹಣೆ** ಅಡಿ **02** ಕಾಮಗಾರಿಗಳಿಗೆ ಕನಿಷ್ಠ ಅಂದಾಜು ಮೊತ್ತ ರೂ. 10.00 ಲಕ್ಷ ಗರಿಷ್ಠ ಅಂದಾಜು ಮೊತ್ತ 10.00 ಲಕ್ಷ, ಲೆಕ್ಕ ಶೀರ್ಷಿಕೆ: **3054–03–337–0–05–200 ರಾಜ್ಯ ಹೆದ್ದಾರಿಗಳ ನಿರ್ವಹಣೆ** ಅಡಿ **03** ಕಾಮಗಾರಿಗಳಿಗೆ ಕನಿಷ್ಠ ಅಂದಾಜು ಮೊತ್ತ ರೂ. 15.00 ಲಕ್ಷ ಗರಿಷ್ಠ ಅಂದಾಜು ಮೊತ್ತ 50.00 ಲಕ್ಷ, ಲೆಕ್ಕ ಶೀರ್ಷಿಕೆ: **3054–04–337–1–10–200 ಜಿಲ್ಲಾ ಮತ್ತು ಇತರೆ ರಸ್ತೆಗಳು ನಿರ್ವಹಣೆ** ಅಡಿ **02** ಕಾಮಗಾರಿಗಳಿಗೆ ಕನಿಷ್ಠ ಅಂದಾಜು ಮೊತ್ತ ರೂ. 10.00 ಲಕ್ಷ ಗರಿಷ್ಠ ಅಂದಾಜು ಮೊತ್ತ 10.50 ಲಕ್ಷ, ಮತ್ತು ಲೆಕ್ಕ ಶೀರ್ಷಿಕೆ: **8443 ಠೇವಣಿ ವಂತಿಕೆ ಅಡಿ 01** ಕಾಮಗಾರಿಗೆ ಅಂದಾಜು ಮೊತ್ತ ರೂ. 8.00 ಲಕ್ಷ ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮೂಲ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಏಕ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕಾಮಗಾರಿಗಳಿಗೆ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: **27.03.2025** ಸಂಜೆ 4.00 ಗಂಟೆಯವರೆಗೆ, ಬಿಡ್‌ಗಳನ್ನು ತೆರೆಯುವ ದಿನಾಂಕ: **28.03.2025** ಸಂಜೆ 4.15 ಗಂಟೆಯವರೆಗೆ ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯ ಕೆಲಸದ ವೇಳೆಯಲ್ಲಿ (ದೂರವಾಣಿ ಸಂಖ್ಯೆ: 08194–222446) ಅಥವಾ ವೆಬ್ ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದು.

DIPR/CTA/KSMCA/733/2024-25

ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ಚಿತ್ರದುರ್ಗ.

ಅಲ್ಪಸಂಖ್ಯಾತರ ನಿರ್ದೇಶನಾಲಯ

ನಂ.16ಸಿ, ಮೌಲಾನಾ ಅಜಾದ್ ಭವನ, ಮಿಲ್ಲರ್‌ಟ್ಯಾಂಕ್ ಬೆಡ್ ರಸ್ತೆ,
ವಸಂತನಗರ, ಬೆಂಗಳೂರು–560052.

ಸಂಖ್ಯೆ: ಅಸಂನಿ/ಅ/ಮೂಲಸೌಕರ್ಯಗಳು/ಸಿಆರ್–112/2024–25 ದಿನಾಂಕ: 20–03–2025

ಟೆಂಡರ್ ಪ್ರಕಟಣೆ

2025–26ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನದ ವಿವಿಧ ವಸತಿ ಶಾಲೆ/ಕಾಲೇಜು ಹಾಗೂ ಮೌಲಾನಾ ಅಜಾದ್ ಮಾದರಿ ಶಾಲೆಗಳಿಗೆ **"Xerox Machine"**ಗಳನ್ನು ಅರ್ಹ ಸರಬರಾಜುದಾರರಿಂದ ಪೂರೈಸಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಆನ್‌ಲೈನ್‌ನಲ್ಲಿ ಟೆಂಡರ್ ಆಹ್ವಾನಿಸಲಾಗಿದೆ.

ಕ್ರ.ಸಂ.	ವಿವರಗಳು	ದಿನಾಂಕ/ಸಮಯ
1.	ಟೆಂಡರ್ ಪ್ರಕಟಣೆಯ ದಿನಾಂಕ:	21.03.2025.
2.	ಟೆಂಡರ್ ಮೊತ್ತ:	ರೂ.495.00 ಲಕ್ಷಗಳು.
3.	ಇಎಂಡಿ ಮೊತ್ತ	ರೂ. 7,42,500/–
4.	ಟೆಂಡರ್ ಕುರಿತು ಪೂರ್ವಭಾವಿ ಸಭೆ:	27.03.2025 ಬೆಳಿಗ್ಗೆ 11:30 ಗಂಟೆಗೆ.
5.	ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ ಮತ್ತು ಸಮಯ:	21.04.2025 ಸಂಜೆ 5:30 ಗಂಟೆಯೊಳಗೆ.
6.	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ:	24.04.2025 ಬೆಳಿಗ್ಗೆ 11:30 ಗಂಟೆಗೆ.
7.	ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ:	28.04.2025 ಬೆಳಿಗ್ಗೆ 11:30 ಗಂಟೆಗೆ.
8.	ಟೆಂಡರ್ ತೆರೆಯವ ಸ್ಥಳ ಮತ್ತು ಸಂಪರ್ಕಿಸುವ ವಿಳಾಸ:	ಮೌಲಾನಾ ಅಜಾದ್ ಭವನ, ನಂ.16ಸಿ, ಮಿಲ್ಲರ್‌ಟ್ಯಾಂಕ್ ಬೆಡ್ ರಸ್ತೆ, ವಸಂತನಗರ, ಬೆಂಗಳೂರು–560052.
9.	ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ	080–22535902/ 080–22535918.

ಇತರೆ ವಿವರಗಳನ್ನು ಅಲ್ಪಸಂಖ್ಯಾತರ ನಿರ್ದೇಶನಾಲಯದ ವೆಬ್‌ಸೈಟ್ https://dom.karnataka.gov.in ಹಾಗೂ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/–
ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು

ವಾಸಾಸಂಇ/ವಾಪ್ರ/5827/2024–25

ಅಲ್ಪಸಂಖ್ಯಾತರ ನಿರ್ದೇಶನಾಲಯ

ನಂ.16ಸಿ, ಮೌಲಾನಾ ಅಜಾದ್ ಭವನ, ಮಿಲ್ಲರ್‌ಟ್ಯಾಂಕ್ ಬೆಡ್ ರಸ್ತೆ,
ವಸಂತನಗರ, ಬೆಂಗಳೂರು–560052.

ಸಂಖ್ಯೆ: ಅಸಂನಿ/ಅ/ಮೂಲಸೌಕರ್ಯಗಳು/ಸಿಆರ್–111/2024–25 ದಿನಾಂಕ: 20–03–2025

ಟೆಂಡರ್ ಪ್ರಕಟಣೆ

2025–26ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನದ ವಿವಿಧ ವಸತಿ ಶಾಲೆ/ಕಾಲೇಜು ಹಾಗೂ ಮೌಲಾನಾ ಅಜಾದ್ ಮಾದರಿ ಶಾಲೆಗಳಿಗೆ **"ಕಂಪ್ಯೂಟರ್"**ಗಳನ್ನು ಅರ್ಹ ಸರಬರಾಜುದಾರರಿಂದ ಪೂರೈಸಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಆನ್‌ಲೈನ್‌ನಲ್ಲಿ ಟೆಂಡರ್ ಆಹ್ವಾನಿಸಲಾಗಿದೆ.

ಕ್ರ.ಸಂ.	ವಿವರಗಳು	ದಿನಾಂಕ/ಸಮಯ
1.	ಟೆಂಡರ್ ಪ್ರಕಟಣೆಯ ದಿನಾಂಕ:	21.03.2025.
2.	ಟೆಂಡರ್ ಮೊತ್ತ:	ರೂ.495.00 ಲಕ್ಷಗಳು.
3.	ಇಎಂಡಿ ಮೊತ್ತ	ರೂ. 7,42,500/–
4.	ಟೆಂಡರ್ ಕುರಿತು ಪೂರ್ವಭಾವಿ ಸಭೆ:	27.03.2025 ಬೆಳಿಗ್ಗೆ 11:30 ಗಂಟೆಗೆ.
5.	ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ ಮತ್ತು ಸಮಯ:	21.04.2025 ಸಂಜೆ 5:30 ಗಂಟೆಯೊಳಗೆ.
6.	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ:	24.04.2025 ಬೆಳಿಗ್ಗೆ 11:30 ಗಂಟೆಗೆ.
7.	ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ:	28.04.2025 ಬೆಳಿಗ್ಗೆ 11:30 ಗಂಟೆಗೆ.
8.	ಟೆಂಡರ್ ತೆರೆಯವ ಸ್ಥಳ ಮತ್ತು ಸಂಪರ್ಕಿಸುವ ವಿಳಾಸ:	ಮೌಲಾನಾ ಅಜಾದ್ ಭವನ, ನಂ.16ಸಿ, ಮಿಲ್ಲರ್‌ಟ್ಯಾಂಕ್ ಬೆಡ್ ರಸ್ತೆ, ವಸಂತನಗರ, ಬೆಂಗಳೂರು–560052.
9.	ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ	080–22535902/ 080–22535918.

ಇತರೆ ವಿವರಗಳನ್ನು ಅಲ್ಪಸಂಖ್ಯಾತರ ನಿರ್ದೇಶನಾಲಯದ ವೆಬ್‌ಸೈಟ್ https://dom.karnataka.gov.in ಹಾಗೂ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/–
ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು

ವಾಸಾಸಂಇ/ವಾಪ್ರ/5824/ಎಂಎಎ/2024–25

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ

(ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಜಂಟಿ ಸಹಭಾಗಿತ್ವದಲ್ಲಿ)
ಇ-ಮೇಲ್ : contactus@bmrc.co.in ವೆಬ್‌ಸೈಟ್ : www.bmrc.co.in
ಸಂಖ್ಯೆ: 11 ಎಸ್&ಟಿ–ಎಸ್ಎ ದಿನಾಂಕ: 20.03.2025

ಟೆಂಡರ್ ಪ್ರಕಟಣೆ

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ (ಬಿಎಂಆರ್‌ಸಿಎಲ್), ಇವರು **"ಫೇಸ್–IIರ ರೀಚ್–5, ರೀಚ್–6, ಫೇಸ್–2ಎ ಮತ್ತು ಫೇಸ್–2ಬಿ ಯ ಪ್ಲಾಟ್‌ಫಾರ್ಮ್ ಸ್ಕ್ರೀನ್ ಬಾಗಿಲು/ಗೇಟ್‌ಗಳ ವ್ಯವಸ್ಥೆಗಳು ಮತ್ತು ರೀಚ್–6, ಫೇಸ್–2ಎ ಮತ್ತು ಫೇಸ್–2ಬಿ ಗಾಗಿ ಸಿಗ್ನಲಿಂಗ್ ಮತ್ತು ರೈಲು ನಿಯಂತ್ರಣ ವ್ಯವಸ್ಥೆಗಾಗಿ ಇಂಡಿಪೆಂಡೆಂಟ್ ಸೇಫ್ಟಿ ಅಸೆಸ್‌ಮೆಂಟ್ ಸೇವೆಗಳಿಗೆ"** ಅರ್ಹ, ಅಧಿಕೃತ, ಅನುಭವವಿರುವ ಟೆಂಡರ್‌ದಾರರಿಂದ ಏಕ ಹಂತ – ದ್ವಿ ಲಕೋಟೆ ಪದ್ಧತಿಯಲ್ಲಿ ಸಿಪಿಪಿ **ಪೋರ್ಟಲ್** (https://etenders.gov.in) ಮೂಲಕ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಇ–ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡಲು ಲಭ್ಯವಿರುವ ಅವಧಿ: **20.03.2025ರಿಂದ 13.05.2025, ಮಧ್ಯಾಹ್ನ 3.00 ಗಂಟೆವರೆಗೆ.** ಇ–ಟೆಂಡರ್‌ಗಳನ್ನು ಸಲ್ಲಿಸುವ ಅವಧಿ: **08.05.2025, ಬೆಳಿಗ್ಗೆ 10.00 ಗಂಟೆಯಿಂದ 13.05.2025, ಮಧ್ಯಾಹ್ನ 3.00 ಗಂಟೆವರೆಗೆ.** ಇ–ಟೆಂಡರ್ ತೆರೆಯುವ ದಿನಾಂಕ: **14.05.2025, ಮಧ್ಯಾಹ್ನ 3.30 ಗಂಟೆಗೆ.** ಟೆಂಡರ್‌ನಲ್ಲಿ ಭಾಗವಹಿಸಲು ದಯವಿಟ್ಟು ಭೇಟಿನೀಡಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್: **https://etenders.gov.in.** ಹೆಚ್ಚಿನ ವಿವರಗಳಿಗೆ **ದಿನಾಂಕ: 20.03.2025ರಿಂದ https://tenderb.bmrc.co.in**ಗೆ ದಯವಿಟ್ಟು ಭೇಟಿನೀಡಿ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು, ಬಿಎಂಆರ್‌ಸಿಎಲ್

बी ई एम एल BEML LIMITED

(A Govt. of India Mini Ratna Company under Ministry of Defence)
BANGALORE COMPLEX, POST BOX: 7501,
NEW THIPPASANDRA POST, BANGALORE-560075

NOTICE INVITING TENDER – e tender through BEML SRM Portal

BEML LIMITED, BANGALORE COMPLEX invites Public Tender-E mode (TWO Bid System)

Civil works tender ref: 6300039365

Work Description : Additional Facilities Required for Line 3A Project at Bangalore Complex, BEML Limited, Bangalore.

Approx. estimated value : Rs.7.54 crores inclusive of GST

EMD amount : Rs. 15,08,000/-

Period of contract: 12 Months

Last date & time for submission of bids : 09.04.2025 at 14.00 Hrs

Further details of tender can be obtained from following website: https://www.bemlindia.in/tenders/active-tenders/ Bangalore complex SRM Portal : https://bemlindia.in/eprocurement/index.php

Bidders are advised to visit above website frequently for any corrigendum, extension, etc.

The management has the right to accept or reject any or all the tenders without assigning any reasons thereon.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ಸಂಖ್ಯೆ 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ,
ಬೆಂಗಳೂರು–560052. ಫೋನ್: 080–22268677/78/79, ಫ್ಯಾಕ್ಸ್: 080–22268667
ಇಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ನಂ: ಕವಿನಿಆ/ಉ.ನಿ(ಆ)/ಇ–ಕೋರ್ಟ್/2024–25/1773 ದಿನಾಂಕ: 19.03.2025

ದರಖಾಸ್ತು ಪ್ರಕಟಣೆ

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಬೆಂಗಳೂರು ರವರು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಆಯೋಗದಲ್ಲಿ **ಡಿಜಿಟಲ್ / ಇ–ಕೋರ್ಟ್ ಯೋಜನೆಗಾಗಿ ಐಟಿ ಸೇರಿದಂತೆ ಹಾರ್ಡ್‌ವೇರ್‌ನ ಪೂರೈಕೆ, ಸ್ಥಾಪನೆ, ಸಂರಚನೆ ಮತ್ತು ಕಾರ್ಯಾರಂಭಕ್ಕಾಗಿ** ಅರ್ಹ ಬಿಡ್ಡರ್‌ಗಳು / ಏಜೆನ್ಸಿಗಳಿಂದ ಸ್ಪರ್ಧಾತ್ಮಕ ಬಿಡ್ಡಿಂಗ್ ಅಡಿಯಲ್ಲಿ ಎಲೆಕ್ಟ್ರಾನಿಕ್ ಬಿಡ್‌ಗಳನ್ನು ಕೆಲಸದ ವ್ಯಾಪ್ತಿ ಮತ್ತು ಟೆಂಡರ್ ದಾಖಲೆಯಲ್ಲಿ ಸೂಚಿಸಲಾದ ನಿಯಮಗಳು ಮತ್ತು ಷರತ್ತುಗಳ ಪ್ರಕಾರ ಟೆಂಡರ್ ಆಹ್ವಾನಿಸಲಾಗಿದೆ.

ಒಪ್ಪಂದದ ನಿಯಮ ಮತ್ತು ಷರತ್ತುಗಳು, ಬಿಡ್ಡರ್‌ಗಳ ಅರ್ಹತಾ ಅವಶ್ಯಕತೆ, ಮಾನದಂಡಗಳು ಮತ್ತು ವ್ಯಾಪ್ತಿ ಒಳಗೊಂಡ ಬಿಡ್ ಡಾಕ್ಯೂಮೆಂಟ್‌ಗಳ ವಿದ್ಯುನ್ಮಾನ ಪ್ರತಿಗಳ ವಿವರಗಳನ್ನು **ದಿನಾಂಕ: 20.03.2025ರಂದು** ಅಂತರ್ಜಾಲ ತಾಣದಲ್ಲಿ **https://kppp.karnataka.gov.in** ಲಭ್ಯವಿರಿಸಲಾಗಿರುತ್ತದೆ. ಈ ಟೆಂಡರ್‌ನಲ್ಲಿ ಭಾಗವಹಿಸಲು ದಿನಾಂಕ: **15.04.2025ರ ಮಧ್ಯಾಹ್ನ 11.00 ಘಂಟೆಯವರೆಗೆ** ಸಮಯವಿರುತ್ತದೆ.

ಸಹಿ/– ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

DIPR/CP/5822/2024-25

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ, ಡಾ: ಎಂ.ಹೆಚ್. ಮರೀಗೌಡ ರಸ್ತೆ ಬೆಂಗಳೂರು–560 029
ಫೋನ್: 26096832/26096910 E-mail: purchase@kmf.coop

ಅಧಿಸೂಚನೆ ಸಂಖ್ಯೆ: ಕಹಾಮ/ಖರೀದಿ/ಟೆಂಡರ್–741/2024–25 ದಿನಾಂಕ: 21.03.2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ)

ಕರ್ನಾಟಕ ಸಹಕಾರ ಹಾಲು ಮಹಾಮಂಡಳ, ಬೆಂಗಳೂರು ಈ ಕೆಳಕಂಡ ವಿವರಗಳನ್ವಯ ಆಸಕ್ತಿಯುಳ್ಳ ಸಂಸ್ಥೆದಾರರಿಂದ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ಅಂತರ್ಜಾಲದ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ http://kppp.karnataka.gov.in ಗೆ ಭೇಟಿ ನೀಡಿ ಪಡೆಯಬಹುದಾಗಿದೆ.

Sl. No.	Item Description	Qty (Nos.)	EMD (Rs.)
1	Providing service for Transportation of Milk through Insulated Road Milk Tankers between the Mandya Milk Union to in and around Delhi for a period of one year.	As mentioned in tender document.	17.50 Lakhs

ಟೆಂಡರ್ ಪ್ರಾರಂಭವಾಗುವ ದಿನಾಂಕ : 24.03.2025 ರಿಂದ. ಟೆಂಡರ್ ಪೂರ್ವಭಾವಿ ಸಭೆ ದಿನಾಂಕ : 02.04.2025 ರಂದು ಬೆಳಿಗ್ಗೆ 11.00 ಗಂಟೆಗೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 07.04.2025 ರ ಸಂಜೆ 5.00 ಗಂಟೆ ಒಳಗಾಗಿ. ತಾಂತ್ರಿಕ ಟೆಂಡರ್ ತೆರಯುವ ದಿನಾಂಕ : 09.04.2025 ರಂದು ಬೆಳಿಗ್ಗೆ 11.00 ಗಂಟೆಗೆ. ವಾಣಿಜ್ಯ ಟೆಂಡರ್ ತೆರಯುವ ದಿನಾಂಕ: ತಾಂತ್ರಿಕ ದಾಖಲಾತಿಗಳ ಪರಿಶೀಲನೆಯ ನಂತರ. ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಖರೀದಿ)

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ದೂರವಾಣಿ ಸಂ: 08338/ 273859 ಇ–ಮೇಲ್: eepwdckd@gmail.com

ಕ್ರ.ಸಂ. ಲೋ.ಇ./ಚಿ.ವಿ/ಸ.ಇಂ–1/ಟೆಂಡರ್/2024–25/6230 ದಿನಾಂಕ:20/03/2025

ಅವಧಿ ವಿಸ್ತರಣೆ ಇ–ಅಲ್ಪಾವಧಿ ಟೆಂಡರ್ ಪ್ರಕಟಣೆ–1

ಈ ಕಚೇರಿ ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ ಕ್ರ.ಸಂ.ಲೋ.ಇ./ಚಿ.ವಿ/ಸ.ಇಂ–1/ಟೆಂಡರ್/2024–25/6069 ದಿನಾಂಕ: 14/03/2025 ರಡಿ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಪ್ರಕಟಣೆಯಲ್ಲಿನ ಕ್ರ.ಸಂ. 1 & 4 ರಲ್ಲಿನ ಕಾಮಗಾರಿಗಳಿಗೆ ಈ ಕೆಳಗಿನಂತೆ ಅವಧಿ ವಿಸ್ತರಣೆ ಮಾಡಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ಮಾರ್ಪಡಿಸಿದ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:01–04–2025 ರಂದು (11.00 ಗಂಟೆಗೆ), 2)ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:02–04–2025 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:04–04–2025 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 07–04–2025 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System):"ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ"

ಉಳಿದ ಉಪವಿಧಿಗಳಲ್ಲಿ/ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-1978/KSMCA/2024-25

ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ನಂ. 16/ಐ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು – 560 052.
ದೂ.: 080–22260932, ಇ–ಮೇಲ್: mdkfcsc123@yahoo.com
ಸಂ: ಕಆನಾಸನಿನಿ/ಆಡಳಿತ/92/2024–25 ದಿನಾಂಕ: 20.03.2025

ಅಧಿಸೂಚನೆ (ಕರೆ–2)

ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತದ ಕೇಂದ್ರ ಕಛೇರಿಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು 2024–25ನೇ ಸಾಲಿನಿಂದ ಒಂದು ವರ್ಷದ ಅವಧಿಗೆ ಪಡೆಯುವ ಸಲುವಾಗಿ ಟೆಂಡರ್ ಸಂಖ್ಯೆ: **KFCSCL/2024-25/SE00100/Call-2** ಆಹ್ವಾನಿಸಲಾಗಿದ್ದು, ಹೆಚ್ಚಿನ ಮಾಹಿತಿಗಾಗಿ **website:www.kppp.karnataka.gov.in**ನ್ನು ಪರಿಶೀಲಿಸುವಂತೆ ತಿಳಿಸಿದೆ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ಕೊಪ್ಪಳ.

ಸಂ:ಕಾನಿಇಂ:ಲೋಇ:ವಿಕೊ:ಡಿಬಿ:KW- 4:ಟೆಂ:2024–25: 4630 ದಿನಾಂಕ: 19–03–2025

ಅಲ್ಪಾವಧಿ ಟೆಂಡರ್ ಪ್ರಕಟಣೆ

2024–25ನೇ ಸಾಲಿನ ಲೆಕ್ಕ ಶೀರ್ಷಿಕೆ : 5054–ಜಿಲ್ಲಾ ಮುಖ್ಯ ರಸ್ತೆ ಸುಧಾರಣೆ ಸಾಲಿನ ಲೆಕ್ಕ ಶೀರ್ಷಿಕೆ: ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಮೈಕ್ರೋ ಸಾಮಾನ್ಯ ಅಡಿಗಳಲ್ಲಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999–2000ರ ಪ್ರಕಾರ ಪಾರದರ್ಶಕತೆ ಆಕ್ಟ 2000ರ ನಿಯಮದಂತೆ, ಸ್ಟ್ಯಾಂಡರ್ಡ ಬಿಡ್ ಡಾಕೂಮೆಂಟ್ KW–4ರ ನಿಯಮಗಳನ್ವಯ ಅರ್ಹ ಗುತ್ತಿಗೆದಾರರಿಂದ ಟೆಂಡರಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು, ಕೆಪಿಪಿಪಿ ಪೋರ್ಟಲ್ http://kppp.karnataka.gov.in ಮುಖಾಂತರ ಭಾಗವಹಿಸಬಹುದು. ಒಟ್ಟು 03 ಕಾಮಗಾರಿಗಳಿಗೆ (ವರ್ಕ ಇಂಡೆಂಟ್ ಸಂಖ್ಯೆ: 20083, 20084 & 19721) ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ: **04–04–2025 ಸಮಯ 16.00** ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **05–04–2025 ಸಮಯ 16.30** ಗಂಟೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ: **07–04–2025 ಸಮಯ 11.00** ಗಂಟೆ ಕನಿಷ್ಠ ಅಂದಾಜು ಮೊತ್ತ ರೂ. **200.00** ಲಕ್ಷಗಳು ಹಾಗೂ ಗರಿಷ್ಠ ಅಂದಾಜು ಮೊತ್ತ ರೂ. **300.00** ಲಕ್ಷಗಳು ಇರುತ್ತದೆ. ಟೆಂಡರ್ ದಾಖಲೆಗಳನ್ನು ಸದರಿ ವೆಬ್‌ಸೈಟ್‌ನಲ್ಲಿಯ ದಾಖಲೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ.ಎಂ.ಡಿ, ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಕಾಮಗಾರಿ ಪೂರ್ಣಗೊಳಿಸಲು ನಿಗದಿತ ಕಾಲಾವಧಿ, ಪ್ರೀಬಿಡ್ ಮೀಟಿಂಗ್ ದಿನಾಂಕ, ಟೆಂಡರ್ ಆಕ್ಷೇಪಣೆ/ಸ್ಪಷ್ಟೀಕರಣ ಹಾಗೂ ಇತ್ಯಾದಿಗಳಿಗಾಗಿ ಹೆಚ್ಚಿನ ಮಾಹಿತಿಗಳನ್ನು ಕೆಪಿಪಿಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು/ಕೆಲಸದ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದು. ವಿಶೇಷ ಸೂಚನೆ: ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು ಕೆಪಿಪಿಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳಬಹುದು ಮೀಸಲಾತಿಗಳಿಗಾಗಿ ಹಾಗೂ ಇತ್ಯಾದಿಗಳಿಗಾಗಿ ಯಾವುದೇ ರೀತಿಯ ಪ್ರತ್ಯೇಕವಾಗಿ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರು,
ಲೋ.ಇ ವಿಭಾಗ, ಕೊಪ್ಪಳ

ವಾ.ಸಾ.ಇ/ಕೊಪ್ಪಳ/891/ದೇಶಪಾಂಡೆಪಬ್ಲಿಸಿಟಿ/2024–25

ಕರ್ನಾಟಕ ಸರ್ಕಾರ – ಕರ್ನಾಟಕ ಅರಣ್ಯ ಇಲಾಖೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಚನ್ನಗಿರಿ ಉಪ ವಿಭಾಗ, ಚನ್ನಗಿರಿ–577213

Ph: :08282 266355 E mail: acfchannagiri@gmail.com
ಸಂಖ್ಯೆ:ಸಅಸಂ.ಚಉವಿ.ಮ.ಕ.ಸಿಆರ್– /2024–25/649 ದಿ:15–03–2025.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರ ಗಮನಕ್ಕೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಶಿವಮೊಗ್ಗ ಜಿಲ್ಲೆಯ, ಭದ್ರಾವತಿ ತಾಲ್ಲೂಕಿನ ರಸ್ತೆಯ ಸರಪಳಿ 7.40 ರಿಂದ 9.50 ಕಿ.ಮೀ.ಆಯ್ದ ಭಾಗಗಳಲ್ಲಿ (ಫಾರೆಸ್ಟ್ ಕಛೇರಿಯಿಂದ ಬೈಪಾಸ್ ರಸ್ತೆಯ (ಎನ್.ಹೆಚ್.–206) (ಬಿಳಕಿ ಕ್ರಾಸ್‌ವರೆಗೆ) ಸುಮಾರು 2.00 ಕಿ.ಮೀ.) ರಸ್ತೆಯನ್ನು ರಸ್ತೆಯ ಮಧ್ಯ ಭಾಗದಿಂದ ಎರಡೂ ಬದಿಗಳಲ್ಲಿ 12.50 ಮೀಟರ್ ಅಂತರದಲ್ಲಿ ಅಗಲೀಕರಣ ಮಾಡಲಾಗುತ್ತಿದ್ದು, ಹುತ್ತಾ ಕಾಲೋನಿಯಿಂದ ಬಿಳಕಿ ಸರ್ಕಲ್‌ವರೆಗೆ ಹಾದು ಹೋಗಿರುವ ಬಿ.ಹೆಚ್.ರಸ್ತೆಯ "ಬಲ ಬದಿಯಲ್ಲಿರುವ" 103 ಮತ್ತು "ಎಡ ಬದಿಯಲ್ಲಿರುವ 37 ಒಟ್ಟು 140 ವಿವಿಧ ಜಾತಿಯ ಸಾಲುಮರಗಳನ್ನು ತೆರವುಗೊಳಿಸ ಬೇಕಾಗಿರುವುದರಿಂದ, ದಿನಾಂಕ:03–04–2025 ರಂದು ಬೆಳಗ್ಗೆ 11–00ಗಂಟೆಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ಕಛೇರಿ, ಭದ್ರಾವತಿಯ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಚನ್ನಗಿರಿ ಉಪ ವಿಭಾಗದ ಕೊಠಡಿಯಲ್ಲಿ ಸಾರ್ವಜನಿಕ ಅಹವಾಲು ಸ್ವೀಕರಿಸಲು ಸಭೆಯನ್ನು ಕರೆಯಲಾಗಿದೆ. ಈ ಬಗ್ಗೆ ಸಾರ್ವಜನಿಕ ಆಕ್ಷೇಪಣೆಗಳಿದ್ದಲ್ಲಿ ಖುದ್ದಾಗಿ ಸಭೆಗೆ ಹಾಜರಾಗಿ ತಮ್ಮ ಅಭಿಪ್ರಾಯ ಸಲಹೆಗಳನ್ನು ನೀಡಲು ಕೋರಿದೆ ಅಥವಾ ಈ ಕಛೇರಿಯ ಮಿಂಚಂಚೆ ವಿಳಾಸ acfchannagiri@gmail.com ಗೆ ತಮ್ಮ ಅಭಿಪ್ರಾಯ ಸಲಹೆಗಳನ್ನು ನೀಡಲು ಕೋರಿದೆ.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಚನ್ನಗಿರಿ ಉಪವಿಭಾಗ, ಚನ್ನಗಿರಿ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/24–25/139/03/1917

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, (ಮನೀಚ ಪೂರ್ವ ವಲಯ),
23ನೇ ಮಹಡಿ, ಪಬ್ಲಿಕ್ ಯುಟಿಲಿಟಿ ಬಿಲ್ಡಿಂಗ್, ಎಂ.ಜಿ. ರಸ್ತೆ, ಬೆಂಗಳೂರು–560001

ಸಂಖ್ಯೆ: ಕಾಅ/ಮನೀಚ/ಪೂರ್ವ/ಡಬ್ಲ್ಯೂಬಿ/ತಿದ್ದುಪಡಿ–1/2024–25 ದಿನಾಂಕ : 20.03.2025

ತಿದ್ದುಪಡಿ–1
(ಕರ್ನಾಟಕ ಸರ್ಕಾರ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ದ್ವಿ ಲಕೋಟೆ ಪದ್ಧತಿ

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಉಲ್ಲೇಖ : ಟೆಂಡರ್ ಪ್ರಕಟಣೆ ನಂ. ಕಾಅ/ಮನೀಚ/ಪೂರ್ವ/ಟೆಂಡರ್/03/2024–25, ದಿನಾಂಕ: 10.03.2025.

ತಾಂತ್ರಿಕ ಕಾರಣಗಳಿಂದಾಗಿ, ಮೇಲಿನ ಟೆಂಡರ್ ಅಧಿಸೂಚನೆಯನ್ನು ಹೊಸ ಈವೆಂಟ್‌ಗಳ ಕ್ಯಾಲೆಂಡರ್ ಈ ಕೆಳಗಿನಂತೆ ತಿದ್ದಿ ಓದಿಕೊಳ್ಳಬೇಕಾಗಿ ಈ ಮೂಲಕ ಕೋರಲಾಗಿದೆ.

ಕ್ರ. ಸಂ.	ಬಿಡ್ ಪೂರ್ವ ಸಭೆಯ ಬದಲಾದ ಸ್ಥಳ
1.	ಪ್ರೀ–ಬಿಡ್ ಸಭೆ ನಡೆಯುವ ದಿನಾಂಕ, ಸಮಯ ಮತ್ತು ಸ್ಥಳ: **28.03.2025, 16.00 ಗಂಟೆಗೆ,** ಪ್ರಧಾನ ಅಭಿಯಂತರರು, ಮತ್ತು ನಿಯೋಜಿತ ಮುಖ್ಯ ಅಭಿಯಂತರರು, ಮಳೆ ನೀರು ಚರಂಡಿ, ಬಿಬಿಎಂಪಿ, ಕೊಠಡಿ ಸಂಖ್ಯೆ: 108, ಅನೆಕ್ಸ್–2 ಕಟ್ಟಡ, ಮೊದಲನೇ ಮಹಡಿ, ಬಿಬಿಎಂಪಿ ಮುಖ್ಯ ಕಛೇರಿ, ಎನ್.ಆರ್.ಸ್ಕ್ವೇರ್, ಬೆಂಗಳೂರು–560002.

ಟೆಂಡರ್‌ನ ಇತರ ನಿಯಮಗಳು ಮತ್ತು ಷರತ್ತುಗಳಲ್ಲಿ ಬದಲಾವಣೆಗಳಿರುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು, ಮಳೆ ನೀರಿನ ಚರಂಡಿ, ಪೂರ್ವ ವಲಯ.

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕನೀನಿನಿ. ಮಎಕಾನಿ,
ವಿಭಾಗ ನಂ.1 ರಾಮದುರ್ಗ

ಅವದಿ ವಿಸ್ತರಣೆ ಅಲ್ಪಾವಧಿ ಟೆಂಡರ್ ಪ್ರಕಟಣೆ ಕರೆ

ಉಲ್ಲೇಖ:1) ಕಾ.ಇಂ/ಕನೀನಿನಿ/ಮಎಕಾನಿ, ವಿ–1/ಪಿ.ಬಿ/ಟೆಂಡರ್/ಎಸ್.ಎಲ್.ಆಯ್.ಎಸ್/ಕೆ.ಆರ್.ಬಿ.ಸಿ ಪ್ರಕಟಣೆ ಸಂಖ್ಯೆ:1110 ದಿ:06/11/2024
2)ಕಾ.ಇಂ/ಕನೀನಿನಿ/ಮಎಕಾನಿ,ವಿ–1/ಡಿ.ಬಿ/ಟೆಂಡರ್/ಎಸ್.ಎಲ್.ಆಯ್.ಎಸ್/ಎರಡನೇಕರೆ/ಅ.ಪ್ರಕಟಣೆ ಸಂಖ್ಯೆ:2301, ದಿ :19/03/2025

ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ.ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿದವರಿಂದ ಮಲಪ್ರಭಾ ಎಡದಂಡೆ ಕಾಲುವೆ ವಿಭಾಗ ನಂ 1, ರಾಮದುರ್ಗ ಲೆಕ್ಕ ಶೀರ್ಷಿಕೆ 4701 ಅಡಿಯಲ್ಲಿ ಕೆ.ಡಬ್ಲ್ಯೂ–3 & 4ರ ಕೆ.ಪಿ.ಪಿ ಪೋರ್ಟಲ್‌ನಲ್ಲಿ ದ್ವಿಲಕೋಟೆ ಮೂಲಕ ಉಲ್ಲೇಖ (1) ರಲ್ಲಿ ಅಲ್ಪಾವಧಿ ಟೆಂಡರ ಕರೆಯಲಾಗಿತ್ತು, ಕೆಲವೊಂದು ಟೆಂಡರಗಳಲ್ಲಿ ಏಕ ಬಿಡ್‌ದಾರರಿರುವುದರಿಂದ 08 ಕಾಮಗಾರಿಗಳಿಗೆ ಮಾತ್ರ ಉಲ್ಲೇಖ ಪತ್ರ (2) ರಲ್ಲಿ ಎರಡನೇಯ ಕರೆಯ ಅಲ್ಪಾವಧಿ ಟೆಂಡರ ಅಧಿಸೂಚನೆಗೆ ಸಲ್ಲಿಸಲಾಗಿದೆ, ಈ ಕಾಮಗಾರಿಯ ಇ.ಎಂ.ಡಿ. ಮೊತ್ತ.ರೂ. 156429/– ರಿಂದ 282105/– ಇರುತ್ತದೆ. ಅರ್ಹ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇ ಎಂ ಡಿ ಕೆ.ಪಿ.ಪಿ. ಮೊತ್ತವು ಪೋರ್ಟಲ್ ನ್'ಲ್ಲಿ ಪ್ರಕಟಿಸಲಾಗಿರುತ್ತದೆ.

1:ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸುವ ದಿನಾಂಕ:20/03/2025 ರಿಂದ 28/03/2025 ರವರೆಗೆ 16.00 ಗಂಟೆಗೆ ಸಾಯಂಕಾಲ, 2:ಪ್ರೀ ಬಿಡ್ ಮೀಟಿಂಗ್ ದಿನಾಂಕ (ಕಾನಿಇಂ ಕನೀನಿನಿ, ಮಎಕಾನಿ ವಿಭಾಗ ನಂ.1 ರಾಮದುರ್ಗ):24/03/2025 12.00 ಗಂಟೆಗೆ ಮದ್ಯಾಹ್ನ, 3:ಟೆಂಡರ ಪ್ರಶ್ನೆಗಳು/ಸ್ಪಷ್ಟೀಕರಣಗಳಿಗೆ ದಿನಾಂಕ: 24/03/2025 ರವರೆಗೆ 16.00 ಗಂಟೆಗೆ ಸಾಯಂಕಾಲ, 4:ತಾಂತ್ರಿಕ ಬಿಡ್‌ತೆರೆಯುವ ದಿನಾಂಕ: 29/03/2025 ಮುಂಜಾನೆ 11:00 ಗಂಟೆಯ ನಂತರ, 5:ಆರ್ಥಿಕ ಬಿಡ್‌ತೆರೆಯುವ ದಿನಾಂಕ:31/03/2025 ತಾಂತ್ರಿಕ ಬಿಡ್ ಅನುಮೋದನೆ ದೊರೆತ ನಂತರ, 6:ಕಾಲಾವಧಿ:06 ರಿಂದ 09 ತಿಂಗಳು (ಮಳೆಗಾಲ ಸಹಿತ) ,7:ಇ.ಎಂ.ಡಿ ಮೊತ್ತ:156429/– ರಿಂದ 282105/–.

ಸೂಚನೆಗಳು ಹಾಗೂ ಹೆಚ್ಚಿನ ವಿವರಗಳಿಗಾಗಿ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಪೋನ್:08335– 242143

ಸಹಿ/–(ಎಸ್.ಎಮ್.ಬಾಲದಾರ)
ಕಾರ್ಯಪಾಲಕ ಇಂಜಿನಿಯರ್,
ಕನೀನಿನಿ., ಮಎಕಾನಿ, ವಿಭಾಗನಂ.1 ರಾಮದುರ್ಗ

DIPR/BGM/RO-NO-1975/KSMCA/2024-25

TAMILNADU NEWSPRINT AND PAPERS LIMITED

Kagithapuram - 639 136. Karur Dist. Tamil Nadu.
Ph.: 04324-277001 (10 Lines). Email : purchase.recycle@tnpl.co.in

NOTICE INVITING TENDER

Tender No.	Material Description	Due date
242513 007309	Procurement of 1000 MT ± 5% Office Waste Paper (White Records) in Bale form from Karnataka for TNPL Unit-I at Kagithapuram.	28.03.2025

Corrigendum if any will be issued in NIC Portal only. Detailed Terms & conditions, tender fee, EMD etc., are available in the tender document which can be downloaded from websites : www.tnpl.com / https://tntenders.gov.in/nicgep/app

DIPR/1116/Tender/2025 *TNPL - Maker of bagasse based eco-friendly Paper*

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ–ಆಡಳಿತ),

ಸಕಾಲ ಮಿಷನ್,
1ನೇ ಗೇಟ್, 1ನೇ ಮಹಡಿ, ಕೊಠಡಿ ಸಂಖ್ಯೆ: 124.
ಬಹುಮಹಡಿ ಕಟ್ಟಡ, ಬೆಂಗಳೂರು–560 001.
Website: www.sakala.kar.nic.in ದೂರವಾಣಿ: 080–2203 2857, 080–2203 2899 e-mail: aosakala@karnataka.gov.in

ಸಂಖ್ಯೆ: DPAREGOV/2024-25/SE0029/CALL-2 ದಿನಾಂಕ: 20.03.2025

ಅಲ್ಪಾವಧಿ ಟೆಂಡರ್ ಅಧಿಸೂಚನೆ

"ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011 ಮತ್ತು (ತಿದ್ದುಪಡಿ) ಅಧಿನಿಯಮ, 2014" ಅನ್ನು ಅನುಷ್ಠಾನಗೊಳಿಸಲು ಸಕಾಲ ಮಿಷನ್‌ಗೆ ಮಾನವ ಸಂಪನ್ಮೂಲ ಸೇವೆಗಳನ್ನು (01-SITC, 01-ASITC, 01-SMC, 01-ASMC, Asst. ITC-1, Asst. MC-1, 32-DITC, DEO-5, Drivers-02, Group-D-03) ಒಂದು ವರ್ಷದ ಅವಧಿಗೆ ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ವೆಬ್‌ಸೈಟ್:https://kppp.karnataka.gov.in/www.kppp.karnataka.gov.in ಮುಖಾಂತರ ಅರ್ಹ ಟೆಂಡರ್‌ದಾರರಿಂದ (1) ತಾಂತ್ರಿಕ ಬಿಡ್ (2) ಆರ್ಥಿಕ ಬಿಡ್ ಎಂದು 2 ಭಾಗಗಳಾಗಿ ಅಲ್ಪಾವಧಿ ಟೆಂಡರನ್ನು ಆಹ್ವಾನಿಸಲಾಗಿದೆ.

ಟೆಂಡರ್ ಪ್ರಕ್ರಿಯೆ ಕೆಳಕಂಡಂತೆ ನಿಗದಿಪಡಿಸಲಾಗಿದೆ: 1) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ: **20.03.2025, 17.00 ಗಂಟೆಗೆ.** 2) ಪೂರ್ವ ಬಿಡ್ ಸಭೆ ದಿನಾಂಕ: **25.03.2025, 15.00 ಗಂಟೆಗೆ.** 3) ಟೆಂಡರ್ ಸ್ವೀಕೃತಿಯ ಕೊನೆಯ ದಿನಾಂಕ ಮತ್ತು ವೇಳೆ: **03.04.2025, 17.30 ಗಂಟೆಗೆ.** 4) ತಾಂತ್ರಿಕ ಲಕೋಟೆ ತೆರೆಯಲು ದಿನಾಂಕ ಮತ್ತು ವೇಳೆ: **05.04.2025, 11.30 ಗಂಟೆಗೆ.** 5) ಹಣಕಾಸಿನ ಲಕೋಟೆ ತೆರೆಯಲು ದಿನಾಂಕ ಮತ್ತು ವೇಳೆ: **09.04.2025, 11.30 ಗಂಟೆಗೆ.**

ಪೂರ್ವ ಬಿಡ್ ಸಭೆಯನ್ನು ಸಕಾಲ ಮಿಷನ್ ಕಚೇರಿಯಲ್ಲಿ ನಡೆಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: www.kppp.karnataka.gov.in/ https://kppp.karnataka.gov.in

ಸಹಿ/–
ಆಡಳಿತಾಧಿಕಾರಿ(ಪ್ರ) ಹಾಗೂ ಟೆಂಡರ್ ಆಹ್ವಾನ ಪ್ರಾಧಿಕಾರ
ಸಕಾಲ ಮಿಷನ್, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಇ–ಆಡಳಿತ), ಕರ್ನಾಟಕ ಸರ್ಕಾರ.

ವಾಸಾಸಂಇ/ವಾ.ಪ್ರ/5823/ಎಂಎಎ/24–25

ಕರ್ನಾಟಕ ಸರ್ಕಾರ,
ಕಾರ್ಯಪಾಲಕ ಅಭಿಯಂತರರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ.
ಸಂಖ್ಯೆ:ಕಾಅ:ಪಂರಾಇಂವಿ:ಮಂಡ್ಯ:ಟೆಂಪ್ರ:ನರೇಗಾ:ಸಾಮಾಗ್ರಿ:2024–25
ದಿ:17.03.2025

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:54/2024–25

ಕರ್ನಾಟಕ ರಾಜ್ಯದ ರಾಜ್ಯಪಾಲರುರವರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಮಂಡ್ಯರವರಿಂದ, ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಅನುಮೋದನೆಯಾಗಿರುವ ನಾಗಮಂಗಲ ತಾ: ಸಮಗ್ರ ಕೆರೆ ಅಭಿವೃದ್ಧಿ ಪ್ಯಾಕೇಜ್ ಕಾಮಗಾರಿ ಮತ್ತು ಸಿ.ಸಿ.ರಸ್ತೆ ನಿರ್ಮಾಣ ಕಾಮಗಾರಿಗಳಿಗೆ ಅಗತ್ಯವಿರುವ ನಿರ್ಮಾಣ ಸಾಮಾಗ್ರಿಗಳನ್ನು ಸರಬರಾಜು ಮಾಡಲು ಟೆಂಡರಿಗಿಟ್ಟ ಮೊತ್ತ ರೂ. 38.70ಲಕ್ಷ & ರೂ. 5.60ಲಕ್ಷ ಮೊತ್ತದ 2 ಕಾಮಗಾರಿಗಳಿಗೆ ನೊಂದಾಯಿತ ಸಾಮಾಗ್ರಿ ಸರಬರಾಜುದಾರರು/ಅಧಿಕೃತ ಮಾರಾಟಗಾರರಿಂದ "ದ್ವಿಲಕೋಟೆ ಪದ್ಧತಿ" ಅನುಸಾರ ಐಟಂವಾರು ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ. ಟೆಂಡರ್ ದಾಖಲಾತಿಗಳನ್ನು https://kppp.karnataka.gov.in, KPP Portal, ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್‌ಗಳನ್ನು ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ:25.03.2025ರ ಸಂಜೆ 4.00 ಗಂಟೆವರೆಗೆ, ಹೆಚ್ಚಿನ ವಿವರಗಳಿಗಾಗಿ ಕೆ.ಪಿ.ಪಿ.ಪಿ. ಪೋರ್ಟಲ್ ಅಥವಾ ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. /ವಿಭಾಗ, ಮಂಡ್ಯರವರ ಕಛೇರಿಯಲ್ಲಿ ಸಂಪರ್ಕಿಸಿ ಪಡೆಯಬಹುದು.

ಸಹಿ/–ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ಮಂಡ್ಯ.

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/776/2024–25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಯೋಜನೆ ದಕ್ಷಿಣ,
ದಕ್ಷಿಣ ವಲಯ ಕಛೇರಿ ಸಂಕೀರ್ಣ, 9ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ,
ಜಯನಗರ 2ನೇ ಬ್ಲಾಕ್, ಬೆಂಗಳೂರು – 560011.

ಸಂಖ್ಯೆ: ಕಾಅಯೋ(ದ)/ಕೆಪಿಪಿಪಿ/ಇ–ಪೋರ್ಟಲ್/19/2024–25 ದಿನಾಂಕ: 20–03–2025

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ದ್ವಿ–ಲಕೋಟೆ ಪದ್ಧತಿ) (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಯೋಜನೆ ದಕ್ಷಿಣ, ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗಾಗಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	ವಾರ್ಡ್ ಸಂಖ್ಯೆ 153 ರ ಎಸ್‌ಡಿಸಿಟಿಆರ್‌ಸಿ ನಲ್ಲಿರುವ ಧರ್ಮಶಾಲ ಕಟ್ಟಡ ಹಾಗೂ ರಾಜೀವ್ ಗಾಂಧಿ ಎದೆ ರೋಗಗಳ ಸಂಸ್ಥೆಗೆ ಹೆಚ್ಚುವರಿ ಕೆಲಸಗಳ ಕಾಮಗಾರಿ. **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 350.00, ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ): 5.25 (ರೂ. 1.00 ಲಕ್ಷ ಇ–ಪೋರ್ಟಲ್ ಮೂಲಕ ಮತ್ತು ರೂ. 4.25 ಲಕ್ಷ ಬ್ಯಾಂಕ್ ಗ್ಯಾರಂಟಿ ಮೂಲಕ ಸಲ್ಲಿಸುವುದು)**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆ ದಿನಾಂಕ: **24–03–2025 ರಂದು ಸಂಜೆ 4.00 ಗಂಟೆಗೆ ಕಾರ್ಯಪಾಲಕ ಅಭಿಯಂತರ ಕಛೇರಿ, (ಯೋಜನೆ ದಕ್ಷಿಣ) ಇಲ್ಲಿ ನಡೆಯುವುದು.** 3) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **28–03–2025 ರಂದು ಸಂಜೆ 4.00 ಗಂಟೆವರೆಗೆ.** 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **29–03–2025 ರಂದು ಸಂಜೆ 4.30 ಗಂಟೆಗೆ.** 5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **01–04–2025 ರಂದು ಸಂಜೆ 4.00 ಗಂಟೆಗೆ ಅಥವಾ ತಾಂತ್ರಿಕ ಬಿಡ್ ಅನುಮೋದನೆ ನಂತರ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಯೋಜನೆ ದಕ್ಷಿಣ, ಬಿಬಿಎಂಪಿ.

ಕರ್ನಾಟಕ ಅರಣ್ಯ ಇಲಾಖೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ರಾಮನಗರ ಉಪ ವಿಭಾಗ, ರಾಮನಗರ.
ಸಂಖ್ಯೆ : ಸ.ಅ.ಸಂ./ರಾ.ಉ.ವಿ./ರೈಲ್ವೆ ಬ್ಯಾರಿಕೇಡ್/ಸಿ.ಆರ್.–569/2024–25
ದಿನಾಂಕ : 18–03–2025

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ದ್ವಿ-ಲಕೋಟೆ)

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, **2024–25 ನೇ ಸಾಲಿನಲ್ಲಿ ವಿಭಾಗದ ಕನಕಪುರ ವಲಯದಲ್ಲಿ ಉಪಯೋಗಿತ ರೈಲ್ವೆ ಹಳಿ ಮೂಲಕ ಆನೆ ತಡೆ ಬೇಲಿ ನಿರ್ಮಿಸುತ್ತಿದ್ದು, ರೈಲ್ವೆ ಹಳಿಗಳನ್ನು ಖರೀದಿಸಿ, ಸಾಗಣೆ ಮಾಡಲು ಹಾಗೂ ರೈಲ್ವೆ ಹಳಿ ಬೇಲಿ ನಿರ್ಮಿಸಲು** ಅರ್ಹ ಪಿ.ಡಬ್ಲ್ಯೂ.ಡಿ. ಕ್ಲಾಸ್–1, ಕ್ಲಾಸ್–2 ಮತ್ತು ಕ್ಲಾಸ್–3 ಗುತ್ತಿಗೆದಾರರು ಮಾತ್ರ ಕರ್ನಾಟಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಪಾರದರ್ಶಕ ನಿಯಮಗಳನುಸಾರ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಇ–ಟೆಂಡರ್‌ನ್ನು ಕರೆಯಲಾಗಿದೆ.

ಇ–ಟೆಂಡರ್‌ನಲ್ಲಿ ಮೊದಲನೇ ಬಾರಿಗೆ ದಿನಾಂಕ : **25–03–2025** ರ ಅಪರಾಹ್ನ **4.00** ಗಂಟೆಯವರೆಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಇ–ಟೆಂಡರ್ ಮೂಲಕ ಭಾಗವಹಿಸಬಹುದಾಗಿದೆ. ಇ–ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **26–03–2025** ರ ಸಂಜೆ **4.30** ಗಂಟೆಗೆ ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ : **28–03–2025** ರ ಸಂಜೆ **5.00** ಗಂಟೆಗೆ ತೆರೆಯಲಾಗುವುದು. ಒಂದು ವೇಳೆ ದಿನಾಂಕ : **25–03–2025** ರಂದು ಇ–ಟೆಂಡರ್‌ನಲ್ಲಿ ಮೊದಲನೇ ಬಾರಿ ಯಾರು ಟೆಂಡರ್‌ದಾರರು ಭಾಗವಹಿಸದೇ ಇದ್ದಲ್ಲಿ ಎರಡನೇ ಬಾರಿ ಟೆಂಡರ್‌ಗಳನ್ನು ಇ–ಪೋರ್ಟಲ್‌ನಲ್ಲಿ ಮರು ಸಲ್ಲಿಸಲು ಕೊನೆಯ ದಿನಾಂಕ : **15–04–2025** ರ ಅಪರಾಹ್ನ **4.00** ಗಂಟೆಯವರೆಗೆ ಭಾಗವಹಿಸಬಹುದಾಗಿದೆ. (ಇದಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಯಾವುದೇ ಟೆಂಡರ್ ಪ್ರಕಟಣೆಯನ್ನು ಹೊರಡಿಸುವುದಿಲ್ಲ). ಸದರಿ ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **16–04–2025** ರ ಸಂಜೆ **4.30** ಗಂಟೆಗೆ ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ : **19–04–2025** ರ ಸಂಜೆ **5.00** ಗಂಟೆಗೆ ಟೆಂಡರ್‌ಗಳನ್ನು ತೆರೆಯಲಾಗುವುದು. ಒಂದು ವೇಳೆ ದಿನಾಂಕ : **15–04–2025** ರಂದು ಇ–ಟೆಂಡರ್‌ನಲ್ಲಿ (ಎರಡನೇ ಬಾರಿ ಯಾರು ಟೆಂಡರ್‌ದಾರರು ಭಾಗವಹಿಸದೇ ಇದ್ದಲ್ಲಿ ಟೆಂಡರ್ ಸಲ್ಲಿಸಲು) ಮೂರನೇ ಬಾರಿ ಟೆಂಡರ್‌ಗಳನ್ನು ಇ–ಪೋರ್ಟಲ್‌ನಲ್ಲಿ ಮರು ಸಲ್ಲಿಸಲು ಕೊನೆಯ ದಿನಾಂಕ : **29–04–2025** ರಂದು ಅಪರಾಹ್ನ **4.00** ಗಂಟೆಯವರೆಗೆ ಭಾಗವಹಿಸಬಹುದಾಗಿದೆ. (ಇದಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಯಾವುದೇ ಟೆಂಡರ್ ಪ್ರಕಟಣೆಯನ್ನು ಹೊರಡಿಸುವುದಿಲ್ಲ). ಸದರಿ ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **02–05–2025** ರ ಸಂಜೆ **4.30** ಗಂಟೆಗೆ ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ : **05–05–2025** ರ ಸಂಜೆ **5.00** ಗಂಟೆಗೆ ಟೆಂಡರ್‌ಗಳನ್ನು ತೆರೆಯಲಾಗುವುದು.

ಆಸಕ್ತಿಯುಳ್ಳವರು ಟೆಂಡರ್‌ನ್ನ ಷರತ್ತುಗಳನ್ವಯ ಟೆಂಡರ್‌ನ್ನು ಹಾಕಿ ಪಡೆದುಕೊಳ್ಳಬಹುದಾಗಿದೆ. ಇತರೇ ಮಾಹಿತಿ ಬೇಕಾದಲ್ಲಿ ಕರ್ನಾಟಕ ಸರ್ಕಾರದ ಅಂತರ್ಜಾಲದ ವೆಬ್‌ಸೈಟ್ ವಿಳಾಸ : **https://kppp.karnataka.gov.in** ರಲ್ಲಿ ಪಡೆಯಬಹುದಾಗಿದೆ.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ರಾಮನಗರ ಉಪ ವಿಭಾಗ, ರಾಮನಗರ.

ಡಿಐಪಿಆರ್/ರಾಮನಗರ/661/ಮಣಿಪಾಲ್/2024–25



ಪರಿಷತ್‌ನಲ್ಲಿ ಸದಸ್ಯ ಎಸ್.ಎಲ್ ಭೋಜೇಗೌಡ ಜೊತೆ ಸಚಿವ ಜಮೀರ್ ಅಹ್ಮದ್ ಚರ್ಚೆ ನಡೆಸಿದರು ಪ್ರಜಾವಾಣಿ ಚಿತ್ರ

ರನ್ಯಾ ಕಂಪನಿಗಳ ಬೆನ್ನುಬಿದ್ದ ತನಿಖಾ ಸಂಸ್ಥೆಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟಿ ಹರ್ಷವರ್ಧಿನಿ ರನ್ಯಾ ರಾವ್ ಅವರು ನಡೆಸಿರುವ ವಹಿವಾಟುಗಳ ಬಗ್ಗೆ ರೆವಿನ್ಯೂ ಗುಪ್ತಚರ ನಿರ್ದೇಶನಾಲಯ (ಡಿಆರ್‌ಐ) ಮತ್ತು ಜಾರಿ ನಿರ್ದೇಶನಾಲಯ (ಇ.ಡಿ) ಮಾಹಿತಿ ಸಂಗ್ರಹಿಸುತ್ತಿದೆ.

ರನ್ಯಾ ನಿರ್ದೇಶಕಿಯಾಗಿರುವ ಮೂರು ಕಂಪನಿಗಳನ್ನು ತನಿಖಾ ತಂಡ ಪತ್ತೆ ಮಾಡಿದೆ. ರನ್ಯಾ ರಾವ್ ಫೋಟೊಗ್ರಫಿ ಪ್ರೈವೇಟ್ ಲಿಮಿಟೆಡ್, ಐರಸ್ ಗ್ರೀನ್ಸ್ ಪ್ರೈವೇಟ್ ಲಿಮಿಟೆಡ್ ಮತ್ತು ಕ್ಷಿರೋಡಾ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ದಾಖಲೆಗಳ ಪರಿಶೀಲನೆ ನಡೆಸುತ್ತಿದೆ.

ರನ್ಯಾ ಅವರ ತಾಯಿ ಪಿ.ಎಚ್. ರೋಹಿಣಿ ಅವರು ರನ್ಯಾ ರಾವ್ ಫೋಟೊಗ್ರಫಿ ಪ್ರೈವೇಟ್ ಲಿಮಿಟೆಡ್, ಐರಸ್ ಗ್ರೀನ್ಸ್ ಪ್ರೈವೇಟ್ ಲಿಮಿಟೆಡ್ ಹಾಗೂ ಸಹೋದರ ಕೆ. ರಷಬ್ ಅವರು ಕ್ಷಿರೋಡಾ ಕಂಪನಿಗೆ ಸಹ ನಿರ್ದೇಶಕರಾಗಿದ್ದಾರೆ.

ದಾಖಲೆ ಪರಿಶೀಲನೆ ವೇಳೆ ಈ ಮೂರು ಕಂಪನಿಗಳು ವಿಕ್ಟೋರಿಯಾ ಲೇಔಟ್ ವಿಳಾಸದಲ್ಲಿ ನೋಂದಣಿ ಆಗಿರುವುದು ಗೊತ್ತಾಗಿದೆ. ಈ ಕಂಪನಿಗಳಿಗೆ ತಲಾ ₹10 ಲಕ್ಷ ಬಂಡವಾಳ ವಿನಿಯೋಗಿಸಲಾಗಿದೆ. ಈ ಮೂರು ನಕಲಿ ಕಂಪನಿಗಳಾಗಿರಬಹುದು ಎಂಬ ಶಂಕೆ ತನಿಖಾ ತಂಡಕ್ಕೆ ವ್ಯಕ್ತವಾಗಿದ್ದು, ಕಂಪನಿಗಳ ವರದಿಗಳು, ಬ್ಯಾಂಕ್ ದಾಖಲೆಗಳನ್ನು ಪರಿಶೀಲನೆ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಸ್ಮಾರ್ಟ್ ಮೀಟರ್ ಖರೀದಿಯಲ್ಲಿ ಅಕ್ರಮ • ಅಶ್ವತ್ಥನಾರಾಯಣ ವಾಗ್ದಾಳಿ

‘₹7000 ಕೋಟಿ ಹಗರಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಇಆರ್‌ಸಿ ಮತ್ತು ಕೆಟಿಪಿಪಿ ಕಾಯ್ದೆಯ ನಿಯಮಾವಳಿ ಉಲ್ಲಂಘಿಸಿ ವಿದ್ಯುತ್ ಸ್ಮಾರ್ಟ್ ಮೀಟರ್‌ಗಳ ಖರೀದಿ ಟೆಂಡರ್‌ನಲ್ಲಿ ಸುಮಾರು ₹7,000 ಕೋಟಿಯಷ್ಟು ಹಗರಣ ನಡೆದಿದ್ದು, ಗುತ್ತಿಗೆ ರದ್ದು ಮಾಡಿ ತನಿಖೆಗೆ ಸದನ ಸಮಿತಿ ರಚಿಸಬೇಕು ಎಂದು ಬಿಜೆಪಿಯ ಡಾ.ಸಿ.ಎನ್. ಅಶ್ವತ್ಥನಾರಾಯಣ ಆಗ್ರಹಿಸಿದರು.

ವಿಧಾನಸಭೆಯಲ್ಲಿ ಗುರುವಾರ ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು ಈ ಸಂಬಂಧ ಅವರು ಗಂಭೀರ ಆರೋಪಗಳು ಮಾಡಿದರು. ಇದಕ್ಕೆ ಸಂಬಂಧಿಸಿದಂತೆ ಅವರು ಕೆಲವು ದಾಖಲೆಗಳನ್ನೂ ಪ್ರದರ್ಶಿಸಿ ಸಭಾಧ್ಯಕ್ಷರ ಮೂಲಕ ಇಂಧನ ಸಚಿವ ಕೆ.ಜೆ.ಜಾರ್ಜ್ ಅವರಿಗೆ ಕಳುಹಿಸಿದರು.

ಈ ಆರೋಪ ನಿರಾಕರಿಸಿದ ಸಚಿವ ಜಾರ್ಜ್, ‘ನೀವು ಸುಳ್ಳು ಹೇಳುತ್ತಿದ್ದೀರಿ, ಸುಳ್ಳು ಹೇಳುವುದೇ ನಿಮ್ಮ ಕೆಲಸ. ನಾಳೆ ಮುಖ್ಯಮಂತ್ರಿಯವರು ಉತ್ತರ ನೀಡುವುದಕ್ಕೂ ಮೊದಲು ನಿಮ್ಮ ಆರೋಪಗಳಿಗೆ ಉತ್ತರ ಕೊಡುತ್ತೇನೆ. ಈಗ ನೀವು ಮಾತನಾಡಿದ್ದು ನಾಳೆಯ ಪತ್ರಿಕೆಗಳಲ್ಲಿ ದೊಡ್ಡದಾಗಿ ಬರುತ್ತದೆ’ ಎಂದು ಹರಿಹಾಯ್ದರು.



ಪರಿಷತ್‌ನಲ್ಲಿ ಗೃಹ ಸಚಿವ ಜಿ.ಪರಮೇಶ್ವರ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿದರು ಪ್ರಜಾವಾಣಿ ಚಿತ್ರ

ಸ್ಮಾರ್ಟ್ ಮೀಟರ್ ಅಳವಡಿಕೆ (2025-26) ರ ಗುರಿ

ಬೆಸ್ಕಾಂ	4 ಲಕ್ಷ
ಮೆಸ್ಕಾಂ	70 ಸಾವಿರ
ಹೆಸ್ಕಾಂ	1.46 ಲಕ್ಷ
ಜೆಸ್ಕಾಂ	1.17 ಲಕ್ಷ
ಸೆಸ್ಕಾಂ	60 ಸಾವಿರ
ಟೆಂಡರ್ ಮೊತ್ತ ₹6,000 ಕೋಟಿ	

ಸ್ಮಾರ್ಟ್ ಮೀಟರ್ ದರದಲ್ಲಿ ಭಾರಿ ಮೋಸ

* ಸರ್ಕಾರ ಅನುಮೋದನೆ ಮಾಡಿದ ಮೊತ್ತ	
ಸಿಂಗಲ್ ಫೇಸ್ ಸ್ಮಾರ್ಟ್ ಮೀಟರ್	₹2,034
ತ್ರೀಫೇಸ್ ಸ್ಮಾರ್ಟ್ ಮೀಟರ್	₹2,712
ತ್ರೀಫೇಸ್ ಎಲ್‌ಟಿ–ಸಿಟಿ	₹3,390
ಬೆಸ್ಕಾಂನಲ್ಲಿ ಗ್ರಾಹಕರಿಂದ ವಸೂಲಿ ಮಾಡುತ್ತಿರುವ ಮೊತ್ತ	
ಸಿಂಗಲ್ ಫೇಸ್ ಸ್ಮಾರ್ಟ್ ಮೀಟರ್	₹9,000
ತ್ರೀಫೇಸ್ ಸ್ಮಾರ್ಟ್ ಮೀಟರ್	₹14,160
ತ್ರೀಫೇಸ್ ಎಲ್‌ಟಿ–ಸಿಟಿ	₹14,160

ಆರೋಪಗಳೇನು?

- 39 ಲಕ್ಷ ಸ್ಮಾರ್ಟ್ ಮೀಟರ್ ಅಳವಡಿಸಲು ಮುಂದಾಗಿದ್ದಾರೆ. ವರ್ಷಕ್ಕೆ 9 ಲಕ್ಷ ಸ್ಮಾರ್ಟ್ ಮೀಟರ್ ಅಳವಡಿಕೆ ಗುರಿ ಇದೆ. ಮೀಟರ್ ಅಳವಡಿಕೆ ಐಚ್ಛಿಕ, ಹೊಸ ಗ್ರಾಹಕರಿಗೆ ಕಡ್ಡಾಯ ಎಂದು ಕೆಇಆರ್‌ಸಿ, ಕೇಂದ್ರ ಇಂಧನ ಸಚಿವಾಲಯ ಹೇಳಿವೆ. ಆದರೆ ರಾಜ್ಯದಲ್ಲಿ ಎಲ್ಲರಿಗೂ ಕಡ್ಡಾಯವಾಗಿ ಅಳವಡಿಸಲು ಹೊರಟಿದ್ದಾರೆ.
- ಫೀಡರ್, ಟ್ರಾನ್ಸ್ ಫಾರ್ಮರ್, ಬೌಂಡರಿ ಮೀಟರ್‌ಗಳಿಗೆ ಸ್ಮಾರ್ಟ್‌ಮೀಟರ್ ಅಳವಡಿಸಬೇಕು. ಎಸ್ಕಾಂ ತನ್ನ ಸ್ವಂತ ಖರ್ಚಿನಲ್ಲಿ ಎಲ್ಲ ಮೀಟರ್‌ಗಳನ್ನು ಸ್ಮಾರ್ಟ್ ಮೀಟರ್‌ಗೆ ಬದಲಾಯಿಸಬೇಕು. ಈ ಕೆಲಸ ಇನ್ನೂ ಆಗಿಲ್ಲ.
- ಗುತ್ತಿಗೆ ಪಡೆದ ಸಂಸ್ಥೆಗೆ ಒಂದು ವರ್ಷ ವಹಿವಾಟು ನಡೆಸಿದೆ. ವಿದ್ಯುತ್ ಕಂಬಗಳನ್ನು ಪೂರೈಸಿದ ಅರ್ಹತೆ. ಈ ಸಂಸ್ಥೆಗೆ ಸ್ಮಾರ್ಟ್‌ಮೀಟರ್ ಸಾಫ್ಟ್‌ವೇರ್ ಪೂರೈಸುವ ಕಂಪನಿಯನ್ನು ಉತ್ತರ ಪ್ರದೇಶ ಸರ್ಕಾರ ಕಪ್ಪುಪಟ್ಟಿಗೆ ಸೇರಿಸಿತ್ತು.

ನೀವು ಖರೀದಿಸಿದ ಸ್ಮಾರ್ಟ್ ಮೀಟರ್ ಮಾರುಕಟ್ಟೆಯಲ್ಲಿ ₹1500ಕ್ಕೆ ಸಿಗುತ್ತದೆ. ನಮ್ಮ ದಾಖಲೆ ಸತ್ಯ ಅಂತಾದರೆ ರಾಜಿನಾಮೆ ಕೊಡುತ್ತೀರಾ?
ಎಸ್.ಆರ್.ವಿಶ್ವನಾಥ್, ಬಿಜೆಪಿ

ಸಾಫ್ಟ್‌ವೇರ್ ಪೂರೈಕೆ ಮಾಡುವ ಕಂಪನಿ ಕಪ್ಪು ಪಟ್ಟಿಗೆ ಸೇರಿದ್ದರೆ, ತನಿಖೆ ನಡೆಸಿ ರದ್ದು ಮಾಡಿಸುತ್ತೇನೆ. ಅದಕ್ಕೆ ಸೂಕ್ತ ದಾಖಲೆ ಕೊಡಿ
ಕೆ.ಜೆ.ಜಾರ್ಜ್, ಇಂಧನ ಸಚಿವ

ಸುದ್ದಿ 2 ನಿಮಿಷ

ಕೇಂದ್ರಕ್ಕೆ ಒತ್ತಾಯಿಸುವ ನಿರ್ಣಯ: ವಿಧಾನ ಪರಿಷತ್‌ನಲ್ಲಿ ಚರ್ಚೆಗೆ ಪಟ್ಟು

ಬೆಂಗಳೂರು: ವಕ್ಫ್ ಕಾಯ್ದೆಗೆ ತಿದ್ದುಪಡಿ ತರುವ ಉದ್ದೇಶದ ಮಸೂದೆ ಹಿಂಪಡೆಯಬೇಕು, ತನ್ನ ಬಜೆಟ್‌ನಲ್ಲೂ ಜನಸಂಖ್ಯೆಗೆ ಅನುಗುಣವಾಗಿ ಪರಿಶಿಷ್ಟರ ಕಲ್ಯಾಣ ಯೋಜನೆಗಳಿಗೆ ಅನುದಾನ ಮೀಸಲಿರಿಸಬೇಕು ಮತ್ತು ಯುಜಿಸಿ ನಿಯಮಾವಳಿಗಳಿಗೆ ತರಲು ಹೊರಟಿರುವ ತಿದ್ದುಪಡಿಯನ್ನು ಕೈಬಿಡಬೇಕು ಎಂಬ ರಾಜ್ಯ ಸರ್ಕಾರದ ಮೂರು ನಿರ್ಣಯಗಳ ಮೇಲೆ ಚರ್ಚೆ ನಡೆಯಬೇಕು ಎಂದು ವಿಧಾನ ಪರಿಷತ್ತಿನಲ್ಲಿ ವಿರೋಧ ಪಕ್ಷಗಳ ಸದಸ್ಯರು ಪಟ್ಟು ಹಿಡಿದರು.

ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಅವರು ಕಲಾಪದ ವೇಳೆ ಯುಜಿಸಿ ಕರಡು ತಿದ್ದುಪಡಿ ನಿಯಮಾವಳಿಯ ವಿರುದ್ಧ ನಿರ್ಣಯ ಮಂಡಿಸಿದರು. ‘ಈ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಗಿದೆ’ ಎಂದು ನಿರ್ಣಯವನ್ನು ಓದಿದರು.

ತಕ್ಷಣವೇ ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಬಿಜೆಪಿಯ ಪ್ರತಾಪ್ ಸಿಂಹ್ ನಾಯಕ್, ‘ಇದರ ಬಗ್ಗೆ ಚರ್ಚೆಯೇ ಆಗಿಲ್ಲ. ನಮ್ಮ ಒಪ್ಪಿಗೆಯೇ ಇಲ್ಲ. ಹೀಗಿದ್ದಾಗ ಸರ್ವಾನುಮತ ಎಂದು ಹೇಗೆ ಹೇಳುತ್ತೀರಿ’ ಎಂದು ಪ್ರಶ್ನಿಸಿದರು. ಅವರಿಗೆ ಬೆಂಬಲ ಸೂಚಿಸಿದ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ‘ಸ್ವಾಮಿ ಈ ನಿರ್ಣಯಗಳಿಗೆ ನಮ್ಮ ವಿರೋಧವಿದೆ. ಇದರ ಬಗ್ಗೆ ಚರ್ಚೆ ನಡೆಯಬೇಕು. ಸರ್ವಾನುಮತ ಎಂಬುದನ್ನು ಕೈಬಿಡಬೇಕು’ ಎಂದು ಒತ್ತಾಯಿಸಿದರು.

ಬಿಜೆಪಿಯ ಕೆ.ಎಸ್.ನವೀನ್, ‘ಕೇಂದ್ರ ಸರ್ಕಾರ ಮಾಡಿದ್ದಕ್ಕೆಲ್ಲವನ್ನೂ ವಿರೋಧಿಸಬೇಕು ಎಂಬ ಉದ್ದೇಶ ಬಿಟ್ಟು, ಈ ನಿರ್ಣಯಗಳಲ್ಲಿ ಏನೂ ಇಲ್ಲ’ ಎಂದರು.

ಆಗ ಮಧ್ಯಪ್ರವೇಶಿಸಿದ ಕಾನೂನು ಸಚಿವ ಎಚ್.ಕೆ.ಪಾಟೀಲ, ‘ಈಗ ಮೂರು ನಿರ್ಣಯಗಳನ್ನೂ ಮಂಡಿಸುತ್ತೇವೆ. ನಾಳೆ ಅದನ್ನು ಚರ್ಚೆಗೆ ಎತ್ತಿಕೊಳ್ಳೋಣ. ವಿರೋಧ ಪಕ್ಷಗಳ ಸಲಹೆಗಳ ಪ್ರಕಾರ ನಿರ್ಣಯಗಳನ್ನು ಪರಿಷ್ಕರಿಸೋಣ’ ಎಂದರು.



ಸಭಾಪತಿ ಪೀಠದಲ್ಲಿದ್ದ ಭಾರತಿ ಶೆಟ್ಟಿ ಅವರು, ‘ಚರ್ಚೆಗೆ ಎತ್ತಿಕೊಳ್ಳೋಣ ಎಂದಿದ್ದಾರೆ’ ಎಂದು ಉಳಿದ ಎರಡು ನಿರ್ಣಯಗಳ ಮಂಡನೆಗೆ ಅವಕಾಶ ನೀಡಿದರು.

ಕಾಂಗ್ರೆಸ್ ಸೇರಲು ಆಹ್ವಾನ!

ಬೆಂಗಳೂರು: ಬಿಜೆಪಿಯ ಪಿ.ಎಚ್. ಪೂಜಾರ್, ಎಚ್. ವಿಶ್ವನಾಥ್ ಅವರನ್ನು ಕಾಂಗ್ರೆಸ್‌ಗೆ ಬರುವಂತೆ ಸದನದಲ್ಲೇ ಆಹ್ವಾನ ನೀಡಿದ ಪ್ರಸಂಗ ವಿಧಾನಪರಿಷತ್‌ನಲ್ಲಿ ಗುರುವಾರ ನಡೆಯಿತು.

ವರಾಹಿ ಯೋಜನೆ ಕುರಿತು ಮಂಜುನಾಥ ಭಂಡಾರಿ ಅವರ ಪ್ರಶ್ನೆಗೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉತ್ತರಿಸುವಾಗ ಪೂಜಾರ್ ಅವರು ಆಡಳಿತ ಪಕ್ಷದ ಆಸನದತ್ತ ತೆರಳಿದರು. ಆಗ ಶಿವಕುಮಾರ್ ‘ಕಾಂಗ್ರೆಸ್‌ಗೆ ಬನ್ನಿ, ಮುಂದಿನ ಸಲ ಟಿಕೆಟ್ ಕೊಡುತ್ತೇವೆ’ ಎಂದು ಆಹ್ವಾನಿಸಿದರು.

ಮೈಸೂರು ಪೊಲೀಸ್ ಸಭಾಭವನ ಕುರಿತು ಎಚ್. ವಿಶ್ವನಾಥ್ ಅವರ ಪ್ರಶ್ನೆಗೆ ಉತ್ತರಿಸಿದ ಗೃಹ ಸಚಿವ ಜಿ. ಪರಮೇಶ್ವರ, ‘ಹಿಂದೆ ಇಬ್ಬರೂ ಸಂಪುಟ ದರ್ಜೆ ಸಚಿವರಾಗಿದ್ದೆವು. ಈಗ ಕಾರಣಾಂತರಗಳಿಂದ ಅಲ್ಲಿ ಕುಳಿತಿದ್ದಾರೆ’ ಎಂದರು. ಆಗ ಕಾಂಗ್ರೆಸ್‌ನ ಐವನ್ ಡಿಸೋಜ ಸೇರಿದಂತೆ ಹಲವರು ‘ದೇಹ ಮಾತ್ರ ಅಲ್ಲಿದೆ. ಮನಸ್ಸು ಇಲ್ಲೇ ಇದೆ. ಪ್ರೀತಿಯಿಂದ ಕರೆದರೆ ಮತ್ತೆ ಇಲ್ಲಿಗೆ ಬರುತ್ತಾರೆ’ ಎಂದು ಆಹ್ವಾನ ನೀಡಿದರು.

ಕೊನೆಗೂ ಹಣಮಂತ ನಿರಾಣಿ ನಾಮನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಾಗಲಕೋಟೆಯ ತೋಟಗಾರಿಕಾ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಗೆ ವಿಧಾನಪರಿಷತ್‌ನ ಬಿಜೆಪಿ ಸದಸ್ಯ ಹಣಮಂತ ನಿರಾಣಿ ಅವರನ್ನು ನಾಮನಿರ್ದೇಶನ ಮಾಡಿ ತೋಟಗಾರಿಕಾ ಇಲಾಖೆ ಗುರುವಾರ ಆದೇಶ ಹೊರಡಿಸಿದೆ.



ಹಣಮಂತ ನಿರಾಣಿ

ವಿಧಾನಪರಿಷತ್‌ನಿಂದ ಎಂಟು ತಿಂಗಳ ಹಿಂದೆಯೇ ಪ್ರಸ್ತಾವ ಸಲ್ಲಿಸಲಾಗಿತ್ತು. ಆದರೆ, ಆದೇಶ ಹೊರಡಿಸಿರಲಿಲ್ಲ. ಈ ಪ್ರಕರಣವನ್ನು ಹಕ್ಕುಚ್ಯುತಿಗೆ ನೀಡುವುದಾಗಿ ಸಭಾಪತಿ ಬಸವರಾಜ ಹೊರಟ್ಟಿ ಕಲಾಪದ ವೇಳೆ ಎಚ್ಚರಿಸಿದರು. ನಂತರ ತೋಟಗಾರಿಕಾ ಇಲಾಖೆ ಕಾರ್ಯದರ್ಶಿಯನ್ನು ಕರೆಸಿಕೊಂಡು ತಕ್ಷಣ ಆದೇಶ ನೀಡುವಂತೆ ತಾಕೀತು ಮಾಡಿದ್ದರು.

‘ಎಚ್‌ಡಿಕೆ ನೆರವಿನಲ್ಲಿ ವಿಐಎಸ್‌ಎಲ್ ಪುನಶ್ಚೇತನಗೊಳಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯ ಪುನಶ್ಚೇತನಕ್ಕೆ ಕೇಂದ್ರ ಸರ್ಕಾರದಿಂದ ₹10,000 ಕೋಟಿ ನೆರವು ಒದಗಿಸಲು ಕೇಂದ್ರ ಭಾರಿ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಸಿದ್ದರಿದ್ದಾರೆ. ಸರ್ಕಾರ ರಾಜಕೀಯ ಸಂಘರ್ಷ ಬದಿಗಿಟ್ಟು ಈ ಅವಕಾಶ ಬಳಸಿಕೊಳ್ಳಬೇಕು’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸಿ.ಬಿ. ಸುರೇಶ್ ಬಾಬು ಸಲಹೆ ನೀಡಿದರು.

ವಿಧಾನಸಭೆಯಲ್ಲಿ ಗುರುವಾರ ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ‘ಸರ್ಕಾರದ ಪ್ರಮುಖರು ಸಂಕುಚಿತ ಮನೋಭಾವ ಬದಿಗಿಟ್ಟು ಕುಮಾರಸ್ವಾಮಿ ಅವರೊಂದಿಗೆ ಚರ್ಚಿಸಬೇಕು. ಎಚ್‌ಎಂಟಿ ಸೇರಿದಂತೆ ರಾಜ್ಯದಲ್ಲಿರುವ ಕೇಂದ್ರ ಸರ್ಕಾರದ ಸ್ವಾಮ್ಯದ ಸಾರ್ವಜನಿಕ ಉದ್ದಿಮೆಗಳ ಪುನಶ್ಚೇತನಕ್ಕೆ ಕ್ರಮ ಕೈಗೊಳ್ಳಬೇಕು’ ಎಂದರು.

ಬೆಂಗಳೂರು ಸಮೀಪದಲ್ಲಿ ಮತ್ತೊಂದು ವಿಮಾನ ನಿಲ್ದಾಣ ನಿರ್ಮಿಸುವ ಪ್ರಸ್ತಾವ ಸರ್ಕಾರದ ಮುಂದಿದೆ. ಅಂತಹ ದುಬಾರಿ ಯೋಜನೆ ಕೈಬಿಟ್ಟು, ಎಚ್‌ಎಎಲ್ ವಿಮಾನ ನಿಲ್ದಾಣವನ್ನೇ ಅಭಿವೃದ್ಧಿಪಡಿಸಬೇಕು. ತೆಂಗು ಬೆಳೆಗಾರರಿಗೆ ನೆರವಾಗಲು ಎಳನೀರನ್ನು ಟೆಟ್ರಾ ಪ್ಯಾಕೆಟ್‌ಗಳಲ್ಲಿ ಮಾರಾಟ ಮಾಡಲು ವ್ಯವಸ್ಥೆ ಮಾಡಬೇಕು ಎಂದು ಅವರು ಸಲಹೆ ನೀಡಿದರು.

ರೈತರ ಕೃಷಿ ಸಾಲ ಮನ್ನಾ ಬಾಬ್ತು ₹ 300 ಕೋಟಿ ಇನ್ನೂ ಬಿಡುಗಡೆ ಆಗಿಲ್ಲ. ಈ ಬಾರಿ ಬಜೆಟ್‌ನಲ್ಲೇ ಅನುದಾನ ಒದಗಿಸಬೇಕು
ಸಿ.ಎನ್. ಬಾಲಕೃಷ್ಣ, ಜೆಡಿಎಸ್ ಶಾಸಕ

ಕಲ್ಯಾಣ ಕರ್ನಾಟಕ ಭಾಗದಲ್ಲಿ ನೀರಿಲ್ಲದೆ ಬಾವಿಗಳು ಬತ್ತುತ್ತಿವೆ. ಬೆಂಗಳೂರಿನ ತಾರಾ ಹೋಟೆಲ್‌ಗಳು, ಬಂಗಲೆಗಳಲ್ಲಿ ಈಜು ಕೊಳಗಳು ನೀರಿನಿಂದ ತುಂಬಿವೆ
ಶರಣು ಸಲಗರ
ಬಿಜೆಪಿ ಶಾಸಕ

ರಾಜ್ಯದಲ್ಲಿ ಆಯಾ ಜಾತಿ, ಧರ್ಮದ ಜನಸಂಖ್ಯೆಗೆ ಅನುಗುಣವಾಗಿ ಬಜೆಟ್‌ನಲ್ಲಿ ಅನುದಾನ ಮೀಸಲಿಡಬೇಕು
ಪಠಾಣ್ ಯಾಸೀರ್ ಅಹ್ಮದ್ ಖಾನ್, ಕಾಂಗ್ರೆಸ್ ಶಾಸಕ

ಮೀನುಗಾರಿಕಾ ದೋಣಿಗಳಿಗೆ ಸೀಮೆಎಣ್ಣೆ ಸಹಾಯಧನ ಇತ್ತು. ಅದೇ ಮಾದರಿಯಲ್ಲಿ ಪೆಟ್ರೋಲ್ ಖರೀದಿಗೂ ಸಹಾಯಧನ ನೀಡಬೇಕು
ಡಿ. ವೇದವ್ಯಾಸ ಕಾಮತ್, ಬಿಜೆಪಿ ಶಾಸಕ

ಲಾಡ್– ಶರಣು ವಾಕ್ಸಮರ

ಗೋ ಸಂರಕ್ಷಣೆ ಕುರಿತು ಬಿಜೆಪಿಯ ಶರಣು ಸಲಗರ ಮಾತನಾಡುತ್ತಿದ್ದಾಗ ಮಧ್ಯ ಪ್ರವೇಶಿಸಿದ ಕಾರ್ಮಿಕ ಸಚಿವ ಸಂತೋಷ್ ಲಾಡ್, ‘ದೇಶವು ಗೋಮಾಂಸ ರಫ್ತಿನಲ್ಲಿ ಎರಡನೇ ಸ್ಥಾನದಲ್ಲಿದೆ. ನಿಮಗೆ ಧೈರ್ಯವಿದ್ದರೆ ಗೋಮಾಂಸ ರಫ್ತು ನಿಷೇಧಕ್ಕೆ ಕೇಂದ್ರ ಸರ್ಕಾರವನ್ನು ಆಗ್ರಹಿಸಿ’ ಎಂದರು. ಈ ವಿಚಾರದಲ್ಲಿ ಇಬ್ಬರ ಮಧ್ಯೆ ಕೆಲಕಾಲ ಜೋರಾಗಿ ವಾಕ್ಸಮರ ನಡೆಯಿತು.

‘ಶಿಕ್ಷೆಯ ಪ್ರಮಾಣ ಹೆಚ್ಚಬೇಕು’

ರಾಜ್ಯದಲ್ಲಿ 2013ರಿಂದ 2023ರವರೆಗೆ ದಾಖಲಾದ 1,322 ಅತ್ಯಾಚಾರ ಪ್ರಕರಣಗಳಲ್ಲಿ ಕೇವಲ 10 ಪ್ರಕರಣಗಳಲ್ಲಿ ಅಪರಾಧ ಸಾಬೀತಾಗಿ, ಅಪರಾಧಿಗಳಿಗೆ ಶಿಕ್ಷೆಯಾಗಿದೆ. ಶಿಕ್ಷೆ ಪ್ರಮಾಣ ಶೇಕಡ 0.76ರಷ್ಟಿದೆ. ಹೀಗೆ ಆದರೆ ಹೆಣ್ಣು ಮಕ್ಕಳು ಜೀವನ ನಡೆಸುವುದು ಹೇಗೆ ಎಂದು ಬಿಜೆಪಿಯ ಶಶಿಕಲಾ ಜೊಲ್ಲೆ ಪ್ರಶ್ನಿಸಿದರು.

ಅಂಗವಿಕಲ ಮತ್ತು ಬುದ್ಧಿಮಾಂದ್ಯ ಮಕ್ಕಳ ಅಭಿವೃದ್ಧಿಗೆ ಒತ್ತು ನೀಡಬೇಕು. ವಿಶೇಷ ಒಲಂಪಿಕ್ಸ್‌ನಲ್ಲಿ ಪಾಲ್ಗೊಂಡು, ಪದಕ ಗಳಿಸಿದವರಿಗೆ ಆರ್ಥಿಕ ಪ್ರೋತ್ಸಾಹ ನೀಡಬೇಕು ಎಂದು ಆಗ್ರಹಿಸಿದರು.

ನಿಯಮ ಸಡಿಲಿಕೆಗೆ ಆಗ್ರಹ

‘ಅರಣ್ಯ ಹಕ್ಕು ಕಾಯ್ದೆಯಡಿ ಅರಣ್ಯ ವಾಸಿಗಳಿಗೆ ಹಕ್ಕು ನೀಡಲು ಮೂರು ತಲೆಮಾರಿನ ವಸತಿ ದಾಖಲೆ ಕೇಳುತ್ತಿದ್ದಾರೆ. ಅದನ್ನು ಬದಲಿಸಿ, ಒಂದು ತಲೆಮಾರಿನ ದಾಖಲೆಗೆ ಸೀಮಿತಗೊಳಿಸಬೇಕು. ಈ ಸಂಬಂಧ ನಿಯಮ ತಿದ್ದುಪಡಿಗೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬೇಕು’ ಎಂದು ಕಾಂಗ್ರೆಸ್‌ನ ಭೀಮಣ್ಣ ನಾಯ್ಕ ಆಗ್ರಹಿಸಿದರು.

‘ಕಸ್ತೂರಿ ರಂಗನ್ ವರದಿ ಜಾರಿಯಾಗುತ್ತದೆ ಎಂಬ ಆತಂಕ ಹತ್ತು ಜಿಲ್ಲೆಗಳಲ್ಲಿದೆ. ವರದಿ ತಿರಸ್ಕರಿಸುವಂತೆಯೂ ಕೇಂದ್ರದ ಮೇಲೆ ಒತ್ತಡ ಹೇರಬೇಕು’ ಎಂದರು.

ಸಚಿವ ರಾಜಣ್ಣಗೆ ‘ಮಧುಬಲೆ’

ಒಂದನೇ ಪುಟದಿಂದ...

ಜನಪ್ರತಿನಿಧಿಗಳನ್ನು ಬ್ಲ್ಯಾಕ್‌ಮೇಲ್ ಮಾಡಲಾಗುತ್ತಿದೆ. ಇದು ಕೆಟ್ಟ ಸಂಸ್ಕೃತಿ’ ಎಂದರು.

‘ರಾಜಕೀಯ ಪಕ್ಷದಲ್ಲಿ ಇರುವವರು ತಮ್ಮ ಹಾಗೂ ತಮ್ಮ ಕುಟುಂಬದ ಭವಿಷ್ಯಕ್ಕಾಗಿಯೋ, ಮುಖ್ಯಮಂತ್ರಿ ಆಗಬೇಕೆಂಬ ಕಾರಣಕ್ಕೊ ಹೀಗೆಲ್ಲ ಮಾಡುವುದು ಸರಿಯಲ್ಲ’ ಎಂದು ಹೇಳಿದರು.

ವಿ.ವಿ ನೇಮಕಾತಿಗೆ ಹಣ: ವಾಕ್ಸಮರ

ಬೆಂಗಳೂರು: ‘ವಿ.ವಿಗಳಲ್ಲಿ ನೇಮಕಾತಿಗಳಿಗೆ ಹಣ ಕೊಡಬೇಕಾಗಿದೆ’ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಹಿಂದೆ ಮಾಡಿದ್ದ ಆರೋಪ ವಿಧಾನಸಭೆಯಲ್ಲಿ ಪ್ರಸ್ತಾಪಗೊಂಡು, ಬಿಜೆಪಿಯ ಡಾ.ಸಿ.ಎನ್. ಅಶ್ವತ್ಥನಾರಾಯಣ ಮತ್ತು ಸಚಿವ ಪ್ರಿಯಾಂಕ್ ಖರ್ಗೆ ನಡುವೆ ವಾಕ್ಸಮರ ನಡೆಯಿತು.

ಮಾತು ವೈಯಕ್ತಿಕ ಟೀಕೆಗೆ ತಿರುಗಿತು. ‘ಹಿಂದಿನ ಸರ್ಕಾರ ಶೇ 40 ಕಮಿಷನ್ ಸರ್ಕಾರ’ ಎಂಬ ಪ್ರಿಯಾಂಕ್ ಆರೋಪಕ್ಕೆ, ‘ನಿಮ್ಮದು ಶೇ 100 ಕಮಿಷನ್ ಸರ್ಕಾರ’ ಎಂದು ಅಶ್ವತ್ಥನಾರಾಯಣ ತಿರುಗೇಟು ನೀಡಿದರು. ಮಧ್ಯಪ್ರವೇಶಿಸಿದ ಸಚಿವ ಎಂ.ಸಿ.ಸುಧಾಕರ್, ‘ನಿಮ್ಮ ಅವಧಿಯಲ್ಲಿ ಶಿಕ್ಷಣದ ಖಾಸಗೀಕರಣಕ್ಕೆ ಹೋಗಿದ್ದೀರಿ’ ಎಂದು ಟೀಕಿಸಿದರು. ಅದಕ್ಕೆ ಅಶ್ವತ್ಥನಾರಾಯಣ, ‘ನಿಮ್ಮ ಮಗನನ್ನು ಸರ್ಕಾರಿ ಕಾಲೇಜಿನಲ್ಲಿ ಓದಿಸುತ್ತಿದ್ದೀರಾ? ನೈತಿಕತೆ ಇಲ್ಲವೇ’ ಎಂದು ಪ್ರಶ್ನಿಸಿದರು.

ಅಶ್ವತ್ಥನಾರಾಯಣ ಅವರು ರಾತ್ರಿ ಬಜೆಟ್ ಮೇಲೆ ಮಾತನಾಡುವಾಗ ಸಚಿವ ಪ್ರಿಯಾಂಕ್ ಅಡ್ಡಿಪಡಿಸಿದರೆಂದು, ‘ಪದೇ ಪದೇ ನಿಲ್ಲುತ್ತೀರಲ್ಲ ಪೈಲ್ಸ್ ಆಗಿದೆಯೆ’ ಎಂದು ಹೇಳಿದ್ದು, ವಾಕ್ಸಮರಕ್ಕೆ ಕಾರಣವಾಯಿತು.

ಅಶ್ವತ್ಥನಾರಾಯಣ ಬಳಸಿದ ಪದದ ಬಗ್ಗೆ ಸಚಿವ ದಿನೇಶ ಮತ್ತು ಇತರರು ಆಕ್ಷೇಪಿಸಿ, ಕ್ಷಮೆಗೆ ಆಗ್ರಹಿಸಿದರು. ಮೊದಲು ‘ಪದ ಹಿಂಪಡೆದಿದ್ದೇನೆ’ ಎಂದ ಅಶ್ವತ್ಥನಾರಾಯಣ, ನಂತರ ‘ಪ್ರಿಯಾಂಕ್ ಅವರಲ್ಲಿ ಕ್ಷಮೆ ಕೇಳುತ್ತೇನೆ’ ಎಂದರು.

‘ನಿಮ್ಮ ಕುಟುಂಬದ ಭ್ರಷ್ಟಾಚಾರ ಇಡೀ ದೇಶಕ್ಕೆ ಗೊತ್ತಿದೆ. ಬರೀ ಅಪ್ಪ–ಮಕ್ಕಳ ಪಕ್ಷವಾಗಿದೆ’
ಅಶ್ವತ್ಥನಾರಾಯಣ, ಬಿಜೆಪಿ ಶಾಸಕ

ಬಿಜೆಪಿಯವರಿಗೆ ನನ್ನ ಬಗ್ಗೆ ಅಸಹನೆ ಏಕೆ? ನನ್ನನ್ನು ಕಾನ್ವೆಂಟ್ ದಲಿತ ಎನ್ನುತ್ತಾರೆ. ಸರ್ಕಾರಿ ದಲಿತ ಎನ್ನುತ್ತಾರೆ. ನೀವೆಲ್ಲ ಮನುಸ್ಮೃತಿಯವರು
ಪ್ರಿಯಾಂಕ್ ಖರ್ಗೆ ಸಚಿವ

ಉಪಸಭಾಪತಿ ವಿರುದ್ಧ ಅವಿಶ್ವಾಸಕ್ಕೆ ತಿರಸ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪಸಭಾಪತಿ ಎಂ.ಕೆ. ಪ್ರಾಣೇಶ್ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲು ಅವಕಾಶ ನೀಡಬೇಕು ಎಂದು ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್ ಸಭಾಪತಿ ಬಸವರಾಜ ಹೊರಟ್ಟಿ ಅವರನ್ನು ಕೋರಿದರು. ಅದನ್ನು ಸಂಜೆಯ ವೇಳೆಗೆ ಪರಿಶೀಲಿಸಿದ ಸಭಾಪತಿಯು, ಪ್ರಸ್ತಾಪವನ್ನು ತಿರಸ್ಕರಿಸಿದರು.

ವಿಧಾನಪರಿಷತ್‌ನಲ್ಲಿ ಗುರುವಾರ ಬೆಳಿಗ್ಗೆ ವಿಷಯ ಪ್ರಸ್ತಾಪಿಸಿದ ಹರಿಪ್ರಸಾದ್, ಸಭಾಪತಿ ಸ್ಥಾನ ಸಾಂವಿಧಾನಿಕ ಹುದ್ದೆ. ಅಂತಹ ಸ್ಥಾನದಲ್ಲಿ ಕುಳಿತು ಬಿಜೆಪಿ ಕಾರ್ಯಕರ್ತರಂತೆ ಮಾತನಾಡಿದ್ದಾರೆ ಎಂದು ದೂರಿದರು.

‘ಮಾರ್ಚ್ 17ರಂದು ನಡೆದ ಕಲಾಪದ ವೇಳೆ ಪ್ರಾಣೇಶ್ ಅವರು ಸಭಾಪತಿ ಪೀಠದಲ್ಲಿದ್ದರು. ಸರ್ಕಾರಿ ಗುತ್ತಿಗೆ ಕಾಮಗಾರಿಗಳಲ್ಲಿ ಮುಸ್ಲಿಮರಿಗೆ ಶೇ 4ರಷ್ಟು ಮೀಸಲಾತಿ ನೀಡುವ ವಿಚಾರ ಕುರಿತು ಚರ್ಚೆ ನಡೆಯುತ್ತಿತ್ತು. ಬಿಜೆಪಿ–ಜೆಡಿಎಸ್ ಸದಸ್ಯರು ವಿರೋಧ ವ್ಯಕ್ತಪಡಿಸಿದರು. ‘ಆಗ ಮಾತನಾಡಿದ ನಾನು, ಪರಿಶಿಷ್ಟರು, ಹಿಂದುಳಿದವರಿಗೆ ಗುತ್ತಿಗೆ ಕಾಮಗಾರಿಗಳಲ್ಲಿ ಸಂವಿಧಾನ ಬದ್ಧವಾಗಿ ಮೀಸಲಾತಿ ನೀಡಿದಂತೆ, ಅಲ್ಪಸಂಖ್ಯಾತರಿಗೂ ನೀಡಲಾಗುತ್ತಿದೆ’ ಎಂದೆ. ಅದಕ್ಕೆ ಪ್ರತಿಕ್ರಿಯಿಸಿದ ಸಭಾಪತಿ ಸ್ಥಾನದಲ್ಲಿದ್ದ ಪ್ರಾಣೇಶ್ ಅವರು, ‘ಮುಸ್ಲಿಮರಿಗೆ ಮೀಸಲಾತಿ ನೀಡುವುದು ಸಂವಿಧಾನ ವಿರೋಧಿ ನಡೆ’ ಎಂದು ಹೇಳಿದ್ದಾಗಿ ಹರಿಪ್ರಸಾದ್ ಹೇಳಿದರು.

ಅಲ್ಪ ಸಂಖ್ಯಾತರಿಗೆ ಕಾನೂನು ಬದ್ಧವಾಗಿಯೇ ಸರ್ಕಾರ ಮೀಸಲಾತಿ ನೀಡುತ್ತಿದೆ. ಅದು ಸಂವಿಧಾನಕ್ಕೆ ವಿರೋಧವಾಗಿದ್ದರೆ ಕಾನೂನು ಇಲಾಖೆಯೇ ತಡೆಯುತ್ತಿತ್ತು. ಸಂವಿಧಾನಬದ್ಧ ಪೀಠ ಅಲಂಕರಿಸಿದವರಿಗೆ ಸಂವಿಧಾನ, ಕಾನೂನು ಬಗ್ಗೆ ತಿಳಿವಳಿಕೆ ಇರಬೇಕು. ಆ ಸ್ಥಾನದಲ್ಲಿ ಕುಳಿತು ಸರ್ಕಾರದ ತೀರ್ಮಾನವನ್ನು ಟೀಕಿಸಬಾರದು. ಹಾಗಾಗಿ, ಅವರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲಾಗುವುದು ಎಂದರು.


‘ಈ ಕುರಿತು ಪ್ರತ್ಯೇಕವಾಗಿ ಚರ್ಚಿಸೋಣ’ ಎಂದು ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು. ಸಂಜೆ ಈ ವಿಷಯದ ಬಗ್ಗೆ ಪ್ರಸ್ತಾಪಿಸಿದ ಸಭಾಪತಿ ಅವರು, ‘ಹರಿಪ್ರಸಾದ್ ಅವರ ಕ್ರಿಯಾಲೋಪದ ಅಂಶಗಳನ್ನು ಪರಿಶೀಲಿಸಲಾಗಿದೆ. ಆದರೆ ಅದು ಪರಿಗಣನೆಗೆ ಸೂಕ್ತವಲ್ಲ’ ಎಂದು ತಿರಸ್ಕರಿಸಿದರು.

ಹರಿಪ್ರಸಾದ್ ಅವರು ‘ಕಳ್ಳವೋಟಿನಿಂದ ಗೆದ್ದುಬಂದಿಲ್ಲ’ ಎಂದಿದ್ದಾರೆ. ಇದರಿಂದ ಸದನದ ಘನತೆಗೆ ಧಕ್ಕೆಯಾಗಿದೆ. ಅದನ್ನು ಕಡತದಿಂದ ಬಿಡಬೇಕು
ಪ್ರತಾಪ್ ಸಿಂಹ ನಾಯಕ್, ಬಿಜೆಪಿ ಸದಸ್ಯ

ಈ ಪೀಠದಲ್ಲಿ ಕುಳಿತ ನಂತರ ಎಲ್ಲರೂ ಪಕ್ಷಾತೀತವಾಗಿ ಇರುತ್ತಾರೆ. ಆದರೆ ಕೂರುವವರು ದೇವರಲ್ಲ, ಅವರಿಂದಲೂ ತಪ್ಪಾಗಬಹುದು
ಬಸವರಾಜ ಎಸ್.ಹೊರಟ್ಟಿ, ಸಭಾಪತಿ

‘ಚ್ಯುತಿ ಬರುವಂತೆ ನಡೆದುಕೊಂಡಿಲ್ಲ’

ನಾನು ಸಭಾಪತಿಯ ಪೀಠದಲ್ಲಿ ಕುಳಿತಾಗ ಪಕ್ಷಾತೀತವಾಗಿಯೇ ನಡೆದುಕೊಂಡಿದ್ದೇನೆ. ನಿಯಮಗಳನ್ನು ಓದಿಕೊಂಡಿದ್ದೇನೆ. ಸಭಾಪತಿ ಸಲಹೆ ಪಡೆದುಕೊಂಡೇ ನಿರ್ಧಾರ ತೆಗೆದುಕೊಂಡಿದ್ದೇನೆ. ಆ ಪೀಠದ ಗೌರವಕ್ಕೆ ಚ್ಯುತಿ ಬರುವಂತೆ ಎಂದೂ ನಡೆದುಕೊಂಡಿಲ್ಲ. ‘ಕಳ್ಳವೋಟಿನಿಂದ ಗೆದ್ದು ಬಂದಿಲ್ಲ’ ಎಂಬ ಮಾತು ಸದನದ ಗೌರವಕ್ಕೆ ಧಕ್ಕೆ ತರುವಂತದ್ದು. ಯಾರು ಹೇಗೆ ಗೆದ್ದುಬಂದಿದ್ದಾರೆ ಎಂಬುದನ್ನು ಪರಿಶೀಲಿಸಲು ಚುನಾವಣಾ ಆಯೋಗ, ಸುಪ್ರೀಂ ಕೋರ್ಟ್ ಇದೆ. ಅಲ್ಲಿ ಸಾಬೀತಾದರೆ ಮಾತ್ರ ಅಂತಹ ಮಾತು ಸಮಂಜಸ.



ಎಂ.ಕೆ.ಪ್ರಾಣೇಶ್, ವಿಧಾನ ಪರಿಷತ್ತಿನ ಉಪಸಭಾಪತಿ

‘ನನಗೊಬ್ಬನಿಗೇ ಅಲ್ಲ, 48 ಮಂದಿಗೆ ಹನಿಟ್ರ್ಯಾಪ್’

ಒಂದನೇ ಪುಟದಿಂದ...

‘ಅನೇಕರು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದಾರೆ. ನಾನು ಗೃಹ ಸಚಿವರಿಗೆ ಲಿಖಿತ ದೂರು ಕೊಡುತ್ತೇನೆ. ಇದನ್ನು ತನಿಖೆ ಮಾಡಬೇಕು. ಇದರ ನಿರ್ಮಾಪಕರು, ನಿರ್ದೇಶಕರು ಯಾರು ಎಲ್ಲ ಹೊರಗಡೆ ಬರಲಿ. ಹನಿಟ್ರ್ಯಾಪ್ ಪ್ರಕರಣ ಬಹಿರಂಗ ಆಗಲಿ. ಇದೊಂದು ಪಿಡುಗು’ ಎಂದೂ ಹೇಳಿದರು.

‘ಮೊದಲ ವಿಕೆಟ್ ಬೀಳಿಸಲು ಪ್ರಯತ್ನ’

‘ಸಚಿವರೊಬ್ಬರ ಮೇಲೆ ಎರಡು ಬಾರಿ ಹನಿಟ್ರ್ಯಾಪ್‌ಗೆ ಯತ್ನ ನಡೆದಿದೆ. ಮೊದಲ ವಿಕೆಟ್ ಬೀಳಿಸಲು ಪ್ರಯತ್ನ ಆಗಿದೆ. ಇಂತಹ ಯತ್ನಕ್ಕೆ ಕಡಿವಾಣ ಹಾಕಬೇಕು’ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ವಿಧಾನಸೌಧದಲ್ಲಿ ಮಾತನಾಡಿದ ಅವರು, ‘ಸಚಿವರ ಕಚೇರಿಯಲ್ಲಿ, ಮನೆಯಲ್ಲಿ, ಕ್ಷೇತ್ರದಲ್ಲಿ ಹನಿಟ್ರ್ಯಾಪ್‌ಗೆ ಪ್ರಯತ್ನ ನಡೆದಿದೆ. ಆ ಪ್ರಯತ್ನ ವಿಫಲವಾಗಿದೆ. ಈ ಬಗ್ಗೆ ಉನ್ನತಮಟ್ಟದ ತನಿಖೆ ಆಗಬೇಕು’ ಎಂದು ಆಗ್ರಹಿಸಿದರು.

‘ರಾಜ್ಯದಲ್ಲಿ ಮೊದಲ ಬಾರಿಗೆ ಇಂತಹ ಕೃತ್ಯ ನಡೆದಿಲ್ಲ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಸಚಿವರೊಬ್ಬರ ವಿರುದ್ಧ ಇಂತಹ ಯತ್ನ ನಡೆದಿತ್ತು. ಕಳೆದ 20 ವರ್ಷಗಳಿಂದ ಈ ಹನಿ ಟ್ರ್ಯಾಪ್ ದಂಧೆ ನಡೆಯುತ್ತಿದೆ. ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಎಲ್ಲ ಪಕ್ಷಗಳೂ ಇದಕ್ಕೆ ಬಲಿ ಆಗಿವೆ’ ಎಂದರು.

ವಿಧಾನಸಭೆಯಲ್ಲಿ ಬಿಸಿಬಿಸಿ ಚರ್ಚೆ

3ಂಗಳಿಂದ ಗುಸು ಗುಸು: ಸದನದಲ್ಲೇ ಸ್ಫೋಟ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಟ್ಟಾ ಬೆಂಬಲಿಗರ ಬಣದಲ್ಲಿ ಗುರುತಿಸಿಕೊಂಡಿರುವ ಸಚಿವ ಕೆ.ಎನ್. ರಾಜಣ್ಣ ಅವರನ್ನು ಪಕ್ಷದ ಪ್ರತಿಸ್ಪರ್ಧಿ ಗುಂಪಿನ ಪ್ರಮುಖರು ‘ಹನಿ ಟ್ರ್ಯಾಪ್’ಗೆ ಕೆಡವಲು ಯತ್ನಿಸಿದ್ದಾರೆ ಎಂಬ ಸುದ್ದಿ ತಿಂಗಳಿಂದ ಗುಸು ಗುಸು ಚರ್ಚೆಯಲ್ಲಿತ್ತು. ಗುರುವಾರ ವಿಧಾನ ಸಭೆಯೊಳಗೇ ಸ್ಫೋಟಿಸಿತು.

ರಾಜಣ್ಣ ಅವರನ್ನು ಹನಿ ಟ್ರ್ಯಾಪ್‌ನಲ್ಲಿ ಸಿಲುಕಿಸಲು ಯತ್ನಿಸಿದ ತಂಡ ಅವರ ಬೆಂಬಲಿಗರಿಗೆ ಸಿಕ್ಕಿಬಿದ್ದಿದೆ ಎಂಬ ಮಾಹಿತಿ ಫೆಬ್ರುವರಿ 3ನೇ ವಾರ ಹೊರಬಿದ್ದಿತ್ತು. ಖಚಿತವಾಗದೇ ಚರ್ಚೆಯಲ್ಲೇ ಅಂತ್ಯವಾಗಿತ್ತು.

ಮಾಹಿತಿ ಪ್ರಕಾರ, ‘ಸಿದ್ದರಾಮಯ್ಯ ಬೆಂಬಲಕ್ಕೆ ನಿಂತಿದ್ದ ಸಚಿವರನ್ನು ‘ಹನಿ ಟ್ರ್ಯಾಪ್’ಗೆ ಕೆಡವಿ ಸಿಲುಕಿಸಲು ‘ಕೈ’ ಪಾಳಯದ ಎದುರಾಳಿ ಗುಂಪಿನ ‘ಪ್ರಭಾವಿ’ ಒಬ್ಬರು ತಂತ್ರ ರೂಪಿಸಿದ್ದರು. ಅದೇ ಪಕ್ಷದ ಪ್ರಭಾವಿ ಯುವ ಮುಖಂಡನ ನೇತೃತ್ವದಲ್ಲೇ ‘ಹನಿಟ್ರ್ಯಾಪ್’ ತಂಡವನ್ನು ಸಜ್ಜುಗೊಳಿಸಿ ಕಾರ್ಯಾಚರಣೆಗೆ ಇಳಿಸಲಾಗಿತ್ತು’.

‘ಯುವ ಮುಖಂಡನ ನೇತೃತ್ವದಲ್ಲೇ ಯುವತಿಯರನ್ನು ಸಚಿವರ ಕಚೇರಿಗೂ ಕಳುಹಿಸಲಾಗಿತ್ತು. ಎರಡು ಬಾರಿ ಸಚಿವರನ್ನು ಭೇಟಿಮಾಡಲಾಗಿತ್ತು. ಭೇಟಿಯನ್ನು ರಹಸ್ಯವಾಗಿ ಸೆರೆಹಿಡಿದು, ಸಂಗ್ರಹಿಸಲು ‘ಹನಿ ಟ್ರ್ಯಾಪ್’ ಕಾರ್ಯಾಚರಣೆಯ ಅನುಭವಿಗಳ ಕೆಲವರ ತಂಡವನ್ನು ನಿಯೋಜಿಸಲಾಗಿತ್ತು’ ಎಂಬ ವಿವರ ಸದ್ದು ಮಾಡಿತ್ತು.

ತಮ್ಮನ್ನು ‘ಹನಿ ಟ್ರ್ಯಾಪ್’ಗೆ ಕೆಡವಲು ಯತ್ನಿಸುತ್ತಿರುವ ಸುಳಿವು ಸಚಿವರಿಗೆ ಫೆಬ್ರುವರಿ ಮೊದಲ ವಾರದ ಹೊತ್ತಿನಲ್ಲೇ ಲಭಿಸಿತ್ತು. ಮೂರನೇ ಭೇಟಿ ವೇಳೆ ಸಚಿವರ ಬೆಂಬಲಿಗರು ಕೆಲವರನ್ನು ಹಿಡಿದು ‘ವಿಚಾರಣೆ’ ನಡೆಸಿದ್ದರು. ‘ಪ್ರಭಾವಿ’ಗಳ ಆಪ್ತ ವಲಯದ ‘ಯುವ ಮುಖಂಡ’ನೇ ಕಾರ್ಯಾಚರಣೆಗೆ ಇಳಿಸಿರುವುದು ಎಂಬ ಮಾಹಿತಿ ಸಿಕ್ಕಿತ್ತು. ಕಾರ್ಯಪ್ರವೃತ್ತರಾದ ಸಚಿವರ ಬೆಂಬಲಿಗರ ಪಡೆ ‘ಯುವ ಮುಖಂಡ’ನನ್ನೂ ಎಳೆತಂದು ‘ವಿಚಾರಣೆ’ ನಡೆಸಿ ತಪ್ಪೊಪ್ಪಿಗೆ ಹೇಳಿಕೆ ಚಿತ್ರೀಕರಿಸಿಕೊಂಡಿತ್ತು ಎಂದು ಘಟನಾವಳಿಯನ್ನು ಕೆಲವರು ಬಣ್ಣಿಸಿದ್ದರು.

‘ಸಹಕಾರ ಸಚಿವರನ್ನು ‘ಹನಿ ಟ್ರ್ಯಾಪ್’ಗೆ ಕೆಡವಲು ವಿರೋಧಿಗಳು ಯತ್ನಿಸಿದ್ದಾರೆ’ ಎಂದು ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ ಅವರು ವಿಧಾನಸಭೆಯಲ್ಲೇ ಹೇಳಿಕೆ ನೀಡಿ ರಾಜ್ಯ ರಾಜಕಾರಣದ ಕೊಳಕ್ಕೆ ಕಲ್ಲು ಎಸೆದಿದ್ದಾರೆ. ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರೂ, ಯತ್ನಾಳರ ಹೇಳಿಕೆ ದೃಢಪಡಿಸಿ, ವಿವರ ಹಂಚಿಕೊಂಡಿದ್ದಾರೆ. ತಿಂಗಳ ಹಿಂದೆ ಹರಿದಾಡಿದ್ದ ಗುಸು–ಗುಸು ಸುದ್ದಿಗೂ ಸಚಿವರ ಮಾತಿಗೂ ಸಾಮ್ಯತೆಗಳು ಕಾಣಿಸುತ್ತಿವೆ.

‘6 ತಿಂಗಳ ಹಿಂದೆ ಯತ್ನ’



ವಿಧಾನಸಭೆಯಲ್ಲಿ ಮಾತನಾಡಿದ ಕೆ.ಎನ್.ರಾಜಣ್ಣ

‘ನಾನು ಹಾಗೂ ನನ್ನ ತಂದೆ ಕೆ.ಎನ್. ರಾಜಣ್ಣ ಅವರನ್ನು ಹನಿಟ್ರ್ಯಾಪ್ ಬಲೆಗೆ ಕೆಡವಲು ಆರು ತಿಂಗಳ ಹಿಂದೆಯೇ ಪ್ರಯತ್ನ ನಡೆದಿತ್ತು. ಆದರೆ, ಅದು ಯಶಸ್ವಿಯಾಗಲಿಲ್ಲ’ ಎಂದು ವಿಧಾನಪರಿಷತ್ ಕಾಂಗ್ರೆಸ್ ಸದಸ್ಯ ರಾಜೇಂದ್ರ ರಾಜಣ್ಣ ಹೇಳಿದರು.

‘ಫೋನ್ ಮೂಲಕ ಹನಿಟ್ರ್ಯಾಪ್‌ಗೆ ಪ್ರಯತ್ನ ನಡೆದಿತ್ತು. ಈ ಕುರಿತು ಸಮಗ್ರ ತನಿಖೆ ನಡೆಯಬೇಕು. ಸತ್ಯ ಹೊರಬರಬೇಕು. ಪ್ರಕರಣ ಕುರಿತು ಮುಖ್ಯಮಂತ್ರಿಗೆ ಈಗಾಗಲೇ ಮಾಹಿತಿ ನೀಡಿದ್ದೇನೆ. ಹೈಕಮಾಂಡ್‌ಗೂ ದೂರು ನೀಡಲಾಗುವುದು’ ಎಂದರು.

ಅಜ್ಜಯ್ಯನ ಭಾವಚಿತ್ರ ತೋರಿಸಿದ ಮುನಿರತ್ನ

‘ನಾನು ಅತ್ಯಾಚಾರ ಮಾಡಿಲ್ಲ ಎಂದು ಆಣೆ ಮಾಡುತ್ತೇನೆ. ಸುಳ್ಳು ದೂರು ಕೊಡಿಸಿದವರು ಪ್ರಮಾಣ ಮಾಡುತ್ತಾರೆಯೆ’ ಎಂದು ಪ್ರಶ್ನಿಸಿದ ಬಿಜೆಪಿಯ ಮುನಿರತ್ನ, ತಾನು ತಂದಿದ್ದ ಪ್ರತ್ಯಂಗಿರಾ, ಶನಿ ದೇವರು, ಅಜ್ಜಯ್ಯನ ಭಾವಚಿತ್ರ ಪ್ರದರ್ಶಿಸಿದರು.

ವಿಧಾನಸಭೆಯಲ್ಲಿ ಮಾತನಾಡಿದ ಅವರು, ‘ನಾನು ತಪ್ಪು ಮಾಡಿದ್ದರೆ ಗಲ್ಲಿಗೆ ಹಾಕಿ. ಹೀಗೆಲ್ಲ ಜೀವನ ಹಾಳು ಮಾಡಬೇಕೇ? ಯಾರನ್ನೋ ಕರೆದುಕೊಂಡು ಬಂದು ರಾಮನಗರದಲ್ಲಿ ದೂರು ಕೊಡಿಸಿದ್ದಾರೆ. ಐದು ವರ್ಷದ ಹಿಂದಿನ ಕೇಸ್ ಅದು. ನಾನು ಮಾಡಿದ ತಪ್ಪೇನು? ಸುಳ್ಳು ಕೇಸ್ ಹಾಕಿಸಿ ಜೀವನ ಹಾಳು ಮಾಡುತ್ತಿದ್ದಾರೆ. ಇವರಿಗೂ ಮಕ್ಕಳು ಮರಿ ಇಲ್ಲವೇ? ವಂಶ ಇಲ್ಲವೇ’ ಎಂದು ಆಕ್ರೋಶ ಹೊರಹಾಕಿದರು.

‘ನಮ್ಮ ಜೀವನ ಹಾಳು ಮಾಡಲು ಏನು ಮಾಡಬೇಕು ಅದನ್ನು ಮಾಡಿದ್ದಾರೆ. ನಮ್ಮ ಮಕ್ಕಳು, ಮೊಮ್ಮಕ್ಕಳಿಗೆ ಏನು ಅಂತ ಉತ್ತರ ಕೊಡಲಿ. ಅವರಿಗೆ ಹೇಗೆ ಮುಖ ತೋರಿಸಲಿ? ನಾನು ಮಾಡಿದ ತಪ್ಪು ಏನು? ಎಚ್.ಡಿ. ರೇವಣ್ಣನ ಮನೆ ಹಾಳು ಮಾಡಿದರು, ರಮೇಶ ಜಾರಕಿಹೊಳಿ ಮನೆ ಹಾಳು ಮಾಡಿದರು. ಈ ಬಗ್ಗೆ ಸಿಬಿಐ ತನಿಖೆ ಆಗಬೇಕು. ನಿಮಗೆ ಕೈ ಮುಗಿದು ಕೇಳುತ್ತೇನೆ, ನ್ಯಾಯ ಕೊಡಿಸಿ’ ಎಂದು ಸಭಾಧ್ಯಕ್ಷರಿಗೆ ಮನವಿ ಮಾಡಿದರು.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ನನ್ನ ಮೇಲೆ ಅತ್ಯಾಚಾರ ಪ್ರಕರಣ ದಾಖಲಾಗಲು ಡಿ.ಕೆ. ಶಿವಕುಮಾರ್ ಮತ್ತು ಡಿ.ಕೆ. ಸುರೇಶ್ ಕಾರಣ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟರೆ ಜಾತಿ ನಿಂದನೆ ಕೇಸ್ ವಾಪಸ್ ಪಡೆಯುತ್ತೇನೆ ಎಂದೂ ಹೇಳಿದ್ದರು. ನನಗೆ ಮೊಟ್ಟೆ ಹೊಡೆಯಲು ದರ ನಿಗದಿಪಡಿಸಿದ್ದಾರೆ. ಬೆಂಗಳೂರು ಗ್ರಾಮಾಂತರ ಚುನಾವಣೆಯ ಬಳಿಕ ಇದೆಲ್ಲವನ್ನೂ ಅವರು ಮಾಡಿಸಿದ್ದಾರೆ’ ಎಂದರು.

‘ಗನ್ ಮ್ಯಾನ್ ಒದಗಿಸುವಂತೆ ಕೇಂದ್ರ ಗೃಹ ಇಲಾಖೆ, ಮಾನವ ಹಕ್ಕುಗಳು, ನಾನು ಸುಪ್ರೀಂ ಕೋರ್ಟ್ ಹೀಗೆ ಎಲ್ಲ ಕಡೆ ಹೋಗಿದ್ದೇನೆ. ಚುನಾವಣೆಯಲ್ಲಿ ಕುಸುಮಾ ಸೋತ ಮೇಲೆ ಈ ರೀತಿ ಆಗಿದೆ’ ಎಂದರು.

‘ತನಿಖೆ ಮಾಡಿಸಿ’

‘ಹನಿಟ್ರ್ಯಾಪ್ ಗಂಭೀರ ವಿಚಾರ. ಬೇರೆಲ್ಲ ಪ್ರಕರಣಗಳಿಗೂ ಎಸ್‌ಐಟಿ ಮಾಡುತ್ತೀರಾ. ಈ ಪ್ರಕರಣ ಬಗ್ಗೆ ನೇರವಾಗಿ ಮಂತ್ರಿಗಳೇ ಹೇಳಿದ್ದಾರೆ. ಅವರಿಂದ ದೂರು ಪಡೆದು ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆ ಮಾಡಿಸಿ. ಇದರಿಂದ ಎಲ್ಲರಿಗೂ ನ್ಯಾಯ ಸಿಗಲಿದೆ’ ಎಂದು ವಿರೋಧ ಪಕ್ಷದ ನಾಯಕ ಅಶೋಕ ಆಗ್ರಹಿಸಿದರು.

‘ಈ ವಿಷಯವನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಎಸ್‌ಐಟಿ ಮಾಡುತ್ತಿರೊ, ಯಾವ ತನಿಖೆ, ಯಾರ ನೇತೃತ್ವದಲ್ಲಿ ಮಾಡುತ್ತೀರೆಂದು ಸದನದಲ್ಲೇ ತಿಳಿಸಿ’ ಎಂದು ಗೃಹ ಸಚಿವರನ್ನು ಒತ್ತಾಯಿಸಿದರು.

‘ಹನಿಟ್ರ್ಯಾಪ್ ಮೂಲಕ ಕಟ್ಟಿ ಹಾಕಿದರೆ ಹೇಗೆ?’

‘ಯಾವುದೇ ಕಾರಣಕ್ಕೂ ಈ ರೀತಿಯ ಘಟನೆ ಆಗಬಾರದು. ವಿರೋಧ, ವೈಷಮ್ಯ ಸಿದ್ಧಾಂತದ ಆಧಾರದ ಮೇಲೆ ನಡೆಯಲಿ. ಯೋಜನೆಗಳ ಮೂಲಕ ನಡೆಯಲಿ, ಕಾರ್ಯಕ್ರಮಗಳ ಮೂಲಕ ವಿರೋಧ ಮಾಡಲಿ. ಅದು ಬಿಟ್ಟು ಹನಿಟ್ರ್ಯಾಪ್ ಮೂಲಕ ಕಟ್ಟಿ ಹಾಕುವ ಪ್ರಯತ್ನ ಮಾಡಿದರೆ ಹೇಗೆ’ ಎಂದು ಬಿಜೆಪಿಯ ವಿ. ಸುನಿಲ್ ಕುಮಾರ್ ಪ್ರಶ್ನಿಸಿದರು.

‘ಸರ್ಕಾರವೇ ಹನಿಟ್ರ್ಯಾಪ್‌ಗೆ ಬೆಂಬಲವಾಗಿ ನಿಂತಿದೆಯೇ? ಯಾರು ಆ ಪ್ರಭಾವಿ ಮಂತ್ರಿ? ನಿಮ್ಮ ಪಕ್ಷದಲ್ಲಿ ಯಾರ ಯಾರ ಮೇಲೆ ಹನಿಟ್ರ್ಯಾಪ್ ಆಗಿದೆ. ನಮ್ಮ ಪಕ್ಷದಲ್ಲಿ ಯಾರ ಯಾರ ಮೇಲೆ ಆಗಿದೆ ಎಂದು ಗೊತ್ತಾಗಲಿ. ರಾಜಕಾರಣಕ್ಕೆ ಏನು ಬೇಕಾದರೂ ಮಾಡುತ್ತಾರೆಂದರೆ ಸಹಿಸಲು ಆಗಲ್ಲ. ನಾಳೆ ಎಲ್ಲರ ಮೇಲೂ ಇದು ಬರಬಹುದು. ಇದು ರಾಜಕಾರಣದ ಪ್ರಶ್ನೆ ಅಲ್ಲ, ಗೌರವದ ಪ್ರಶ್ನೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅಶೋಕ–ಸುನಿಲ್ ಕುಮಾರ್ ಮೊಗಸಾಲೆ ಜಗಳ

ವಿಧಾನಸಭೆಯಲ್ಲಿ ರಾಜಣ್ಣ ಹನಿಟ್ರ್ಯಾಪ್ ವಿಚಾರ ಪ್ರಸ್ತಾಪಿಸಿದಾಗ ವಿಪಕ್ಷ ನಾಯಕ ಆರ್. ಅಶೋಕ ಮೌನ ವಹಿಸಿದ್ದು ಬಿಜೆಪಿ ಶಾಸಕ ವಿ. ಸುನಿಲ್ ಕುಮಾರ್ ಮತ್ತು ಇತರ ಶಾಸಕರನ್ನು ಕೆರಳಿಸಿತು.

ಮೊಗಸಾಲೆಯಲ್ಲಿ ಚಹಾ ಸೇವಿಸುವ ಸಂದರ್ಭದಲ್ಲಿ ಸುನಿಲ್‌ಕುಮಾರ್ ಅವರು ಈ ವಿಷಯವನ್ನು ಅಶೋಕ ಬಳಿ ನೇರವಾಗಿ ಪ್ರಸ್ತಾಪಿಸಿದರು.

‘ಅಲ್ಲರೀ ಅಶೋಕ್ ಅವರೇ.. ನಿಮಗೆ ನ್ಯಾಯಾಂಗ ತನಿಖೆಗೆ ಕೊಡಿ ಎಂದು ಹೇಳಲು ಆಗುವುದಿಲ್ಲವೇ? ನಾನು ಎದ್ದು ನಿಂತು ಮಾತನಾಡ್ತಾ ಇದ್ದೆ. ನೀವು ಬಾಯಿ ಬಿಟ್ಟು ತನಿಖೆಗೆ ಕೇಳೋಕೆ ಆಗಲಿಲ್ಲವೇ’ ಎಂದು ಸುನಿಲ್ ಕುಮಾರ್ ಪ್ರಶ್ನಿಸಿದರು.

ಅದಕ್ಕೆ ಅಶೋಕ, ‘ಏಯ್ ಸುನಿಲ್.. ನಾನೇ ಮೊದಲಿಗೆ ತನಿಖೆ ಕೊಡಿ ಎಂದು ಹೇಳಿದ್ದು’ ಎಂದರು.

‘ಎಲ್ರಿ, ನೀವು ಮಾತನಾಡಿದ್ದು. ನಾನು ಪ್ರಸ್ತಾಪ ಮಾಡಿದ ಮೇಲೆ ನೀವು ಎದ್ದು ನಿಂತಿದ್ದು ಅಲ್ವ. ನಾನು ಎದ್ದು ನಿಲ್ಲುವರೆಗೆ ನೀವು ಕಾಯಬೇಕೇ’ ಎಂದು ಸುನಿಲ್ ಪ್ರಶ್ನಿಸಿದರು.

ಅದಕ್ಕೆ ಅಶೋಕ, ‘ಇಲ್ಲ.. ನಾನೇ ಹೇಳಿದ್ದು’ ಎಂದರು. ‘ನಾನೇ ನಿಮಗೆ ಹೇಳಿಕೊಟ್ಟಿದ್ದು. ಆಮೇಲೆ ನೀವು ಹೇಳಿದ್ದು’ ಎಂದು ಸುನಿಲ್ ಮತ್ತೆ ಹೇಳಿದಾಗ, ‘ಇಲ್ಲ.. ಇಲ್ಲ. ನಾನೇ ಹೇಳಿದೆ’ ಎಂದರು. ಶಾಸಕ ಸುರೇಶ್ ಗೌಡ ಮತ್ತು ಇತರ ಶಾಸಕರು ಸುನಿಲ್ ಅವರಿಗೆ ಧ್ವನಿಗೂಡಿಸಿ, ‘ವಿರೋಧ ಪಕ್ಷದ ನಾಯಕರಾಗಿ ನಿಮ್ಮ ಜವಾಬ್ದಾರಿ ಹೆಚ್ಚು’ ಎಂದರು.

ಹೋರಾಟ ತೀವ್ರಗೊಳಿಸಿದ ಡಿಎಂಕೆ; ನಡೆಯದ ಸಂಸತ್ ಕಲಾಪ

‘ಕ್ಷೇತ್ರ ಮರುವಿಂಗಡಣೆ’ ಗದ್ದಲ

ಪ್ರಜಾವಾಣಿ ವಾರ್ತೆ



ಕ್ಷೇತ್ರ ಮರುವಿಂಗಡಣೆಗೆ ವಿರೋಧ ವ್ಯಕ್ತಪಡಿಸಿ ಡಿಎಂಕೆ ಸಂಸದರು ಸಂಸತ್ತಿನ ಆವರಣದಲ್ಲಿ ಗುರುವಾರ ಪ್ರತಿಭಟಿಸಿದರು ಪಿಟಿಐ ಚಿತ್ರ

ನವದೆಹಲಿ: ಕ್ಷೇತ್ರಗಳ ಮರುವಿಂಗಡಣೆ ವಿರೋಧಿಸಿ ಚೆನ್ನೈಯಲ್ಲಿ ನಡೆಯಲಿರುವ ದಕ್ಷಿಣದ ರಾಜ್ಯಗಳ ಮುಖ್ಯಮಂತ್ರಿಗಳ ಸಭೆಗೆ ಮುನ್ನ ಡಿಎಂಕೆ ತನ್ನ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸಿದೆ. ಕ್ಷೇತ್ರ ಮರುವಿಂಗಡಣೆ ವಿರೋಧಿಸಿ ಡಿಎಂಕೆಯ ಹಲವಾರು ಸಂಸದರು ಟಿ-ಶರ್ಟ್ ಹಾಗೂ ಮಫ್ಲರ್‌ಗಳನ್ನು ಧರಿಸಿ ಬಂದಿದ್ದರಿಂದ ಸಂಸತ್‌ನ ಉಭಯ ಸದನಗಳ ಕಲಾಪ ಗುರುವಾರ ನಡೆಯಲಿಲ್ಲ.

ಸಂಸತ್‌ನ ಹೊರಗೆ ಪ್ರತಿಭಟನೆ ನಡೆಸಿದ ಡಿಎಂಕೆ, ವಿಸಿಕೆ ಹಾಗೂ ಕಾಂಗ್ರೆಸ್‌ನ ತಮಿಳುನಾಡಿನ ಸಂಸದರು ಟಿ-ಶರ್ಟ್ ಹಾಗೂ ಮಫ್ಲರ್‌ಗಳನ್ನು ಧರಿಸಿ ಲೋಕಸಭೆ ಹಾಗೂ ರಾಜ್ಯಸಭೆಗೆ ಹಾಜರಾದರು. ಇದಕ್ಕೆ ಲೋಕಸಭಾಧ್ಯಕ್ಷ ಓಂಬಿರ್ಲಾ ಹಾಗೂ ರಾಜ್ಯಸಭಾ ಸಭಾಪತಿ ಜಗದೀಪ್ ಧನಕರ್ ಆಕ್ಷೇಪ ವ್ಯಕ್ತಪಡಿಸಿದರು. ಇದು ಸದನದ ನಿಯಮಗಳು ಹಾಗೂ ಕಾರ್ಯವಿಧಾನಗಳನ್ನು ಉಲ್ಲಂಘಿಸುತ್ತದೆ ಎಂದು ಅವರು ತಿಳಿಸಿದರು.

ಟಿ-ಶರ್ಟ್‌ಗಳ ಮೇಲೆ '#ನ್ಯಾಯಯುತ ಕ್ಷೇತ್ರ ಮರುವಿಂಗಡಣೆಗಾಗಿ ತಮಿಳುನಾಡು ಹೋರಾಡಲಿದೆ. ತಮಿಳುನಾಡು ಗೆಲ್ಲಲಿದೆ' ಎಂದು ಬರೆಯಲಾಗಿತ್ತು. ಆದರೆ, ಮಫ್ಲರ್‌ಗಳ ಮೇಲೆ 'ಅನಾಗರಿಕ, ಪ್ರಜಾಪ್ರಭುತ್ವ ವಿರೋಧಿ' ಎಂದು ಬರೆಯಲಾಗಿತ್ತು.

ಸದನ ಸೇರಿದ ತಕ್ಷಣ, ರಾಜಕೀಯ ಘೋಷಣೆಗಳನ್ನು ಹೊಂದಿರುವ ಟಿ-ಶರ್ಟ್‌ಮತ್ತು ಮಫ್ಲರ್‌ಗಳನ್ನು ಧರಿಸಿದ ಸದಸ್ಯರ ಉಪಸ್ಥಿತಿಯನ್ನು ಬಿರ್ಲಾ ಆಕ್ಷೇಪಿಸಿದರು. 'ಸದನವು ನಿಯಮಗಳು ಮತ್ತು ಕಾರ್ಯವಿಧಾನಗಳೊಂದಿಗೆ ಕಾರ್ಯನಿರ್ವಹಿಸುತ್ತದೆ. ಸದಸ್ಯರು ಸದನದ ಘನತೆ ಮತ್ತು ಗೌರವ ಕಾಪಾಡಬೇಕು. ಆದರೆ, ಕೆಲವು ಸದಸ್ಯರು ನಿಯಮಗಳನ್ನು ಪಾಲಿಸುತ್ತಿಲ್ಲ. ಇದು ಸ್ವೀಕಾರಾರ್ಹವಲ್ಲ' ಎಂದು ಹೇಳಿದರು.

'ಎಷ್ಟೇ ದೊಡ್ಡ ನಾಯಕರಾಗಿದ್ದರೂ ಇಂತಹ ಆಳಿಂದ ಉಡುಪುಗಳನ್ನು ಧರಿಸಿ ಸದನಕ್ಕೆ ಬರುವುದು ಸರಿಯಲ್ಲ. ಸದನದಿಂದ ಹೊರಗೆ ಹೋಗಿ ಈ ಬಟ್ಟೆಗಳನ್ನು ಬದಲಾಯಿಸಿ ಮತ್ತು ಸೂಕ್ತ ಉಡುಪಿನೊಂದಿಗೆ ಹಿಂತಿರುಗಿ' ಎಂದು ಸದಸ್ಯರಿಗೆ ಲೋಕಸಭಾಧ್ಯಕ್ಷ ಓಂಬಿರ್ಲಾ ಸೂಚಿಸಿದರು. ಜತೆಗೆ, ಕಲಾಪವನ್ನು ಮಧ್ಯಾಹ್ನ 12 ಗಂಟೆಯವರೆಗೆ ಮುಂದೂಡಿದರು.

ಕಲಾಪ ಪುನರಾರಂಭಗೊಂಡಾಗ ಈ ಸದಸ್ಯರು ಟಿ-ಶರ್ಟ್ ಹಾಗೂ ಮಫ್ಲರ್‌ಗಳನ್ನು ಧರಿಸಿಯೇ ಬಂದಿದ್ದರು.

ಸಂಸದರು ಈ ಹಿಂದೆಯೂ ಘೋಷಣೆಗಳಿರುವ ಬಟ್ಟೆ ಧರಿಸಿ ಬಂದಿದ್ದರು. ಬಿಜೆಪಿ ಸಹ ಸದನದೊಳಗೆ ಪ್ರತಿಭಟಿಸಿದೆ. ಆದರೆ, ವಿಪಕ್ಷಗಳ ಪ್ರತಿಭಟನೆ ಸ್ವೀಕರಿಸಲು ಸಿದ್ಧರಿಲ್ಲ

ಕನಿಮೊಳಿ, ಡಿಎಂಕೆ ಸಂಸದೆ

ಟಿ ಶರ್ಟ್‌ಗಳನ್ನು ಬದಲಾಯಿಸಿ ಬರುವಂತೆ ಸಭಾಧ್ಯಕ್ಷರ ಪೀಠದಲ್ಲಿದ್ದ ಕೃಷ್ಣಪ್ರಸಾದ್ ಟೆನ್ನೇಟಿ ಮನವಿ ಮಾಡಿದರು. ಇದಕ್ಕೆ ಸದಸ್ಯರು ಕಿವಿಗೊಡಲಿಲ್ಲ. ಕಲಾಪವನ್ನು ಮಧ್ಯಾಹ್ನ 2ಕ್ಕೆ ಮುಂದೂಡಲಾಯಿತು. ನಂತರ ಶುಕ್ರವಾರದ ವರೆಗೆ ಮುಂದೂಡಿದರು. ಡಿಎಂಕೆ ಸದಸ್ಯರು ಸ್ಪೀಕರ್ ರೂಲಿಂಗ್ ಅನ್ನು ಉಲ್ಲಂಘಿಸಿದ್ದಾರೆ ಎಂದು ಬಿಜೆಪಿಯ ಕೆಲವು ಸಂಸದರು ದೂರಿದರು.

ತಮ್ಮ ಕೊಠಡಿಯಲ್ಲಿ ಸದನ ನಾಯಕರ ಸಭೆಯನ್ನು 11.30ಕ್ಕೆ ಕರೆದಿರುವುದಾಗಿ ಪ್ರಕಟಿಸಿದ ಧನಕರ್ ಅವರು ರಾಜ್ಯಸಭಾ ಕಲಾಪವನ್ನು 12 ಗಂಟೆವರೆಗೆ ಮುಂದೂಡಿದರು. ಸದನದ ನಾಯಕರ ಸಭೆಯಲ್ಲಿ ಒಮ್ಮತ ಮೂಡದ ಕಾರಣಕ್ಕೆ ಕಲಾಪವನ್ನು ಶುಕ್ರವಾರಕ್ಕೆ ಮುಂದೂಡಲಾಯಿತು.

ಕ್ಷೇತ್ರ ಮರುವಿಂಗಡಣೆ ಹಾಗೂ ಹಿಂದಿ ಹೇರಿಕೆ ವಿರುದ್ಧದಲ್ಲಿ ಡಿಎಂಕೆ ನಡೆಸುತ್ತಿರುವ ಹೋರಾಟ ನಾಟಕ. ಇದನ್ನು 2026ರ ತಮಿಳುನಾಡು ವಿಧಾನಸಭೆ ಚುನಾವಣೆಯ ದೃಷ್ಟಿಯಿಂದ ನೋಡಬೇಕು. ಡಿಎಂಕೆ ಆಡಳಿತದಲ್ಲಿ ಭ್ರಷ್ಟಾಚಾರ ಮಿತಿಮೀರಿದೆ ಹಾಗೂ ಅಭಿವೃದ್ಧಿ ಕಾರ್ಯಗಳು ನಡೆದಿಲ್ಲ. ಜನರ ಗಮನವನ್ನು ಬೇರೆಡೆ ಸೆಳೆಯಲು ಡಿಎಂಕೆ ಈ ವಿಷಯ ಎತ್ತಿಕೊಂಡಿದೆ

ತೇಜಸ್ವಿ ಸೂರ್ಯ, ಬಿಜೆಪಿ ಸಂಸದ

ಸಂಸತ್‌ಗೆ ಯಾವುದೇ ವಸ್ತ್ರಸಂಹಿತೆ ಇಲ್ಲ. ಈ ನಡೆ ಸ್ವೀಕಾರಾರ್ಹ ಅಲ್ಲ ಹಾಗೂ ದುರದೃಷ್ಟಕರ. ರೈತರ ಸಮಸ್ಯೆ ಬಗ್ಗೆ ಚರ್ಚಿಸಲು ಪಂಜಾಬ್‌ನ ಸಂಸದರು ಬಯಸಿದ್ದರು. ಈ ವಿಷಯದ ಬಗ್ಗೆ ಚರ್ಚಿಸಲು ಸರ್ಕಾರ ಹೆದರುತ್ತಿದೆ. ಆ ಕಾರಣಕ್ಕೆ ಕಲಾಪವನ್ನು ಮುಂದೂಡಿದೆ

ಮಾಣಿಕಂ ಟ್ಯಾಗೋರ್, ಕಾಂಗ್ರೆಸ್ ಸಂಸದ

ಮತ್ತೆ ಪ್ರತಿಭಟನೆ– ರೈತ ಮುಖಂಡರ ಎಚ್ಚರಿಕೆ

ಶಂಭು, ಖನೌರಿ ಗಡಿಯಲ್ಲಿ ಪೊಲೀಸರಿಂದ ಬಲವಂತವಾಗಿ ಬ್ಯಾರಿಕೇಡ್ ತೆರವು

ಚಂಡೀಗಢ (ಪಿಟಿಐ): ಇಲ್ಲಿನ ಶಂಭು ಹಾಗೂ ಖನೌರಿ ಗಡಿ ಭಾಗದಲ್ಲಿ ಪ್ರತಿಭಟನೆ ನಡೆಸುತ್ತಿದ್ದ ರೈತರನ್ನು ಹೊರಹಾಕಿದ ಬಳಿಕ ಪಂಜಾಬ್ ಪೊಲೀಸರು ಅಲ್ಲಿ ಹಾಕಿದ್ದ ಸಿಮೆಂಟ್ ಬ್ಯಾರಿಕೇಡ್‌ಗಳನ್ನು ಕಿತ್ತೆಸೆದಿದ್ದಾರೆ.

ಕಳೆದೊಂದು ವರ್ಷದಿಂದ ಪ್ರತಿಭಟನಾನಿರತ ರೈತರು ಇಲ್ಲಿಯೇ ನೆಲೆಸಿದ್ದರಿಂದ ಶಂಭು- ಅಂಬಾಲ ಹಾಗೂ ಸಂಗ್ರೂರ್- ಜಿಂದ್ ನಡುವಿನ ರಸ್ತೆಯನ್ನು ಮುಚ್ಚಲಾಗಿತ್ತು.

ಸೋಮವಾರ ಜೆಸಿಬಿ ಹಾಗೂ ಇತರ ಯಂತ್ರಗಳ ಸಮೇತ ಸ್ಥಳಕ್ಕೆ ಧಾವಿಸಿದ ಪೊಲೀಸರು ಅವುಗಳನ್ನು ಕಿತ್ತು ಹಾಕಿದ್ದಾರೆ.

'ಪಂಜಾಬ್ ಭಾಗದಲ್ಲಿ ಶಂಭು ಹಾಗೂ ಖನೌರಿ ಗಡಿಭಾಗದಲ್ಲಿ ಗುರುವಾರ ಎರಡನೆಯ ವಾಹನ ಸಂಚಾರ ಆರಂಭಗೊಂಡಿದೆ. ಟ್ರಾಲಿ ಹಾಗೂ ಇತರ ಅವಶೇಷಗಳನ್ನು ತೆರವುಗೊಳಿಸಲಾಗುವುದು' ಎಂದು ಪಟಿಯಾಲ ಜಿಲ್ಲಾ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ನಾನಕ್ ಸಿಂಗ್ ತಿಳಿಸಿದರು.

ಪ್ರತಿಭಟನೆ ಎಚ್ಚರಿಕೆ: ಬ್ಯಾರಿಕೇಡ್ ತೆರವುಗೊಳಿಸಿದ ಪೊಲೀಸರ ಕ್ರಮವನ್ನು ಖಂಡಿಸಿ, ಸಂಯುಕ್ತ ಕಿಸಾನ್ ಮೋರ್ಚಾ, ಕಿಸಾನ್ ಮಜ್ದೂರ್ ಮೋರ್ಚಾ ನೇತೃತ್ವದಲ್ಲಿ ರಾಜ್ಯದ ಎಲ್ಲ ಡಿಸಿ ಕಚೇರಿಗಳ ಮುಂದೆ ಧರಣಿ ನಡೆಸಲಾಗುವುದು ಎಂದು ಮುಖಂಡರು ತಿಳಿಸಿದ್ದಾರೆ.

ಚಂಡೀಗಢದಲ್ಲಿ ಕೇಂದ್ರ ಕೃಷಿ ಖಾತೆ ಸಚಿವ ಶಿವರಾಜ್ ಸಿಂಗ್ ಚೌಹಾಣ್ ನೇತೃತ್ವದ ಕೇಂದ್ರ ನಿಯೋಗದ ಜೊತೆ ಸಭೆ ನಡೆಸಿ ಹಿಂತಿರುಗುತ್ತಿದ್ದ ರೈತ ಮುಖಂಡರಾದ ಸರವಣ ಸಿಂಗ್ ಪಂಡೇರ್, ಜಗಜೀತ್ ಸಿಂಗ್ ಡಲ್ಲೇವಾಲ್ ಅವರನ್ನು ಪಂಜಾಬ್ ಪೊಲೀಸರು ವಶಕ್ಕೆ ಪಡೆದರು.

ಶಂಭು, ಖನೌರಿ ಭಾಗದಲ್ಲಿ ಹೆದ್ದಾರಿ ಮುಚ್ಚಿದ್ದರಿಂದ ವಹಿವಾಟಿಗೆ ಹೊಡೆತ ಬಿದ್ದಿದೆ. ಆಪ್ ಸರ್ಕಾರ ಕೈಗಾರಿಕೆಗಳನ್ನು ಸೆಳೆದು, ಉದ್ಯೋಗಕ್ಕೆ ಆದ್ಯತೆ ನೀಡುತ್ತಿದೆ

ಹರ್ಪಾಲ್ ಸಿಂಗ್ ಛೀಮಾ, ಪಂಜಾಬ್ ಹಣಕಾಸು ಸಚಿವ

ಅನ್ನದಾತರ ವಿರುದ್ಧ ಕೈಜೋಡಿಸಿದ ರೈತ ವಿರೋಧಿ ಪಕ್ಷಗಳು: ಖರ್ಗೆ

ಪ್ರಜಾವಾಣಿ ವಾರ್ತೆ



ಮಲ್ಲಿಕಾರ್ಜುನ ಖರ್ಗೆ

ನವದೆಹಲಿ: ಶಂಭು ಹಾಗೂ ಖನೌರಿಯ ಪ್ರತಿಭಟನಾ ಸ್ಥಳಗಳಿಂದ ರೈತರನ್ನು ಬಲವಂತವಾಗಿ ಸ್ಥಳಾಂತರಿಸುವ ಕ್ರಮವನ್ನು ಖಂಡಿಸಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, 'ಅನ್ನದಾತರ ವಿರುದ್ಧ ಎರಡು ರೈತ ವಿರೋಧಿ ಪಕ್ಷಗಳು ಕೈಜೋಡಿಸಿವೆ ಹಾಗೂ ಅವರಿಗೆ ದ್ರೋಹ ಬಗೆದಿವೆ' ಎಂದಿದ್ದಾರೆ.

'ಅಧಿಕಾರದ ದುರಂಹಕಾರದ ನಶೆಯಲ್ಲಿ ಬಿಜೆಪಿ ಹಾಗೂ ಆಮ್ ಆದ್ಮಿ ಪಕ್ಷ (ಎಎಪಿ) ರೈತರ ಮೇಲೆ ದಾಳಿ ನಡೆಸಿವೆ. ದೇಶದ 62 ಕೋಟಿ ರೈತರು ಈ ಎರಡು ಪಕ್ಷಗಳನ್ನು ಎಂದಿಗೂ ಕ್ಷಮಿಸುವುದಿಲ್ಲ' ಎಂದು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಟೀಕಿಸಿದ್ದಾರೆ.

'ಮೊದಲು ಪಂಜಾಬ್ ಸರ್ಕಾರವು ರೈತರನ್ನು ಮಾತುಕತೆಗೆ ಆಹ್ವಾನಿಸಿತು. ಬಳಿಕ ಪ್ರತಿಭಟನಾ ಸ್ಥಳದಿಂದ ಬಲವಂತವಾಗಿ ತೆರವುಗೊಳಿಸಿತು' ಎಂದು ಅವರು ಆರೋಪಿಸಿದ್ದಾರೆ. ರೈತ ನಾಯಕರಾದ ಸರ್ವಾನ್ ಸಿಂಗ್ ಪಂಧೇರ್ ಮತ್ತು ಜಗಜಿತ್ ಸಿಂಗ್ ಡಲ್ಲೇವಾಲ್ ಬಂಧನವನ್ನು ಖರ್ಗೆ ಖಂಡಿಸಿದ್ದಾರೆ.

‘ನೀಲಿ ಚಿತ್ರ ವೀಕ್ಷಣೆ ವಿಚ್ಛೇದನಕ್ಕೆ ಆಧಾರವಲ್ಲ’



ಬೆಂಗಳೂರು (ಎಎಫ್‌ಪಿ): ಪತ್ನಿ ನೀಲಿ ಚಿತ್ರ ವೀಕ್ಷಿಸುತ್ತಾರೆ ಮತ್ತು ಹಸ್ತಮೈಥುನ ಮಾಡಿಕೊಳ್ಳುತ್ತಾರೆ ಎಂಬುದು ವಿಚ್ಛೇದನ ನೀಡಲು ಆಧಾರ ಆಗುವುದಿಲ್ಲ ಎಂದು ಮದ್ರಾಸ್ ಹೈಕೋರ್ಟ್ ಬುಧವಾರ ತೀರ್ಪು ನೀಡಿದೆ.

ಮದುವೆಯಾದ ತಕ್ಷಣ ಮಹಿಳೆಯರು ತಮ್ಮ ಲೈಂಗಿಕ ಸ್ವಾಯತ್ತೆಯನ್ನು ಬಿಟ್ಟುಕೊಟ್ಟಿದ್ದಾರೆಂದು ಅರ್ಥವಲ್ಲ, ಅವರಿಗೆ ಹಸ್ತಮೈಥುನ ಮಾಡಿಕೊಳ್ಳುವ ಹಕ್ಕು ಇದೆ ಎಂದು ಹೈಕೋರ್ಟ್ ಪೀಠ ಪ್ರತಿಪಾದಿಸಿದೆ.

‘ಮದುವೆಯಾದ ನಂತರವೂ ಮಹಿಳೆಗೆ ತನ್ನ ಸ್ವಂತಿಕೆ ಮತ್ತು ವ್ಯಕ್ತಿತ್ವ ಉಳಿಸಿಕೊಳ್ಳುವ ಹಕ್ಕಿದೆ. ಹೆಂಡತಿ ಆದ ಮಾತ್ರಕ್ಕೆ ಮಹಿಳೆಯ ಅಸ್ಮಿತೆಗೆ ಕುತ್ತು ತರುವಂತಿಲ್ಲ’ ಎಂದೂ ಹೇಳಿದೆ.

‘ನೀಲಿ ಚಿತ್ರದ ವ್ಯಸನವು ಕೆಟ್ಟದು ಮತ್ತು ನೈತಿಕವಾಗಿ ಸಮರ್ಥನೀಯವಲ್ಲ. ಆದರೆ, ಇದು ವಿಚ್ಛೇದನಕ್ಕೆ ಕಾನೂನಿನ ಆಧಾರವಾಗುವುದಿಲ್ಲ’ ಎಂದೂ ಅದು ಹೇಳಿದೆ.

‘ಪುರುಷರಲ್ಲಿ ಹಸ್ತ ಮೈಥುನವನ್ನು ಸಾರ್ವತ್ರಿಕವೆಂದು ಒಪ್ಪಿಕೊಂಡಾಗ, ಮಹಿಳೆಯರು ಹಸ್ತಮೈಥುನ ಮಾಡಿಕೊಳ್ಳುವುದನ್ನು ಕಳಂಕವಾಗಿ ಪರಿಗಣಿಸಲಾಗದು’ ಎಂದು ಪೀಠವು ತನ್ನ ತೀರ್ಪಿನಲ್ಲಿ ಹೇಳಿದೆ.

ವಿಚ್ಛೇದನ ನೀಡಲು ನಿರಾಕರಿಸಿದ ಕೆಳ ನ್ಯಾಯಾಲಯದ ತೀರ್ಪನ್ನು ಪ್ರಶ್ನಿಸಿ ವ್ಯಕ್ತಿಯೊಬ್ಬರು ಸಲ್ಲಿಸಿರುವ ಮೇಲ್ಮನವಿಯನ್ನು ವಜಾಗೊಳಿಸಿದ ನ್ಯಾಯಪೀಠ, ‘ಸ್ವಯಂ ಆನಂದವು ನಿಷಿದ್ಧವಲ್ಲ’ ಎಂದು ತೀರ್ಪಿನಲ್ಲಿ ಹೇಳಿದೆ.

‘ಸ್ತನ ಹಿಡಿಯುವುದು ಅತ್ಯಾಚಾರ ಯತ್ನವಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂತ್ರಸ್ತ ಬಾಲಕಿಯ ಸ್ತನಗಳನ್ನು ಹಿಡಿದುಕೊಳ್ಳುವುದು, ಆಕೆಯ ಪೈಜಾಮಾದ ದಾರವನ್ನು ಹಿಡಿದು ಎಳೆಯುವುದು ಮತ್ತು ಓಡಿಹೋಗುವ ಮುನ್ನ ಸಂತ್ರಸ್ತೆಯನ್ನು ಮೋರಿಗೆ ಎಳೆದೊಯ್ಯಲು ಪ್ರಯತ್ನ ಮಾಡುವುದು ಅತ್ಯಾಚಾರ ಅಥವಾ ಅತ್ಯಾಚಾರಕ್ಕೆ ಯತ್ನದ ಅಪರಾಧ ಆಗುವುದಿಲ್ಲ ಎಂದು ಹೇಳಿರುವ ಅಲಹಾಬಾದ್ ಹೈಕೋರ್ಟ್, ಪ್ರಕರಣವೊಂದರಲ್ಲಿ ಸಮನ್ಸ್ ಆದೇಶವನ್ನು ಮಾರ್ಪಾಡು ಮಾಡಿದೆ.

ಆರೋಪಿಗಳಾದ ಪವನ್ ಮತ್ತು ಆಕಾಶ್ ಎನ್ನುವವರ ವಿರುದ್ಧ ಭಾರತೀಯ ದಂಡ ಸಂಹಿತೆಯ (ಐಪಿಸಿ) ಸೆಕ್ಷನ್ 376 (ಅತ್ಯಾಚಾರ) ಮತ್ತು ಪೋಕ್ಸೊ ಕಾಯ್ದೆಯ ಸೆಕ್ಷನ್ 18ರ (ಅಪರಾಧ ಎಸಗಲು ಯತ್ನಿಸಿದ್ದಕ್ಕೆ ಶಿಕ್ಷೆ) ಅಡಿಯಲ್ಲಿ ಸಮನ್ಸ್ ಜಾರಿಗೊಳಿಸಲಾಗಿತ್ತು. ಅವರ ವಿರುದ್ಧದ ಆರೋಪಗಳನ್ನು ಹೈಕೋರ್ಟ್ ಬದಲಾಯಿಸಿದ್ದು, ಐಪಿಸಿ ಸೆಕ್ಷನ್ 354–ಬಿ (ಬಟ್ಟೆ ಬಿಚ್ಚಿಸುವ ಉದ್ದೇಶದಿಂದ ಹಲ್ಲೆ ಅಥವಾ ಕ್ರಿಮಿನಲ್ ಬಲ ಪ್ರಯೋಗ), ಪೋಕ್ಸೊ ಕಾಯ್ದೆಯ ಸೆಕ್ಷನ್ 9, 10ರ (ತೀವ್ರ ಸ್ವರೂಪದ ಲೈಂಗಿಕ ಹಲ್ಲೆ) ಅಡಿ ಅವರನ್ನು ವಿಚಾರಣೆಗೆ ಗುರಿಪಡಿಸಬೇಕು ಎಂಬ ಆದೇಶ ನೀಡಿದೆ ಎಂದು ‘ಬಾರ್ ಆ್ಯಂಡ್ ಬೆಂಚ್’ ಜಾಲತಾಣ ವರದಿ ಮಾಡಿದೆ.

‘ಪವನ್ ಮತ್ತು ಆಕಾಶ್ ಅವರು ಸಂತ್ರಸ್ತೆಯ ಸ್ತನಗಳನ್ನು ಹಿಡಿದರು, ಸಂತ್ರಸ್ತೆಯ ಕೆಳವಸ್ತ್ರವನ್ನು ತೆಗೆಯಲು ಆಕಾಶ್ ಯತ್ನಿಸಿದ್ದರು, ಅದಕ್ಕಾಗಿ ಅವರಿಬ್ಬರು ಸಂತ್ರಸ್ತೆಯ ಕೆಳಉಡುಪಿನ ದಾರವನ್ನು ತುಂಡು ಮಾಡಿದರು, ಆಕೆಯನ್ನು ಮೋರಿಗೆ ಎಳೆದುಕೊಂಡು ಹೋಗಲು ಯತ್ನಿಸಿದ್ದರು, ಆದರೆ ಸಾಕ್ಷಿಯ ಮಧ್ಯಪ್ರವೇಶದ ಕಾರಣದಿಂದಾಗಿ ಅವರು ಸಂತ್ರಸ್ತೆಯನ್ನು ಬಿಟ್ಟು ಓಡಿಹೋದರು ಎಂದು ಆರೋಪಿಸಲಾಗಿದೆ. ಆರೋಪಿಗಳು ಸಂತ್ರಸ್ತೆಯ ಮೇಲೆ ಅತ್ಯಾಚಾರ ಎಸಗಲು ತೀರ್ಮಾನಿಸಿದ್ದರು ಎಂಬ ನಿರ್ಣಯಕ್ಕೆ ಬರಲು ಈ ಸಂಗತಿಯು ಸಾಕಾಗುವುದಿಲ್ಲ. ಏಕೆಂದರೆ, ಈ ವಿಷಯ ಹೊರತುಪಡಿಸಿದರೆ, ಆರೋಪಿಗಳು ಅತ್ಯಾಚಾರ ನಡೆಸಲು ತೀರ್ಮಾನಿಸಿದ್ದರು ಎಂಬ ಆರೋಪಕ್ಕೆ ಬೇರೆ ಯಾವುದೇ ಕೃತ್ಯವನ್ನು ಉಲ್ಲೇಖಿಸಲಾಗಿಲ್ಲ’ ಎಂದು ಸಮನ್ಸ್ ಆದೇಶವನ್ನು ಬದಲಿಸುವ ಸಂದರ್ಭದಲ್ಲಿ ನ್ಯಾಯಮೂರ್ತಿ ರಾಮ ಮನೋಹರ ನಾರಾಯಣ ಮಿಶ್ರಾ ಅವರು ಹೇಳಿರುವುದಾಗಿ ‘ಬಾರ್ ಆ್ಯಂಡ್ ಬೆಂಚ್’ ವರದಿ ವಿವರಿಸಿದೆ.

ಪ್ರಾಸಿಕ್ಯೂಷನ್ ಹೊರಿಸಿದ ಆರೋಪಗಳನ್ನು ಗಮನಿಸಿ ವಿಚಾರಣಾ ನ್ಯಾಯಾಲಯವು ಐಪಿಸಿಯ ಸೆಕ್ಷನ್ 376 ಹಾಗೂ ಪೋಕ್ಸೊ ಕಾಯ್ದೆಯ ಸೆಕ್ಷನ್ 18ರ ಅಡಿ ಆರೋಪಿಗಳಿಗೆ ಸಮನ್ಸ್ ಜಾರಿ ಮಾಡಿತ್ತು. ಸಮನ್ಸ್ ಆದೇಶವನ್ನು ಪ್ರಶ್ನಿಸಿ ಆರೋಪಿಗಳು ಹೈಕೋರ್ಟ್ ಮೆಟ್ಟಿಲೇರಿದ್ದರು.

ದೋಷಾರೋಪ ನಿಗದಿ ಮಾಡುವ ಸಂದರ್ಭದಲ್ಲಿ ವಿಚಾರಣಾ ನ್ಯಾಯಾಲಯವು, ತನಿಖೆಯ ಸಂದರ್ಭದಲ್ಲಿ ಸಂಗ್ರಹಿಸಿದ ಸಾಕ್ಷ್ಯಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುತ್ತ ಇರಬೇಕಾಗಿಲ್ಲ. ವಿಚಾರಣೆ ಮುಂದುವರಿಸಲು ಅಗತ್ಯವಿರುವ ಅಂಶಗಳು ಪ್ರಕರಣದಲ್ಲಿ ಮೇಲ್ನೋಟಕ್ಕೆ ಕಾಣುತ್ತಿವೆಯೇ ಎಂಬುದನ್ನು ಅದು ಪರಿಶೀಲಿಸಬೇಕು ಎಂದು ದೂರುದಾರರ ಪರ ವಕೀಲರು ವಾದಿಸಿದ್ದರು.

ಆರೋಪಿಗಳು ಸಂತ್ರಸ್ತೆಯ ಮೇಲೆ ಅತ್ಯಾಚಾರ ಎಸಗುವ ತೀರ್ಮಾನ ಮಾಡಿದ್ದರು ಎಂಬುದನ್ನು ಸೂಚಿಸುವ ಯಾವುದೇ ಅಂಶ ಇಲ್ಲ ಎಂದು ಹೈಕೋರ್ಟ್ ಹೇಳಿದೆ.

ಮಧ್ಯಂತರ ಜೀವನಾಂಶಕ್ಕೆ ಅಸಮ್ಮತಿ

ನವದೆಹಲಿ (ಪಿಟಿಐ): ಸುಮ್ಮನೆ ಕುಳಿತುಕೊಳ್ಳುವುದನ್ನು ಕಾನೂನು ಉತ್ತೇಜಿಸುವುದಿಲ್ಲ, ಸಂಪಾದನೆ ಮಾಡುವ ಸಾಮರ್ಥ್ಯ ಇರುವ ಮಹಿಳೆಯರು ಪತಿಯಿಂದ ಮಧ್ಯಂತರ ಜೀವನಾಂಶ ಕೇಳಬಾರದು ಎಂದು ದೆಹಲಿ ಹೈಕೋರ್ಟ್ ಹೇಳಿದೆ.

ಸಿಆರ್‌ಪಿಸಿ ಸೆಕ್ಷನ್ 125 (ಪತ್ನಿಯರು, ಮಕ್ಕಳು ಮತ್ತು ಪಾಲಕರಿಗೆ ಜೀವನಾಂಶದ ಆದೇಶ) ಸಂಗಾತಿಗಳ ನಡುವೆ ಸಮಾನತೆಯನ್ನು ಕಾಯ್ದುಕೊಳ್ಳುವ ಹಾಗೂ ಪತ್ನಿಯರಿಗೆ, ಮಕ್ಕಳಿಗೆ ಮತ್ತು ಪಾಲಕರಿಗೆ ರಕ್ಷಣೆ ಒದಗಿಸುವ ಉದ್ದೇಶವನ್ನು ಹೊಂದಿದೆ. ಇದು ‘ಸುಮ್ಮನೆ ಕುಳಿತುಕೊಳ್ಳುವುದನ್ನು’ ಉತ್ತೇಜಿಸುವುದಿಲ್ಲ ಎಂದು ನ್ಯಾಯಮೂರ್ತಿ ಚಂದ್ರಧರಿ ಸಿಂಗ್ ಅವರು ಆದೇಶದಲ್ಲಿ ಹೇಳಿದ್ದಾರೆ.

ತನ್ನಿಂದ ಬೇರೆಯಾಗಿರುವ ಪತಿಯಿಂದ ಮಧ್ಯಂತರ ಜೀವನಾಂಶ ಕೊಡಿಸಬೇಕು ಎಂಬ ಕೋರಿಕೆಯನ್ನು ತಿರಸ್ಕರಿಸಿದ್ದ ವಿಚಾರಣಾ ನ್ಯಾಯಾಲಯದ ಕ್ರಮವನ್ನು ಪ್ರಶ್ನಿಸಿ ಮಹಿಳೆ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

‘ಸುಶಿಕ್ಷಿತಳಾದ ಹಾಗೂ ಲಾಭ ತಂದುಕೊಡುವ ವೃತ್ತಿಯಲ್ಲಿ ಅನುಭವ ಹೊಂದಿರುವ ಮಹಿಳೆಯು ಪತಿಯಿಂದ ಜೀವನಾಂಶ ಪಡೆಯುವ ಉದ್ದೇಶದಿಂದ ಸುಮ್ಮನೆ ಕುಳಿತಿರಬಾರದು. ಹೀಗಾಗಿ, ಈ ಪ್ರಕರಣದಲ್ಲಿ ಮಧ್ಯಂತರ ಜೀವನಾಂಶಕ್ಕೆ ಉತ್ತೇಜನ ನೀಡುತ್ತಿಲ್ಲ. ಅರ್ಜಿದಾರ ಮಹಿಳೆಯು ಸಂಪಾದಿಸುವ ಮತ್ತು ತಾನು ಪಡೆದಿರುವ ಶಿಕ್ಷಣವನ್ನು ಒಳ್ಳೆಯ ರೀತಿಯಲ್ಲಿ ಬಳಸಿಕೊಳ್ಳುವ ಸಾಮರ್ಥ್ಯ ಹೊಂದಿರುವುದು ಈ ನ್ಯಾಯಾಲಯಕ್ಕೆ ಗೋಚರಿಸುತ್ತಿದೆ’ ಎಂದು ನ್ಯಾಯಮೂರ್ತಿ ಸಿಂಗ್ ಅವರು ಆದೇಶದಲ್ಲಿ ಹೇಳಿದ್ದಾರೆ.

ಅರ್ಜಿದಾರ ಮಹಿಳೆಯು 2019ರ ಡಿಸೆಂಬರ್‌ನಲ್ಲಿ ಮದುವೆ ಆಗಿದ್ದರು. ನಂತರ ದಂಪತಿ ಸಿಂಗಪುರಕ್ಕೆ ತೆರಳಿದ್ದರು. ಆದರೆ ಪತಿ ಮತ್ತು ಆತನ ಕುಟುಂಬದವರು ಹಿಂಸೆ ಕೊಟ್ಟ ಕಾರಣಕ್ಕೆ ತಾನು 2021ರ ಫೆಬ್ರುವರಿಯಲ್ಲಿ ಭಾರತಕ್ಕೆ ಮರಳಬೇಕಾಯಿತು ಎಂದು ಮಹಿಳೆ ಆರೋಪಿಸಿದ್ದಾರೆ.

ಭಾರತಕ್ಕೆ ಮರಳಲು ತಾನು ತನ್ನ ಚಿನ್ನಾಭರಣ ಮಾರಬೇಕಾಯಿತು ಎಂದು ಅವರು ಹೇಳಿದ್ದಾರೆ. 2021ರಲ್ಲಿ ಅವರು ಪತಿಯಿಂದ ಜೀವನಾಂಶ ಕೋರಿ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯನ್ನು ವಿಚಾರಣಾ ನ್ಯಾಯಾಲಯ ತಿರಸ್ಕರಿಸಿದ ಕಾರಣಕ್ಕೆ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು.

ತಾನು ನಿರುದ್ಯೋಗಿ, ತನಗೆ ಸ್ವತಂತ್ರವಾದ ಆದಾಯ ಮೂಲ ಇಲ್ಲ. ಆದರೆ ಪತಿಯು ಚೆನ್ನಾಗಿ ಸಂಪಾದಿಸುತ್ತಿದ್ದಾರೆ. ಹೀಗಿರುವಾಗ ಅರ್ಜಿಯನ್ನು ತಿರಸ್ಕರಿಸಿದ ವಿಚಾರಣಾ ನ್ಯಾಯಾಲಯದ ಕ್ರಮವು ಸರಿಯಲ್ಲ ಎಂದು ಮಹಿಳೆ ವಾದಿಸಿದ್ದರು.

ಮಹಿಳೆಯು ಉನ್ನತ ಶಿಕ್ಷಣ ಪಡೆದಿದ್ದಾರೆ, ಅವರು ಹಣ ಸಂಪಾದಿಸುವ ಸಾಮರ್ಥ್ಯ ಹೊಂದಿದ್ದಾರೆ ಎಂದು ಪತಿ ವಾದಿಸಿದ್ದರು. ನಿರುದ್ಯೋಗದ ಕಾರಣವನ್ನಷ್ಟೇ ನೀಡಿ ಜೀವನಾಂಶ ಕೇಳುವಂತಿಲ್ಲ ಎಂದು ಅವರು ಹೇಳಿದ್ದರು.

ಸಮ್ಮತಿ ಸಂಬಂಧ: ಸುಪ್ರೀಂ ಕೋರ್ಟ್ ತರಾಟೆ

ನವದೆಹಲಿ (ಪಿಟಿಐ): ಬಾಲಕಿಯೊಬ್ಬಳ ಮೇಲೆ ಅತ್ಯಾಚಾರ ಎಸಗಿದ ಆರೋಪ ಎದುರಿಸುತ್ತಿರುವ ವ್ಯಕ್ತಿಯ ಜಾಮೀನು ಅರ್ಜಿಯಲ್ಲಿ ‘ಸಮ್ಮತಿಯ ಸಂಬಂಧ’ ಎಂದು ಪದೇ ಪದೇ ಉಲ್ಲೇಖಿಸಿದ್ದಕ್ಕೆ ವಕೀಲರೊಬ್ಬರಿಗೆ ಸುಪ್ರೀಂ ಕೋರ್ಟ್ ಗುರುವಾರ ‘ಮಂಗಳಾರತಿ’ ಎತ್ತಿದೆ.

‘ಈ ಅರ್ಜಿಯನ್ನು ಓದಿ ನಮಗೆ ನಿಜಕ್ಕೂ ಮಾನಸಿಕ ಕಾಯಿಲೆ ಬಂದಂತಾಯಿತು. ಅರ್ಜಿಯಲ್ಲಿ ನೀವು ಕನಿಷ್ಠ 20 ಬಾರಿ ಸಮ್ಮತಿಯ ಸಂಬಂಧ ಎಂದು ಬರೆದಿದ್ದೀರಿ. ಬಾಲಕಿಯ ವಯಸ್ಸು ಎಷ್ಟು? ಆಕೆ ಅಪ್ರಾಪ್ತೆ ಎಂಬುದನ್ನು ನೀವೇ ಹೇಳಿದ್ದೀರಿ’ ಎಂದು ವಕೀಲರನ್ನು ಉದ್ದೇಶಿಸಿ ನ್ಯಾಯಮೂರ್ತಿ ಸೂರ್ಯಕಾಂತ್ ಹೇಳಿದರು.


ಸಂತ್ರಸ್ತೆ ಬಾಲಕಿ ಎಂದಾದರೆ ಅಲ್ಲಿ ಸಮ್ಮತಿಯ ಪ್ರಶ್ನೆ ಉದ್ಭವವೇ ಆಗುವುದಿಲ್ಲ ಎಂಬುದನ್ನು ಪೀಠವು ವಕೀಲರಿಗೆ ಸ್ಪಷ್ಟಪಡಿಸಿತು.

‘ಸಮ್ಮತಿಯ ಸಂಬಂಧ ಎಂಬುದನ್ನು ಪ್ರತಿ ಪ್ಯಾರಾದಲ್ಲಿಯೂ ಬರೆಯಲಾಗಿದೆ. ಸಮ್ಮತಿಯ ಸಂಬಂಧ ಅಂದರೆ ಏನು ಅರ್ಥ? ಕಾನೂನಿನ ಅ, ಆ, ಇ, ಈ ನಿಮಗೆ ಗೊತ್ತಿಲ್ಲ... ವಿಶೇಷ ಮೇಲ್ಮನವಿ ಅರ್ಜಿ ಏಕೆ ಸಲ್ಲಿಸುತ್ತೀರಿ’ ಎಂದು ನ್ಯಾಯಮೂರ್ತಿ ಕಾಂತ್ ಪ್ರಶ್ನಿಸಿದರು. ಈ ಸಂದರ್ಭದಲ್ಲಿ ವಿಭಾಗೀಯ ಪೀಠದಲ್ಲಿ ನ್ಯಾಯಮೂರ್ತಿ ಎನ್. ಕೋಟೀಶ್ವರ ಸಿಂಗ್ ಅವರೂ ಇದ್ದರು.

‘ನಿಮಗೆ ಕಾನೂನಿನ ಮೂಲಜ್ಞಾನವೂ ಇಲ್ಲ... ಸಮ್ಮತಿಯ ಸಂಬಂಧ ಎಂದು 20 ಬಾರಿ ಬರೆದಿದ್ದೀರಿ. ನಾಳೆ ನೀವು, ಎಂಟು ತಿಂಗಳ ಮಗುವಿನ ಜೊತೆ ಸಮ್ಮತಿಯ ಸಂಬಂಧ ಇತ್ತು ಎಂದೂ ಹೇಳುತ್ತೀರಿ’ ಎಂದು ಪೀಠ ಆಕ್ರೋಶ ವ್ಯಕ್ತಪಡಿಸಿತು. ವಕೀಲರು ಪೀಠದ ಕ್ಷಮೆ ಯಾಚಿಸಿದರು. ಅರ್ಜಿಗೆ ಸಂಬಂಧಿಸಿ ಪೊಲೀಸರಿಗೆ, ಇತರರಿಗೆ ನೋಟಿಸ್ ಜಾರಿಗೆ ಪೀಠ ಆದೇಶಿಸಿದೆ.

ಸಂಕ್ಷಿಪ್ತ ಸುದ್ದಿ

ರಾಮ್ ಸುತಾರ್‌ಗೆ ‘ಮಹಾರಾಷ್ಟ್ರ ಭೂಷಣ’ ಪ್ರಶಸ್ತಿ



ರಾಮ್ ಸುತಾರ್

ಮುಂಬೈ: ಸಂಸತ್ತಿನ ಹಳೆಯ ಕಟ್ಟಡದ ಮುಂಭಾಗ ಇರುವ ಮಹಾತ್ಮ ಗಾಂಧಿ ಪ್ರತಿಮೆ, ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇರುವ 108 ಅಡಿಯ ಕೆಂಪೇಗೌಡ ಪ್ರತಿಮೆ, ಗುಜರಾತ್‌ನ ಏಕತೆ ಪ್ರತಿಮೆ ಸೇರಿದಂತೆ ನೂರಾರು ಪ್ರತಿಮೆಗಳನ್ನು ಕೆತ್ತಿದ ವಿಶ್ವ ವಿಖ್ಯಾತ ಶಿಲ್ಪಿ ಶತಾಯುಷಿ ರಾಮ್ ಸುತಾರ್ ಅವರಿಗೆ ‘ಮಹಾರಾಷ್ಟ್ರ ಭೂಷಣ’ ಪ್ರಶಸ್ತಿ ನೀಡಲಾಗುತ್ತಿದೆ.

ಈ ಬಗ್ಗೆ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಘೋಷಣೆ ಮಾಡಿದ್ದಾರೆ. ಮಹಾರಾಷ್ಟ್ರ ರಾಜ್ಯದ ಅತ್ಯುನ್ನತ ಪ್ರಶಸ್ತಿ ಇದಾಗಿದೆ. ರಾಜ್ಯದ ಧೂಳೆ ಜಿಲ್ಲೆಯ ಧೂಳೆ ನಗರದವರು.

ದೇಶದ್ರೋಹ ಪ್ರಕರಣ

ನಾಗ್ಪುರ (ಪಿಟಿಐ): ನಾಗ್ಪುರದಲ್ಲಿ ಈಚೆಗೆ ನಡೆದ ಹಿಂಸಾಚಾರ ಕೃತ್ಯಗಳ ಸಂಬಂಧ ಸ್ಥಳೀಯ ಮುಖಂಡ ಫಾಹಿಂ ಖಾನ್ ಮತ್ತು ಇತರ ಐವರ ಮೇಲೆ ಪೊಲೀಸರು ದೇಶದ್ರೋಹ ಮತ್ತು ಇತರ ಆರೋಪಗಳಿಗೆ ಸಂಬಂಧಿಸಿದಂತೆ ಪ್ರಕರಣವನ್ನು ದಾಖಲಿಸಿದ್ದಾರೆ.

ನಗರದಲ್ಲಿ ಉದ್ವಿಗ್ನ ಪರಿಸ್ಥಿತಿ ಇದ್ದಾಗ ಸಾಮಾಜಿಕ ಜಾಲತಾಣಗಳ ಮೂಲಕ ವದಂತಿ ಹಬ್ಬಿಸಿದ ಕುರಿತು ಪ್ರಕರಣವನ್ನು ದಾಖಲಿಸಲಾಗಿದೆ. ಇವರು ಸೇರಿದಂತೆ ಒಟ್ಟು 50 ಜನರ ವಿರುದ್ಧ ಸೈಬರ್ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು.

ದಗ್ಗುಬಾಟಿ, ಪ್ರಕಾಶ್ ರಾಜ್, ವಿಜಯ್ ದೇವರಕೊಂಡ ವಿರುದ್ಧ ಪ್ರಕರಣ

ಹೈದರಾಬಾದ್(ಪಿಟಿಐ): ಬೆಟ್ಟಿಂಗ್ ಆ್ಯಪ್‌ಗಳ ಪರ ಪ್ರಚಾರ ಮಾಡಿದ ಆರೋಪದ ಮೇಲೆ ನಟರಾದ ರಾನಾ ದಗ್ಗುಬಾಟಿ, ಪ್ರಕಾಶ್ ರಾಜ್, ವಿಜಯ್ ದೇವರಕೊಂಡ, ನಟಿಯರಾದ ಮಂಚು ಲಕ್ಷ್ಮಿ, ಪ್ರಣೀತಾ, ನಿಧಿ ಅಗರ್‌ವಾಲ್ ಮತ್ತು 19 ಮಂದಿ ಇನ್‌ಫ್ಲುಯೆನ್ಸರ್‌ಗಳ ವಿರುದ್ಧ ತೆಲಂಗಾಣ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ನಟ, ನಟಿಯರಲ್ಲದೆ, ಸಾಮಾಜಿಕ ಜಾಲತಾಣದಲ್ಲಿ ಪ್ರಭಾವಿಗಳಾಗಿರುವ ಅನನ್ಯಾ, ಶ್ರೀಮುಖಿ, ವರ್ಷಿಣಿ, ಸನ್ನಿ ಯಾದವ್ ಸೇರಿ ಹಲವರ ವಿರುದ್ಧ ಉದ್ಯಮಿಯೊಬ್ಬರು ಮಿಯಾಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಕ್ಲೇಮ್ ಮೊತ್ತ ನೇರ ವರ್ಗಾವಣೆ ಸೂಕ್ತ

ನವದೆಹಲಿ: ರಸ್ತೆ ಅಪಘಾತಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ಪರಿಹಾರ ಮೊತ್ತವನ್ನು ಕ್ಲೇಮ್ ಸಲ್ಲಿಸಿದವರ ಬ್ಯಾಂಕ್ ಖಾತೆಗೆ ನೇರವಾಗಿ ವರ್ಗಾಯಿಸುವ ಮೂಲಕ ಪಾವತಿ ಪ್ರಕ್ರಿಯೆಯನ್ನು ಸುವ್ಯವಸ್ಥಿತಗೊಳಿಸಬಹುದು ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

ಹೀಗೆ ಮಾಡುವುದರಿಂದ ವಿಮಾ ಕಂಪನಿಗಳು ಹಾಗೂ ಕ್ಲೇಮ್ ಸಲ್ಲಿಸಿದವರು ನ್ಯಾಯಾಲಯದ ಪ್ರಕ್ರಿಯೆಗಳ ಗುದ್ದಾಟದಿಂದ ಪಾರಾಗುತ್ತಾರೆ ಎಂದು ಹೇಳಿದೆ.

ವಿಮಾ ಪರಿಹಾರ ಮೊತ್ತದ ಬಗ್ಗೆ ವಿವಾದ ಇಲ್ಲದೆ ಇದ್ದಾಗ ವಿಮಾ ಕಂಪನಿಗಳು ಮೊತ್ತವನ್ನು ಮೋಟಾರು ವಾಹನ ಅಪಘಾತ ಕ್ಲೇಮ್ ನ್ಯಾಯಮಂಡಳಿಯ ಖಾತೆಯಲ್ಲಿ ಇರಿಸುತ್ತವೆ. ಈ ಪ್ರಕ್ರಿಯೆಯನ್ನು ಪಾಲಿಸುವ ಬದಲು, ನ್ಯಾಯಮಂಡಳಿಗೆ ಮಾಹಿತಿ ಒದಗಿಸಿ, ಹಣವನ್ನು ಕ್ಲೇಮ್ ಸಲ್ಲಿಸಿದವರ ಖಾತೆಗೆ ನೇರವಾಗಿ ವರ್ಗಾಯಿಸುವ ಸೂಚನೆಯನ್ನು ಯಾವಾಗ ಬೇಕಿದ್ದರೂ ಹೊರಡಿಸಬಹುದು ಎಂದು ನ್ಯಾಯಮೂರ್ತಿ ಜೆ.ಕೆ. ಮಾಹೇಶ್ವರಿ ನೇತೃತ್ವದ ವಿಭಾಗೀಯ ಪೀಠ ಹೇಳಿದೆ.



ಸುಭಾಷಿತ

ಸಾಹಿತ್ಯದ ಕೆಲಸವೆಂದರೆ ಮನುಷ್ಯನ ಅಂತರಾಳಕ್ಕೆ ಪ್ರವೇಶ ದೊರಕಿಸಿಕೊಡುವುದು. ಪ್ರೀತಿ, ಅನುಕಂಪ, ಕರುಣೆಯನ್ನು ಹುಟ್ಟಿಸುವುದು.

–ಎಸ್.ಎಲ್.ಭೈರಪ್ಪ

ನೌಕರರ ಪಿಂಚಣಿಗಾಗಿ ವಿದ್ಯುತ್ ದರ ಏರಿಸುವುದು ಜನವಿರೋಧಿ ನಡೆ

ಹಣದುಬ್ಬರವು ದೇಶದ ಜನರನ್ನು ವರ್ಷಗಳಿಂದ ಕಾಡುತ್ತಲೇ ಇದೆ. ಇದು ನಿಯಂತ್ರಣಕ್ಕೆ ಬಾರದ ಪರಿಣಾಮವಾಗಿ ಅಗತ್ಯ ವಸ್ತುಗಳ ದರ ಏರುಮುಖವಾಗಿಯೇ ಇದೆ. ಕಡಿಮೆ ಆದಾಯದ ಜನಸಮೂಹವು ಜೀವನ ನಿರ್ವಹಣೆಯ ವೆಚ್ಚವನ್ನು ಹೊಂದಿಸಿಕೊಳ್ಳುವುದಕ್ಕೂ ಕಷ್ಟಪಡಬೇಕಾದ ಸ್ಥಿತಿ ಇದೆ. ವಿದ್ಯುತ್ ಪೂರೈಕೆಯ ಕೆಲಸ ನಿರ್ವಹಿಸುತ್ತಿರುವ ನೌಕರರ ಪಿಂಚಣಿ ಮತ್ತು ಗ್ರಾಚ್ಯುಟಿ ಪಾವತಿಗೆ ರಾಜ್ಯ ಸರ್ಕಾರ ಭರಿಸಬೇಕಿದ್ದ ಮೊತ್ತವನ್ನು ಗ್ರಾಹಕರ ಮೇಲೆ ಹೊರಿಸುವ ತೀರ್ಮಾನಕ್ಕೆ ಇಂಧನ ಇಲಾಖೆ ಬಂದಿದೆ. ಈ ಮೊತ್ತವನ್ನು ವಿದ್ಯುತ್ ಬಳಕೆದಾರರಿಂದಲೇ ವಸೂಲಿ ಮಾಡಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ (ಕೆಪಿಟಿಸಿಎಲ್) ಮತ್ತು ಅದರ ಅಧೀನದಲ್ಲಿರುವ ಎಲ್ಲ ವಿದ್ಯುತ್ ಸರಬರಾಜು ಕಂಪನಿಗಳು (ಎಸ್ಕಾಂ) ನಿರ್ಧರಿಸಿವೆ. ಈ ಮೊತ್ತವನ್ನು ಗ್ರಾಹಕರಿಗೆ ನೀಡುವ ವಿದ್ಯುತ್ ಬಿಲ್‌ನಲ್ಲಿ ಸೇರಿಸಲು ಅನುಮತಿ ಕೋರಿ ಕೆಪಿಟಿಸಿಎಲ್ ಹಾಗೂ ಎಸ್ಕಾಂಗಳು ಸಲ್ಲಿಸಿದ್ದ ಅರ್ಜಿಯನ್ನು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ಪುರಸ್ಕರಿಸಿದೆ. ಏಪ್ರಿಲ್ 1ರ ನಂತರ ನೀಡಲಾಗುವ ವಿದ್ಯುತ್ ಬಿಲ್‌ನಲ್ಲಿ ಈ ಹೊರೆಯೂ ಇರಲಿದೆ. ಇಂಧನ ಇಲಾಖೆಯ ಕಾರ್ಯನಿರ್ವಹಣೆಗೆ ಕಾರ್ಪೊರೇಟ್ ಸ್ವರೂಪ ನೀಡುವ ಉದ್ದೇಶದಿಂದ ಕೆಪಿಟಿಸಿಎಲ್ ಮತ್ತು ಎಸ್ಕಾಂಗಳನ್ನು ಅಸ್ತಿತ್ವಕ್ಕೆ ತಂದ ಕಾರಣವನ್ನೇ ನೆಪ ಮಾಡಿಕೊಂಡು ಅಲ್ಲಿನ ನೌಕರರ ಪಿಂಚಣಿ ಮತ್ತು ಗ್ರಾಚ್ಯುಟಿಯ ಹೊರೆಯನ್ನು ಗ್ರಾಹಕರಿಗೆ ವರ್ಗಾಯಿಸುವ ಕೆಲಸವನ್ನು ಸರ್ಕಾರ ಮಾಡುತ್ತಿದೆ.



ಈ ನಿರ್ಧಾರವನ್ನು ಸರ್ಕಾರ ತಕ್ಷಣ ಹಿಂಪಡೆಯಬೇಕು. ವಿದ್ಯುತ್ ನೌಕರರ ಪಿಂಚಣಿ, ಗ್ರಾಚ್ಯುಟಿಯ ಪಾಲು ತುಂಬುವುದಕ್ಕೆ ಪರ್ಯಾಯ ವ್ಯವಸ್ಥೆಯತ್ತ ಗಮನಹರಿಸಬೇಕು

2002ರವರೆಗಿನ ಅವಧಿಗೆ ಈ ನೌಕರರ ಪಿಂಚಣಿ ಮತ್ತು ಗ್ರಾಚ್ಯುಟಿ ಬಾಬ್ತಿನ ಮೊತ್ತವನ್ನು ರಾಜ್ಯ ಸರ್ಕಾರವೇ ಭರಿಸಿ, ನಂತರದ ಅವಧಿಯ ಸರ್ಕಾರದ ಪಾಲನ್ನು ಗ್ರಾಹಕರಿಗೆ ವರ್ಗಾಯಿಸುವ ತೀರ್ಮಾನವನ್ನು ಇಂಧನ ಇಲಾಖೆ ಹಿಂದೆ ಮಾಡಿತ್ತು. ಅದನ್ನು ಹಲವು ಗ್ರಾಹಕರು ಪ್ರಶ್ನಿಸಿದ್ದರು. ಈಗ ಕೆಇಆರ್‌ಸಿಯಿಂದ ಪೂರಕ ಆದೇಶವೊಂದನ್ನು ಪಡೆಯುವ ಮೂಲಕ ಅದನ್ನು ಜಾರಿಗೊಳಿಸಲು ಇಂಧನ ಇಲಾಖೆ ಸಜ್ಜಾಗಿದೆ. ಮುಂದಿನ ಮೂರು ವರ್ಷಗಳ ಅವಧಿಯಲ್ಲಿ ₹ 4,659 ಕೋಟಿ ಹಿಂಬಾಕಿ ಮೊತ್ತವೂ ಸೇರಿದಂತೆ ₹ 8,519 ಕೋಟಿಯನ್ನು ಗ್ರಾಹಕರಿಂದ ವಸೂಲಿ ಮಾಡಲು ಉದ್ದೇಶಿಸಲಾಗಿದೆ. ಏಪ್ರಿಲ್ 1ರ ನಂತರ ನೀಡಲಾಗುವ ವಿದ್ಯುತ್ ಬಿಲ್‌ಗಳಲ್ಲಿ ಪ್ರತಿ ಯೂನಿಟ್ ವಿದ್ಯುತ್ ಮೇಲೆ 36 ಪೈಸೆಯನ್ನು ಹೆಚ್ಚುವರಿಯಾಗಿ ವಸೂಲಿ ಮಾಡಲಾಗುತ್ತದೆ. 2026-27ರಲ್ಲಿ ಈ ದರ ಪ್ರತಿ ಯೂನಿಟ್‌ಗೆ 35 ಪೈಸೆ ಇದ್ದರೆ, 2027-28ರಲ್ಲಿ ಪ್ರತಿ ಯೂನಿಟ್‌ಗೆ 34 ಪೈಸೆ ಇರಲಿದೆ. ರಾಜ್ಯದಲ್ಲಿ 2022 ಮತ್ತು 2023ರಲ್ಲಿ ವಿದ್ಯುತ್ ದರ ಏರಿಕೆ ಮಾಡಲಾಗಿತ್ತು. ವಾರ್ಷಿಕ ದರ ಪರಿಷ್ಕರಣೆ ಆದೇಶ ಹೊರಡಿಸುವಂತೆ ಕೋರಿ ಕೆಪಿಟಿಸಿಎಲ್ ಮತ್ತು ಎಸ್ಕಾಂಗಳು ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಕೆಇಆರ್‌ಸಿ ತೀರ್ಮಾನ ಪ್ರಕಟಿಸಬೇಕಿದೆ. ಅದಕ್ಕೂ ಮುನ್ನ ಗ್ರಾಹಕರ ಮೇಲೆ ಪಿಂಚಣಿ ಹಾಗೂ ಗ್ರಾಚ್ಯುಟಿ ಪಾಲಿನ ಹೊರೆ ಹೊರಿಸಲಾಗಿದೆ. ಕೆಪಿಟಿಸಿಎಲ್ ಮತ್ತು ಎಸ್ಕಾಂಗಳು ಸ್ವತಂತ್ರ ಕಂಪನಿಗಳೆಂದು ಬಿಂಬಿಸಿ, ಅವುಗಳ ನೌಕರರ ಪಿಂಚಣಿ ಮತ್ತು ಗ್ರಾಚ್ಯುಟಿಗೆ ಸರ್ಕಾರ ಭರಿಸಬೇಕಿದ್ದ ಮೊತ್ತವನ್ನು ಗ್ರಾಹಕರಿಗೆ ವರ್ಗಾಯಿಸುವ ರಾಜ್ಯ ಸರ್ಕಾರದ ನಡೆ ಜನವಿರೋಧಿಯಾದುದು.

ಬೆಲೆ ಏರಿಕೆಯಿಂದ ತತ್ತರಿಸಿರುವ ರಾಜ್ಯದ ಜನರಿಗೆ ವಿದ್ಯುತ್ ಬಿಲ್ ಪಾವತಿ ಕಷ್ಟವಾಗುತ್ತಿದೆ ಎಂಬ ಕಾರಣಕ್ಕಾಗಿಯೇ ಸರ್ಕಾರವು 'ಗೃಹ ಜ್ಯೋತಿ' ಯೋಜನೆಯಡಿ 200 ಯೂನಿಟ್‌ಗಳವರೆಗೆ ವಿದ್ಯುತ್ ಅನ್ನು ಉಚಿತವಾಗಿ ಪೂರೈಸುತ್ತಿದೆ. ಈಗ ವಿದ್ಯುತ್ ನೌಕರರ ಪಿಂಚಣಿ, ಗ್ರಾಚ್ಯುಟಿಯ ಆರ್ಥಿಕ ಹೊರೆಯನ್ನು ಗ್ರಾಹಕರ ಮೇಲೆ ಹೇರುವುದು ತದ್ವಿರುದ್ಧವಾದ ನಡೆ. ಕೆಪಿಟಿಸಿಎಲ್ ಮತ್ತು ಎಸ್ಕಾಂಗಳ ನೌಕರರನ್ನು ಸರ್ಕಾರಿ ನೌಕರರೆಂದೇ ಪರಿಗಣಿಸಲಾಗಿದೆ. ಹೀಗಿರುವಾಗ ಆ ನೌಕರರ ಪಿಂಚಣಿ, ಗ್ರಾಚ್ಯುಟಿಯಂತಹ ಸೌಲಭ್ಯಗಳಿಗೆ ಅಗತ್ಯ ಆರ್ಥಿಕ ಸಂಪನ್ಮೂಲ ಒದಗಿಸುವುದು ಸರ್ಕಾರದ ಹೊಣೆಗಾರಿಕೆ. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ಬೀದಿ ದೀಪಗಳು, ಕುಡಿಯುವ ನೀರು ಪೂರೈಕೆ, ಕೃಷಿ ನೀರಾವರಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಪೂರೈಕೆ ಬಾಬ್ತಿನ ಭಾರಿ ಮೊತ್ತದ ವಿದ್ಯುತ್ ಬಿಲ್‌ಗಳು ಪಾವತಿಯಾಗದೆ ಉಳಿದಿವೆ. ಈ ಬಾಕಿ ಮೊತ್ತವನ್ನು ತ್ವರಿತವಾಗಿ ಎಸ್ಕಾಂಗಳಿಗೆ ಪಾವತಿಸಬೇಕು. ಕಾರ್ಯನಿರ್ವಹಣಾ ವೆಚ್ಚ ತಗ್ಗಿಸುವುದು, ವಿದ್ಯುತ್ ಪೂರೈಕೆಯಲ್ಲಿನ ಸೋರಿಕೆ ತಡೆಯುವಂತಹ ಬಿಗಿ ಕ್ರಮಗಳ ಮೂಲಕ ಕೆಪಿಟಿಸಿಎಲ್ ಹಾಗೂ ಎಸ್ಕಾಂಗಳನ್ನು ನಷ್ಟದಿಂದ ಹೊರತರಬೇಕು. ಈ ಕಂಪನಿಗಳು ತಮ್ಮ ನೌಕರರಿಗೆ ತಾವೇ ಪಿಂಚಣಿ, ಗ್ರಾಚ್ಯುಟಿ ನೀಡುವಷ್ಟು ಸಶಕ್ತವಾಗಬೇಕು. ಇಲ್ಲವೇ ರಾಜ್ಯ ಸರ್ಕಾರವೇ ಆ ಪಾಲನ್ನು ಭರಿಸಬೇಕು. ಏಪ್ರಿಲ್ ಒಂದರಿಂದ ವಿದ್ಯುತ್ ಬಿಲ್‌ನಲ್ಲಿ ಹೆಚ್ಚುವರಿ ಮೊತ್ತ ಸೇರಿಸುವಂತಹ ನಿರ್ಧಾರದಿಂದಾಗಿ ಗೃಹ ಜ್ಯೋತಿ ಯೋಜನೆಯ ಸೌಲಭ್ಯ ಪಡೆದವರಿಗೆ ತಕ್ಷಣಕ್ಕೆ ತೊಂದರೆ ಆಗದಿರಬಹುದು. ಆದರೆ, ಆ ಸೌಲಭ್ಯ ಪಡೆಯದೇ ಇರುವವರು ಮತ್ತು ವಾಣಿಜ್ಯ, ಕೈಗಾರಿಕಾ ಉದ್ದೇಶಕ್ಕೆ ವಿದ್ಯುತ್ ಬಳಸುತ್ತಿರುವವರನ್ನು ಈ ನಿರ್ಧಾರವು ಆರ್ಥಿಕ ಸಂಕಷ್ಟಕ್ಕೆ ತಳ್ಳಲಿದೆ. ಈ ನಿರ್ಧಾರವನ್ನು ಸರ್ಕಾರ ತಕ್ಷಣ ಹಿಂಪಡೆಯಬೇಕು. ವಿದ್ಯುತ್ ನೌಕರರ ಪಿಂಚಣಿ, ಗ್ರಾಚ್ಯುಟಿಯ ಪಾಲು ತುಂಬುವುದಕ್ಕೆ ಪರ್ಯಾಯ ವ್ಯವಸ್ಥೆಯತ್ತ ಗಮನಹರಿಸಬೇಕು.

ಪೋಷಕರನ್ನು ದೂಷಿಸುವುದರಿಂದಲೇ ಮಕ್ಕಳ ಅಭ್ಯುದಯ ಆಗಲಾರದು

ಮಕ್ಕಳ ನಿರ್ವಹಣೆ: ಅರಿಯಬೇಕಿದೆ ಹೊಣೆ



ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

'ಹಿಂದೆಲ್ಲ ಬಹಳ ಚೆನ್ನಾಗಿತ್ತು. ಈಗ ಕಾಲ ಕೆಟ್ಟಿದೆ' ಎನ್ನುವುದು ಒಂದು ಮಾನಸಿಕತೆಯೇ ವಿನಾ ವಾಸ್ತವ ಅಲ್ಲ. ಹಿಂದೆಯೂ ಬಹಳಷ್ಟು ಕೆಟ್ಟ ಪರಿಸ್ಥಿತಿ ಇತ್ತು ಎನ್ನಲು ಐತಿಹಾಸಿಕ ಸಾಕ್ಷ್ಯಗಳಿವೆ. ಆದರೆ 'ಹಿಂದಿನ ಕಾಲ ಚೆನ್ನಾಗಿತ್ತು' ಎಂಬ ಆಲೋಚನಾ ಕ್ರಮದಲ್ಲಿ ವರ್ತಮಾನದ ಸಮಸ್ಯೆಗಳಿಗೆ ಉತ್ತರವನ್ನು ಕಂಡುಕೊಳ್ಳುವ ಮಾನಸಿಕ ಸ್ಥಿತಿ ಇರುತ್ತದೆ. ಈ ಮಾನಸಿಕ ಸ್ಥಿತಿ ತೀರಾ ಅವಾಸ್ತವಿಕ ವಾದದ್ದನ್ನು ಪ್ರತಿಪಾದಿಸಿದಾಗ ಅದರ ಸತ್ಯಾಸತ್ಯತೆಯ ಪರಿಶೀಲನೆ ಬೇಕಾಗುತ್ತದೆ.

ಈಗಿನ ಸಣ್ಣ ಕುಟುಂಬಗಳಲ್ಲಿ ತಂದೆ- ತಾಯಿ ಇಬ್ಬರೂ ಉದ್ಯೋಗಿಗಳಾಗಿರುವುದರಿಂದ ಮಕ್ಕಳ ಪಾಲನೆಯಲ್ಲಿ ಸರಿಯಾಗಿ ಮುತುವರ್ಜಿ ವಹಿಸಲು ಆಗುತ್ತಿಲ್ಲ ಎಂಬ ನಂಬಿಕೆಯನ್ನು ಆಧರಿಸಿ, ತಂದೆ-ತಾಯಿ ತಮ್ಮನ್ನು ಅಗತ್ಯವಿದ್ದಷ್ಟು ಗಮನಿಸುತ್ತಿಲ್ಲ ಎಂದು ಮಕ್ಕಳು ಕೊರಗಿ ಕೊರಗಿ ತಂದೆ-ತಾಯಿ ಬಗ್ಗೆ ಅಕಾರಣ ಸಿಟ್ಟನ್ನು ಮಾಡಿಕೊಳ್ಳುವುದು, ಅಗತ್ಯಗಳಿಗೆ ಸ್ಪಂದಿಸುತ್ತಿಲ್ಲ ಎಂದು ಗಂಡ ಮತ್ತು ಹೆಂಡತಿ ಪರಸ್ಪರ ಅಸಮಾಧಾನ, ಅಸಹನೆಯನ್ನು ಬೆಳೆಸಿಕೊಳ್ಳುವಂತಹ ಸ್ಥಿತಿ ಉಂಟಾಗಿದೆ.

ಆದರೆ ಬಹಳ ಭವ್ಯವಾಗಿತ್ತು ಎಂದು ಕಲ್ಪಿಸಿಕೊಂಡ ಕೂಡು ಕುಟುಂಬಗಳ ಪರಿಸ್ಥಿತಿ ನಿಜವಾಗಿ ಹೇಗಿತ್ತು? ಪುರುಷ ಸದಸ್ಯರು ಸಾಮಾನ್ಯವಾಗಿ ಹೊಲಗಳ ಕೆಲಸ, ಕಟ್ಟೆಪುರಾಣ, ಕೆಲವರು ಕೆಲವು ಚಟಗಳನ್ನು ಹೊಂದಿದವರಾಗಿರುತ್ತಿದ್ದರು. ಅವರೂ ಹೆಂಡತಿ- ಮಕ್ಕಳನ್ನು ಸಿನಿಮಾ, ಹೋಟೆಲ್ ಎಂದು ಸುತ್ತಾಡಿಸುತ್ತಿರಲಿಲ್ಲ. ವರ್ಷಕ್ಕೊಮ್ಮೆಯೇನಾದರೂ ದೇವಸ್ಥಾನಕ್ಕೊ, ಜಾತ್ರೆಗೊ ಕರೆದೊಯ್ದರೆ ಮುಗಿಯಿತು ಅಷ್ಟೆ. ಮಹಿಳೆಯರ ಸ್ಥಿತಿ ಸದಾ ಒಲೆಯ ಮುಂದೆಯೇ ಇರುತ್ತಿತ್ತು. ದೊಡ್ಡ ಕುಟುಂಬ, ಬಿಡುವಿಲ್ಲದ ದಿನಚರಿಯಲ್ಲಿ ಮಕ್ಕಳಿಗೆ ಬೇಕಾದ್ದನ್ನು ಕೊಡಿಸಲು, ತಿರುಗಾಡಿಸಲು ಅವರಿಗೂ ಸಮಯ ಇರುತ್ತಿರಲಿಲ್ಲ.

ಮಕ್ಕಳು ತಂದೆಯನ್ನು ಕಂಡರೇನೆ ಭಯಪಡುತ್ತಿದ್ದರು. ಮಕ್ಕಳಿಗೆ ಏನಾದರೂ ಬೇಕಾದರೆ ತಾಯಿಯ ಮೂಲಕ ತಂದೆಯ ಬಳಿ ಅಂಜಿಕೆಯಿಂದ ಕೇಳಿಸಬೇಕಿತ್ತು. ನೇರವಾಗಿ ಕೇಳುವ ಸ್ವಾತಂತ್ರ್ಯವೇ ಮಕ್ಕಳಿಗಿರಲಿಲ್ಲ. ತಂದೆಯೊಂದಿಗೆ ಗೆಳೆತನದಿಂದ ವ್ಯವಹರಿಸಲು ಸಾಧ್ಯವಾಗಿರುವುದೇ ಇಂದಿನ ತಲೆಮಾರಿನಲ್ಲಿ. ತಾಯಿಯೊಂದಿಗೆ ಸ್ವಲ್ಪ ಸ್ನೇಹ ಇರುತ್ತಿತ್ತು. ಆದರೆ ತಾಯಿಗೆ ಮಕ್ಕಳೊಂದಿಗೆ ಒಡನಾಡಲು ಸಮಯವೇ ಸಿಗುತ್ತಿರಲಿಲ್ಲ. ಮಹಿಳೆಯರು ಬರಿಯ ಯಂತ್ರಗಳಂತಾಗುತ್ತಾರೆ ಎನ್ನುವ ಕಾರಣಕ್ಕೇನೆ ರಾಮಮನೋಹರ ಲೋಹಿಯಾ ಅವರು ಕೂಡು ಕುಟುಂಬವನ್ನು ವಿರೋಧಿಸಿದ್ದರು. ಈಗಿನ ವಿಭಕ್ತ ಕುಟುಂಬಗಳಲ್ಲಿ ಉದ್ಯೋಗಸ್ಥ ಮಹಿಳೆ ಉದ್ಯೋಗವನ್ನು ಮಾಡಲು ಸಾಧ್ಯವಾಗಿರುವುದು 'ಬೇಯಿಸುವ ಮತ್ತು ತೊಳೆಯುವ' ಕೆಲಸ ಬಹಳಷ್ಟು ಕಡಿತವಾದುದರಿಂದಾಗಿ ಎಂಬುದು ಗಮನಾರ್ಹ ಅಂಶ.

ಕೂಡು ಕುಟುಂಬಗಳಲ್ಲಿ ತಂದೆ- ತಾಯಿಯೇ ಮಕ್ಕಳ ಕಾಳಜಿ ತೆಗೆದುಕೊಂಡು ನಿರ್ವಹಿಸುತ್ತಿದ್ದುದು ಕಡಿಮೆಯೇ. ಆದರೆ ಅಣ್ಣಂದಿರು, ಅಕ್ಕಂದಿರು ಕಿರಿಯರ ನಿರ್ವಹಣೆಯಲ್ಲಿ ಪಾತ್ರ ವಹಿಸುತ್ತಿದ್ದರು. ಎಲ್ಲರೊಂದಿಗೆ ಹೊಂದಾಣಿಕೆ ಮಾಡಿಕೊಂಡು ಬದುಕುವುದನ್ನು ಕಲಿತುಕೊಳ್ಳಲು ಕೂಡು ಕುಟುಂಬಗಳು ಸಹಾಯ ಮಾಡುತ್ತಿದ್ದವು. ಆದರೆ ಹೊಂದಾಣಿಕೆಯ ಬದುಕು ಛಲ, ದಿಟ್ಟತನ ಮತ್ತು ಸವಾಲುಗಳನ್ನು ಎದುರಿಸುವ ಪ್ರವೃತ್ತಿಯನ್ನು ಕಡಿಮೆಯೂ ಮಾಡುತ್ತದೆ. ಸ್ವಯಂ ಸಾಮರ್ಥ್ಯ ಪ್ರಕಟಗೊಳ್ಳಲು ಅವಕಾಶ ಕಡಿಮೆ ಇರುತ್ತದೆ. ಅಲ್ಲದೆ, ಕೂಡು ಕುಟುಂಬದಲ್ಲಿ ಬೆಳೆದವರೆಲ್ಲ ಅಪಾರ ನೈತಿಕ ಪ್ರಜ್ಞೆಯ ಸಚ್ಚಾರಿತ್ರ್ಯವಂತರು ಎಂದೂ ಹೇಳಲು ಆಗುವುದಿಲ್ಲ. ಪುಂಡು ಪೋಕರಿಗಳು ಆಗಲೂ ಇದ್ದರು.

ತಂದೆ- ತಾಯಿ ತನಗೆ ಸ್ಪಂದಿಸಲು ಸಮಯ ಇರಿಸಿಕೊಳ್ಳಬೇಕು ಎಂದು ಭಾವಿಸುವುದು ಮಗುವಿನ ಹಕ್ಕು. ಆದರೆ ತನ್ನ ತಂದೆ- ತಾಯಿಗೆ ಅವರ ಅಜ್ಜ- ಅಜ್ಜಿ ಅಪಾರ ಸಮಯವನ್ನು ಕೊಟ್ಟು ಎಲ್ಲದಕ್ಕೂ ಸ್ಪಂದಿಸುತ್ತಿದ್ದರು, ಆದರೆ ತನಗೆ ಮಾತ್ರ ತನ್ನ ತಂದೆ- ತಾಯಿ ಸ್ಪಂದಿಸಲು ಸಮಯ ಕೊಡುತ್ತಿಲ್ಲ ಎಂದು ಮಗು ಭಾವಿಸಿದರೆ ಅದು ತಪ್ಪು ತಿಳಿವಳಿಕೆ. ವಾಸ್ತವದಲ್ಲಿ ಈಗಿನ ತಲೆಮಾರಿನ ತಂದೆ- ತಾಯಿ ಅವರ ಮಕ್ಕಳ ಬಗ್ಗೆ ಹಿಂದೆಂದಿಗಿಂತಲೂ ಜಾಸ್ತಿ ಯೋಚಿಸುತ್ತಾರೆ. ಮಕ್ಕಳ ಭವಿಷ್ಯ, ಉದ್ಯೋಗ, ಅವರು ಕಲಿಯಬೇಕಾದ ವಿಷಯಗಳ ಬಗ್ಗೆಯೆಲ್ಲ ಜಾಸ್ತಿ ಚಿಂತಿಸುತ್ತಾರೆ. ಆದರೆ ಈ ಅತಿಯಾದ ಕಾಳಜಿಯು ಕೆಲವು ಸಂದರ್ಭಗಳಲ್ಲಿ ಮಕ್ಕಳ ಸ್ವಂತಿಕೆಯನ್ನೇ ನಾಶಪಡಿಸಿ ಅವರಿಗೆ ಶಾಪವಾಗಿ ಪರಿಣಮಿಸುತ್ತದೆ. ಇದನ್ನು ಅರ್ಥ ಮಾಡಿಕೊಳ್ಳಬೇಕಾದರೆ ಮೊದಲು ಭೂತಕಾಲದ ಭವ್ಯತೆಯ ಕಲ್ಪನೆಯಿಂದ ಹೊರಬರಬೇಕು ಮತ್ತು ಮಕ್ಕಳಿಗೆ ಮೊದಲಿಗೆ ಸಹಜ ಬದುಕಿನ ಸಹಜ ಸ್ಥಿತಿಯನ್ನು ಅರ್ಥ ಮಾಡಿಸಬೇಕು.

ಪ್ರತಿ ಕುಟುಂಬದ ಸ್ಥಿತಿಯೂ ಭಿನ್ನವಾಗಿರುತ್ತದೆ. ಕೆಲವು ಸಲ ಮಕ್ಕಳ ನಿರೀಕ್ಷೆಗೆ ತಕ್ಕಂತೆ ಸ್ಪಂದಿಸಲು ಆಗದೇ ಇದ್ದರೆ ಅದು ಇನ್ನಿತರ ಕಾರಣಗಳಿಂದಾಗಿಯೇ ವಿನಾ ಮಕ್ಕಳ ಬಗೆಗಿನ ನಿರ್ಲಕ್ಷ್ಯ ಆಗಿರುವುದಿಲ್ಲ ಎನ್ನುವ ಅರಿವನ್ನು ಮಕ್ಕಳಲ್ಲಿ ಹುಟ್ಟಿಸಬೇಕು. ಕೆಲವೊಮ್ಮೆ ತಾಯಿ- ತಂದೆ ಮಕ್ಕಳಿಗೆ ಸಮಯ ಕೊಡದೇ ಇದ್ದರೆ ಆ ಸಮಯದಲ್ಲಿ ಮಕ್ಕಳು ಸ್ವಂತ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವ ಚಟುವಟಿಕೆಗಳನ್ನು ಮಾಡಲು ಸಾಧ್ಯವಿದೆ ಎಂಬುದನ್ನು ತಿಳಿಯಪಡಿಸಬೇಕು. ಇದಿಷ್ಟನ್ನು ಸಾಧಿಸಿದರೆ ಮಕ್ಕಳಲ್ಲಿ ತಾಯಿ- ತಂದೆಯ ಬಗ್ಗೆ ಅಸಹನೆ ಬೆಳೆಯುವುದಿಲ್ಲ. ಮಕ್ಕಳು ತಮ್ಮ ಬಗ್ಗೆ ತಾವೇ ಮರುಕ ಪಟ್ಟುಕೊಂಡು ಹತಾಶೆಗೆ ಈಡಾಗುವುದಿಲ್ಲ. ತಾಯಿ- ತಂದೆ ಅಪರಾಧಿ ಭಾವದಿಂದ ಒಳಗೊಳಗೇ ಹಿಂಸೆ ಅನುಭವಿಸಬೇಕಾಗುವುದೂ ಇಲ್ಲ.



ಎರಡನೆಯದಾಗಿ, ಮಕ್ಕಳ ನಿರ್ವಹಣೆಯ ಬಗ್ಗೆ ತಾಯಿ- ತಂದೆ ಒಂದು ಸಾಮಾನ್ಯ ಪರಿಕಲ್ಪನೆಯನ್ನು ಕಂಡುಕೊಳ್ಳಬೇಕು. ಮಕ್ಕಳು ಬದುಕುವ ತನಕವೂ ತಾಯಿ- ತಂದೆ ಬದುಕದೇ ಇರುವುದು ಪ್ರಕೃತಿ ಧರ್ಮ. ಆದ್ದರಿಂದ ತಾವಿಲ್ಲದ ಜಗತ್ತಿನಲ್ಲಿಯೂ ಮಕ್ಕಳು ಬಾಳಬೇಕು, ಅದಕ್ಕಾಗಿ ಅವರಲ್ಲಿ ಸ್ವತಂತ್ರ ಸಾಮರ್ಥ್ಯಗಳು ಬರಬೇಕು ಎಂಬ ಅರಿವು ತಾಯಿ- ತಂದೆಗೆ ಇರಬೇಕು. ಆಗ ಮಕ್ಕಳು ತಮ್ಮದೇ ಆದ ನಿರ್ಧಾರಗಳನ್ನು ತೆಗೆದುಕೊಳ್ಳಲು ತಾವು ಸಹಾಯಕರಾಗಿರಬೇಕೇ ವಿನಾ ತಮ್ಮ ನಿರ್ಧಾರವನ್ನೇ ಮಕ್ಕಳು ಅನುಷ್ಠಾನ ಮಾಡುವಂತೆ ಆಗಬಾರದು ಎಂದು ಗೊತ್ತಾಗುತ್ತದೆ. ಕೆಲವು ಕುಟುಂಬಗಳಲ್ಲಿ ಅನಿವಾರ್ಯ ಸಂದರ್ಭಗಳಲ್ಲಿ ತಾಯಿ- ತಂದೆಯ ನಿರ್ಧಾರವನ್ನೇ ಮಕ್ಕಳು ಅನುಷ್ಠಾನಗೊಳಿಸ ಬೇಕಾಗಿದ್ದಾಗ ಆ ನಿರ್ಧಾರದ ಔಚಿತ್ಯವನ್ನು ಮಕ್ಕಳಿಗೆ ಮನವರಿಕೆ ಮಾಡಿಕೊಟ್ಟು, ಅವರು ಆ ನಿರ್ಧಾರವನ್ನು ಸ್ವೀಕರಿಸುವಂತೆ ಮಾಡಬೇಕು.

ಮಕ್ಕಳಿಗಾಗಿ ತಾಯಿ- ತಂದೆ ಸಮಯ ಕೊಡಬೇಕಾದ ಅಗತ್ಯ ಇರುತ್ತದೆ. ಆದರೆ ಅದು ಒಂದು ವ್ಯವಸ್ಥೆಯ ಹಾಗೆ ಆಗದೆ ಮಕ್ಕಳು ಬಯಸಿದಾಗ ಸ್ಪಂದನೆಗೆ ತನ್ನ ತಂದೆ- ತಾಯಿ ಸಿಗುತ್ತಾರೆ ಎನ್ನುವ ಭಾವನಾತ್ಮಕ ಭದ್ರತೆಯನ್ನು ಒದಗಿಸುವ ರೂಪದಲ್ಲಿರಬೇಕು. ಇಲ್ಲಿ ಆಗಬೇಕಾದ್ದು ತಾಯಿ- ತಂದೆಯ ಬಗ್ಗೆ ಮಕ್ಕಳಲ್ಲಿ ನಂಬಿಕೆ ಹುಟ್ಟಿಸುವ ಕೆಲಸವೇ ವಿನಾ ಮಕ್ಕಳೊಂದಿಗೆ ಇರುವ ಸಮಯ ಮಾತ್ರವಷ್ಟೇ ಬಹಳ ಮುಖ್ಯದ್ದಲ್ಲ. ಈ ನಂಬಿಕೆ ಎಷ್ಟು ಸಶಕ್ತವಾಗಿ ಇರಬೇಕು ಎಂದರೆ ತಾನು ತಪ್ಪೇ ಮಾಡಿದ್ದರೂ ತಾಯಿ- ತಂದೆಯ ಬಳಿ ಹೇಳಿದರೆ ಅವರು ತನ್ನ ಸಹಾಯಕ್ಕೆ ಬಂದೇ ಬರುತ್ತಾರೆ ಎಂದು ಮಕ್ಕಳಿಗೆ ಖಾತರಿ ಇರಬೇಕು. 'ನೀವು ಬಯಸಿದ್ದನ್ನು ಮಾಡಲು ಸ್ವತಂತ್ರರು. ಆದರೆ ಮಾಡುವ ಮೊದಲು ನಮಗೆ ತಿಳಿಸಿರಬೇಕು' ಎಂಬುದನ್ನು ಮಕ್ಕಳಿಗೆ ಅರ್ಥ ಮಾಡಿಸಬೇಕು.

ಸಾಮಾನ್ಯವಾಗಿ ಮಕ್ಕಳು ತಪ್ಪು ದಾರಿ ತುಳಿದರು ಎನ್ನುವ ಸ್ಥಿತಿ ಎರಡು ಕಾರಣಗಳಿಂದ ನಿರ್ಮಾಣ ಆಗುತ್ತದೆ. ಮೊದಲನೆಯದು, ತಾಯಿ- ತಂದೆಯ ಸಂಪರ್ಕ ಕಡಿಮೆಯಾದಾಗ ಬೆಳೆಯುವ ಅಹಿತಕರ ಒಡನಾಟಗಳಿಂದ. ಆದ್ದರಿಂದ ಮಕ್ಕಳಿಗಾಗಿ ಹೆಚ್ಚು ಸಮಯ ಕೊಡಲು ಆಗದೇ ಇದ್ದರೂ ಅವರೊಂದಿಗೆ ತಾಯಿ- ತಂದೆ ಯಾವಾಗಲೂ ಸಂಪರ್ಕ ಇರಿಸಿಕೊಳ್ಳಬೇಕು. ಎರಡನೆಯದಾಗಿ, ಮಕ್ಕಳು ನಿಷ್ಕ್ರಿಯರಾಗಿದ್ದಾಗ ಅವರಲ್ಲಿ ಬೆಳೆಯುವ ನಕಾರಾತ್ಮಕ ಚಿಂತನೆಗಳು ತಪ್ಪು ದಾರಿಗೆ ಕಾರಣವಾಗುತ್ತವೆ. ಆದ್ದರಿಂದ ನಿದ್ದೆಯ ಸಮಯವನ್ನು ಬಿಟ್ಟರೆ ಉಳಿದಂತೆ ಮಕ್ಕಳು ಭೌತಿಕವಾಗಿ ಅಥವಾ ಬೌದ್ಧಿಕವಾಗಿ ಸೃಜನಶೀಲವಾದ ಚಟುವಟಿಕೆಗಳಲ್ಲಿ ನಿರತರಾಗಿರುವಂತೆ ಅವರಲ್ಲಿ ಚಿಂತನೆಯನ್ನು ರೂಪಿಸಬೇಕು. ಮಕ್ಕಳ ನಡವಳಿಕೆಯನ್ನು ಖಾತರಿಪಡಿಸಿಕೊಳ್ಳಲು ದಿನಕ್ಕೊಮ್ಮೆ ಒಂದೆರಡು ನಿಮಿಷ ಅವರ ದೈನಂದಿನ ಚಟುವಟಿಕೆಗಳನ್ನು ಕೇಳಿ ತಿಳಿದುಕೊಳ್ಳಬೇಕು. ಇದರಲ್ಲಿ ಗಂಡುಮಕ್ಕಳು, ಹೆಣ್ಣುಮಕ್ಕಳೆಂಬ ತಾರತಮ್ಯ ಇರಕೂಡದು. ಇಷ್ಟನ್ನು ಮಾಡಿದರೆ ಮಕ್ಕಳ ವಿಕಾಸ ಚೆನ್ನಾಗಿಯೇ ಆಗುತ್ತದೆ.

ಚುರುಮುರಿ



ಆರನೇ ಗ್ಯಾರಂಟಿ!

• ಬಿ.ಎನ್.ಮಲ್ಲೇಶ್

'ಇಷ್ಟ್ ದಿನಕ್ಕೆ ನೋಡ್ರಪ, ವಿಧಾನಸಭೇಲಿ ನಮ್ ಪರವಾಗಿ ಒಬ್ಬೇ ಒಬ್ಬ ಶಾಸಕರು ಮಾತಾಡಿದ್ರು. ಅವರ ಹೊಟ್ಟೆ ತಣ್ಣಗಿರ್ಲಿ' ಎಂದ ಗುಡ್ಡೆ.

'ಏನಪ್ಪ ಅಂಥದ್ದು?' ಮಂಜಮ್ಮ ಕೇಳಿದಳು.

'ಆರನೇ ಗ್ಯಾರಂಟಿ! ಸೊಸೈಟಿಗಳಲ್ಲಿ ಫ್ರೀ ಅಕ್ಕಿ ಜತಿಗೆ ಎರಡು ಫುಲ್ ಬಾಟ್ಲು ಮದ್ಯನೂ ಫ್ರೀ ಕೊಡಿ ಅಂತ ಶಾಸಕರೊಬ್ರು ಸಲಹೆ ಕೊಟ್ರು, ಪೇಪರ್ ನೋಡ್ಲಿಲ್ವಾ?'

'ಸರಿಹೋಯ್ತು, ಹಂಗೇನರೆ ಕೊಟ್ರೆ ಕುಡುಕರ ರಾಜ್ಯ ಆಗೋದು ಗ್ಯಾರಂಟಿ' ಮಂಜಮ್ಮ ಆಕ್ಷೇಪಿಸಿದಳು.

'ನಿಂಗ್ಯಾಕೆ ಹೊಟ್ಟೆ ಉರಿ? ನಿಮ್ಗೆ ಬಸ್ ಫ್ರೀ, ಅಕ್ಕಿ ಫ್ರೀ, ಕರೆಂಟ್ ಫ್ರೀ... ನಮ್ಗೆ ಒಂದೂ ಬೇಡ್ವಾ?' ಗುಡ್ಡೆಗೆ ಸಿಟ್ಟು ಬಂತು.

'ಏಯ್, ನಿಂಗೆ ಎಣ್ಣೆ ಬಿಟ್ರೆ ಬೇರೆ ವಿಷ್ಯಾನೇ ಇಲ್ವ? ಮೂರೊತ್ತೂ ಅದ್ರದ್ದೇ ಧ್ಯಾನ' ದುಬ್ಬೀರ ರೇಗಿದ.

'ಆತು ಬಿಡ್ರಪ, ನೀವೇ ಮಾತಾಡ್ಕಳಿ' ಗುಡ್ಡೆ ಮುನಿಸಿಕೊಂಡ.

'ಲೇ ತೆಪರ, ಸುನಿತಾ ವಿಲಿಯಮ್ಸ್ ಬಾಹ್ಯಾಕಾಶದಲ್ಲಿ ಇದ್ರಂತಲ್ಲ, ಅಲ್ಲಿಂದ ಕೆಳಕ್ಕೆ ನೋಡಿದ್ರೆ ಭೂಮೀಲಿ ಎಲ್ಲ ಕಾಣ್ಸುತ್ತಾ?' ಮಂಜಮ್ಮ ಕೇಳಿದಳು.

'ಕಾಣ್ಸುತ್ತೆ, ಅಲ್ಲಿ ಟ್ರಂಪ್ ಯಾರಿಗೆ ಕತ್ತಿ ಮಸೀತಿದಾನೆ, ಇಲ್ಲಿ ವಿಧಾನಸೌಧದಲ್ಲಿ ಯಾರ್‍ಯಾರು ನಿದ್ದಿ ಮಾಡ್ತದಾರೆ, ನಿನ್ ಡಬ್ಬದಾಗೆ ಎಷ್ಟ್ ರೊಕ್ಕದಾವೆ ಎಲ್ಲ ಕಾಣ್ಸುತ್ತೆ'.

'ಹೌದಾ? ಮತ್ತೆ ಅಷ್ಟೆಲ್ಲ ಕಂಡ ಮೇಲೆ ಬಿಡದಿ, ಕೇತಗಾನಹಳ್ಳೀಲಿ ಎಷ್ಟು ಜಮೀನು ಒತ್ತುವರಿ ಆಗೇತಿ ಕಾಣ್ಸಲ್ವಾ? ಅದನ್ಯಾಕೆ ಅಳತೆ ಮಾಡ್ಕಂಡು ಕುಂತದಾರೆ?'

ತಬ್ಬಿಬ್ಬಾದ ತೆಪರೇಸಿ 'ಬಾಹ್ಯಾಕಾಶದಲ್ಲಿ ಅದ್ನೆಲ್ಲ ನೋಡಾಕೆ ಟೈಮೇ ಇರಲ್ಲ. ಅಲ್ಲಿ ದಿನಕ್ಕೆ 16 ಹಗಲು, 16 ರಾತ್ರಿ ಗೊತ್ತಾ?' ಎಂದ.

ತೆಪರೇಸಿ ಮಾತಿಗೆ ಗುಡ್ಡೆ ಕೂತಲ್ಲೇ ಕಿಸಕ್ಕೆಂದ.

'ಯಾಕೋ ನಗ್ತಿದೀಯ?' ದುಬ್ಬೀರ ಕೇಳಿದ.

'ಏನಿಲ್ಲ, ದಿನಕ್ಕೆ 16 ರಾತ್ರಿ ಅಂದ್ರೆ 16 ಸಲ ಗುಂಡು ಹಾಕಬೋದಿತ್ತಲ್ಲ ಅಂತ'.

'ಥೂ ನಿನ್ನ, ನಾಯಿ ಬಾಲ...' ಎಂದಳು ಮಂಜಮ್ಮ. ಹರಟೆಕಟ್ಟೆಯಲ್ಲಿ ನಗುವಿನ ಅಲೆ ತೇಲಿತು.

ದಿನದ ಟ್ವೀಟ್

ಸದೃಢ ಜೀವನ ಗುರಿಯಾಗಲಿ

...ಪ್ರಪಂಚದ ಯಾವುದೇ ಮೂಲೆಯಲ್ಲಿ ನಡೆಯುವ ಘಟನೆ ನಮ್ಮ ದಿನನಿತ್ಯದ ಜೀವನದಲ್ಲಿ ಪ್ರಭಾವ ಬೀರುತ್ತಿದೆ. ಎಲ್ಲೋ ಹಚ್ಚುವ ಬೆಂಕಿ ನಮ್ಮ ಮನೆ ಮುಂದೆ ಬಂದು ಬೀಳುತ್ತಿದೆ. ಇಂತಹ ಸಂದರ್ಭದಲ್ಲಿ ಆರ್ಥಿಕವಾಗಿ ಸದೃಢರಾಗಿ ಜೀವನ ನಡೆಸಲು ಪರಿಶ್ರಮ, ಜ್ಞಾನ ಮತ್ತು ತಂತ್ರಜ್ಞಾನ ಅವಶ್ಯಕ...

ನವೀನ್ ಕುಮಾರ್, ಆರ್ಥಿಕ ಸಲಹೆಗಾರ

ಕಿಡಿನುಡಿ



ಸಾರ್ವತ್ರಿಕ ಚುನಾವಣೆಯಲ್ಲಿ ಜನರ ಕಿವಿಗೆ ಹೂವು ಮುಡಿಸಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ಸಿಗರು ಜನರಿಗೆ ಮೋಸ, ವಂಚನೆ ಮಾಡುತ್ತಿದ್ದಾರೆ. ನಾಡಿನ ಜನ ಎಚ್ಚೆತ್ತುಕೊಳ್ಳಬೇಕಿದೆ. ಇದು ಪಿಕ್‌ಪಾಕೆಟ್ ಸರ್ಕಾರ. ಒಂದೆಡೆ ಗ್ಯಾರಂಟಿ ಕೊಡುವುದಾಗಿ ಹೇಳಿಕೊಂಡು ಜನಸಾಮಾನ್ಯರ ಮೇಲೆ ಹೊರೆ ಹಾಕುತ್ತಿದ್ದಾರೆ.

ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

25 ವರ್ಷಗಳ ಹಿಂದೆ

ಮಂಗಳವಾರ, 21-3-2000

• **ಸಿದ್ದರಾಮನಹುಂಡಿ: ಲಾಠಿಪ್ರಹಾರ**

ಮೈಸೂರು, ಮಾರ್ಚ್ 20– ಹಿರಿಯ ರಾಜಕಾರಣಿ ಸಿದ್ದರಾಮಯ್ಯ ಅವರ ಊರಾದ ಮೈಸೂರು ತಾಲ್ಲೂಕಿನ ಸಿದ್ದರಾಮನಹುಂಡಿ ಗ್ರಾಮದಲ್ಲಿ ಇಂದು ಬೆಳಿಗ್ಗೆ ಯಡಕೋಳ ಗ್ರಾಮ ಪಂಚಾಯಿತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆ ಸಂಬಂಧದಲ್ಲಿ ನಡೆದ ಗಲಭೆಯಲ್ಲಿ ಒಂಬತ್ತು ಮಂದಿ ಪೊಲೀಸರು ಸೇರಿದಂತೆ ಹಲವರು ಗಾಯಗೊಂಡರು.

ಸದಸ್ಯರು ಚುನಾವಣೆಗೆ ಸಂಬಂಧಿಸಿದ ದಾಖಲೆಗಳನ್ನು ಹರಿದು ಗಲಾಟೆಯೆಬ್ಬಿಸಿ ಕಲ್ಲು ತೂರಾಟ ನಡೆಸಿದ ಕಾರಣ ಪೊಲೀಸರು ಲಘು ಲಾಠಿಪ್ರಹಾರ ಮಾಡಿ ಅಶ್ರುವಾಯು ಸಿಡಿಸಿ ಪರಿಸ್ಥಿತಿಯನ್ನು ನಿಯಂತ್ರಿಸಿದರು.

• **ರಾಜ ಕುಟುಂಬದ ಜತೆ ಕ್ಲಿಂಟನ್ ಪುತ್ರಿ ಚೆಲ್ಸಿ ಹೋಳಿ ಆಚರಣೆ**

ಜೋಧಪುರ, ಮಾರ್ಚ್ 20 (ಯುಎನ್‌ಐ)– ಅಮೆರಿಕದ ಅಧ್ಯಕ್ಷ ಬಿಲ್ ಕ್ಲಿಂಟನ್ ಅವರು ಬಾಂಗ್ಲಾ ದೇಶದಲ್ಲಿ ಚರ್ಚೆಯಲ್ಲಿ ಮಗ್ನರಾಗಿದ್ದರೆ, ಇತ್ತ ಅವರ ಮಗಳು ಚೆಲ್ಸಿ ಹಾಗೂ ಅತ್ತೆ ಡೊರೊತಿ ರೊಧಾಂ ಅವರು ಮಹಾರಾಜ ಗಜಸಿಂಗ್ ಅವರ ಕುಟುಂಬದವರ ಜತೆ ಹೋಳಿ ಆಡುವುದರ ಮೂಲಕ ಭಾರತ– ಅಮೆರಿಕ ನಡುವಿನ ಸಾಮಾಜಿಕ ಬಾಂಧವ್ಯಕ್ಕೆ ಹೊಸ ಬಣ್ಣ ಬಳಿದರು.

50 ವರ್ಷಗಳ ಹಿಂದೆ

ಶುಕ್ರವಾರ, 21-3-1975

• **ಶ್ರೇಷ್ಠ ನ್ಯಾಯಾಧೀಶ ರಾಯ್ ಪಾರು**

ನವದೆಹಲಿ, ಮಾರ್ಚ್ 20– ಅಪರಿಚಿತ ವ್ಯಕ್ತಿಯೊಬ್ಬ ಎಸೆದ ಬಾಂಬ್‌ನಿಂದ ಭಾರತದ ಶ್ರೇಷ್ಠ ನ್ಯಾಯಾಧೀಶ ಅಜಿತನಾಥ ರಾಯ್ ಅವರು ಇಂದು ಅದೃಷ್ಟವಶಾತ್ ಪಾರಾದರು.

ರಾಯ್ ಅವರು ಕುಳಿತಿದ್ದ ಕಾರು ಸುಪ್ರೀಂ ಕೋರ್ಟ್ ಆವರಣದಿಂದ ಹೊರಬಂದು ರಸ್ತೆ ಸಿಗ್ನಲ್ ಬಳಿ ಮುಂದುವರಿಯುವುದಕ್ಕೆ ಕಾಯುತ್ತಾ ನಿಂತಿದ್ದಾಗ ಅಪರಿಚಿತನೊಬ್ಬ ಕಾರಿನ ಮೇಲೆ ಎರಡು ಕೈ ಬಾಂಬ್ ಗಳನ್ನು ಎಸೆದು ಪರಾರಿಯಾದ ಎನ್ನಲಾಗಿದೆ.

• **ವರ್ಷಾಂತ್ಯದೊಳಗೆ ವರದಿ ಸಲ್ಲಿಸಲು ಹಾವನೂರು ಆಯೋಗಕ್ಕೆ ಸಲಹೆ**

ಬೆಂಗಳೂರು, ಮಾರ್ಚ್ 20– ಹಿಂದುಳಿದ ವರ್ಗಗಳ ಆಯೋಗಕ್ಕೆ ವರದಿ ಸಲ್ಲಿಸಲು ಈಗಾಗಲೇ ಎರಡನೇ ಬಾರಿಗೆ ವಿಸ್ತರಿಸಲಾಗಿರುವ ಕಾಲಾವಧಿಯನ್ನು ಮತ್ತೊಮ್ಮೆ ವಿಸ್ತರಿಸುವ ಅಪೇಕ್ಷೆ ಸರ್ಕಾರಕ್ಕಿಲ್ಲ.

ಇಂದು ವಿಧಾನಪರಿಷತ್ತಿನಲ್ಲಿ ವಿರೋಧಪಕ್ಷದ ನಾಯಕ ರಾಮಕೃಷ್ಣ ಹೆಗಡೆ ಅವರಿಗೆ ಈ ವಿಚಾರ ತಿಳಿಸಿದ ಸಮಾಜ ಕಲ್ಯಾಣ ಸಚಿವ ಎನ್. ರಾಚಯ್ಯ ಅವರು, ಡಿಸೆಂಬರ್ ಅಂತ್ಯದ ಒಳಗಾಗಿ ವರದಿ ಸಲ್ಲಿಸುವಂತೆ ಆಯೋಗಕ್ಕೆ ತಿಳಿಸಲಾಗಿದೆ ಎಂದರು.

ಆಯೋಗದ ಅಧ್ಯಕ್ಷರಿಗೆ 76,448 ರೂ.ಗಳನ್ನು ಗೌರವಧನ ಮತ್ತು ಭತ್ಯೆಯಾಗಿ ನೀಡಲಾಗಿದೆ ಎಂದು ಮುಖ್ಯಮಂತ್ರಿ ಅವರ ಪರವಾಗಿ ಸಚಿವರು ಉತ್ತರಿಸಿದರು.

ಸಂಗತ

ಬೇಡ ಶಾಲೆಯ ವಾತಾವರಣ!

ಬೇಸಿಗೆ ಶಿಬಿರವು ಮತ್ತೊಂದು ಶಾಲೆ ಎಂಬ ಭಾವನೆಯನ್ನು ಬಿತ್ತುವಂತೆ ಇರಬಾರದು. ಮಗು ಉತ್ಸಾಹದಿಂದ ತೆರಳಿ ಪ್ರಫುಲ್ಲ ಭಾವದಿಂದ ಮನೆಗೆ ಮರಳುವಂತೆ ಇರಬೇಕು

• ಗೌರಿ ಚಂದ್ರಕೇಸರಿ

ಮತ್ತೊಂದು ಬೇಸಿಗೆ ರಜೆ ಬರುತ್ತಿದೆ. ಮಕ್ಕಳು ಪರೀಕ್ಷೆ ಮುಗಿಸಿ ಆಟದ ಮನಃಸ್ಥಿತಿಗೆ ಹೊರಳಲಿದ್ದಾರೆ. ಹೆತ್ತವರು, ಇನ್ನೆರಡು ತಿಂಗಳು ಮಕ್ಕಳನ್ನು ಹೇಗೆ ಸಂಭಾಳಿಸುವುದು ಎಂಬ ಚಿಂತೆಯಲ್ಲಿದ್ದಾರೆ. ಇದನ್ನೇ ಅವಕಾಶವನ್ನಾಗಿಸಿಕೊಂಡು ದಿನನಿತ್ಯ ಹಲವಾರು ಸಂಘ-ಸಂಸ್ಥೆಗಳಿಂದ 'ಬೇಸಿಗೆ ಶಿಬಿರ'ಗಳ ಕುರಿತು ಜಾಹೀರಾತುಗಳು ಅಲ್ಲಲ್ಲಿ ಕಾಣಿಸಿಕೊಳ್ಳುತ್ತಿವೆ.

ಪಾಲಕರು ಯಾವುದಾದರೊಂದು ಬೇಸಿಗೆ ಶಿಬಿರಕ್ಕೆ ತಮ್ಮ ಮಕ್ಕಳನ್ನು ಸೇರಿಸಿ ನಿರಾಳರಾಗುತ್ತಾರೆ. ಆದರೆ ಆ ಶಿಬಿರದ ಗುಣಮಟ್ಟ, ಕಲಿಕೆಯ ಸಾಮರ್ಥ್ಯದ ಕುರಿತು ಯಾರೂ ಯೋಚಿಸುವುದೇ ಇಲ್ಲ. ಇತ್ತೀಚಿನ ದಿನಗಳಲ್ಲಿ ಇಂತಹ ಶಿಬಿರಗಳಿಗೆ ದುಬಾರಿ ಶುಲ್ಕವನ್ನು ತೆರಬೇಕಾದ ಸ್ಥಿತಿ ಇದೆ. ಆದರೆ ಅಂತಹ ಶಿಬಿರಗಳ ಫಲಶ್ರುತಿಯ ಕುರಿತು ಪೋಷಕರು ತಲೆಕೆಡಿಸಿಕೊಳ್ಳುವುದಿಲ್ಲ. ಒಟ್ಟಿನಲ್ಲಿ ತಮ್ಮ ಮಗು ರಜೆಯಲ್ಲಿ ಕಾರ್ಯತತ್ಪರವಾಗಿರಬೇಕು ಎಂದಷ್ಟೇ ಬಯಸುತ್ತಾರೆ.

ಬೇಸಿಗೆ ಶಿಬಿರಗಳು ಮಕ್ಕಳ ಮನೋವಿಕಾಸಕ್ಕೆ ದಾರಿ ಮಾಡಿಕೊಡುವಂತೆ ಇರಬೇಕು. ದೈಹಿಕ ಮತ್ತು ಮಾನಸಿಕ ಆರೋಗ್ಯ, ಜೀವನಮೌಲ್ಯ, ದೈನಂದಿನ ಜೀವನಕ್ಕೆ ಅವಶ್ಯವಾದ ವ್ಯವಹಾರ ಚಾತುರ್ಯ, ಸಾಮಾನ್ಯ ಜ್ಞಾನ, ತಂದೆ-ತಾಯಿ, ಗುರು-ಹಿರಿಯರ ಬಗ್ಗೆ ಗೌರವ ಮನೋಭಾವವನ್ನು ಬೆಳೆಸುವ ದಿಸೆಯಲ್ಲಿ ಗಮನ ಹರಿಸಬೇಕು. ಇತ್ತೀಚಿನ ದಿನಗಳಲ್ಲಿ ಎಲ್ಲ ಮನೆಗಳಲ್ಲೂ ಮಕ್ಕಳು ಮೊಬೈಲ್ ಫೋನ್, ಟಿ.ವಿ. ಯಂತಹ ಗ್ಯಾಜೆಟ್‌ಗಳ ವ್ಯಸನಿಗಳಾಗುತ್ತಿದ್ದಾರೆ ಎಂಬ ದೂರಿದೆ. ಮಕ್ಕಳನ್ನು ನಾಲ್ಕು ಗೋಡೆಗಳ ಮಧ್ಯದಿಂದ ಹೊರತರುವ ಹಾಗೂ ಪ್ರಕೃತಿಯ ಜೊತೆಗೆ ಬೆರೆತು ಚಟುವಟಿಕೆಯಿಂದ ಇರುವಂತೆ ಅವರಲ್ಲಿ ಅರಿವು ಮೂಡಿಸುವ ಅಗತ್ಯವಿದೆ. ಇಂದಿನ ಮಕ್ಕಳಿಗೆ ಪ್ರಚಲಿತ ವಿದ್ಯಮಾನಗಳ ಕುರಿತು ಹೆಚ್ಚು ಅರಿವಿರುವುದಿಲ್ಲ. ಹಾಲು ಎಲ್ಲಿಂದ ದೊರೆಯುತ್ತದೆ ಎಂಬ ಪ್ರಶ್ನೆಗೆ ಹಲವಾರು ಮಕ್ಕಳು 'ಪ್ಯಾಕೆಟ್ಟಿನಿಂದ' ಎಂಬ ಉತ್ತರವನ್ನು ನೀಡುತ್ತಾರೆ. ಕೃಷಿ ಚಟುವಟಿಕೆಗಳು, ಗುಡಿ ಕೈಗಾರಿಕೆಯಂತಹ ಉದ್ಯಮಗಳ ಕುರಿತು ಅವರಲ್ಲಿ ಅರಿವನ್ನು ಉಂಟುಮಾಡುವ ಅವಶ್ಯಕತೆ ಇದೆ.

ಇಂದಿನ ಮಕ್ಕಳು ತಮ್ಮ ಬಾಲ್ಯಸಹಜ ಚಟುವಟಿಕೆಗಳಿಂದ ವಂಚಿತರಾಗುತ್ತಿದ್ದಾರೆ. ಇಂದಿನ ಶೈಕ್ಷಣಿಕ ವ್ಯವಸ್ಥೆಯು ಮಕ್ಕಳಲ್ಲಿ ಅತಿಯಾದ ಒತ್ತಡವನ್ನು ಹುಟ್ಟುಹಾಕುತ್ತಿದೆ. ಅಜ್ಜಿ ಮನೆ ಎಂಬ ಪರಿಕಲ್ಪನೆಯೇ ಮರೆಯಾಗಿ ಹೋಗುತ್ತಿರುವ ಇಂದಿನ ದಿನಗಳಲ್ಲಿ ಮಕ್ಕಳು ಗ್ರಾಮೀಣ ಪರಿಸರವನ್ನು ಅನುಭವಿಸುವಂತೆ ಆಗಬೇಕು. ಹಳ್ಳಿಯ ವಾತಾವರಣದಲ್ಲಿ ಬೇಸಿಗೆ ಶಿಬಿರಗಳನ್ನು ಆಯೋಜಿಸಿ ಅಲ್ಲಿನ ಪರಿಸರವನ್ನು ಆಸ್ವಾದಿಸಲು ಅನುವು ಮಾಡಿಕೊಡಬೇಕು.

ಹೆಚ್ಚಿನ ಬೇಸಿಗೆ ಶಿಬಿರಗಳು ಶಾಲಾ ಚಟುವಟಿಕೆಗಳಿಗಿಂತ ಭಿನ್ನವಾದ ಅಂಶಗಳನ್ನೇನೂ ಹೊಂದಿರುವುದಿಲ್ಲ. ಬೆಳಗಿನಿಂದ ಸಂಜೆಯವರೆಗೆ ನಾಲ್ಕು ಗೋಡೆಗಳ ಮಧ್ಯದಲ್ಲಿ ಚಿತ್ರಕಲೆ, ಹಾಡು, ಕತೆ, ಒಂದಿಷ್ಟು ಒಳಾಂಗಣ ಆಟಗಳಿಗೆ ಸೀಮಿತವಾಗಿರುತ್ತವೆ. ಇದರಿಂದ ಮಕ್ಕಳು ಶಾಲಾ ವಾತಾವರಣದ ಪರಿಧಿಯಿಂದ ಹೊರಬರಲು ಸಾಧ್ಯವಾಗುವುದೇ ಇಲ್ಲ. ಇಂಥ ಶಿಬಿರಗಳಿಗೆ ಹೋಗಲು ಹಟ ಮಾಡುತ್ತಾರೆ ಇಲ್ಲವೇ ಹೆತ್ತವರ ಒತ್ತಾಯಕ್ಕೆ ಕಟ್ಟುಬಿದ್ದು ಒಲ್ಲದ ಮನಸ್ಸಿನಿಂದ ಹೋಗುತ್ತಾರೆ. ಬೇಸಿಗೆ ಶಿಬಿರಗಳು ಮಗು ದಿನವೂ ಉತ್ಸಾಹದಿಂದ ತೆರಳಿ ಪ್ರಫುಲ್ಲ ಭಾವದಿಂದ ಮನೆಗೆ ಮರಳುವಂತೆ ಇರಬೇಕು. ಶಿಬಿರದಲ್ಲಿ ನಡೆದ ಚಟುವಟಿಕೆಗಳನ್ನು ಸಂತಸದಿಂದ ಮನೆಯವರೊಡನೆ ಹಂಚಿಕೊಳ್ಳುವಂತೆ ಇರಬೇಕು.

ರಂಗಭೂಮಿಯು ಮಕ್ಕಳ ಮನಸ್ಸನ್ನು ವಿಕಸಿತಗೊಳಿಸುವಲ್ಲಿ ಪರಿಣಾಮಕಾರಿಯಾಗಿದೆ. ಅದು ಬದುಕುವ ಕಲೆಯನ್ನು ಹೇಳಿಕೊಡುತ್ತದೆ. ಒಗ್ಗಟ್ಟು, ಶ್ರಮ, ಏಕಾಗ್ರತೆ, ಜ್ಞಾಪಕಶಕ್ತಿ, ಶಿಸ್ತು, ಸಾಮಾಜಿಕ ಜವಾಬ್ದಾರಿಯಂತಹ ಹಲವಾರು ಸಕಾರಾತ್ಮಕ ಅಂಶಗಳನ್ನು ಕಲಿಸುತ್ತದೆ. ಇಂದಿನ ಮಕ್ಕಳಿಗೆ ಸೃಜನಾತ್ಮಕ ಕಲೆಯ ಅವಶ್ಯಕತೆ ಹಾಗೂ ಅನಿವಾರ್ಯ ಎರಡೂ ಇವೆ. ಬೆರಳೆಣಿಕೆಯಷ್ಟು ಬೇಸಿಗೆ ಶಿಬಿರಗಳು ಮಾತ್ರ ರಂಗಭೂಮಿಗೆ ಒತ್ತು ಕೊಡುತ್ತಿವೆ. ಜೀವನಮೌಲ್ಯಗಳನ್ನು ಕಲಿಸುವ ರಂಗಭೂಮಿಯು ಮಕ್ಕಳಲ್ಲಿ ಜವಾಬ್ದಾರಿಯ ಅರಿವನ್ನು ಮೂಡಿಸುತ್ತದೆ.



ಗಂಡು-ಹೆಣ್ಣೆಂಬ ಭೇದಭಾವದ ಅರಿವನ್ನು ಮಕ್ಕಳು ಮನೆಯಿಂದಲೇ ಪಡೆದುಕೊಳ್ಳುತ್ತಾರೆ. ಇದು ಗಂಡಸರು ಮಾಡುವ ಕೆಲಸ, ಅದು ಹೆಂಗಸರು ಮಾಡುವ ಕೆಲಸ ಎಂಬ ಭಾವವನ್ನು ಹೆತ್ತವರೇ ಮಕ್ಕಳಲ್ಲಿ ಬಿತ್ತುತ್ತಾರೆ. ಕುಟುಂಬದ ಎಲ್ಲ ಸದಸ್ಯರೂ ಎಲ್ಲ ಕೆಲಸಗಳನ್ನು ಹಂಚಿಕೊಂಡು ಮಾಡುವಂತೆ ಪ್ರೇರೇಪಿಸುವ, ಸಣ್ಣಪುಟ್ಟ ಅಡುಗೆ, ಮನೆಗೆಲಸಗಳನ್ನು ಮಕ್ಕಳು ಸ್ವಯಂ ಪ್ರೇರಿತರಾಗಿ ಮಾಡುವಂತೆ ಬೇಸಿಗೆ ಶಿಬಿರಗಳು ಅರಿವನ್ನು ನೀಡಬೇಕು. ಸಣ್ಣ ಪುಟ್ಟ ಸೋಲಿಗೂ ಹತಾಶರಾಗುವ, ಒತ್ತಡಕ್ಕೆ ಒಳಗಾಗುವ, ಮುಂಗೋಪಿಗಳಾಗುತ್ತಿರುವ ಇಂದಿನ ಮಕ್ಕಳಿಗೆ ವ್ಯಕ್ತಿತ್ವ ವಿಕಸನಕ್ಕೆ ಒತ್ತು ನೀಡುವ ಕಾರ್ಯಕ್ರಮಗಳ ಅವಶ್ಯಕತೆ ಇದೆ. ಸದಾ ಸಿಡುಕು, ಮೊಂಡುತನ, ಎದುರಾಡುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳುತ್ತಿರುವ ಮಕ್ಕಳಿಗೆ ಸಮಾಲೋಚನೆಯ ಅಗತ್ಯವಿದೆ. ಇಂಥ ಸಮಾಲೋಚನೆಯನ್ನು ಬೇಸಿಗೆ ಶಿಬಿರದ ಚಟುವಟಿಕೆಗಳಲ್ಲಿ ಆಯೋಜಕರು ಅಳವಡಿಸಿಕೊಂಡಾಗ ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳನ್ನು ಅರಿತುಕೊಂಡು ಪರಿಹಾರ ಕಂಡುಕೊಳ್ಳಬಹುದು.

ಮಣ್ಣಿನ ಮುದ್ದೆಯಂತಿರುವ ಮಕ್ಕಳ ಮನಸ್ಸು ಎಲ್ಲವನ್ನೂ ಬೇಗ ಗ್ರಹಿಸುತ್ತದೆ. ಹೀಗಾಗಿ, ಮಕ್ಕಳಲ್ಲಿನ ಕುಂದುಕೊರತೆಗಳನ್ನು ಅರಿತು, ಅವರ ದೌರ್ಬಲ್ಯಗಳನ್ನು ತಿಳಿದುಕೊಂಡು ಪರಿಪೂರ್ಣ ವ್ಯಕ್ತಿತ್ವವನ್ನು ರೂಪಿಸುವಂತಹ ಬೇಸಿಗೆ ಶಿಬಿರಗಳ ಅನಿವಾರ್ಯ ನಮಗಿದೆ.

ವಾಚಕರ ವಾಣಿ

ಗ್ರಾಹಕರ ಮೇಲೆ ಹೊರೆ ಹೇರುವುದು ಸರಿಯಲ್ಲ

ವಿದ್ಯುತ್ ಪ್ರಸರಣ ಮತ್ತು ಸರಬರಾಜು ಸಂಸ್ಥೆಗಳ ಸಿಬ್ಬಂದಿಯ ಪಿಂಚಣಿ, ಗ್ರಾಚ್ಯುಟಿಗೆ ಸರ್ಕಾರ ನೀಡಬೇಕಾದ ಮೊತ್ತವನ್ನು ಗ್ರಾಹಕರಿಂದಲೇ ವಸೂಲಿ ಮಾಡಲು ಮುಂದಾಗಿರುವುದು ದುರದೃಷ್ಟಕರ. ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಈಗಾಗಲೇ ತತ್ತರಿಸಿರುವ ಗ್ರಾಹಕರಿಗೆ ನೀಡುತ್ತಿರುವ ಕರೆಂಟ್ ಶಾಕ್ ಇದು. ಶೇಕಡ 85ರಷ್ಟು ಜನರಿಗೆ ಉಚಿತ ವಿದ್ಯುತ್ ಕೊಡುತ್ತಿದ್ದೇವೆ ಎಂಬ ಸಮಜಾಯಿಷಿಯನ್ನು ಸರ್ಕಾರ ಕೊಡುವುದು ಸಮರ್ಥನೀಯವಲ್ಲ. ಈ ನಿರ್ಧಾರವನ್ನು ಪುನರ್‌ಪರಿಶೀಲಿಸಿ ಗ್ರಾಹಕರ ಮೇಲಿನ ಈ ಹೊಸ ಹೊರೆಯನ್ನು ಕೂಡಲೇ ಹಿಂತೆಗೆದುಕೊಳ್ಳಬೇಕು.

ಜಿ.ಪಿ.ದಯಾನಂದ, ಬೆಂಗಳೂರು

ಹೆಸರು ಬದಲಿಸದೆಯೂ ಅಭಿವೃದ್ಧಿ ಸಾಧ್ಯ

ರಾಮನಗರ ಜಿಲ್ಲಾ ಕೇಂದ್ರದ ಹೆಸರನ್ನು ಶತಾಯಗತಾಯ ಬದಲಾವಣೆ ಮಾಡಿಯೇ ತೀರುತ್ತೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೇಳಿರುವುದಾಗಿ ವರದಿಯಾಗಿದೆ. ರಾಮನಗರದ ಹೆಸರು ಬದಲಿಸಲು ಬಿಜೆಪಿ ನೇತೃತ್ವದ ಈ ಹಿಂದಿನ ಸರ್ಕಾರ ಕೂಡ ಪ್ರಯತ್ನಿಸಿತ್ತು. ರಾಮನಗರವನ್ನು ಮೊದಲು ಶಿವನಗರ ಎಂದೂ ಕರೆಯುತ್ತಿದ್ದರು. ಮೈಸೂರಿನ ಮೊದಲ ರೆಸಿಡೆಂಟ್ ಕರ್ನಲ್ ಕ್ಲೋಸ್ ಅವರ ಮೇಲಿನ ಪ್ರೀತಿಯಿಂದಾಗಿ 1780ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ರಾಮನಗರಕ್ಕೆ ಕ್ಲೋಸ್‌ಪೇಟ್ ಎಂದು ನಾಮಕರಣ ಮಾಡಿದ್ದರು.

ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಅವರು ಈ ಕ್ಲೋಸ್‌ಪೇಟೆಯನ್ನು ಪುನಃ ರಾಮನಗರವಾಗಿಸಿದರು. ಹೀಗೆ ಹೆಸರು ಬದಲಾವಣೆಯ ಇತಿಹಾಸ ಹೊಂದಿರುವ ರಾಮನಗರವು ಬಳಿಕ ಜಿಲ್ಲಾ ಕೇಂದ್ರವೂ ಆಯಿತು. ಈಗ ಇದಕ್ಕೆ ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಮರುನಾಮಕರಣ ಮಾಡಬೇಕೆಂಬ ರಾಜ್ಯ ಸರ್ಕಾರದ ನಿಲುವಿಗೆ ಕೇಂದ್ರ ಸರ್ಕಾರ ಅಸಮ್ಮತಿ ಸೂಚಿಸಿದೆ. ಅಷ್ಟಾದರೂ ಹೆಸರು ಬದಲಾವಣೆ ಮಾಡಿಯೇ ತೀರುತ್ತೇನೆಂದು ಪಣ ತೊಡುವುದು ರಾಜಕೀಯ ಮೇಲಾಟವಲ್ಲದೆ ಮತ್ತೇನೂ ಅಲ್ಲ. ಹೆಸರು ಬದಲಿಸದೆಯೂ ರಾಮನಗರವನ್ನು ಅಭಿವೃದ್ಧಿಪಡಿಸಬಹುದು.

ಲಕ್ಷ್ಮೀಕಾಂತರಾಜು ಎಂ.ಜಿ., ಮಠಗ್ರಾಮ, ಗುಬ್ಬಿ

ಬಡಿದೆಬ್ಬಿಸುವುದೇಕೆ?

ಸತ್ತು ಮಲಗಿರುವವರ ಸಮಾಧಿಗೆ
ಕೈಹಾಕುವುದೆಂದರೆ,
ಕಾಲಗರ್ಭದಲಿ ಕಳೆದುಹೋದ
ಭೂತಗಳನ್ನು ಬಲವಂತವಾಗಿ
ಬಡಿದೆಬ್ಬಿಸುವುದೆಂದರ್ಥ!
(ಔರಂಗಜೇಬನ ಸಮಾಧಿ ತೆರವು
ಮಾಡಬೇಕೆಂಬ ಆಗ್ರಹಕ್ಕೆ ಸಂಬಂಧಿಸಿ)

ಆನಂದ ರಾಮತೀರ್ಥ, ಜಮಖಂಡಿ

ಜನಸೇವಕರೆಂದು ಕರೆಯುವುದಾದರೂ ಹೇಗೆ?

ಸಚಿವರು, ಶಾಸಕರ ವೇತನವನ್ನು ಭಾರಿ ಪ್ರಮಾಣದಲ್ಲಿ ಏರಿಸಲು ಅನುವಾಗಿಸುವ ಮಸೂದೆ ಮಂಡಿಸಲು ಸರ್ಕಾರ ಸಿದ್ಧತೆ ನಡೆಸಿರುವ ಸುದ್ದಿ (ಪ್ರ.ವಾ., ಮಾರ್ಚ್ 20) ಓದಿ ಆಶ್ಚರ್ಯವಾಗಲಿಲ್ಲ, ನಾಚಿಕೆಯಾಯಿತು. ಸರಳತೆ, ಭ್ರಷ್ಟಾಚಾರರಹಿತ ಜೀವನಶೈಲಿ, ರಾಜಕೀಯ ಬದ್ಧತೆ, ಜನಪರ ಕಾಳಜಿಯಂತಹ ವಿಚಾರಗಳ ಬಗೆಗಿನ ಚರ್ಚೆಯ ಸಂದರ್ಭದಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿ, ಗುಲ್ಜಾರಿ ಲಾಲ್ ನಂದಾ, ಶಾಂತವೇರಿ ಗೋಪಾಲಗೌಡ, ಕಡಿದಾಳ್ ಮಂಜಪ್ಪ ಅವರಂತಹವರು ಪದೇಪದೇ ನೆನಪಾಗುತ್ತಾರೆ, ಉಲ್ಲೇಖಗೊಳ್ಳುತ್ತಾರೆ. ಸಮಾಜದ ಅತಿ ಅವಶ್ಯ ಮೂಲ ಸೌಕರ್ಯಗಳ ನಿರ್ವಹಣೆ, ಆರೋಗ್ಯ ತಪಾಸಣೆ ನಡೆಸುವ ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಗ್ರಾಮ ಪಂಚಾಯಿತಿ ದಿನಗೂಲಿ ನೌಕರರು, ಸಫಾಯಿ ಕರ್ಮಚಾರಿಗಳು ತಮಗೆ ನೀಡುವ ಗೌರವಧನ ಹೆಚ್ಚಳಕ್ಕೆ ಒತ್ತಾಯಿಸಿ ವಾರಗಟ್ಟಲೆ ಧರಣಿ ನಡೆಸಿದರೂ ನಮ್ಮ ಇದೇ ಸಚಿವರು, ಶಾಸಕರು ಅತ್ತ ತಿರುಗಿಯೂ ನೋಡುವುದಿಲ್ಲ. ಸರ್ಕಾರವು ಯುವಕರಿಗೆ ಉದ್ಯೋಗ ನೀಡಲಿಲ್ಲ, ರೈತರು ಬೆಳೆದ ಬೆಳೆಗೆ ಸರಿಯಾದ ಬೆಂಬಲ ಬೆಲೆ ಒದಗಿಸಲಿಲ್ಲ.

ವಿರೋಧ ಪಕ್ಷಗಳ ಮುಖಂಡರು ಸಹ ಈ ವಿಷಯದಲ್ಲಿ ಸೌಜನ್ಯಕ್ಕಾದರೂ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡ ನಿದರ್ಶನ ಬಹುಶಃ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ದಾಖಲಾದಂತೆ ಇಲ್ಲವೇನೊ. ಚುನಾವಣೆ ವೇಳೆ ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಆಯ್ಕೆಯಾಗುವ ಹಾಗೂ ಲಕ್ಷಾಂತರ ರೂಪಾಯಿ ವೇತನ, ಭತ್ಯೆ ಪಡೆಯುವ ಸಚಿವರು, ಶಾಸಕರನ್ನು ಜನಸೇವಕರು ಎಂದು ಕರೆಯುವುದಾದರೂ ಹೇಗೆ? ಸೇವೆ ಎಂದರೆ ನಿರೀಕ್ಷೆರಹಿತವಾದುದು. ಈಚಿನ ವರ್ಷಗಳಲ್ಲಿ ಎರಡು ಬಾರಿ ಇವರ ವೇತನ ಮತ್ತು ಭತ್ಯೆಯನ್ನು ಹೆಚ್ಚಿಸಲಾಗಿದ್ದರೂ ಈಗ ಮೂರನೇ ಬಾರಿ ಹೆಚ್ಚಳಕ್ಕೆ ಸರ್ಕಾರ ಮುಂದಾಗಿರುವುದು ಅತ್ಯಂತ ದುರದೃಷ್ಟಕರ ಸಂಗತಿ.

ಎಂ.ಜಿ.ರಂಗಸ್ವಾಮಿ, ಹಿರಿಯೂರು

ದುಷ್ಕೃತ್ಯದ ಹಿಂದೆ ಇದೆ ಕಾಣದ ಒಳನೋಟ

'ಬಯಕೆಗಿಂತ ಬದುಕು ದೊಡ್ಡದು' ಎಂಬ ಹರೀಶ್ ಕುಮಾರ್ ಕುಡ್ತಡ್ಕ ಅವರ ಲೇಖನ (ಸಂಗತ, ಮಾರ್ಚ್ 19) ಓದುಗರನ್ನು ಚಿಂತನೆಗೆ ದೂಡುವಂತಿದೆ. ಹೌದು, ಆಂಧ್ರಪ್ರದೇಶದ ಕಾಕಿನಾಡ ಜಿಲ್ಲೆಯಲ್ಲಿ ವ್ಯಕ್ತಿಯೊಬ್ಬರು, ಓದಿನಲ್ಲಿ ಹಿಂದೆ ಬಿದ್ದಿದ್ದಾರೆ ಎಂಬ ಕಾರಣಕ್ಕೆ ತಮ್ಮ ಇಬ್ಬರು ಪುಟ್ಟ ಮಕ್ಕಳನ್ನು ಕೊಂದು ತಾವೂ ಆತ್ಮಹತ್ಯೆ ಮಾಡಿಕೊಂಡ ಪ್ರಕರಣ ನಾಗರಿಕ ಸಮಾಜ ತಲೆತಗ್ಗಿಸುವಂತಿದೆ. ಯಾವುದೇ ಒಂದು ಕೊಲೆ ಅಥವಾ ಆತ್ಮಹತ್ಯೆಯ ಹಿಂದೆ ಬರೀ ಒಂದೇ ಕಾರಣವನ್ನು ಹುಡುಕುವುದು ಸರಿಯಲ್ಲ. ಇಲ್ಲಿ ತಪ್ಪು ಒಪ್ಪುಗಳ ಪ್ರಶ್ನೆಗಿಂತ ಮುಖ್ಯವಾಗಿ ಕಾಣದ ಒಳನೋಟ ಇರುವುದನ್ನು ಗಮನಿಸಬೇಕಾಗಿದೆ. ಒಂದೆಡೆ, ಜನರಲ್ಲಿನ ಮಿತಿಮೀರಿದ ನಿರೀಕ್ಷೆಗಳೂ ಒತ್ತಡವನ್ನು ಸೃಷ್ಟಿಸಿ ವ್ಯಕ್ತಿಯನ್ನು ಆತ್ಮಹತ್ಯೆಯಂತಹ ಕೆಟ್ಟ ಯೋಚನೆ ಮಾಡುವಂತೆ ಪ್ರೇರೇಪಿಸುತ್ತವೆ. ಮತ್ತೊಂದೆಡೆ, ವ್ಯವಸ್ಥೆಯಲ್ಲಿನ ಎಲ್ಲಿಲ್ಲದ ಸ್ಪರ್ಧೆ ಎದುರಿಸಿ ಬದುಕಬೇಕಾದ ಅನಿವಾರ್ಯ ನಮ್ಮ ಮಕ್ಕಳು ಮತ್ತು ಪೋಷಕರ ಮುಂದೆ ಇದೆ. ನಿಜವಾಗಿ ಮಕ್ಕಳಿಗೆ ಎಂತಹ ಶಿಕ್ಷಣ ನೀಡಬೇಕೆಂಬ ಗೊಂದಲ ಎಲ್ಲರನ್ನೂ ಕಾಡುತ್ತಿದೆ. ಬರೀ ಯೋಜನೆಗಳನ್ನು ರೂಪಿಸುವುದರಲ್ಲೇ ಮಗ್ನವಾಗಿರುವ ಆಡಳಿತ ವ್ಯವಸ್ಥೆಯು ನಿಜವಾದ ಶಿಕ್ಷಣವನ್ನು ಮರೆತೇಬಿಟ್ಟಿದೆ ಅನ್ನಿಸುತ್ತದೆ. ಹಣವನ್ನು ಬಿತ್ತಿ ಹಣವನ್ನೇ ಬೆಳೆದು ಹಣವನ್ನೇ ಮಾರಾಟ ಮಾಡಿ ಹಣವನ್ನೇ ತಿನ್ನುವುದು ಹೇಗೆ ಎಂಬುದನ್ನು ಚೆನ್ನಾಗಿಯೇ ಕಲಿಸುತ್ತಿರುವಂತಿದೆ!

ಎಚ್.ಎಸ್.ಸನತ್ ಕುಮಾರ್, ಚಂದಾಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ದೇಶದ ಅತ್ಯಂತ ಶ್ರೀಮಂತ 10 ಶಾಸಕರ ಪೈಕಿ ಕರ್ನಾಟಕದ ನಾಲ್ವರು ಇದ್ದಾರೆ ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಹೇಳಿದೆ. ಕನಕಪುರ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಿರಿವಂತ ಶಾಸಕರ ಪೈಕಿ ಎರಡನೇ ಸ್ಥಾನದಲ್ಲಿದ್ದಾರೆ. ಅವರ ಆಸ್ತಿ ಮೌಲ್ಯ ₹1,413 ಕೋಟಿ. ₹1,267 ಕೋಟಿ ಮೌಲ್ಯದ ಆಸ್ತಿ ಹೊಂದಿರುವ ಗೌರಿಬಿದನೂರಿನ ಕಾಂಗ್ರೆಸ್ ಶಾಸಕ ಕೆ.ಎಚ್.ಪುಟ್ಟಸ್ವಾಮಿಗೌಡ ಅವರು ಮೂರನೇ ಸ್ಥಾನದಲ್ಲಿದ್ದಾರೆ. ಗೋವಿಂದರಾಜನಗರ ಕ್ಷೇತ್ರದಿಂದ ಗೆದ್ದಿರುವ ಪ್ರಿಯಕೃಷ್ಣ ಅವರು ನಾಲ್ಕನೇ ಸ್ಥಾನದಲ್ಲಿದ್ದಾರೆ. ಸಚಿವ ಭೈರತಿ ಸುರೇಶ್ ದೇಶದಲ್ಲೇ 10ನೇ ಶ್ರೀಮಂತ ಶಾಸಕ. ₹3,383 ಕೋಟಿ ಮೌಲ್ಯದ ಆಸ್ತಿ ಹೊಂದಿರುವ ಮಹಾರಾಷ್ಟ್ರದ ಘಾಟ್‌ಕೋಪರ್ ಕ್ಷೇತ್ರದ ಪರಾಗ್ ಶಾ (ಬಿಜೆಪಿ) ಅವರು ರಾಷ್ಟ್ರದ ಅತೀ ಶ್ರೀಮಂತ ಶಾಸಕ.



₹3,383 ಕೋಟಿ	₹1,413 ಕೋಟಿ	₹1,267 ಕೋಟಿ	₹1,156 ಕೋಟಿ	₹931 ಕೋಟಿ	₹824 ಕೋಟಿ	₹757 ಕೋಟಿ	₹716 ಕೋಟಿ	₹661 ಕೋಟಿ	₹648 ಕೋಟಿ
ಪರಾಗ್ ಶಾ (ಬಿಜೆಪಿ, ಮಹಾರಾಷ್ಟ್ರದ ಘಾಟ್‌ಕೋಪರ್ ಪೂರ್ವ)	**ಡಿ.ಕೆ.ಶಿವಕುಮಾರ್** (ಕಾಂಗ್ರೆಸ್, ಕನಕಪುರ)	**ಕೆ.ಎಚ್.ಪುಟ್ಟಸ್ವಾಮಿ ಗೌಡ** (ಕಾಂಗ್ರೆಸ್, ಗೌರಿಬಿದನೂರು)	**ಪ್ರಿಯಕೃಷ್ಣ** (ಕಾಂಗ್ರೆಸ್, ಗೋವಿಂದರಾಜನಗರ)	**ಚಂದ್ರಬಾಬು ನಾಯ್ಡು** (ಟಿಡಿಪಿ, ಆಂಧ್ರದ ಕುಪ್ಪಂ)	**ನಾರಾಯಣ ಪೊಂಗೂರು** (ಟಿಡಿಪಿ, ಆಂಧ್ರದ ನೆಲ್ಲೂರು ಸಿಟಿ)	**ಜಗನ್ ಮೋಹನ್ ರೆಡ್ಡಿ** (ವೈಎಸ್‌ಆರ್‌ಸಿಪಿ, ಆಂಧ್ರದ ಪುಲಿವೆಂದುಲ)	**ಪ್ರಶಾಂತಿ ರೆಡ್ಡಿ ವೇಮಿರೆಡ್ಡಿ** (ಟಿಡಿಪಿ, ಆಂಧ್ರದ ಕೋವೂರು)	**ಜೆ.ಎಸ್. ಪಟೇಲ್** (ಬಿಜೆಪಿ, ಗುಜರಾತ್‌ನ ಮನಸಾ)	**ಭೈರತಿ ಸುರೇಶ್** (ಕಾಂಗ್ರೆಸ್, ಹೆಬ್ಬಾಳ)

(ಆವರಣದಲ್ಲಿರುವುದು ಪಕ್ಷ ಮತ್ತು ಕ್ಷೇತ್ರ)

ವಿಧಾನಸಭೆಯ ಕುಬೇರರು

ಎಡಿಆರ್‌ನಿಂದ ದೇಶದ 4,092 ಶಾಸಕರ ಆಸ್ತಿ, ಕ್ರಿಮಿನಲ್ ಪ್ರಕರಣಗಳ ವಿಶ್ಲೇಷಣೆ

ಪ್ರಜಾವಾಣಿ ವಾರ್ತೆ

ದೇಶದ 28 ರಾಜ್ಯ, ಮೂರು ಕೇಂದ್ರಾಡಳಿತ ಪ್ರದೇಶಗಳಲ್ಲಿ ಇತ್ತೀಚಿನ ವಿಧಾನಸಭಾ ಚುನಾವಣೆಗಳಲ್ಲಿ ಗೆದ್ದಿರುವ ಶಾಸಕರು ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಪ್ರಮಾಣಪತ್ರಗಳನ್ನು ವಿಶ್ಲೇಷಣೆಗೆ ಒಳಪಡಿಸಿ ಎಡಿಆರ್ ವರದಿಯನ್ನು ಸಿದ್ಧಪಡಿಸಿದೆ. ಶಾಸಕರ ವಿರುದ್ಧದ ಕ್ರಿಮಿನಲ್ ಪ್ರಕರಣಗಳು ಸೇರಿದಂತೆ ಪ್ರಮಾಣಪತ್ರಗಳಲ್ಲಿನ ಇತರ ಮಾಹಿತಿಗಳನ್ನು ವಿಶ್ಲೇಷಿಸಲಾಗಿದೆ.

ಒಟ್ಟು 4,123 ವಿಧಾನಸಭಾ ಕ್ಷೇತ್ರಗಳ ಪೈಕಿ 4,092 ಕ್ಷೇತ್ರದ ಶಾಸಕರನ್ನು ವಿಶ್ಲೇಷಣೆ ಮಾಡಲಾಗಿದೆ. 24 ಶಾಸಕರು ಸಲ್ಲಿಸಿರುವ ಪ್ರಮಾಣಪತ್ರಗಳು ಮಸುಕಾಗಿದ್ದು, ಅವನ್ನು ಕೈಬಿಡಲಾಗಿದೆ. ಉಳಿದಂತೆ 7 ಸ್ಥಾನಗಳು ಖಾಲಿ ಇವೆ ಎಂದು ಎಡಿಆರ್ ವರದಿಯಲ್ಲಿ ಉಲ್ಲೇಖಿಸಿದೆ.


ಶತಕೋಟ್ಯಧಿಪತಿ ಶಾಸಕರು: ಎಲ್ಲಿ, ಎಷ್ಟು?




- ಅರುಣಾಚಲ ಪ್ರದೇಶ, ದೆಹಲಿ, ಮಧ್ಯಪ್ರದೇಶಗಳಲ್ಲಿ ತಲಾ ಮೂವರು
- ಹಿಮಾಚಲ ಪ್ರದೇಶ, ಒಡಿಶಾ, ಪಂಜಾಬ್‌ಗಳಲ್ಲಿ ತಲಾ ಇಬ್ಬರು
- ಅಸ್ಸಾಂ, ಜಮ್ಮು ಮತ್ತು ಕಾಶ್ಮೀರ, ಮೇಘಾಲಯ, ನಾಗಾಲ್ಯಾಂಡ್, ರಾಜಸ್ಥಾನ, ಸಿಕ್ಕಿಂ ಮತ್ತು ಉತ್ತರಪ್ರದೇಶಗಳಲ್ಲಿ ತಲಾ ಒಬ್ಬರು


ಶೇ 45 ಮಂದಿ ವಿರುದ್ಧ ಕ್ರಿಮಿನಲ್ ಪ್ರಕರಣ

4,092 ಶಾಸಕರ ಪೈಕಿ **1,861** ಶಾಸಕರು (ಶೇ 45) ಕ್ರಿಮಿನಲ್ ಪ್ರಕರಣ ಎದುರಿಸುತ್ತಿದ್ದಾರೆ. **1,205** ಶಾಸಕರು (ಶೇ 29) ಗಂಭೀರ ಕ್ರಿಮಿನಲ್ ಪ್ರಕರಣ (ಕೊಲೆ, ಕೊಲೆ ಯತ್ನ, ಅಪಹರಣ, ಮಹಿಳೆಯರ ವಿರುದ್ಧದ ಅಪರಾಧ) ಎದುರಿಸುತ್ತಿದ್ದಾರೆ



ಕರ್ನಾಟಕ ಮುಂದು: ರಾಜ್ಯದ ಶಾಸಕರ ಒಟ್ಟು ಆಸ್ತಿ ಮೌಲ್ಯ ₹14,179 ಕೋಟಿ. ಕರ್ನಾಟಕದಲ್ಲಿ 31 ಶತಕೋಟ್ಯಧಿಪತಿ ಶಾಸಕರಿದ್ದಾರೆ. ದೇಶದ 100 ಶ್ರೀಮಂತ ಶಾಸಕರಲ್ಲಿ 26 ಮಂದಿ ರಾಜ್ಯದವರು






ಮಹಿಳೆಯರಿಗೆ ಅಲ್ಪಪ್ರಾತಿನಿಧ್ಯ

4,092 ಶಾಸಕರ ಪೈಕಿ, 400 ಮಂದಿ (ಶೇ 10ರಷ್ಟು) ಮಹಿಳೆಯರಿದ್ದಾರೆ. ಅತಿ ಹೆಚ್ಚು ಶಾಸಕಿಯರನ್ನು ಹೊಂದಿರುವ ರಾಜ್ಯಗಳ ಪಟ್ಟಿಯಲ್ಲಿ ಉತ್ತರ ಪ್ರದೇಶ 51 (ಶೇ 13) ಮೊದಲ ಸ್ಥಾನದಲ್ಲಿದ್ದರೆ, ಪಶ್ಚಿಮ ಬಂಗಾಳ 44 (ಶೇ 15) ಮತ್ತು ಬಿಹಾರ 29 (ಶೇ 12) ಎರಡು ಮತ್ತು ಮೂರನೇ ಸ್ಥಾನಗಳಲ್ಲಿವೆ. ಕರ್ನಾಟಕದಲ್ಲಿ 223 ಶಾಸಕರ ಪೈಕಿ 11 ಮಂದಿ (ಶೇ 5ರಷ್ಟು) ಮಹಿಳೆಯರಿದ್ದಾರೆ.

ಮಧ್ಯವಯಸ್ಕ ಶಾಸಕರೇ ಹೆಚ್ಚು



ಆಧಾರ: ಎಡಿಆರ್ ವರದಿ, ಪ್ರಜಾವಾಣಿ ಗ್ರಾಫಿಕ್ಸ್: ವಿಜಯಕುಮಾರಿ ಆರ್.

‘ವಿದ್ಯಾಪತಿ’ಗೆ ‘ಪ್ರೇರಣಾಪತಿ’ ಸಾಥ್

ಇತ್ತೀಚೆಗಷ್ಟೇ ಮದುವೆಯಾದ ‘ಧನ್ಯತಾ’ಪತಿ ನಟ ಡಾಲಿ ಧನಂಜಯ ಅವರನ್ನು ತುಂಟ ಮಾತುಗಳಿಂದ ‘ಪ್ರೇರಣಾ’ಪತಿ ನಟ ಧ್ರುವ ಸರ್ಜಾ ಕಾಲೆಳೆಯುತ್ತಿದ್ದರು. ಅತ್ತ ‘ಪೂಜಾ’ಪತಿ ನಟ ನಾಗಭೂಷಣ್ ಪತ್ನಿ ನೀಡಿದ ‘ಆ್ಯಕ್ಷನ್ ಸ್ಟಾರ್’ ಬಿರುದಿಗೆ ನಾಚಿ ನೀರಾಗಿದ್ದರು. ಇತ್ತ ಏಕಾಂಗಿಯಾಗಿ ಕುಳಿತಿದ್ದ ನಟ ಶ್ರೀವತ್ಸ ನಾನ್ಯಾರ ಪತಿಯಾಗೋದು ಎಂಬ ಯೋಚನೆಯಲ್ಲಿದ್ದರು.

ಇವೆಲ್ಲವುದಕ್ಕೆ ವೇದಿಕೆಯಾಗಿದ್ದು ‘ವಿದ್ಯಾಪತಿ’ ಟ್ರೇಲರ್ ಬಿಡುಗಡೆ ಕಾರ್ಯಕ್ರಮ. ಇಶಾಂ ಹಾಗೂ ಹಸೀಂ ಖಾನ್ ನಿರ್ದೇಶನ, ಡಾಲಿ ಪಿಕ್ಚರ್ಸ್ ನಿರ್ಮಾಣದ ‘ವಿದ್ಯಾಪತಿ’ ಏ.10 ರಂದು ರಿಲೀಸ್ ಆಗುತ್ತಿದೆ. ಟ್ರೇಲರ್ ಬಿಡುಗಡೆ ಮಾಡಿ ಧ್ರುವ ಸರ್ಜಾ ತಂಡಕ್ಕೆ ಶುಭಹಾರೈಸಿದರು.

‘ನಮ್ಮನ್ನು ನಾವು ಸಾಬೀತುಪಡಿಸಿಕೊಳ್ಳಬೇಕು ಎನ್ನುವ ದೃಷ್ಟಿಯಿಂದ ‘ಬಡವ ರಾಸ್ಕಲ್’ ಸಿನಿಮಾ ಮೂಲಕ ನಿರ್ಮಾಣ ಕ್ಷೇತ್ರಕ್ಕೆ ಕೈಹಾಕಿದೆ. ನಂತರದಲ್ಲಿ ಹಲವು ಸಿನಿಮಾಗಳನ್ನು ಪ್ರಸ್ತುತಪಡಿಸಿದೆ. ಸಿನಿಮಾ ನಿರ್ಮಾಣ ಎಂಬ ಪಯಣದಲ್ಲಿ ಧೈರ್ಯವಾಗಿ ಸಾಗುತ್ತಿದ್ದೇನೆ ಎಂದರೆ ಅದಕ್ಕೆ ಪ್ರೇಕ್ಷಕರು ಕಾರಣ. ‘ನಿನಗೆ ಯಾಕೆ ಬೇಕು ಪ್ರೊಡಕ್ಷನ್ ಕೆಲಸ’ ಎಂದು ಹಲವರು ಕೇಳಿದ್ದರು. ನಾನೂ ಹೀಗೆ ಅಂದುಕೊಳ್ಳುತ್ತಿದ್ದೆ. ಆದರೆ ಒಳ್ಳೆಯ ಕಥೆ ಕೇಳಿದಾಗ ಮತ್ತು ಕನ್ನಡ ಚಿತ್ರರಂಗದ ಬಗ್ಗೆ ಒಂದಿಷ್ಟು ಮಾತುಗಳು ಕೇಳಿಬರುವಾಗ ಇನ್ನೊಂದು ಒಳ್ಳೆಯ ಪ್ರಯತ್ನ ಮಾಡಿದರೆ ಎಲ್ಲವೂ ಸರಿಹೋಗುತ್ತದೆ ಎಂದುಕೊಂಡೇ ಹೆಜ್ಜೆ ಇಡುತ್ತಿದ್ದೇನೆ. ಸಿನಿಮಾ ನಿರ್ಮಾಣ ಎನ್ನುವುದು ಒಂದು ಅಪಾಯವೇ. ಆದರೆ ಚಿತ್ರರಂಗ ಉಸಿರಾಡುತ್ತಿರಬೇಕಾದರೆ ಪ್ರಯತ್ನಗಳು ಇರಲೇಬೇಕು. ‘ವಿದ್ಯಾಪತಿ’ ಒಂದು ಕೌಟುಂಬಿಕ ಸಿನಿಮಾ. ಮನರಂಜನೆ ಭರಪೂರವಿದೆ’ ಎಂದರು ಧನಂಜಯ.


ಧನಂಜಯ

‘ನಾನು ಹೀರೊ ಆಗಬೇಕು ಎಂದು ಬಂದವನೇ ಅಲ್ಲ. ಈ ಸಿನಿಮಾಗಳೆಲ್ಲವೂ ಬೋನಸ್’ ಎಂದು ಮಾತು ಆರಂಭಿಸಿದ ನಾಗಭೂಷಣ್, ‘ಡಾಲಿ ಪಿಕ್ಚರ್ಸ್ ಬಿಟ್ಟು ಬೇರೆಯವರ ಸಿನಿಮಾ ಮಾಡೋದಿಲ್ವಾ’ ಎಂದು ಹಲವರು ಕೇಳುತ್ತಾರೆ. ನನ್ನ ಮೇಲೆ ₹5–₹6 ಕೋಟಿ ಬಂಡವಾಳ ಹೂಡಲು ಬೇರೆ ಯಾರೂ ಬಂದಿಲ್ಲ. ನನ್ನ ಗೆಳೆಯ ಧನಂಜಯ ಒಬ್ಬನೇ ಈ ಮಾತನ್ನು ಹೇಳಿರುವುದು. ಇದೇ ಆ ಪ್ರಶ್ನೆಗೆ ಉತ್ತರ’ ಎಂದರು.

ಸಿನಿಮಾದಲ್ಲಿ ನಾಯಕಿಯಾಗಿ ಮಲ್ಲಿಕಾ ಟಿ.ವಸುಪಾಲ್ ನಟಿಸಿದ್ದು, ಸಿನಿಮಾದೊಳಗೆ ‘ಸೂಪರ್‌ಸ್ಟಾರ್ ವಿದ್ಯಾ’ ಆಗಿ ಕಾಣಿಸಿಕೊಳ್ಳಲಿದ್ದಾರೆ. ಧನಂಜಯ ಅವರೂ ‘ಅನಕೊಂಡಾ’ ಎಂಬ ಭಿನ್ನವಾದ ಪಾತ್ರಕ್ಕೆ ಬಣ್ಣಹಚ್ಚಿದ್ದಾರೆ. ❖

‘ಮುಗಿಲ ಮಲ್ಲಿಗೆ’ ಚಿತ್ರೀಕರಣ ಮುಕ್ತಾಯ

‘ಕಮರೊಟ್ಟು ಚೆಕ್‌ಪೋಸ್ಟ್’ ಚಿತ್ರದಲ್ಲಿ ನಟಿಸಿದ್ದ ಸನತ್ ನಾಯಕರಾಗಿರುವ ‘ಮುಗಿಲ ಮಲ್ಲಿಗೆ’ ಚಿತ್ರದ ಚಿತ್ರೀಕರಣ ಇತ್ತೀಚೆಗಷ್ಟೇ ಮುಕ್ತಾಯಗೊಂಡಿದೆ. ಆರ್.ಕೆ.ಗಾಂಧಿ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ.

‘ಸದ್ಯದಲ್ಲೇ ಚಿತ್ರದ ಡಬ್ಬಿಂಗ್ ಸೇರಿದಂತೆ ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನು ಪ್ರಾರಂಭಿಸಲಾಗುವುದು. ಏಪ್ರಿಲ್ ತಿಂಗಳಲ್ಲಿ ಚಿತ್ರ ಬಿಡುಗಡೆ ಮಾಡಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ. ಹೊಸಕೋಟೆ ಸುತ್ತಮುತ್ತಲಿನ ಕಂಬಳಿಪುರ ಕಾಟೇರಮ್ಮ, ಭಕ್ತರಹಳ್ಳಿ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ’ ಎಂದಿದ್ದಾರೆ ಆರ್.ಕೆ.ಗಾಂಧಿ.

ಎ.ನಾಗರಾಜ ರೆಡ್ಡಿ ನಿರ್ಮಾಣವಿದೆ. ಸಹನಾ ಚಂದ್ರಶೇಖರ್ ನಾಯಕಿಯಾಗಿ ಕಾಣಿಸಿಕೊಂಡಿದ್ದು, ಥ್ರಿಲ್ಲರ್ ಮಂಜು, ಹಿರಿಯ ನಟಿ ಭವ್ಯ, ‘ಬಾಹುಬಲಿ’ ಖ್ಯಾತಿಯ ಕಾಲಕೇಯ ಪ್ರಭಾಕರ್, ಕಿಲ್ಲರ್ ವೆಂಕಟೇಶ್ ಮುಂತಾದವರು ಚಿತ್ರದಲ್ಲಿದ್ದಾರೆ. ಅನಿರುದ್ಧ ಶಾಸ್ತ್ರಿ ಸಂಗೀತ, ಅಭಿನಂದನ್ ಶೆಟ್ಟಿ ಛಾಯಾಚಿತ್ರಗ್ರಹಣ, ವಿನಯ್ ಜಿ.ಆಲೂರು ಸಂಕಲನವಿದೆ. ❖


ಸಹನಾ ಚಂದ್ರಶೇಖರ್, ಸನತ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಪ್ರಧಾನಿ ನರೇಂದ್ರ ಮೋದಿ ಅವರ ಮುಂದೆ ಕಲಾವಿದರ ತಂಡವೊಂದು ಹಾಡು ಹೇಳುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿದೆ. ಮೋದಿ ಅವರು ಮಾರಿಷಸ್‌ಗೆ ಭೇಟಿ ನೀಡಿದ್ದಾಗ ಕಲಾವಿದರ ತಂಡವು ಭೋಜ್‌ಪುರಿ ಜನಪದ ಪ್ರಕಾರವಾದ ಗೀತ್ ಗವಾಯಿ ರೂಪದಲ್ಲಿ ‘ಮೆಹಂಗಾಯ್ ಡಾಯನ್..’ ಎನ್ನುವ ಚಿತ್ರಗೀತೆಯನ್ನು ಹಾಡಿದ್ದು, ಇದರಿಂದ ಹಣದುಬ್ಬರ ಮತ್ತು ಬೆಲೆ ಏರಿಕೆಗೆ ಸಂಬಂಧಿಸಿದಂತೆ ಮೋದಿ ಅವರನ್ನು ವ್ಯಂಗ್ಯ ಮಾಡಿದಂತಾಗಿದೆ ಎಂದು ಪೋಸ್ಟ್ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



ವಿಡಿಯೊ ಬಗ್ಗೆ ಜಾಲತಾಣಗಳಲ್ಲಿ ಹುಡುಕಾಟ ನಡೆಸಿದಾಗ, ನೇತಾಪ್ಲಿಕ್ಸ್‌ಇಂಡಿಯಾ ಎನ್ನುವ ಎಕ್ಸ್ ಖಾತೆಯು ಬಳಕೆದಾರರೊಬ್ಬರಿಗೆ ಇದು ತಿರುಚಲಾಗಿರುವ ವಿಡಿಯೊ ಎಂದು ಉತ್ತರಿಸಿರುವುದು ಕಂಡುಬಂತು. ಇದೇ ಸುಳಿವನ್ನು ಆಧರಿಸಿ ನಾವು ಮಾರಿಷಸ್ ಭೇಟಿಗೆ ಸಂಬಂಧಿಸಿದ ಮೋದಿ ಅವರ ವಿಡಿಯೊ ಹುಡುಕಿದೆವು. ಅವರನ್ನು ಮಾರಿಷಸ್‌ನಲ್ಲಿ ಸಾಂಪ್ರದಾಯಿಕ ರೀತಿಯಲ್ಲಿ ಸ್ವಾಗತಿಸಿ, ಗೀತ್ ಗವಾಯಿ ಹಾಡು ಹಾಡಲಾಯಿತು ಎಂದು ವರದಿಯಾಗಿರುವುದು ಕಂಡಿತು. ಅದೇ ವಿಡಿಯೊ ಅನ್ನು ಮೋದಿ ಅವರು ತಮ್ಮ ಎಕ್ಸ್ ಖಾತೆಯಲ್ಲೂ ಹಂಚಿಕೊಂಡಿದ್ದಾರೆ. ಕೆಲವರು ವಿಡಿಯೊ ಅನ್ನು ಬದಲಾಯಿಸಿ, ಸುಳ್ಳು ಪ್ರತಿಪಾದನೆ ಮಾಡುತ್ತಿದ್ದಾರೆ ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ



ಮನುಷ್ಯನನ್ನು ಕಾಡುವ ‘ಸಂಗ್ರಹ’ ರೋಗ!



ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ,
ಗವಿಮಠ, ಕೊಪ್ಪಳ

157

ಭೂಮಿ ಎಲ್ಲ ಜೀವಿಗಳಿಗೂ ಆಶ್ರಯ ತಾಣ. ಪಶುಗಳು ಈ ಭೂಮಿಯ ಮೇಲೆ ಬದುಕುವುದಕ್ಕೂ ಮನುಷ್ಯ ಬದುಕುವುದಕ್ಕೂ ವ್ಯತ್ಯಾಸ ಇದೆ. ಇತ್ತೀಚೆಗೆ ಕೋವಿಡ್ ಬಂದಿತ್ತು. ಆಗ ಯಾವುದೇ ಪಕ್ಷಿ, ಪ್ರಾಣಿಗಳು ಮಾಸ್ಕ್ ಹಾಕಿಕೊಂಡಿದ್ದು ನೋಡೀರೇನು? ಅವು ಅಂತರ ಕಾಯ್ದುಕೊಂಡಿದ್ದವೇನು? ಅವುಗಳಿಗೆ ಇಲ್ಲದ ರೋಗ ಮನುಷ್ಯನಿಗೆ ಯಾಕೆ ಬಂತು? ಯಾವುದಾದರೂ ಪ್ರಾಣಿಗೆ ಲಕ್ವಾ ಹೊಡೆದಿದ್ದು ನೋಡಿದ್ದೀರೇನು? ಯಾವುದೇ ಪಶು ಕನ್ನಡಕ ಹಾಕಿಕೊಂಡಿದ್ದು ಇದೆಯೇನು? ಕಿವಿಗೆ ಮೆಶಿನ್ ಹಾಕಿಕೊಂಡಿದ್ದು, ಹಲ್ಲು ಸೆಟ್ ಹಾಕಿಕೊಂಡಿದ್ದು ನೋಡಿದ್ದೀರೇನು? ಯಾವುದಾದರೂ ಆಕಳಿಗೆ ಜಾಯಿಂಟ್ ರಿಪ್ಲೇಸ್‌ಮೆಂಟ್ ಮಾಡಿದ್ದಾರೇನು? ಇವೆಲ್ಲ ಮನುಷ್ಯನಿಗೇ ಯಾಕೆ ಬಂತು? ವೈದ್ಯರ ಬಳಿ ಹೋದರೆ ಅವರು, ಒತ್ತಡದಿಂದ ಲಕ್ವಾ ಹೊಡೀತು ಅಂತಾರೆ. ಈ ಒತ್ತಡ ಯಾಕೆ ಬಂತು?

ಜಲಾಶಯದ ಗೇಟ್ ಒಡೆಯುತ್ತದೆ. ಯಾಕೆಂದರೆ ಒಳಗೆ ನೀರಿನ ಒತ್ತಡ ಜಾಸ್ತಿಯಾಯಿತು. ಮನುಷ್ಯನಿಗೆ ಯಾಕೆ ಒತ್ತಡ ಇರುತ್ತದೆ ಎಂದರೆ ಅವನು ಅಧಿಕಾರ, ಹಣ ಸಂಗ್ರಹ ಮಾಡುತ್ತಿದ್ದಾನೆ ಅದಕ್ಕೆ. ಮನುಷ್ಯ ಸಂಗ್ರಹ ಮಾಡಲು ಶುರು ಮಾಡಿದಾಗಿನಿಂದಲೇ ಒತ್ತಡ ಆರಂಭವಾಯಿತು. ಅವನ ಸಂಗ್ರಹ ಬಾಲ್ಯದಿಂದಲೇ ಶುರುವಾಗಿದೆ. ಬಾಲ್ಯದಲ್ಲಿ ಆಟಿಕೆ ಸಾಮಾನು ಸಂಗ್ರಹ, ಆ ಮೇಲೆ ಬಟ್ಟೆ, ಆ ಮೇಲೆ ದುಡ್ಡು ಸಂಗ್ರಹ, ಆ ಮೇಲೆ ಅಧಿಕಾರ ಸಂಗ್ರಹ, ಮುಪ್ಪಾದ ಮೇಲೆ ಚಿಂತೆ ಸಂಗ್ರಹ ಆತು. ಮನುಷ್ಯನಿಗೆ ಸಂಗ್ರಹ ಬೇಡ ಎಂದಲ್ಲ. ಆದರೆ ಸಂಗ್ರಹದ ಸಲುವಾಗಿ ದಾರಿ ತಪ್ಪಬಾರದು. ಬದುಕಿಗೆ ಸಂಪತ್ತು ಎನ್ನುವುದು ಹೋಗಿ ಸಂಪತ್ತಿಗಾಗಿಯೇ ಬದುಕು ಎನ್ನುವುದು ಬಂತು.

ನಾವು ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿಸುತ್ತೇವೆ. ಪೂಜೆಗೆ ಮೊದಲು ಪೂಜಾರಿ ಸಂಕಲ್ಪ ಮಾಡಿಸುತ್ತಾರೆ. ಸಂಕಲ್ಪದಲ್ಲಿ ಅವರು ಹೇಳುವುದು ಏನು? ‘ಧನ ಕನಕ ಪುತ್ರ ಪೌತ್ರಾಭಿವೃದ್ಧಿರಸ್ತು’ ಎಂದು. ಅಂದರೆ ನಾವು ಕೇಳುವುದು ಹಣ ಬರಬೇಕು, ಬಂಗಾರ ಬರಬೇಕು, ಮಕ್ಕಳು, ಮೊಮ್ಮಕ್ಕಳು ಬರಬೇಕು ಅಂತ. ನಮ್ಮ ಪ್ರಾರ್ಥನೆ ಏನು ಎಂದರೆ, ‘ದೇವರೇ ನೀನು ಕೊಟ್ಟ ಸಂಪತ್ತನ್ನು ಮಕ್ಕಳು ಮೊಮ್ಮಕ್ಕಳೂ ಉಣ್ಣಬೇಕು’ ಅಂತ. ಆದರೆ ಸಂಕಲ್ಪಕ್ಕೆ ನಾವು ನೀಡಿದ ಹಣ 11 ರೂಪಾಯಿ. ಅಷ್ಟು ಕೊಟ್ಟು ನಾವು ಕೇಳುವ ಯಾದಿ ಇಲ್ಲಿಂದ ಅಮೆರಿಕದವರೆಗೆ ಆಗುತ್ತದೆ. ಅಂದರೆ ಮನುಷ್ಯನ ಆಸೆ, ಸಂಗ್ರಹ ಬುದ್ಧಿಗೆ ಮಿತಿಯೇ ಇಲ್ಲ. ಮನುಷ್ಯ ಸಂಗ್ರಹದ ಸಲುವಾಗಿ ಎಲ್ಲೆಲ್ಲಿ ಪ್ರಯತ್ನ ಮಾಡಿದ ಅಂತ ಭರ್ತೃಹರಿ ಎಂಬ ಋಷಿ ಹೇಳುತ್ತಾರೆ. ಮನುಷ್ಯ ಸಂಗ್ರಹದ ಆಸೆಗಾಗಿ ಭೂಮಿಯನ್ನೂ ಬಿಡಲಿಲ್ಲ. ಭೂಮಿಯ ಉತ್ಖನನ ಮಾಡಿದ. ಭೂಮಿಯ ಒಳಗೆ ಚಿನ್ನ ಹುಡುಕಲು ಆರಂಭಿಸಿದ. ಆಗ ಭೂಮಿ ಹೇಳಿತು. ‘ನನ್ನ ಒಳಗೆ ಚಿನ್ನ ಹುಡುಕಬೇಡ. ನಾನು ಚಿನ್ನ ಕೊಡೋದಿಲ್ಲ. ಅನ್ನ ಕೊಡ್ತೀನಿ’ ಅಂತ. ಆದರೆ ಮನುಷ್ಯ ಅನ್ನ ಮರೆತು ಚಿನ್ನ ಹುಡುಕಲು ಪ್ರಾರಂಭಿಸಿದ. ಮನುಷ್ಯ ಏನನ್ನು ನೆನಪಿಡಬೇಕು ಎಂದರೆ ಮನುಷ್ಯರನ್ನು ನಂಬಿ ಕೆಟ್ಟವರು ಇದ್ದಾರೆ. ಆದರೆ ಭೂಮಿಯನ್ನು ನಂಬಿ ಕೆಟ್ಟವರು ಇಲ್ಲ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಮಾರ್ಚ್ 21, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣ ಸಪ್ತಮಿ ಗಂ. 28-24 ನಕ್ಷತ್ರ: ಜ್ಯೇಷ್ಠ ಗಂ. 25-46 ಯೋಗ: ಸಿದ್ಧಿ (ಆಸ್ರಿಕ್) ಗಂ. 18-42 ಕರಣ: ವಿಷ್ಟಿ ಗಂ. 15-40, ಮೀನ ಮಾಸದ 07 ನೇ ದಿನ, ಮಳೆನಕ್ಷತ್ರ: ಉತ್ತರಾಭಾದ್ರ 2.
ರಾಹುಕಾಲ : ಬೆಳಿಗ್ಗೆ 10-30 – 12-00
ಸೂರ್ಯೋದಯ : 06-37 ಸೂರ್ಯಾಸ್ತ : 06-38
ಮುಸ್ಲಿಂ ದಿನಾಂಕ : 20 ರಂಜಾನ್
ಅದೃಷ್ಟ ಸಂಖ್ಯೆ : 10, 4

ಮೇಷ: ವಿದ್ಯಾಭ್ಯಾಸವನ್ನು ಮುಂದುವರಿಸಬೇಕೆಂದು ಬಯಸುತ್ತಿರುವ ಗೃಹಿಣಿಯರಿಗೆ ಸರಿ ಮಾರ್ಗವೊಂದು ಪ್ರಾಪ್ತಿ. ಪ್ರೀತಿಪಾತ್ರರೊಂದಿಗೆ ಮನಬಿಚ್ಚಿ ಮಾತನಾಡುವ ಇಚ್ಛೆ ಪೂರ್ಣಗೊಳ್ಳಲಿದೆ.

ವೃಷಭ: ಮಗನ ಕೆಲಸ ನೆರವೇರಿದ ಕಾರಣಕ್ಕೆ ಹೇಳಿಕೊಂಡ ಹರಕೆ ಪೂರ್ಣಗೊಳಿಸುವ ಬಗ್ಗೆ ಮನೆಯಲ್ಲಿ ಪ್ರಸ್ತಾಪಿಸಿ. ಆಹಾರದ ವ್ಯತ್ಯಾಸದಿಂದ ಆರೋಗ್ಯದ ತೊಂದರೆ ಎದುರಿಸುವಿರಿ. ಆಲಂಕಾರಿಕ ವಸ್ತುಗಳ ಖರೀದಿ ಆಗಲಿದೆ.

ಮಿಥುನ: ಎಲ್ಲಾ ಸನ್ನಿವೇಶಗಳು ವಿರೋಧವಾಗಿ ಇರುವುದರಿಂದ ಮನಸ್ಸಿಗೆ ನಕಾರಾತ್ಮಕ ಯೋಚನೆಗಳು ಬರಲಿವೆ. ಭವಿಷ್ಯದ ಯೋಚನೆಗಳು ಬರಲಿವೆ. ಮನೆಯಲ್ಲಿ ಅನಿರೀಕ್ಷಿತ ಬೆಳವಣಿಗೆಗಳು ಇರುತ್ತವೆ.

ಕರ್ಕಾಟಕ: ಮಗಳ ಉತ್ತಮ ನಡತೆಯಿಂದಾಗಿ ಎಲ್ಲರೂ ಗೌರವವನ್ನು ಕೊಡಲಿದ್ದಾರೆ. ರಹಸ್ಯ ವ್ಯಕ್ತಿಗಳಿಂದ ಸಿಗುವ ಬೆಂಬಲದಿಂದ ಕನಸುಗಳು ನನಸಾಗುವುದು. ಚರ್ಮದ ಉತ್ಪನ್ನಗಳಿಂದ ಹೇರಳ ಲಾಭ.

ಸಿಂಹ: ಇಂದಿನ ನ್ಯಾಯಾಲಯ ಅಥವಾ ಸರ್ಕಾರಿ ಕಚೇರಿಗಳ ಅಲೆದಾಟಗಳು ವ್ಯರ್ಥವಾಗುವುದು. ಕೃಷಿಕರು ದಲ್ಲಾಳಿಗಳಿಂದ ಮೋಸ ಹೋಗುವ ಸ್ಥಿತಿ ಬರುವುದು. ಸತ್ಕಾರ್ಯಗಳಿಂದಾಗಿ ಮನೆಯಲ್ಲಿ ಸಡಗರವಿರುವುದು.

ಕನ್ಯಾ: ತೊಂದರೆಗಳೆಲ್ಲಾ ಒಂದೊಂದಾಗಿ ಉಪಶಮನಗೊಳ್ಳುತ್ತಾ ಹಂತ ಹಂತವಾಗಿ ಅಭಿವೃದ್ಧಿ ತೋರಿ ಬರುವುದು. ಸುಪ್ತ ಪ್ರತಿಭೆಯಾದ ಕವಿತೆ ಕಾವ್ಯಗಳನ್ನು ಬರೆಯುವುದು ಬಹಳ ಜನಕ್ಕೆ ತಿಳಿಯಲಿದೆ.

ತುಲಾ: ಸಮಾಜಸೇವೆಯಲ್ಲಿ ಹಲವರು ಕೈ ಸೇರುವುದರಿಂದ ಜವಾಬ್ದಾರಿ ಕಡಿಮೆಯಾಗಲಿದೆ. ಯಂತ್ರೋಪಕರಣಗಳ ಮಾರಾಟದಿಂದ ಲಾಭ ಇರುವುದು. ಮನೆಯ ಪರಿಸ್ಥಿತಿಯು ಸುಧಾರಿಸುವುದು.

ವೃಶ್ಚಿಕ: ಆದರ್ಶವಾದಿ ಗುಂಪಿನ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದರಿಂದ ವ್ಯಕ್ತಿತ್ವದಲ್ಲಿ ಒಳ್ಳೆಯ ಬದಲಾವಣೆಗಳಾಗುವುದು. ವೈದ್ಯ ವೃತ್ತಿಯವರಿಗೆ ತೃಪ್ತಿಕರವಾದಂಥ ವರಮಾನವು ಪ್ರಾಪ್ತಿಯಾಗುತ್ತದೆ.

ಧನು: ಸಲಹೆ ಸೂಚನೆಗಳನ್ನು ಒಪ್ಪುವಂತೆ ವ್ಯಕ್ತಿಯ ಮನಸ್ಸು ಪರಿವರ್ತನೆ ಮಾಡುವಲ್ಲಿ ವಿಫಲರಾಗುವಿರಿ. ತರಕಾರಿ ಬೆಳೆಗಾರರಿಗೆ ಸಮಾಧಾನಕರ ವರಮಾನ ಸಿಗುವುದು. ಹಣಕಾಸಿನ ಬಗ್ಗೆ ಚಿಂತಿಸುವ ಅಗತ್ಯವಿಲ್ಲ.

ಮಕರ: ಸರಕುಗಳನ್ನು ರಫ್ತು ಹಾಗೂ ಆಮದನ್ನು ಮಾಡಿಕೊಳ್ಳುವವರು ಕೆಲಸಗಾರರ ಮೇಲೆ ಒಂದು ಕಣ್ಣನ್ನು ಇಡುವುದು ಒಳ್ಳೆಯದು. ದೂರದ ಊರಿನಲ್ಲಿ ನಿಮ್ಮ ವೃತ್ತಿ ಜೀವನವು ಉತ್ತಮವಾಗಿ ಆರಂಭಗೊಳ್ಳುವುದು.

ಕುಂಭ: ಮರಳಿ ಯತ್ನವ ಮಾಡು ಮನುಜ ಎಂದು ಹಿರಿಯರು ಹೇಳುವಂತೆ ವ್ಯವಹಾರದಲ್ಲಿ ಸೋಲನ್ನು ಅನುಭವಿಸಿದ ಮಾತ್ರಕ್ಕೆ ಹಿಂದೆಸರಿಯಬೇಡಿ. ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದೀರಿ.


ಮೀನ: ಮದುವೆ ಮನೆಯ ತಯಾರಿ ನಡೆಸುತ್ತಿರುವವರು ಕೆಲಸಗಳನ್ನು ಮುಗಿಸುವಿರಿ. ಪೆಟ್ರೋಲ್ ವ್ಯಾಪಾರದಲ್ಲಿ ಮಾರಾಟ ಉತ್ತಮವಾಗಿರುವುದು. ಎಣ್ಣೆ ಮತ್ತು ಖಾರದ ಪದಾರ್ಥಗಳ ಮಿತಬಳಕೆ ಒಳ್ಳೆಯದು.

ಪದಬಂಧ 5988

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆಳವಾಗಿ ನೀರು ನಿಲ್ಲು (4)
3.ಮಾನವುಳ್ಳವನ ಮೇಲೆ ಬಂದಿರುವ ಸಂದೇಹ (4)
5.ಮನದೊಳಗೆ ಬಂದಿರುವ ಕಾಮ (3)
7.ದೇವಾಲಯದ ಸಭಾಮಂಟಪ (4)
9.ಎಳ್ಳು ನೀರು ಬಿಡುವಿಕೆ (4)
12.ಮಿಶ್ರಣವನ್ನು ಹೀಗೆ ಹೇಳಿ (3)
14.ಬೆಲೆಬಾಳುವ ಮಣಿಗಳಿಗೆ ಆಶ್ರಯವಾಗಿರುವ ಸಮುದ್ರ (4)
15.ಅಂತಃಪುರವನ್ನು ಹೀಗೂ ಹೇಳುತ್ತಾರೆ (4)

ಮೇಲಿಂದ ಕೆಳಕ್ಕೆ
1.ಇದು ನಡುವಿನದು (3)
2.ಗಮನವಿಟ್ಟು ನೋಡಿ! ಇದು ಸುಲಭವಲ್ಲದುದು! (3)
3.ಕನ್ನಡಿಗನಿಗಾದ ಎಕ್ಸ್ ಪಿರಿಯನ್ಸ್ (4)
4.ಪಾಸು ಎಂದಿದ್ದರೂ ತೇರ್ಗಡೆಯಾಗದಿರುವಿಕೆ (3)
6.ಈಕೆ ನಳನ ಪತ್ನಿ (4)
7.ಅಸಲಿ ಪದದ ವಿರುದ್ಧ ಪದ (3)
8.ಕಾಲಸೂಚಕ ಯಂತ್ರ (4)
10.ಯಜ್ಞೋಪವೀತ ಇಲ್ಲಿದೆ (4)
11.ಸ್ವರವಿದ್ದಾಗ ಇದು ದಾಖಲಾಗದುದು! (3)
12.ತಟ್ಟಿ ಒಣಗಿಸಿದ ಸಗಣಿ (3)
13.ಕೆಲವರು ಮಾಡುವ ಕಾರ್ಯ (3)



5987ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವನದುರ್ಗ 2.ಪರಂಪರೆ
4.ಕನ್ನಡಕ 6.ನವೀನ
7.ಣಕ 9.ಖುರಬೆ
11.ರವಿ 13.ಮೊಸರು
14.ಗೆಳೆತನ 16.ಕರೆಯೋಲೆ
17.ಪರಧನ

ಮೇಲಿಂದ ಕೆಳಕ್ಕೆ:
1.ವಶೀಕರಣ 2.ಪದ್ಯ
3.ಪದವೀಧರ 5.ಕರುಳು
8.ಕಲ್ಲುಸಕ್ಕರೆ 10.ಬೆಸುಗೆ
12.ವಿಮಾನಯಾನ
15.ಬಾಳೆ

ಸುಡೊಕು 6373

	7			4				9
			6		9			2
2		4		7		3		
7	8						5	
			4			6		7
6		5		8			2	
		7	2				9	
				1	7		3	6
9		1		5		2		4


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6372 ಸುಡೊಕು

2	3	9	8	5	7	1	6	4
8	6	4	1	3	2	7	5	9
5	1	7	4	9	6	2	8	3
7	9	8	2	4	5	6	3	1
4	5	1	6	8	3	9	2	7
3	2	6	9	7	1	5	4	8
6	7	2	3	1	4	8	9	5
9	4	5	7	6	8	3	1	2
1	8	3	5	2	9	4	7	6


ಷೇರುಪೇಟೆ ವಹಿವಾಟು 899



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,907
ಇಂದಿನ ಅಂತ್ಯ	23,190
▲	283
ದಿನದ ಗರಿಷ್ಠ	23,216

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹470
12 ಕ್ಕೆ	₹63
ಮೈಸೂರು	
100ಕ್ಕೆ	₹470

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹340-628

ದ್ವಿತಳಿ (ಬಿ.ವಿ) ₹333-782

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4 ₹196

ಆರ್‌ಎಸ್‌ಎಸ್-5 ₹191

ಗುಡ್ ಲಾಟ್ ₹183

(ಪ್ರತಿ ಕೆ.ಜಿಗೆ)

ಕೊಬ್ಬರಿ ಬೆಲೆ ಏರಿಕೆ

ಪ್ರಜಾವಾಣಿ ವಾರ್ತೆ



ತುಮಕೂರು: ಕೊಬ್ಬರಿ ಧಾರಣೆಯು ವಾರದಿಂದ ವಾರಕ್ಕೆ ಹೆಚ್ಚಳ ಆಗುತ್ತಿದ್ದು, ಗುರುವಾರ ತಿಪಟೂರು ಎಪಿಎಂಸಿಯಲ್ಲಿ ಕ್ವಿಂಟಲ್‌ಗೆ ದರವು ₹17 ಸಾವಿರ ದಾಟಿದೆ.

ಈ ವರ್ಷ ದಾಖಲಾದ ಗರಿಷ್ಠ ಬೆಲೆ ಇದಾಗಿದೆ. ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ಕ್ವಿಂಟಲ್‌ಗೆ ₹17 ಸಾವಿರಕ್ಕೆ ಮಾರಾಟವಾಗಿತ್ತು. ಆರು ತಿಂಗಳ ನಂತರ ಬೆಲೆ ಮತ್ತಷ್ಟು ಚೇತರಿಕೆ ಕಂಡಿದೆ.

ಮಾರುಕಟ್ಟೆಯಲ್ಲಿ ಗುರುವಾರ ಕನಿಷ್ಠ ₹14,900 ಮತ್ತು ಗರಿಷ್ಠ ₹17,100 ಬೆಲೆಗೆ ಮಾರಾಟವಾಯಿತು. 2,397 ಕ್ವಿಂಟಲ್ (5,577 ಚೀಲ) ಆವಕವಾಗಿತ್ತು. ಬೇಡಿಕೆಯಷ್ಟು ಕೊಬ್ಬರಿ ಮಾರುಕಟ್ಟೆಗೆ ಬಾರದಿರುವುದು ಬೆಲೆ ಹೆಚ್ಚಳಕ್ಕೆ ಕಾರಣವಾಗಿದೆ. ಹಬ್ಬದ ಸಮಯದಲ್ಲಿ ಬೇಡಿಕೆಯೂ ಹೆಚ್ಚಾಗಿದೆ.

ಆರು ತಿಂಗಳ ಹಿಂದೆ ಕ್ವಿಂಟಲ್‌ಗೆ ಗರಿಷ್ಠ ₹17 ಸಾವಿರಕ್ಕೆ ಏರಿಕೆಯಾಗಿತ್ತು. ನಂತರ ಸ್ವಲ್ಪಮಟ್ಟಿಗೆ ಇಳಿಕೆಯಾಗಿ, ₹14 ಸಾವಿರದ ಆಸುಪಾಸಿನಲ್ಲೇ ಇತ್ತು. ಕಳೆದ ಕೆಲ ದಿನಗಳಿಂದ ನಿಧಾನವಾಗಿ ಬೆಲೆ ಏರಿಕೆಯತ್ತ ಮುಖ ಮಾಡಿದೆ.

ಮಾರ್ಚ್ 13ರ ಹರಾಜಿನಲ್ಲಿ ₹14 ಸಾವಿರ ದಾಟಿತ್ತು. ಮಾರ್ಚ್ 17ರಂದು ₹16 ಸಾವಿರ ತಲುಪಿತ್ತು. ಮೂರು ದಿನಗಳ ಅಂತರದಲ್ಲಿ ಕ್ವಿಂಟಲ್‌ಗೆ ₹1 ಸಾವಿರ ದರ ಹೆಚ್ಚಳವಾಗಿದೆ.

ಸಂಸದೀಯ ಸಮಿತಿಗೆ ಆದಾಯ ತೆರಿಗೆ ಇಲಾಖೆ ಮಾಹಿತಿ

₹43 ಲಕ್ಷ ಕೋಟಿ ತೆರಿಗೆ ಬಾಕಿ



ನವದೆಹಲಿ (ಪಿಟಿಐ): ದೇಶದಲ್ಲಿ ₹43 ಲಕ್ಷ ಕೋಟಿಯಷ್ಟು ನೇರ ತೆರಿಗೆ ಬಾಕಿ ಉಳಿದಿದೆ. ಈ ಪೈಕಿ ಮೂರನೇ ಎರಡರಷ್ಟು ತೆರಿಗೆ ವಸೂಲಾತಿಯು ತೀರಾ ಕಷ್ಟಕರವಾಗಿದೆ ಎಂದು ಆದಾಯ ತೆರಿಗೆ ಇಲಾಖೆಯು, ಹಣಕಾಸಿಗೆ ಸಂಬಂಧಿಸಿದಂತೆ ರಚಿಸಿರುವ ಸಂಸದೀಯ ಸಮಿತಿಗೆ ತಿಳಿಸಿದೆ.

ನೇರ ತೆರಿಗೆ ಬಾಕಿ, ಅದರ ವಸೂಲಾತಿಗೆ ಕೈಗೊಂಡಿರುವ ಕ್ರಮ ಹಾಗೂ ವಸೂಲಾತಿ ಅವಧಿ ವಿಸ್ತರಣೆಗೆ ಸಂಬಂಧಿಸಿದಂತೆ ಸಮಿತಿಯು ಕೇಳಿದ ಪ್ರಶ್ನೆಗೆ, ಕೇಂದ್ರೀಯ ನೇರ ತೆರಿಗೆಗಳ ಮಂಡಳಿಯ (ಸಿಬಿಡಿಟಿ) ಅಧ್ಯಕ್ಷರು ಈ ಉತ್ತರ ನೀಡಿದ್ದಾರೆ. ಸಂಸತ್‌ನಲ್ಲಿ ಈ ವರದಿಯನ್ನು ಮಂಡಿಸಲಾಗಿದೆ.

‘ಈ ಬಾಕಿ ತೆರಿಗೆ ಮೊತ್ತವು 90ರ ದಶಕಕ್ಕೆ ಸಂಬಂಧಿಸಿದ್ದಾಗಿದೆ. ಆ ವೇಳೆ ತೆರಿಗೆ ದಾಖಲೆಗಳು ಕೈಬರಹದ ರೂಪದಲ್ಲಿವೆ’ ಎಂದು ವಿವರಿಸಿದ್ದಾರೆ.

ಬಾಕಿ ತೆರಿಗೆಯಲ್ಲಿ ₹10.55 ಲಕ್ಷ ಕೋಟಿಯು ಐದು ಅಥವಾ ಅದಕ್ಕಿಂತ ಹೆಚ್ಚಿನ ವರ್ಷಗಳಿಗೆ ಸಂಬಂಧಿಸಿದ್ದಾಗಿದೆ. 90ರ ದಶಕದ ಹಿಂದಿನ ಬಾಕಿಯೂ ಈ ಮೊತ್ತದಲ್ಲಿ ಸೇರಿದ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಒಟ್ಟು ₹43 ಲಕ್ಷ ಕೋಟಿ ಮೊತ್ತದ ಪೈಕಿ ಶೇ 67ರಷ್ಟು ವಸೂಲಾತಿಯು ಕಷ್ಟಕರವಾಗಿದೆ. ಈ ಪೈಕಿ ಕಾಲ್ಪನಿಕವಾಗಿ ನಮೂದಿಸಿರುವ ಮೊತ್ತವೂ ಇದೆ. ಬಾಕಿ ಮೊತ್ತವು ಡಿಜಿಟಲ್ ಪ್ರಕ್ರಿಯೆ ಆರಂಭಕ್ಕೂ ಮುಂಚಿನದ್ದಾಗಿದೆ. ಆದರೆ, ಈ ಮೊತ್ತಕ್ಕೆ ಹೊಸ ವ್ಯವಸ್ಥೆಯಡಿ ಬಡ್ಡಿ ಲೆಕ್ಕ ಹಾಕಲಾಗುತ್ತಿದೆ. ಇದರಿಂದ ಮೊತ್ತವು ಏರಿಕೆಯಾಗಿದೆ ಎಂದು ಹೇಳಿದೆ.

ಸಿಬಿಡಿಟಿಗೆ ಸಮಿತಿಯ ಸಲಹೆ ಏನು?

ತೆರಿಗೆ ಬಾಕಿ ಉಳಿಸಿಕೊಂಡರೆ ವಾರ್ಷಿಕವಾಗಿ ದಂಡವು ಹೆಚ್ಚುತ್ತದೆ. ಮತ್ತೆ ಈ ಮೊತ್ತವು ವಸೂಲಾಗುವುದಿಲ್ಲ. ಹಾಗಾಗಿ, ಪರಿಣಾಮಕಾರಿ ತೆರಿಗೆ ವಸೂಲಾತಿಗೆ ಸಂಬಂಧಿಸಿದಂತೆ ಈಗಿರುವ ತೆರಿಗೆ ಮೌಲ್ಯಮಾಪನ ವ್ಯವಸ್ಥೆಯನ್ನು ಪರಾಮರ್ಶೆ ಮಾಡುವ ಅಗತ್ಯವಿದೆ ಎಂದು ಸಂಸದೀಯ ಸಮಿತಿ ಸಲಹೆ ನೀಡಿದೆ.

ಹಾಲಿ ಇರುವ ತೆರಿಗೆ ಮೌಲ್ಯಮಾಪನ ವ್ಯವಸ್ಥೆಯಿಂದ ಪ್ರಾಮಾಣಿಕ ತೆರಿಗೆದಾರರಿಗೆ ಆಗುತ್ತಿರುವ ತೊಂದರೆಯನ್ನು ಸರಿಪಡಿಸಬೇಕಿದೆ. ಈ ಬಗ್ಗೆ ಅಧಿಕಾರಿಗಳು ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ ಎಂದು ಹೇಳಿದೆ.

ನೈಜ ತೆರಿಗೆಯನ್ನು ವಸೂಲಿ ಮಾಡಬೇಕಿದೆ. ತೆರಿಗೆ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಬೇಕು. ಬಾಕಿ ವಸೂಲಿಗೆ ಸಂಬಂಧಿಸಿದಂತೆ ಸಮಯ ನಿಗದಿಪಡಿಸಬೇಕಿದೆ ಎಂದು ಸೂಚಿಸಿದೆ.

ಚಿನ್ನ, ಬೆಳ್ಳಿ ಧಾರಣೆ ಇಳಿಕೆ



ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ಚಿನ್ನ ಮತ್ತು ಬೆಳ್ಳಿ ಧಾರಣೆ ಇಳಿಕೆಯಾಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹300 ಇಳಿಕೆಯಾಗಿ, ₹91,650 ಆಗಿದೆ. ಆಭರಣ ಚಿನ್ನವು (ಶೇ 99.5 ಪರಿಶುದ್ಧತೆ) ಇಷ್ಟೇ ಪ್ರಮಾಣದಲ್ಲಿ ಕಡಿಮೆಯಾಗಿದ್ದು, ₹91,200 ಆಗಿದೆ.

ಬೆಳ್ಳಿ ದರವು ಕೆ.ಜಿಗೆ ₹1,500 ಇಳಿಕೆಯಾಗಿ, ₹1.02 ಲಕ್ಷ ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ನೋಂದಣಿ ವ್ಯತ್ಯಾಸ: ಓಲಾ ಎಲೆಕ್ಟ್ರಿಕ್ ಕಂಪನಿ ವಿರುದ್ಧ ತನಿಖೆಗೆ ಆದೇಶ

ನವದೆಹಲಿ (ಪಿಟಿಐ): ಓಲಾ ಎಲೆಕ್ಟ್ರಿಕ್ ಕಂಪನಿಯ ಇ-ಸ್ಕೂಟರ್‌ಗಳ ಮಾರಾಟ ಮತ್ತು ನೋಂದಣಿಯಲ್ಲಿ ಕಂಡುಬಂದಿರುವ ವ್ಯತ್ಯಾಸಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ತನಿಖೆಗೆ ಆದೇಶಿಸಿದೆ.

ಕಂಪನಿಯ ದ್ವಿಚಕ್ರವಾಹನಗಳ ಮಾರಾಟ ಮತ್ತು ನೋಂದಣಿಯಲ್ಲಿ ಭಾರಿ ವ್ಯತ್ಯಾಸವಿದೆ ಎಂದು ಗ್ರಾಹಕರೊಬ್ಬರು ದೂರು ನೀಡಿದ್ದರು.

ಇದರ ಆಧಾರದ ಮೇಲೆ ತನಿಖೆ ನಡೆಸಿ 15 ದಿನದೊಳಗೆ ವರದಿ ಸಲ್ಲಿಸುವಂತೆ ಕೇಂದ್ರ ಬೃಹತ್ ಕೈಗಾರಿಕಾ ಸಚಿವಾಲಯವು, ಭಾರತೀಯ ಮೋಟಾರು ವಾಹನ ಸಂಶೋಧನಾ ಸಂಸ್ಥೆಗೆ (ಎಆರ್‌ಎಐ) ಸೂಚಿಸಿದೆ.

ಫೆಬ್ರುವರಿಯಲ್ಲಿ ವಾಹನ್ ಪೋರ್ಟಲ್‌ನಲ್ಲಿ ಕಂಪನಿಯ 8,652 ದ್ವಿಚಕ್ರವಾಹನಗಳು ನೋಂದಣಿಯಾಗಿವೆ. ಆದರೆ, ಕಂಪನಿಯು ಈ ಅವಧಿಯಲ್ಲಿ 25 ಸಾವಿರ ವಾಹನಗಳು ಮಾರಾಟವಾಗಿವೆ ಎಂದು ಹೇಳಿತ್ತು. ಗುರುವಾರದವರೆಗೆ 11,781 ದ್ವಿಚಕ್ರವಾಹನಗಳು ನೋಂದಣಿಯಾಗಿವೆ.

ಓಲಾ ಎಲೆಕ್ಟ್ರಿಕ್ ಫೇಮ್-2 ಮತ್ತು ಪಿಎಂ ಇ-ಡ್ರೈವ್ ಯೋಜನೆಯ ಫಲಾನುಭವಿಯಾಗಿದೆ. ಈ ಸಂಬಂಧ ಎಆರ್‌ಎಐ ಅರ್ಹತಾ ಪ್ರಮಾಣಪತ್ರ ನೀಡಿದೆ.

ಇ-ಸ್ಕೂಟರ್‌ನ ಗುಣಮಟ್ಟ ಹಾಗೂ ಮಾರಾಟ ಸೇವೆಯಲ್ಲಿನ ಲೋಪ ಸಂಬಂಧ ಕಂಪನಿ ವಿರುದ್ಧ ಈ ಹಿಂದೆ ಗ್ರಾಹಕರು ದೂರು ದಾಖಲಿಸಿದ್ದರು. ಈ ಬಗ್ಗೆ ಕೇಂದ್ರ ಗ್ರಾಹಕ ಹಿತರಕ್ಷಣಾ ಪ್ರಾಧಿಕಾರವು (ಸಿಸಿಪಿಎ) ತನಿಖೆಗೆ ಆದೇಶಿಸಿತ್ತು.

ಅಡಿಕೆ ಧಾರಣೆ (₹ಗಳಲ್ಲಿ)

ಸಾಗರ	
ಬಿಳಿಗೋಟು	7099-20109
ಚಾಲಿ	20599-34019
ಕೋಕ	6786-18999
ಕೆಂಪುಗೋಟು	10899-26200
ರಾಶಿ	23899-52489
ಸಿಪ್ಪೆಗೋಟು	6129-16722
ಶಿವಮೊಗ್ಗ	
ಬೆಟ್ಟೆ	44899-56189
ಗೊರಬಲು	17500-26669
ರಾಶಿ	32669-52089
ಸರಕು	52000-91640
ಸಿದ್ದಾಪುರ	
ಬಿಳಿಗೋಟು	22009-26899
ಚಾಲಿ	32109-35939
ಕೋಕ	15019-24119
ಹೊಸಚಾಲಿ	30899-35589
ಕೆಂಪುಗೋಟು	20119-21619
ರಾಶಿ	41099-46099
ತಟ್ಟಿಬೆಟ್ಟೆ	28869-34469
ಶಿರಸಿ	
ಬೆಟ್ಟೆ	28031-42989
ಬಿಳಿಗೋಟು	13199-29099
ಚಾಲಿ	32199-37509
ಕೆಂಪುಗೋಟು	14699-23621
ರಾಶಿ	40509-45618
ಯಲ್ಲಾಪುರ	
ಅಪಿ	60800-62475
ಬಿಳಿಗೋಟು	13899-27996
ಚಾಲಿ	28299-38401
ಕೋಕ	4809-19612
ಕೆಂಪುಗೋಟು	13612-26312
ರಾಶಿ	40009-58509
ತಟ್ಟಿಬೆಟ್ಟೆ	27705-39009

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಗೌರವ್, ಜೆ.ಪಿ. ನಗರ, ಬೆಂಗಳೂರು.

- **ಪ್ರಶ್ನೆ: ನಾನು ಷೇರುಪೇಟೆಯಲ್ಲಿ ಸುಮಾರು ₹10 ಲಕ್ಷ ಹೂಡಿಕೆ ಮಾಡಿದ್ದೇನೆ. ಮುಂದೆಯೂ ಹೂಡಿಕೆ ಮಾಡುವ ಯೋಚನೆಯಲ್ಲಿದ್ದೇನೆ. ಆದರೆ, ಮುಂದಿನ ಹೆಚ್ಚುವರಿ ಹೂಡಿಕೆಯನ್ನು ಪೋರ್ಟ್‌ಫೋಲಿಯೊ ನಿರ್ವಹಿಸುವ ಸಂಸ್ಥೆಗೆ ವಹಿಸಿ ಕೊಡುವ ಅಂದಾಜು ಮಾಡಿದ್ದೇನೆ. ಈ ಬಗ್ಗೆ ಸೂಕ್ತ ಮಾಹಿತಿ ನೀಡಿ.**

ಉತ್ತರ: ನೀವು ಈಗಾಗಲೇ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದ ಅನುಭವ ಹೊಂದಿದ್ದೀರಿ. ಹೆಚ್ಚುವರಿ ಹೂಡಿಕೆಗೆ ಪೋರ್ಟ್‌ಫೋಲಿಯೊ ನಿರ್ವಹಣಾ ಸಂಸ್ಥೆಗಳ ಸೇವೆ ಪಡೆಯುವ ಯೋಚನೆಯಲ್ಲಿದ್ದೀರಿ. ತಜ್ಞ ನಿರ್ವಹಣೆ, ವೈವಿಧ್ಯ ಹೂಡಿಕೆ ಹಾಗೂ ಮಾರುಕಟ್ಟೆಯ ದೀರ್ಘಾವಧಿ ಪರಿಶೀಲನಾ ಪ್ರಕ್ರಿಯೆ ಗಮನಿಸಿ ನಿಮಗೆ ಇಂತಹ ಸೇವೆಗಳ ಬಗ್ಗೆ ಸಲಹೆ ನೀಡಲಾಗುತ್ತದೆ ಅಥವಾ ನಿಮ್ಮ ಹಣ ಹೂಡಿಕೆ ಮಾಡಲಾಗುತ್ತದೆ.

ಪಿಎಂಎಸ್ ಸೇವೆ ಆಯ್ಕೆ ಮಾಡುವಾಗ ಸಂಸ್ಥೆಯ ಸ್ಥಿರತೆ, ನಿರ್ವಹಣಾ ಶುಲ್ಕ ಮತ್ತು ಹೂಡಿಕೆ ಮುಂತಾದ ಅಂಶಗಳನ್ನು ಪರಿಗಣಿಸಿ. ಕೆಲವು ಸೇವೆಗಳು ನಿಮಗೆ ಹೂಡಿಕೆ ಬಗ್ಗೆ ನಿರ್ದೇಶನ ನೀಡುತ್ತವೆ ಅಥವಾ ತಾವೇ ನಿಮ್ಮ ಪರವಾಗಿ ನಿರ್ಧಾರ ಕೈಗೊಂಡು ಹೂಡಿಕೆ ಮಾಡುತ್ತವೆ. ಇಂತಹ ಸಂದರ್ಭದಲ್ಲಿ ನಿಮ್ಮ ಮತ್ತು ಸೇವಾ ಸಂಸ್ಥೆಯ ಜವಾಬ್ದಾರಿ ಏನು ಎಂಬುದನ್ನು ಮುಖ್ಯವಾಗಿ ನಿರ್ಧರಿಸಿ.

ಕನಿಷ್ಠ ಶುಲ್ಕ ಹಾಗೂ ಹೂಡಿಕೆ ಮೊತ್ತದಲ್ಲಿ ವಿವಿಧ ಸಂಸ್ಥೆಗಳ ನಡುವೆ ವ್ಯತ್ಯಾಸ ಇರುತ್ತದೆ. ಈ ಬಗ್ಗೆ ಚರ್ಚಿಸಿ ನಿರ್ಧರಿಸಿ. ಸಾಮಾನ್ಯವಾಗಿ ಈ ಬಗ್ಗೆ ಸಮಯ ನೀಡಲಾಗದಿದ್ದಾಗ ಮತ್ತು ಮಾರುಕಟ್ಟೆಯಲ್ಲಿ ಸಾಕಷ್ಟು ಬಂಡವಾಳ ತೊಡಗಿಸುವ ಉದ್ದೇಶ ಹೊಂದಿದವರು ಇಂತಹ ಸೇವೆ ಪಡೆಯಲು ಹೆಚ್ಚು ಆಸಕ್ತರಿರುತ್ತಾರೆ.

ಶ್ರೀನಿವಾಸಮೂರ್ತಿ, ತುಮಕೂರು.

- **ಪ್ರಶ್ನೆ: 2015ರಲ್ಲಿ ನಾನು ತುಮಕೂರಿನಲ್ಲಿ ₹25 ಲಕ್ಷ ವೆಚ್ಚ ಮಾಡಿ ಒಂದು ಆಸ್ತಿಯಲ್ಲಿ ಹೂಡಿಕೆ ಮಾಡಿದ್ದೆ. ಈಗ ಅದರ ಮೌಲ್ಯ ಸುಮಾರು ₹60 ಲಕ್ಷ ಆಗಿದೆ. ಈಗ ವ್ಯಾಪಾರದ ಉದ್ದೇಶಕ್ಕಾಗಿ ಈ ಆಸ್ತಿಯ ಮಾರಾಟಕ್ಕೆ ಇಚ್ಛಿಸುತ್ತಿದ್ದೇನೆ. ಪ್ರಸ್ತುತ ಈ ಭಾಗದಲ್ಲಿ ಆಸ್ತಿಗೆ ಒಳ್ಳೆಯ ಬೇಡಿಕೆ ಇದೆ. ನನಗೆ ಈ ಸಂದರ್ಭದಲ್ಲಿ ಉಂಟಾಗುವ ತೆರಿಗೆ ಪರಿಣಾಮ ಏನು ಮತ್ತು ತೆರಿಗೆ ಉಳಿಸುವ ಆಯ್ಕೆ ಯಾವುವು? ನಾನು ಈಗ 60 ವರ್ಷ ದಾಟಿದ್ದೇನೆ. ನನಗೆ ಪ್ರಸ್ತುತ ಸುಮಾರು ₹1 ಲಕ್ಷದಷ್ಟು ಡಿವಿಡೆಂಡ್ ಆದಾಯ ಮಾತ್ರ ಇದೆ.**

ನನ್ನ ವಯಸ್ಸು ಮತ್ತು ಆದಾಯವನ್ನು ಗಮನದಲ್ಲಿಟ್ಟುಕೊಂಡು ಮೂಲ ಆದಾಯ ವಿನಾಯಿತಿಗೆ ಹೆಚ್ಚಿನ ಮಿತಿ ಲಭ್ಯವಿದೆಯೇ? ನಾನು ಹಳೆಯ ಹಾಗೂ ಹೊಸ ಆದಾಯ ತೆರಿಗೆ ಪದ್ಧತಿಯಲ್ಲಿ ಯಾವುದನ್ನು ಆಯ್ಕೆ ಮಾಡಬೇಕು? ಮುಂದಿನ ವರ್ಷಗಳಲ್ಲಿ ನಾನು ತೆರಿಗೆ ರಿಟರ್ನ್ಸ್ ಸಲ್ಲಿಸುವ ಅಗತ್ಯ ಇಲ್ಲ ಎಂಬುದು ನನ್ನ ಅಭಿಪ್ರಾಯ. ಈ ಬಗ್ಗೆಯೂ ತಿಳಿಸಿ.

ಉತ್ತರ: ಈ ಆಸ್ತಿಯು ಎರಡಕ್ಕೂ ಹೆಚ್ಚು ವರ್ಷ ನಿಮ್ಮ ಒಡೆತನದಲ್ಲಿದೆ. ಹಾಗಾಗಿ, ಇದನ್ನು ದೀರ್ಘಾವಧಿ ಬಂಡವಾಳ ಲಾಭ ಆದಾಯ ಎಂದು ಪರಿಗಣಿಸಲಾಗುತ್ತದೆ. ಈ ಲಾಭದ ಮೇಲೆ ನೀವು ಕಟ್ಟಬೇಕಾದ ತೆರಿಗೆ ಮತ್ತು ತೆರಿಗೆ ಉಳಿಸುವ ಆಯ್ಕೆಗಳನ್ನು ವಿಶ್ಲೇಷಿಸೋಣ.

ನೀವು ಹಿರಿಯ ನಾಗರಿಕರಾಗಿರುವುದರಿಂದ ನಿಮ್ಮ ಆದಾಯ ವಿನಾಯಿತಿ ಮಿತಿ ಯಾವುದೇ ತೆರಿಗೆ ಪದ್ಧತಿಯಾದರೂ ₹3 ಲಕ್ಷ ಆಗಿದೆ. ಡಿವಿಡೆಂಡ್ ಆದಾಯ ಕಳೆದು ಉಳಿದ ₹2 ಲಕ್ಷ ಮೊತ್ತವನ್ನು ಬಂಡವಾಳ ತೆರಿಗೆ ನಿರ್ಧರಿಸುವಾಗ ಮೂಲ ವಿನಾಯಿತಿಯಾಗಿ ತೆರಿಗೆಗೊಳಪಡುವ ಆದಾಯದಿಂದ ಕಡಿತಗೊಳಿಸುವ ಅವಕಾಶವಿದೆ.

2015ರಲ್ಲಿ ಖರೀದಿಸಿದ ಆಸ್ತಿಯ ಸೂಚ್ಯಂಕೃತ ಖರೀದಿಯ ವೆಚ್ಚವನ್ನು ಲೆಕ್ಕ ಹಾಕಲು ಆದಾಯ ತೆರಿಗೆ ಇಲಾಖೆಯು ಪ್ರಕಟಿಸಿದ ಆಯಾ ವರ್ಷದ ಹಣದುಬ್ಬರ ಸೂಚ್ಯಂಕವನ್ನು ಬಳಸಿಕೊಳ್ಳಬೇಕು. 2015ರಲ್ಲಿ ಈ ಮೌಲ್ಯಾಂಕ 254 ಆಗಿದೆ. 2024-25ರಲ್ಲಿ ಈ ಮೌಲ್ಯಾಂಕ 363 ಆಗಿದೆ. ಈ ಮೂಲಕ ಸೂಚ್ಯಂಕೃತ ಖರೀದಿ ವೆಚ್ಚ ₹25 ಲಕ್ಷ (363/ 254) ಇದ್ದುದು ₹35.73 ಲಕ್ಷ ಆಗುತ್ತದೆ. ಹೀಗಾಗಿ, ಮೂಲ ವಿನಾಯಿತಿ ಕಳೆದು ಉಳಿದ ಬಂಡವಾಳ ಲಾಭವಾದ ₹22.27 ಲಕ್ಷದ ಮೇಲೆ ಸೆಸ್ ಸಹಿತ ತೆರಿಗೆ ₹4.63 ಲಕ್ಷ ಆಗುತ್ತದೆ.

ಆದರೆ, ಕಳೆದ ವರ್ಷದ ಬಜೆಟ್ ಪ್ರಸ್ತಾಪದಂತೆ ಈ ಇಂಡೆಕ್ಸೇಷನ್ ಲಾಭ ಪಡೆಯದೆ ತೆರಿಗೆ ಲೆಕ್ಕ ಹಾಕುವುದಾದರೆ ಮೂಲ ವಿನಾಯಿತಿ ಕಳೆದು ನೇರವಾಗಿ ₹33 ಲಕ್ಷ ಲಾಭಕ್ಕೆ ಅನ್ವಯಿಸುವ ತೆರಿಗೆ ₹4.29 ಲಕ್ಷ. ಹೀಗಾಗಿ, ಇಂಡೆಕ್ಸೇಷನ್ ರಹಿತ ಪದ್ಧತಿಯಲ್ಲಿ ತೆರಿಗೆ ಲೆಕ್ಕ ಹಾಕಿ ಪಾವತಿಸುವುದು ಸೂಕ್ತ.

ಇನ್ನು ತೆರಿಗೆ ಉಳಿಸಿಕೊಳ್ಳಲು ನಿಮಗೆ ಕೆಲವು ಆಯ್ಕೆಗಳಿವೆ. ಸೆಕ್ಷನ್ 54ಎಫ್ ಅಡಿ ಮಾರಾಟ ಆದಾಯವನ್ನು ಹೊಸ ಆಸ್ತಿ ಅಥವಾ ಮನೆ ಖರೀದಿಗೆ ಹೂಡಿಕೆ ಮಾಡಿದರೆ (ಮಾರಾಟದ 1 ವರ್ಷ ಮೊದಲು ಅಥವಾ ಮಾರಾಟದ 2 ವರ್ಷ ಒಳಗೆ) ನೀವು ತೆರಿಗೆ ವಿನಾಯಿತಿ ಪಡೆಯಬಹುದು. ಹಾಗೆಯೇ, ಸೆಕ್ಷನ್ 54ಇಸಿ ಅಡಿ ₹50 ಲಕ್ಷದವರೆಗೆ ಲಾಭವನ್ನು ಮಾನ್ಯತೆ ಪಡೆದ ಬಾಂಡ್‌ಗಳು ಅಥವಾ ಮೂರು ವರ್ಷದ ಅವಧಿಗೆ ಕ್ಯಾಪಿಟಲ್ ಗೈನ್ ಬ್ಯಾಂಕ್ ಖಾತೆಯಲ್ಲಿ ಹೂಡಿಕೆ ಮಾಡಿ ಹೊಸ ಮನೆ ನಿರ್ಮಾಣಕ್ಕೂ ಬಳಸಿಕೊಳ್ಳಬಹುದು. ನಿಮ್ಮ ಹೆಚ್ಚಿನ ಮಾಹಿತಿಯೊಂದಿಗೆ ಸಮೀಪದ ತೆರಿಗೆ ಸಲಹೆಗಾರರನ್ನು ಸಂಪರ್ಕಿಸಿ. ಇನ್ನು ಮುಂದಿನ ವರ್ಷದ ರಿಟರ್ನ್ಸ್ ಸಲ್ಲಿಕೆ ಬಗ್ಗೆ ಹೇಳುವುದಾದರೆ ನಿಮ್ಮ ಊಹೆಯಂತೆ ಈ ರಿಟರ್ನ್ಸ್ ಸಲ್ಲಿಕೆಯು ಭೂಮಿ ಮಾರಾಟ ಮಾಡಿದ ವರ್ಷಕ್ಕೆ ಮಾತ್ರ ಅನ್ವಯಿಸುತ್ತದೆ. ತೆರಿಗೆ ವಿನಾಯಿತಿ ಮಿತಿಗಿಂತ ಕೆಳಗೆ ವಾರ್ಷಿಕ ಆದಾಯ ಇದ್ದ ಸಂದರ್ಭದಲ್ಲಿ ರಿಟರ್ನ್ಸ್ ಸಲ್ಲಿಕೆ ಅನಿವಾರ್ಯವಲ್ಲ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ-ಮೇಲ್: businessdesk@prajavani.co.in

ಸೆನ್ಸೆಕ್ಸ್ 899 ಅಂಶ ಏರಿಕೆ



ಮುಂಬೈ (ಪಿಟಿಐ): ಸತತ ನಾಲ್ಕನೇ ದಿನವಾದ ಗುರುವಾರವೂ ದೇಶದ ಷೇರುಪೇಟೆಯಲ್ಲಿ ಗೂಳಿ ಓಟ ಮುಂದುವರಿದಿದ್ದು, ಸೂಚ್ಯಂಕಗಳು ಶೇ 1ರಷ್ಟು ಏರಿಕೆ ಕಂಡಿವೆ.

ಅಮೆರಿಕದ ಕೇಂದ್ರೀಯ ಬ್ಯಾಂಕ್ ಆದ ಫೆಡರಲ್ ರಿಸರ್ವ್ ಬಡ್ಡಿದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿದೆ. ಮತ್ತೊಂದೆಡೆ ರಿಲಯನ್ಸ್ ಇಂಡಸ್ಟ್ರೀಸ್, ಭಾರ್ತಿ ಏರ್‌ಟೆಲ್ ಹಾಗೂ ಐ.ಟಿ ಷೇರುಗಳ ಖರೀದಿ ಹೆಚ್ಚಳವು ದೇಶೀಯ ಮಾರುಕಟ್ಟೆಯಲ್ಲಿ ಸಕಾರಾತ್ಮಕ ವಹಿವಾಟಿಗೆ ಕಾರಣವಾಯಿತು ಎಂದು ತಜ್ಞರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 899 ಅಂಶ ಹೆಚ್ಚಳ ಕಂಡು, 76,348 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು. ವಹಿವಾಟಿನ ಒಂದು ಸಂದರ್ಭದಲ್ಲಿ 1,007 ಅಂಶ ಏರಿಕೆ ಕಂಡಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 283 ಅಂಶ ಹೆಚ್ಚಳಗೊಂಡಿದ್ದು, 23,190 ಅಂಶಗಳಲ್ಲಿ ಸ್ಥಿರಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಭಾರ್ತಿ ಏರ್‌ಟೆಲ್, ಟೈಟನ್, ಟಿಸಿಎಸ್, ಎಚ್‌ಯುಎಲ್, ಇನ್ಫೊಸಿಸ್, ನೆಸ್ಲೆ, ರಿಲಯನ್ಸ್ ಇಂಡಸ್ಟ್ರೀಸ್, ಮಹೀಂದ್ರ ಆ್ಯಂಡ್ ಮಹೀಂದ್ರ, ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಟಾಟಾ ಮೋಟರ್ಸ್ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಇಂಡಸ್ ಇಂಡ್ ಬ್ಯಾಂಕ್, ಬಜಾಜ್ ಫೈನಾನ್ಸ್ ಮತ್ತು ಅಲ್ಟ್ರಾಟೆಕ್ ಸಿಮೆಂಟ್ ಷೇರಿನ ಮೌಲ್ಯ ಕುಸಿದಿದೆ. ನಾಲ್ಕು ದಿನಗಳಲ್ಲಿ ಸೆನ್ಸೆಕ್ಸ್ 2,519 ಅಂಶ ಏರಿಕೆ (ಶೇ 3.41ರಷ್ಟು) ಕಂಡಿದೆ. ಹೂಡಿಕೆದಾರರ ಸಂಪತ್ತು ₹17.43 ಲಕ್ಷ ಕೋಟಿ ಹೆಚ್ಚಳವಾಗಿದೆ.

ಮುಂಬೈ ಧಾರಣೆ (ಶೇಂಗಾ)

20-03-2025

ಜಾವಾ 70/80(ಹೊಸ)	9700-9800
ಜಾವಾ 80/90(ಹೊಸ)	9200-9300
ದಪ್ಪ ಮಧ್ಯಪ್ರದೇಶ(ಹೊಸ)	7600-7700
ದಪ್ಪ ಗುಜರಾತ್(ಹೊಸ)	7900-8000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1410 (1400)
ಒಂದು ವಾರದ ಡೆಲಿವರಿ	1405 (1395)
ಪಾಮ್ ವಾರದ ಡೆಲಿವರಿ	1343 (1358)
ಸೂರ್ಯಕಾಂತಿ ಎಣ್ಣೆ ಕಚ್ಚಾ	1360 (1360)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ ₹88,050 (88,150)

ಬೆಳ್ಳಿ ಕೆ.ಜಿ ₹98,300 (99,700)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1400 (1390)
ಸೋಯಾ (ರಿಫೈನ್ಡ್)	₹1305 (1305)
ಸೂರ್ಯಕಾಂತಿ (ರಿಫೈನ್ಡ್)	₹1405 (1410)
ಪಾಮೋಲಿನ್	₹1345 (1360)

‘ಭಾರತ ಸುಂಕ ತಗ್ಗಿಸುವ ವಿಶ್ವಾಸವಿದೆ’

ನ್ಯೂಯಾರ್ಕ್ (ಪಿಟಿಐ): ‘ಅಮೆರಿಕದ ಆಮದು ಉತ್ಪನ್ನಗಳಿಗೆ ವಿಧಿಸುವ ಸುಂಕವನ್ನು ಭಾರತ ತಗ್ಗಿಸಲಿದೆ ಎಂಬ ವಿಶ್ವಾಸವಿದೆ’ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದರು.

‘ಏ. 2ರಿಂದ ಜಾರಿಗೆ ಬರುವಂತೆ ಭಾರತ ವಿಧಿಸಲಿರುವ ಸುಂಕಕ್ಕೆ ಅನುಗುಣವಾಗಿ ಅಮೆರಿಕವು ಭಾರತದ ಉತ್ಪನ್ನಗಳಿಗೆ ಸುಂಕ ವಿಧಿಸಲಿದೆ’ ಎಂದು ಇದೇ ವೇಳೆ ಪುನರುಚ್ಚರಿಸಿದರು. ‘ಅಮೆರಿಕನ್ ನ್ಯೂಸ್’ಗೆ ನೀಡಿದ ಸಂದರ್ಶನದಲ್ಲಿ, ಪ್ರಧಾನಿ ಮೋದಿ ಜೊತೆಗಿನ ಇತ್ತೀಚಿನ ಭೇಟಿ ಉಲ್ಲೇಖಿಸಿ, ‘ಭಾರತದೊಂದಿಗೆ ಉತ್ತಮ ಬಾಂಧವ್ಯವಿದೆ’ ಎಂದು ಹೇಳಿದರು.

‘ವಿಶ್ವದಲ್ಲೇ ಅತಿ ಹೆಚ್ಚು ಸುಂಕ ವಿಧಿಸುವ ರಾಷ್ಟ್ರ ಭಾರತ ಎನ್ನುವುದಷ್ಟೇ ನನಗೆ ಸಮಸ್ಯೆ’ ಎಂದು ಟ್ರಂಪ್ ಅಭಿಪ್ರಾಯಪಟ್ಟರು.

‘ಭಾರತ ಗಣನೀಯವಾಗಿ ಸುಂಕ ತಗ್ಗಿಸಲಿದೆ ಎಂದು ಭಾವಿಸುತ್ತೇನೆ. ಆದರೆ, ಏಪ್ರಿಲ್ 2ರಿಂದ ಜಾರಿಗೆ ಬರುವಂತೆ ಭಾರತ ವಿಧಿಸುವಷ್ಟೇ ಸುಂಕವನ್ನು ನಾವು ವಿಧಿಸಲಿದ್ದೇವೆ’ ಎಂದರು.

ಸಂಕ್ಷಿಪ್ತ ಸುದ್ದಿ

ಹುಣಸೆ ಹಣ್ಣಿಗೆ ದಾಖಲೆ ಧಾರಣೆ

ತುಮಕೂರು: ಹುಣಸೆ ಹಣ್ಣಿನ ಧಾರಣೆಯು ಏರುಗತಿಯಲ್ಲೇ ಸಾಗಿದ್ದು, ಗುರುವಾರ ಇಲ್ಲಿನ ಎಪಿಎಂಸಿಯಲ್ಲಿ ಕ್ವಿಂಟಲ್‌ಗೆ ₹40 ಸಾವಿರಕ್ಕೆ ಮಾರಾಟವಾಗಿದೆ. ಇದು ಈ ವರ್ಷದ ಗರಿಷ್ಠ ಬೆಲೆಯಾಗಿದೆ.

ಮಧುಗಿರಿ ತಾಲ್ಲೂಕು ಹಾವಿನಮಡಗು ಗ್ರಾಮದ ರೈತರೊಬ್ಬರು ತಂದಿದ್ದ ಉತ್ತಮ ಗುಣಮಟ್ಟದ ಹಣ್ಣು ಕ್ವಿಂಟಲ್‌ಗೆ ₹40 ಸಾವಿರಕ್ಕೆ ಹಾಗೂ ಶಿರಾ ತಾಲ್ಲೂಕು ಕುಂಟರಾಮನಹಳ್ಳಿ ರೈತರೊಬ್ಬರು ತಂದಿದ್ದ ಹಣ್ಣು ₹38 ಸಾವಿರಕ್ಕೆ ಮಾರಾಟವಾಗಿದೆ. ಉಳಿದಂತೆ ಸಾಮಾನ್ಯ ಗುಣಮಟ್ಟದ ಹಣ್ಣಿಗೆ ₹13 ಸಾವಿರದಿಂದ ₹36 ಸಾವಿರದ ವರೆಗೂ ಬೆಲೆ ಸಿಕ್ಕಿದೆ.ಎಪಿಎಂಸಿಗೆ ಗುರುವಾರ 25 ಲಾರಿ ಲೋಡ್ (ಸುಮಾರು 250 ಟನ್) ಹುಣಸೆ ಹಣ್ಣು ಆವಕವಾಗಿತ್ತು. ಈ ಬಾರಿ ಇಳುವರಿ ಕಡಿಮೆ ಇರುವುದರಿಂದ ಉತ್ತಮ ಬೆಲೆ ಸಿಗುತ್ತಿದೆ ಎಂದು ವರ್ತಕರು ತಿಳಿಸಿದ್ದಾರೆ.

ಬಿಎಂಡಬ್ಲ್ಯು, ರೆನೊ ವಾಹನ ಬೆಲೆ ಹೆಚ್ಚಳ

ನವದೆಹಲಿ (ಪಿಟಿಐ): ವಾಹನ ತಯಾರಿಕಾ ಕಂಪನಿಗಳಾದ ಬಿಎಂಡಬ್ಲ್ಯು ಇಂಡಿಯಾ ಮತ್ತು ರೆನೊ ಇಂಡಿಯಾ ವಾಹನಗಳ ದರ ಹೆಚ್ಚಳಕ್ಕೆ ನಿರ್ಧರಿಸಿವೆ. ಏಪ್ರಿಲ್‌ನಿಂದ ಈ ಪರಿಷ್ಕೃತ ದರ ಜಾರಿಗೆ ಬರಲಿದೆ.

ಬಿಎಂಡಬ್ಲ್ಯು ಕಾರುಗಳ ಬೆಲೆಯು ಶೇ 3ರ ವರೆಗೆ ಹೆಚ್ಚಳ ವಾಗಲಿದೆ. ರೆನೊ ಇಂಡಿಯಾ ತನ್ನ ಎಲ್ಲಾ ಮಾದರಿಯ ಕಾರುಗಳ ಬೆಲೆಯನ್ನು ಶೇ 2ರ ವರೆಗೆ ಏರಿಕೆ ಮಾಡಲಿದೆ ಎಂದು ಕಂಪನಿಗಳು ತಿಳಿಸಿವೆ.

ಸ್ಪೈಸ್ ಬೋರ್ಡ್ ಪಟ್ಟಿಗೆ ಶಿರಸಿ ಕಾಳುಮೆಣಸು ದರ

ಶಿರಸಿ: ಕಾಳುಮೆಣಸಿನ ಉತ್ಪಾದನೆಯಲ್ಲಿ ಮುಂಚೂಣಿ ಯಲ್ಲಿರುವ ಶಿರಸಿ ಮಾರುಕಟ್ಟೆ ದರವನ್ನು ಸ್ಪೈಸ್ ಬೋರ್ಡ್‌ನ ದರಪಟ್ಟಿಯಲ್ಲಿ ದಾಖಲಿಸಲು ಕೇಂದ್ರ ವಾಣಿಜ್ಯ ಸಚಿವ ಪೀಯೂಷ್ ಗೋಯಲ್ ಒಪ್ಪಿಗೆ ನೀಡಿದ್ದಾರೆ.



ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರ ಮನವಿಗೆ ಸ್ಪಂದಿಸಿದ ಸಚಿವರು, ಶಿರಸಿ ಮಾರುಕಟ್ಟೆಯ ಪ್ರಾಮುಖ್ಯತೆ ಗುರುತಿಸಿ ಈ ಕ್ರಮ ಕೈಗೊಂಡಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ಪ್ರಮುಖ ವ್ಯಾಪಾರ ಕೇಂದ್ರವಾದ ಶಿರಸಿಯ ಕಾಳುಮೆಣಸು ಮಾರುಕಟ್ಟೆ ದರ ಇನ್ನು ಮುಂದೆ ಸ್ಪೈಸ್ ಬೋರ್ಡ್‌ನ ದಿನನಿತ್ಯದ ದರಪಟ್ಟಿಯಲ್ಲಿ ನಮೂದಾಗಲಿದೆ. ಇದರಿಂದ ಈ ಮಾರುಕಟ್ಟೆಯು ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳಲು ಸಹಕಾರಿ ಆಗಲಿದೆ.

ಗಾಜಾ ಮೇಲಿನ ದಾಳಿ: 85 ಸಾವು

ಗಾಜಾ/ಕೈರೊ (ರಾಯಿಟರ್ಸ್/ ಎಎಫ್‌ಪಿ): ಗಾಜಾಪಟ್ಟಿಯ ಮೇಲೆ ಇಸ್ರೇಲ್ ನಡೆಸಿದ ವಾಯುದಾಳಿಯಲ್ಲಿ ಗುರುವಾರ ಕನಿಷ್ಠ 85 ಮಂದಿ ಮೃತಪಟ್ಟಿದ್ದಾರೆ ಎಂದು ಗಾಜಾದ ಆರೋಗ್ಯ ಅಧಿಕಾರಿಗಳು ಹೇಳಿದ್ದಾರೆ.

‘ಭಾರತದಿಂದ ಭಯೋತ್ಪಾದನೆ’

ಇಸ್ಲಾಮಾಬಾದ್ (ಪಿಟಿಐ): ತನ್ನ ದೇಶದಲ್ಲಿ ಭಯೋತ್ಪಾದನೆಗೆ ಭಾರತ ಕುಮ್ಮಕ್ಕು ನೀಡುತ್ತಿದೆ ಎಂದು ಪಾಕಿಸ್ತಾನ ಗುರುವಾರ ಆರೋಪಿಸಿದೆ.

ಬಲೂಚಿಸ್ತಾನವನ್ನು ಅಸ್ಥಿರಗೊಳಿಸುವಲ್ಲಿ ಭಾರತದ ಪಾತ್ರ ಇರುವುದು ಸ್ಪಷ್ಟ. ದಕ್ಷಿಣ ಏಷ್ಯಾ ರಾಷ್ಟ್ರಗಳನ್ನು ಗುರಿಯಾಗಿಸಿಕೊಂಡು ಭಯೋತ್ಪಾದನೆ ಬಿತ್ತುವ ಕೆಲಸವನ್ನು ಭಾರತ ಮಾಡುತ್ತಿದೆ ಎಂದು ಪಾಕಿಸ್ತಾನದ ವಿದೇಶಾಂಗ ಇಲಾಖೆಯ ವಕ್ತಾರ ಶಫ್ಕತ್ ಅಲಿ ಖಾನ್ ಆರೋಪಿಸಿದ್ದಾರೆ.

ಭಾರತೀಯ ವಿದ್ಯಾರ್ಥಿ ವಶಕ್ಕೆ

ನ್ಯೂಯಾರ್ಕ್ (ಪಿಟಿಐ): ಅಮೆರಿಕದಲ್ಲಿ ಪೋಸ್ಟ್ ಡಾಕ್ಟೋರಲ್ ಫೆಲೊ ಆಗಿರುವ ಭಾರತೀಯ ಪ್ರಜೆ ಬದರ್ ಖಾನ್ ಸುರಿ ಎನ್ನುವವರನ್ನು ವಲಸೆ ವಿಭಾಗದ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ ಎಂದು ಮಾಧ್ಯಮ ವರದಿಯೊಂದು ಹೇಳಿದೆ.

ಕೊಲಂಬಿಯಾ ವಿಶ್ವ ವಿದ್ಯಾಲಯದ ವಿದ್ಯಾರ್ಥಿಯೊಬ್ಬರು ಹಮಾಸ್ ಬೆಂಬಲಿಸುವ ಚಟುವಟಿಕೆಗಳಲ್ಲಿ ಭಾಗಿಯಾದ ಆರೋಪ ಬಂದ ನಂತರ ಸ್ವಯಂ ಗಡೀಪಾರಾದ ಕೆಲವೇ ದಿನಗಳಲ್ಲಿ ಈ ವಿದ್ಯಾರ್ಥಿಯನ್ನು ವಶಕ್ಕೆ ಪಡೆಯಲಾಗಿದೆ.

ಸಂತೃಪ್ತಿ ವರದಿ: ಭಾರತಕ್ಕೆ 118ನೇ ಸ್ಥಾನ

ಲಂಡನ್ (ಪಿಟಿಐ): ಸಂತೃಪ್ತಿ ಕುರಿತ 2025ನೇ ಸಾಲಿನ ಜಾಗತಿಕ ವರದಿ ಗುರುವಾರ ಪ್ರಕಟಗೊಂಡಿದ್ದು, ಭಾರತ 118ನೇ ಸ್ಥಾನದಲ್ಲಿದೆ. ಕಳೆದ ವರ್ಷ 126ನೇ ಸ್ಥಾನದಲ್ಲಿದ್ದ ಭಾರತವು ಈ ವರ್ಷ 8 ಸ್ಥಾನ ಸುಧಾರಣೆ ಕಂಡಿದ್ದರೂ, ನೇಪಾಳ, ಪಾಕಿಸ್ತಾನ, ಉಕ್ರೇನ್ ಹಾಗೂ ಪ್ಯಾಲೆಸ್ಟೀನ್‌ಗಿಂತ ಕೆಳಗಿನ ಸ್ಥಾನದಲ್ಲಿದೆ.

ಅಂತರರಾಷ್ಟ್ರೀಯ ಸಂತೃಪ್ತಿ ದಿನದಂದೇ ಈ ವರದಿ ಬಿಡುಗಡೆಯಾಗಿರುವುದು ವಿಶೇಷ. ಸತತ 8ನೇ ವರ್ಷವೂ ಫಿನ್ಲೆಂಡ್ ಮೊದಲ ಸ್ಥಾನ ಕಾಯ್ದುಕೊಂಡಿದೆ.

ಹೆಚ್ಚು ಸಂತೃಪ್ತಿಯಿಂದ ಇರುವ ಐದು ರಾಷ್ಟ್ರಗಳು

- ಫಿನ್ಲೆಂಡ್
- ಡೆನ್ಮಾರ್ಕ್
- ಐಸ್‌ಲ್ಯಾಂಡ್
- ಸ್ವೀಡನ್
- ನೆದರ್‌ಲ್ಯಾಂಡ್



ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ವೆಲ್‌ಬೀಯಿಂಗ್ ಸಂಶೋಧನಾ ಕೇಂದ್ರ ಹಾಗೂ ‘ಗ್ಯಾಲಪ್’ ಈ ವಾರ್ಷಿಕ ವರದಿ ತಯಾರಿಸಿವೆ. ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಪರಿಹಾರ ಜಾಲವು 2022ರಿಂದ 2024ರ ಅವಧಿಯಲ್ಲಿ ಜೀವನದ ಸ್ವಯಂಮೌಲ್ಯಮಾಪನ ಆಧರಿಸಿ ರ‍್ಯಾಂಕ್ ನೀಡಿದೆ. ದಾನ, ಸ್ವಯಂಸೇವೆ, ಅಪರಿಚಿತರಿಗೆ ನೆರವು ನೀಡಿದ್ದನ್ನು ಆಧರಿಸಿ ‘ಗ್ಯಾಲಪ್’ ಜಾಗತಿಕ ಮಟ್ಟದಲ್ಲಿ ಅಭಿಪ್ರಾಯ ಸಂಗ್ರಹಿಸಿತ್ತು.

ಆರು ಬಗೆಗಳ ದಾನ ಪ್ರವೃತ್ತಿಯ ಸರಾಸರಿಯಲ್ಲಿ ಭಾರತವು 118ನೇ ಸ್ಥಾನ ಗಳಿಸಿದೆ. ಭಾರತದ ನೆರೆರಾಷ್ಟ್ರ ಅಫ್ಗಾನಿಸ್ತಾನವು (147) ಈ ಸಲವೂ ಕೊನೆಯ ಸ್ಥಾನದಲ್ಲಿದೆ.

ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಉನ್ನತ ಸ್ಥಾನಕ್ಕೇರಿದ ಮೊದಲ ಮಹಿಳೆ

ಐಒಸಿಗೆ ಜಿಂಬಾಬ್ವೆಯ ಕೊವೆಂಟ್ರಿ ಸಾರಥ್ಯ

ಕೋಸ್ಟಾ ನವಾರಿನೊ (ಗ್ರೀಸ್), (ಎಪಿ): ಜಿಂಬಾಬ್ವೆಯ ಕ್ರಿಸ್ಟಿ ಕೊವೆಂಟ್ರಿ ಅವರು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯ ಅಧ್ಯಕ್ಷರಾಗಿ ಗುರುವಾರ ಆಯ್ಕೆಯಾಗಿದ್ದಾರೆ. ಜಾಗತಿಕ ಕ್ರೀಡಾ ಸಂಸ್ಥೆಯ ಈ ಉನ್ನತ ಹುದ್ದೆಗೇರಿದ ಮೊದಲ ಮಹಿಳೆ ಮತ್ತು ಮೊದಲ ಆಫ್ರಿಕನ್ ಎಂಬ ಶ್ರೇಯಕ್ಕೆ ಅವರು ಪಾತ್ರರಾಗಿದ್ದಾರೆ.

ತಮ್ಮ ದೇಶದ ಕ್ರೀಡಾ ಸಚಿವೆಯೂ ಆಗಿರುವ, 41 ವರ್ಷ ವಯಸ್ಸಿನ ಕೊವೆಂಟ್ರಿ, ಎರಡು ಬಾರಿಯ ಒಲಿಂಪಿಕ್ ಸ್ವರ್ಣ ವಿಜೇತೆ ಕೂಡ. 131 ವರ್ಷಗಳ ಇತಿಹಾಸ ಹೊಂದಿರುವ ಒಲಿಂಪಿಕ್ ಸಮಿತಿಗೆ ಅವರು ಹತ್ತನೇ ಮುಖ್ಯಸ್ಥ ರಾಗಲಿದ್ದಾರೆ. ಥಾಮಸ್ ಬಾಕ್ ಹಾಲಿ ಅಧ್ಯಕ್ಷರಾಗಿದ್ದಾರೆ.

ಏಳು ಅಭ್ಯರ್ಥಿಗಳು ಕಣದಲ್ಲಿದ್ದ ಈ ಚುನಾವಣೆಯಲ್ಲಿ ಕ್ರಿಸ್ಟಿ ಮೊದಲ ಸುತ್ತಿನಲ್ಲೇ ಅಮೋಘ ಜಯ ಗಳಿಸಿದರು. 97 ಮತಗಳಲ್ಲಿ ಬಹುಮತಕ್ಕೆ 49 ಮತಗಳನ್ನು ಗಳಿಸಬೇಕಿತ್ತು. ಕ್ರಿಸ್ಟಿ ಈ ಮತಗಳನ್ನು ಮೊದಲ ಸುತ್ತಿನಲ್ಲೇ ಪಡೆದರು.

ಕಣದಲ್ಲಿದ್ದ ಇತರ ಅಭ್ಯರ್ಥಿಗಳಾದ ಜೋರ್ಡಾನ್‌ನ ಪ್ರಿನ್ಸ್ ಫೈಸಲ್ ಅಲ್ ಹುಸೇನ್ (2 ಮತ), ಫ್ರಾನ್ಸ್‌ನ ರಾಜಕಾರಣಿ ಡೇವಿಡ್ ಲ್ಯಾಪರ್ಟಿಂಟ್ (4), ಸ್ವೀಡನ್- ಬ್ರಿಟನ್‌ನ ಹೂಡಿಕೆದಾರ ಜೋಹಾನ್ ಎಲಿಷಾ (2), ಸ್ಪೇನ್‌ನ ಕ್ರೀಡಾ ಆಡಳಿತಗಾರ ಜುವಾನ್ ಅಂಟೋನಿಯೊ ಸಮರಾಂಚ್ ಜೂನಿಯರ್ (28), ಬ್ರಿಟನ್‌ನ ಒಲಿಂಪಿಯನ್ ಸೆಬಾಸ್ಟಿಯನ್ ಕೊ (8) ಮತ್ತು ಜಪಾನಿನ ಉದ್ಯಮಿ, ಅಂತರ ರಾಷ್ಟ್ರೀಯ ಜಿಮ್ನಾಸ್ಟಿಕ್ಸ್ ಫೆಡರೇಷನ್ ಮುಖ್ಯಸ್ಥ ಮೊರಿನಾರಿ ವತಾನಬೆ (4) ಮತಗಳನ್ನು ಪಡೆದರು.



ಜಿಂಬಾಬ್ವೆಯ ಕ್ರಿಸ್ಟಿ ಕೊವೆಂಟ್ರಿ



ಥಾಮಸ್ ಬಾಕ್

ಈ ಚುನಾವಣೆ ಪೈಪೋಟಿಯಿಂದ ಕೂಡಿದ್ದು, ಮುಂಚೂಣಿಯಲ್ಲಿರುವ ಅಭ್ಯರ್ಥಿ ಯಾರೆಂದು ಊಹಿಸುವುದು ಕಷ್ಟವಾಗಿತ್ತು.

ಈಜು ತಾರೆಯಾಗಿದ್ದ ಕ್ರಿಸ್ಟಿ 2004ರ ಒಲಿಂಪಿಕ್ಸ್‌ನಲ್ಲಿ ಒಂದು ಚಿನ್ನ (200 ಮೀ. ಬ್ಯಾಕ್‌ಸ್ಟ್ರೋಕ್) ಸೇರಿದಂತೆ ಮೂರು ಪದಕ ಗಳನ್ನು ಕೊರಳಿಗೇರಿ ಸಿಕೊಂಡಿದ್ದರು. 2008ರ ಬೀಜಿಂಗ್ ಕ್ರೀಡೆಗಳಲ್ಲಿ ಈ ಚಿನ್ನ ಉಳಿಸಿಕೊಂಡರಲ್ಲ-ದೇ, 4 ಬೆಳ್ಳಿ, ಒಂದು ಕಂಚಿನ ಪದಕವನ್ನೂ ಬಾಚಿಕೊಂಡಿದ್ದರು. ಇದರ ಜೊತೆಗೆ ಹಲವು ಅಂತರರಾಷ್ಟ್ರೀಯ ಕೂಟಗಳಲ್ಲಿ ಅವರು ದೇಶವನ್ನು ಪ್ರತಿನಿಧಿಸಿದ್ದಾರೆ. 2016ರಲ್ಲಿ ಕ್ರೀಡಾಜೀವನಕ್ಕೆ ವಿದಾಯ ಹೇಳಿದ ಅವರು, ಜಿಂಬಾಬ್ವೆಯ ಕ್ರೀಡಾ, ಯುವಜನ ಸೇವೆ, ಕಲೆ, ಮನರಂಜನಾ ಸಚಿವೆಯಾಗಿ ಕಾರ್ಯನಿರ್ವಹಿಸಿದ್ದಾರೆ.

ಥಾಮಸ್ ಬಾಕ್ ಅವರ ಅಧಿಕಾರಾವಧಿ ಒಲಿಂಪಿಕ್ ದಿನ (ಜೂನ್ 23) ಮುಗಿಯಲಿದೆ. ಅವರು ಗರಿಷ್ಠ 12 ವರ್ಷ ಹುದ್ದೆಯಲ್ಲಿದ್ದಂತೆ ಆಗಲಿದೆ. ಬುಧವಾರ ನಡೆದ ಸಮಾರಂಭದಲ್ಲಿ ಭಾವನಾತ್ಮಕ ರಾಗಿದ್ದ ಬಾಕ್ ಅವರನ್ನು ಉಳಿದ ಸದಸ್ಯರು ಅವರ ಸೇವೆಗಾಗಿ ಶ್ಲಾಘಿಸಿದ್ದರು. ಅವರಿಗೆ 'ಗೌರವ ಅಜೀವ ಅಧ್ಯಕ್ಷ' ಎಂಬ ಪದವಿ ನೀಡಲಾಗಿತ್ತು.

ಲಾಸ್ ಏಂಜಲಿಸ್ ಒಲಿಂಪಿಕ್ಸ್‌ಗೆ ಬಾಕ್ಸಿಂಗ್ ಸೇರ್ಪಡೆ

ಕೋಸ್ಟಾ ನವರಿನೊ, ಗ್ರೀಸ್ (ಪಿಟಿಐ): ಲಾಸ್ ಏಂಜಲಿಸ್‌ನಲ್ಲಿ 2028ರಲ್ಲಿ ನಡೆಯಲಿರುವ ಒಲಿಂಪಿಕ್ ಕೂಟದಲ್ಲಿ ಬಾಕ್ಸಿಂಗ್ ಸೇರ್ಪಡೆ ಮಾಡಲು ಅಂತರ ರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ) ಅನುಮೋದನೆ ನೀಡಿದೆ.

ಇಲ್ಲಿ ನಡೆದ ಐಒಸಿಯ 144ನೇ ಆಡಳಿತ ಸಮಿತಿ ಸಮ್ಮೇಳನದಲ್ಲಿ ಬಾಕ್ಸಿಂಗ್ ಸೇರ್ಪಡೆಗೆ ಸರ್ವಾನುಮತ ಲಭಿಸಿತು. ಅಧ್ಯಕ್ಷ ಥಾಮಸ್ ಬಾಕ್ ಅವರು, ಬಾಕ್ಸಿಂಗ್ ಕ್ರೀಡೆಯನ್ನು ಒಲಿಂಪಿಕ್ಸ್‌ನಲ್ಲಿ ಸೇರ್ಪಡೆ ಮಾಡುವ ಪರವಾಗಿರುವ ಸದಸ್ಯರು ಕೈಎತ್ತಿ ಅನುಮೋದನೆ ನೀಡುವಂತೆ ಮನವಿ ಮಾಡಿದರು. ಅದಕ್ಕೆ ಪ್ರತಿಕ್ರಿಯಿಸಿದ ಎಲ್ಲ ಸದಸ್ಯರೂ ಮತ ಚಲಾಯಿಸಿದರು. ಯಾರೊಬ್ಬರೂ ವಿರುದ್ಧ ಮತ ಹಾಕಲಿಲ್ಲ.

'ಒಲಿಂಪಿಕ್ಸ್‌ನಲ್ಲಿ ಬಾಕ್ಸಿಂಗ್ ಸ್ಪರ್ಧೆಯ ಅಮೋಘ ಪ್ರದರ್ಶನವನ್ನು ಕಣ್ತುಂಬಿಕೊಳ್ಳೋಣ. ಎಲ್ಲರಿಗೂ ಧನ್ಯವಾದಗಳು' ಎಂದು ಥಾಮಸ್ ಬಾಕ್ ಹೇಳಿದರು.

ಫೆಬ್ರುವರಿ 2022ರಲ್ಲಿ ಸಿದ್ಧಪಡಿಸಲಾಗಿದ್ದ ಕ್ರೀಡೆಗಳ ಪಟ್ಟಿಯಲ್ಲಿ ಬಾಕ್ಸಿಂಗ್ ಸೇರ್ಪಡೆಯಾಗಿರಲಿಲ್ಲ. ಆಗ ಐಬಿಎ (ಅಂತರರಾಷ್ಟ್ರೀಯ ಬಾಕ್ಸಿಂಗ್ ಸಂಸ್ಥೆ)ಯ ಆಡಳಿತ ಸಮಿತಿಯಲ್ಲಿ ಹಣ ದುರ್ಬಳಕೆ ಮತ್ತಿತರ ವಿಷಯಗಳು ಕುರಿತು ವಿವಾದ ನಡೆದಿತ್ತು. ಅದರಿಂದಾಗಿ ಐಬಿಎಯನ್ನು ಐಒಸಿ ಅಮಾನತು ಮಾಡಿದ್ದರು.

2020ರ ಟೋಕಿಯೊ ಮತ್ತು 2024ರಲ್ಲಿ ಪ್ಯಾರಿಸ್ ಒಲಿಂಪಿಕ್ ಕೂಟದಲ್ಲಿ ಐಒಸಿಯ ವಿಶೇಷ ಕಾರ್ಯಪಡೆಯು ಬಾಕ್ಸಿಂಗ್ ಸ್ಪರ್ಧೆಗಳ ಉಸ್ತುವಾರಿ ವಹಿಸಿತ್ತು. ನಂತರದ ಬೆಳವಣಿಗೆಯಲ್ಲಿ ಹೊಸ ಫೆಡರೇಷನ್ ವಿಶ್ವ ಬಾಕ್ಸಿಂಗ್ (ಡಬ್ಲ್ಯುಬಿ) ರಚನೆಯಾಗಿತ್ತು. ಇದರಡಿಯಲ್ಲಿ 80 ರಾಷ್ಟ್ರೀಯ ಫೆಡರೇಷನ್‌ಗಳಿವೆ.

ಟ್ರೀಸಾ–ಗಾಯತ್ರಿ ಜೋಡಿ ಕ್ವಾರ್ಟರ್‌ಗೆ

ಸ್ವಿಸ್ ಓಪನ್ ಬ್ಯಾಡ್ಮಿಂಟನ್: ರಾಜಾವತ್, ಸಿಂಧುಗೆ ನಿರಾಸೆ

ಬಾಸೆಲ್ (ಪಿಟಿಐ): ಭಾರತದ ಟ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಜೋಡಿಯು ಸ್ವಿಸ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಡಬಲ್ಸ್‌ನಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ಗುರುವಾರ ನಡೆದ 16ರ ಘಟ್ಟದ ಪಂದ್ಯದಲ್ಲಿ ಭಾರತದ ಆಟಗಾರ್ತಿಯರು 21-12, 21-8ರ ನೇರ ಗೇಮ್‌ಗಳಿಂದ ಜರ್ಮನಿಯ ಅಮೆಲಿ ಲೆಹ್ಮನ್ ಮತ್ತು ಸೆಲಿನ್ ಹಬ್ಸ್ಚ ಜೋಡಿಯನ್ನು ಹಿಮ್ಮೆಟ್ಟಿಸಿದರು.

ರಾಜಾವತ್ ನಿರಾಸೆ: ಪುರುಷರ ಸಿಂಗಲ್ಸ್‌ನ ಎರಡನೇ ಸುತ್ತಿನಲ್ಲಿ ಭಾರತದ ಪ್ರಿಯಾಂಶು ರಾಜಾವತ್ ಅವರು ನಿರಾಸೆ ಮೂಡಿಸಿದರು. ಫ್ರಾನ್ಸ್‌ನ ಟೋಮಾ ಪೊಪೊವ್ 21-15, 21-17ರಿಂದ ಪ್ರಿಯಾಂಶು ಅವರನ್ನು ಮಣಿಸಿದರು. ವಿಶ್ವ ಕ್ರಮಾಂಕದಲ್ಲಿ 35ನೇ ಸ್ಥಾನದಲ್ಲಿರುವ ಭಾರತದ ಆಟಗಾರ, ಮೊದಲ ಸುತ್ತಿನಲ್ಲಿ 21-10, 21-11 ರಿಂದ ಸ್ಥಳೀಯ ಆಟಗಾರ ಟೊಬಿಯಾಸ್ ಕುಯೆಂಝಿ ಅವರನ್ನು ಬಗ್ಗುಬಡಿದಿದ್ದರು.



ಗಾಯತ್ರಿ ಗೋಪಿಚಂದ್ ಮತ್ತು ಟ್ರೀಸಾ ಜೋಳಿ

ಕಿದಂಬಿ ಶ್ರೀಕಾಂತ್ ಅವರೂ ಎರಡನೇ ಸುತ್ತಿನಲ್ಲಿ ಹೊರಬಿದ್ದರು. ಮೊದಲ ಸುತ್ತಿನಲ್ಲಿ ಸ್ವದೇಶದ ಎಚ್. ಎಸ್. ಪ್ರಣಯ್ ಅವರನ್ನು ಸೋಲಿಸಿದ್ದ ಶ್ರೀಕಾಂತ್ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ 15-21, 11-21ರಿಂದ ವಿಶ್ವದ 6ನೇ ಕ್ರಮಾಂಕದ ಲಿ ಶಿ ಫೆಂಗ್ (ಚೀನಾ) ಅವರಿಗೆ ಸೋತರು.

ಭಾರತದ ಇನ್ನೊಬ್ಬ ಆಟಗಾರ ಕಿರಣ್ ಜಾರ್ಜ್ ಅವರ ಸವಾಲು ಅಂತ್ಯಗೊಂಡಿತು. ಅವರು ಮೊದಲ ಸುತ್ತಿನ ಪಂದ್ಯದಲ್ಲಿ 21–18, 17–21, 10–21ರಲ್ಲಿ ಡೆನ್ಮಾರ್ಕ್‌ನ ರಾಸ್ಮಸ್ ಗೆಮ್ಕೆ ಅವರನ್ನು ಹಿಮ್ಮೆಟ್ಟಿಸಿದರು.

ಸಿಂಧು ನಿರ್ಗಮನ: ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ, ಏಳನೇ ಶ್ರೇಯಾಂಕದ ಪಿ.ವಿ. ಸಿಂಧು ಅವರ ಕಳಪೆ ಓಟ ಮುಂದುವರಿಯಿತು. ಅವರು ಮಹಿಳೆಯರ ಸಿಂಗಲ್ಸ್ ಮೊದಲ ಸುತ್ತಿನಲ್ಲೇ ಹೊರಬಿದ್ದರು. ಭಾರತದ ಆಟಗಾರ್ತಿ ತಮಗಿಂತ ಕೆಳಕ್ರಮಾಂಕದ ಡೆನ್ಮಾರ್ಕ್‌ನ ಆಟಗಾರ್ತಿ ಜೂಲಿ ಜಾಕೊಬ್ಸೆನ್ ಎದುರು 17–21, 19–21 ರಲ್ಲಿ ಸೋಲನುಭವಿಸಿದರು.

ಭಾರತೀಯರ ವ್ಯವಹಾರವಾಗಿದ್ದ ಮೊದಲ ಸುತ್ತಿನ ಇನ್ನೊಂದು ಪಂದ್ಯದಲ್ಲಿ ಅನುಪಮಾ ಉಪಾಧ್ಯಾಯ 21–14, 21–13ರಲ್ಲಿ ಅನ್ಮೋಲ್ ಖಾರ್ಬ್ ಅವರನ್ನು ಸೋಲಿಸಿದರು. ಅವರ ಮುಂದಿನ ಎದುರಾಳಿ ನಾಲ್ಕನೇ ಶ್ರೇಯಾಂಕದ ಪುತ್ರಿ ಕುಸುಮವರ್ದನಿ (ಇಂಡೊನೇಷ್ಯಾ).

ಸಂಕ್ಷಿಪ್ತ ಸುದ್ದಿ

ಕಾಮನ್‌ವೆಲ್ತ್ ಗೇಮ್ಸ್ ಆತಿಥ್ಯ ಬಿಡ್ ಸಲ್ಲಿಸಿದ ಭಾರತ

ನವದೆಹಲಿ (ಪಿಟಿಐ): 2036ರ ಒಲಿಂಪಿಕ್ ಕ್ರೀಡಾಕೂಟದ ಆತಿಥ್ಯದ ಗುರಿಯನ್ನು ಹೊಂದಿರುವ ಭಾರತವು ಅದಕ್ಕೂ ಪೂರ್ವಭಾವಿಯಾಗಿ 2030ರ ಕಾಮನ್‌ವೆಲ್ತ್ ಕ್ರೀಡಾಕೂಟವನ್ನು ಅಹಮದಾಬಾದ್‌ನಲ್ಲಿ ನಡೆಸಲು ಔಪಚಾರಿಕವಾಗಿ ಬಿಡ್ ಸಲ್ಲಿಸಿದೆ.

ಈ ವಿಷಯವನ್ನು ಕ್ರೀಡಾ ಸಚಿವಾಲಯದ ಉನ್ನತ ಮೂಲಗಳು ಗುರುವಾರ ಪಿಟಿಐಗೆ ತಿಳಿಸಿವೆ. ಕ್ರೀಡಾಕೂಟದ ಆತಿಥ್ಯಕ್ಕೆ 'ಆಸಕ್ತಿ ಪತ್ರ' ಸಲ್ಲಿಸಲು ಮಾರ್ಚ್ 31 ಕೊನೆಯ ದಿನವಾಗಿದೆ. ಭಾರತ ಒಲಿಂಪಿಕ್ ಸಮಿತಿಯು (ಐಒಎ) ಕೆಲವು ದಿನಗಳ ಹಿಂದೆ ಅರ್ಜಿ ಸಲ್ಲಿಸಿದೆ. 2010ರಲ್ಲಿ ಕೊನೆಯ ಬಾರಿ ಭಾರತವು ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಆತಿಥ್ಯ (ದೆಹಲಿಯಲ್ಲಿ) ವಹಿಸಿತ್ತು.

'2030ರ ಕಾಮನ್‌ವೆಲ್ತ್ ಕ್ರೀಡಾಕೂಟವನ್ನು ಆಯೋಜಿಸಲು ಭಾರತದ ಬಿಡ್, ಭಾರತ ಒಲಿಂಪಿಕ್ ಸಂಸ್ಥೆ ಮತ್ತು ಗುಜರಾತ್ ರಾಜ್ಯದಿಂದ ಸಲ್ಲಿಕೆಯಾಗಿದೆ' ಎಂದು ಸಚಿವಾಲಯದ ಮೂಲಗಳು ತಿಳಿಸಿವೆ.

ವಿಶ್ವಕಪ್ ಟಿಕೆಟ್ ಪಡೆದ ಜಪಾನ್

ಸೈತಾಮಾ (ಜಪಾನ್), (ಎಎಫ್‌ಪಿ): ಬಹರೇನ್ ತಂಡದ ವಿರುದ್ಧ ಅರ್ಹತಾ ಪಂದ್ಯದ ಉತ್ತರಾರ್ಧದಲ್ಲಿ ಗಳಿಸಿದ ಎರಡು ಗೋಲುಗಳ ನೆರವಿನಿಂದ 2–0ಯಿಂದ ಗೆದ್ದ ಜಪಾನ್, 2026ರ ಫುಟ್‌ಬಾಲ್ ವಿಶ್ವಕಪ್‌ಗೆ ಅರ್ಹತೆ ಪಡೆದ ಮೊದಲ ತಂಡ ಎನಿಸಿತು.

ಗುರುವಾರ ನಡೆದ ಏಷ್ಯನ್ 'ಸಿ' ಗುಂಪಿನ ಈ ಅರ್ಹತಾ ಪಂದ್ಯದಲ್ಲಿ ದಾಯ್ಚಿ ಕಮಾಡ (66ನೇ ನಿಮಿಷ) ಮತ್ತು ತಕೆಫುಸಾ ಕುಬೊ (87ನೇ ನಿಮಿಷ) ಗೋಲುಗಳನ್ನು ಗಳಿಸಿದರು. ಜಪಾನ್ ಸತತ ಎಂಟನೇ ಬಾರಿ ವಿಶ್ವಕಪ್‌ಗೆ ಅರ್ಹತೆ ಪಡೆದಿದೆ. ಆಸ್ಟ್ರೇಲಿಯಾ ತವರಿನಲ್ಲಿ ಇಂಡೊನೇಷ್ಯಾ ಮೇಲೆ 5–1 ರಿಂದ ಗೆದ್ದ ಬಳಿಕ, ಜಪಾನ್‌ಗೆ ಈ ಪಂದ್ಯ ಡ್ರಾ ಮಾಡಿದರೂ ವಿಶ್ವಕಪ್ ಟಿಕೆಟ್ ಸಿಗುತಿತ್ತು.

ಡಾಜ್‌ಬಾಲ್: 23ಕ್ಕೆ ಟ್ರಯಲ್ಸ್

ಬೆಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಮಾಣಿಯಲ್ಲಿ ಏಪ್ರಿಲ್ 25ರಿಂದ 27ರವರೆಗೆ ನಡೆಯುವ ಮೂರನೇ ಸೀನಿಯರ್ (ಪುರುಷರು, ಮಹಿಳೆಯರು ಮತ್ತು ಮಿಶ್ರ) ರಾಷ್ಟ್ರೀಯ ಡಾಜ್‌ಬಾಲ್ ಚಾಂಪಿಯನ್‌ಷಿಪ್ ಆಯೋಜಿಸಲಾಗಿದೆ.

ಟೂರ್ನಿಗೆ ಕರ್ನಾಟಕ ರಾಜ್ಯ ಪುರುಷರ ಮತ್ತು ಮಹಿಳಾ ತಂಡಗಳಿಗೆ ಆಟಗಾರರನ್ನು ಆಯ್ಕೆ ಮಾಡಲು ಇದೇ 23ರಂದು ಜಯನಗರದ ಕಿತ್ತೂರು ರಾಣಿ ಚೆನ್ನಮ್ಮ ಕ್ರೀಡಾಂಗಣದಲ್ಲಿ ಬೆಳಿಗ್ಗೆ 8ರಿಂದ ಮಧ್ಯಾಹ್ನ 1 ರವರೆಗೆ ಟ್ರಯಲ್ಸ್ ನಡೆಯಲಿದೆ. ಮಾಹಿತಿಗೆ ಮೊ: 99005 81178, 96208 21242.

ಏಷ್ಯನ್ ಈಜು: ಭಾರತದ ಆತಿಥ್ಯ

ನವದೆಹಲಿ (ಪಿಟಿಐ): ಭಾರತವು 11ನೇ ಏಷ್ಯನ್ ಈಜು ಚಾಂಪಿಯನ್‌ಷಿಪ್‌ನ ಆತಿಥ್ಯ ವಹಿಸಲಿದೆ. ಅಹಮದಾಬಾದಿನ ನರನ್‌ಪುರ ಕ್ರೀಡಾ ಕಾಂಪ್ಲೆಕ್ಸ್‌ನಲ್ಲಿ ಅ.1 ರಿಂದ 15ರವರೆಗೆ ಈ ಚಾಂಪಿಯನ್‌ಷಿಪ್ ನಡೆಯಲಿದೆ ಎಂದು ಭಾರತ ಈಜು ಫೆಡರೇಷನ್ ಗುರುವಾರ ಪ್ರಕಟಿಸಿದೆ.

ಎಂಎನ್‌ಕೆ, ಎಚ್‌ಬಿಆರ್ ಫೈನಲ್‌ಗೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಆತಿಥೇಯ ಎಂಎನ್‌ಕೆ ರಾವ್ ಮತ್ತು ಎಚ್‌ಬಿಆರ್ ಬಿ.ಸಿ ತಂಡಗಳು ರಾಜ್ಯ ಯುವ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್ ಬಾಲಕರ ವಿಭಾಗದಲ್ಲಿ ಫೈನಲ್ ಪ್ರವೇಶಿಸಿದವು.

ಬಸವನಗುಡಿಯ ಎಂಎನ್‌ಕೆ ಪಾರ್ಕ್ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ನಡೆಯುತ್ತಿರುವ ಟೂರ್ನಿಯ ಆರನೇ ದಿನವಾದ ಗುರುವಾರ ಸೆಮಿಫೈನಲ್ ಪಂದ್ಯದಲ್ಲಿ ಎಂಎನ್‌ಕೆ ರಾವ್ ತಂಡವು ಜಾಧವ್ (11) ಮತ್ತು ಗೌರಿ (10) ಅವರ ಆಟದ ಬಲದಿಂದ 50–43ರಿಂದ ಪಿಪಿಸಿ ತಂಡವನ್ನು ಮಣಿಸಿತು. ಪಿಪಿಸಿ ತಂಡದ ಆಕಾಶ್ ಮತ್ತು ಡೇನಿಯಲ್ ತಲಾ 12 ಅಂಕ ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ಎಚ್‌ಬಿಆರ್ ತಂಡವು 50–38ರಿಂದ ಬೀಗಲ್ಸ್ ಬಿ.ಸಿ ತಂಡವನ್ನು ಸೋಲಿಸಿತು. ಎಚ್‌ಬಿಆರ್‌ನರಿಶಿತ್‌ಬಿ.23ಮತ್ತುಶುಭ್‌ಕೆ.13ಅಂಕಗಳಿಸಿದರು. ಸೌರವ್ ಮತ್ತು ಪ್ರಧಾನ್ ಕ್ರಮವಾಗಿ 18 ಮತ್ತು 10 ಪಾಯಿಂಟ್ಸ್ ಬೀಗಲ್ಸ್‌ಗೆ ತಂದಿತ್ತರು.

ಬಾಲಕಿಯರ ವಿಭಾಗದಲ್ಲಿ ಆತಿಥೇಯ ಮೈಸೂರು ಜಿಲ್ಲೆ 'ಎ' ಮತ್ತು ಡಿವೈಇಎಸ್ ವಿದ್ಯಾನಗರ ತಂಡಗಳು ಪ್ರಶಸ್ತಿ ಸುತ್ತು ತಲುಪಿದವು.

ಸೆಮಿ ಫೈನಲ್ ಹಣಾಹಣಿಯಲ್ಲಿ ಆಂಚಲ್ (21) ಅವರ ಆಟದ ಬಲದಿಂದ ಮೈಸೂರು ತಂಡವು 41–38ರಿಂದ ಪಿಪಿಸಿ ತಂಡವನ್ನು ಸೋಲಿಸಿತು. ಪಿಪಿಸಿ ತಂಡದ ಮಹೇಕ್ ಶರ್ಮಾ 17 ಮತ್ತು ನಿತ್ಯಾ 11 ಅಂಕ ಗಳಿಸಿದರು.

ಡಿವೈಇಎಸ್ ತಂಡವು 60–24ರಿಂದ ಎಂಸಿಎಚ್‌ಎಸ್ ಬಿ.ಸಿ ತಂಡವನ್ನು ಸೋಲಿಸಿತು. ಡಿವೈಇಎಸ್ ಪರ ಶೀತಲ್ 23 ಮತ್ತು ನಿರೀಕ್ಷಾ 10 ಅಂಕ ಗಳಿಸಿದರೆ, ಎಂಸಿಎಚ್‌ಎಸ್ ತಂಡದ ನಿಶ್ವಿತಾ ಮತ್ತು ಲಿವದೀಪಾ ತಲಾ 10 ಅಂಕ ಪಡೆದರು.

ಮೂರನೇ ಮತ್ತು ನಾಲ್ಕನೇ ಸ್ಥಾನಕ್ಕಾಗಿ ಬಾಲಕರ ವಿಭಾಗದಲ್ಲಿ ಬೀಗಲ್ಸ್ ಮತ್ತು ಪಿಪಿಸಿ ತಂಡಗಳು; ಬಾಲಕಿಯರ ವಿಭಾಗದಲ್ಲಿ ಎಂಸಿಎಚ್‌ಎಸ್ ಮತ್ತು ಪಿಪಿಸಿ ತಂಡಗಳು ಶುಕ್ರವಾರ ಸೆಣಸಲಿವೆ. ಶನಿವಾರ ಫೈನಲ್ ಸ್ಪರ್ಧೆ ನಡೆಯಲಿದೆ.

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಬೋನಸ್ ಅಂಕ ಜಾರಿಗೆ ಚಿಂತನೆ

ನವದೆಹಲಿ (ಪಿಟಿಐ): ಮುಂದಿನ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಆವೃತ್ತಿಯ ವೇಳೆ ಹೊಸ ಬೋನಸ್ ಪಾಯಿಟ್ ವ್ಯವಸ್ಥೆ ಅಳವಡಿಸಲು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಚಿಂತನೆ ನಡೆಸುತ್ತಿದೆ. ಏಪ್ರಿಲ್‌ನಲ್ಲಿ ನಡೆಯಲಿರುವ ಆಡಳಿತ ಮಂಡಳಿ ಸಭೆಯಲ್ಲಿ ಈ ಬಗ್ಗೆ ಚರ್ಚಿಸುವ ಸಾಧ್ಯತೆಯಿದೆ.

ಮುಂಬರುವ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) 2025 ರಿಂದ 2027ರ ಅವಧಿ ಹೊಂದಿದೆ. ಜೂನ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಐದು ಪಂದ್ಯಗಳ ಟೆಸ್ಟ್ ಸರಣಿಯೊಡನೆ ಭಾರತದ ಡಬ್ಲ್ಯುಟಿಸಿ ಅಭಿಯಾನ ಆರಂಭವಾಗಲಿದೆ.

ಈಗ ಚಾಲ್ತಿಯಲ್ಲಿರುವ ನಿಯಮಗಳ ಪ್ರಕಾರ ಅತ್ಯಲ್ಪ ಅಂತರದಿಂದ ಅಥವಾ ಇನಿಂಗ್ಸ್ ಅಂತರದಿಂದ ಗೆಲ್ಲುವ ತಂಡ 12 ಪಾಯಿಂಟ್ ಪಡೆಯುತ್ತದೆ. ಟೈ ಆದರಲ್ಲಿ ಆರು ಅಂಕ ಹಾಗೂ ಡ್ರಾ ಆದಲ್ಲಿ ತಂಡಗಳು ತಲಾ ನಾಲ್ಕು ಪಾಯಿಂಟ್ ಪಡೆಯುತ್ತವೆ.

ಆದರೆ ಟೆಲಿಗ್ರಾಫ್ ವರದಿಯ ಪ್ರಕಾರ, ಐಸಿಸಿಯು ಈ ನಿಯಮಗಳಲ್ಲಿ ಬದಲಾವಣೆ ತರುವ ಸಾಧ್ಯತೆಯಿದೆ. ಇದರ ಅನ್ವಯ ಇನಿಂಗ್ಸ್ ಗೆಲುವು ಅಥವಾ 100 ರನ್‌ಗಳಂಥ ದೊಡ್ಡ ಅಂತರದಿಂದ ಗೆಲ್ಲುವ ತಂಡಕ್ಕೆ ಬೋನಸ್ ಪಾಯಿಂಟ್ ನೀಡುವ ವಿಷಯ ಪರಿಗಣನೆಯಲ್ಲಿದೆ.

'ಬೋಸನ್ ಪಾಯಿಂಟ್ ನೀಡುವಂಥ ವಿಷಯ ಡಬ್ಲ್ಯುಟಿಸಿ ಆರಂಭದಿಂದಲೇ ನಿರಂತರ ಚರ್ಚೆಯಲ್ಲಿದೆ. ಪ್ರಬಲ ತಂಡಗಳ ಎದುರು ಗೆಲ್ಲುವಾಗ ಹೆಚ್ಚಿನ ಅಂಕ ನೀಡಬೇಕು ಎಂದು ಹಲವು ತಂಡಗಳು ಅಭಿಪ್ರಾಯಪಟ್ಟಿವೆ' ಎಂದು ಈ ಬೆಳವಣಿಗೆಯ ಮಾಹಿತಿಯಿರುವ ಮೂಲವೊಂದು ಪಿಟಿಐಗೆ ತಿಳಿಸಿದೆ.

'ಕೇಂದ್ರದಲ್ಲಿ ಎಸ್‌ಸಿಎಸ್‌ಪಿ, ಟಿಎಸ್‌ಪಿ ಕಾಯ್ದೆ ಜಾರಿ ಇಲ್ಲ'

ಪ್ರಜಾವಾಣಿ ವಾರ್ತೆ

ಸಂಸತ್ ಕಲಾಪ

ನವದೆಹಲಿ: ಕರ್ನಾಟಕದ ಮಾದರಿಯಲ್ಲಿ ಪರಿಶಿಷ್ಟ ಜಾತಿ ಉಪಯೋಜನೆ ಹಾಗೂ ಬುಡಕಟ್ಟು ಉಪಯೋಜನೆ (ಎಸ್‌ಸಿಎಸ್‌ಪಿ/ ಟಿಎಸ್‌ಪಿ) ಕಾಯ್ದೆಯನ್ನು ಕೇಂದ್ರದಲ್ಲಿ ಜಾರಿಗೆ ತರುವ ಪ್ರಸ್ತಾವ ಇಲ್ಲ ಎಂದು ಕೇಂದ್ರ ಬುಡಕಟ್ಟು ಸಚಿವಾಲಯ ಸ್ಪಷ್ಟಪಡಿಸಿದೆ.

ಲೋಕಸಭೆಯಲ್ಲಿ ಶುಕ್ರವಾರ ಪ್ರಶ್ನೋತ್ತರ ಅವಧಿಯಲ್ಲಿ ರಾಯಚೂರು ಸಂಸದ ಜಿ.ಕುಮಾರ ನಾಯಕ ಕೇಳಿದ ಪ್ರಶ್ನೆಗೆ ಬುಡಕಟ್ಟು ಖಾತೆಯ ರಾಜ್ಯ ಸಚಿವ ದುರ್ಗಾದಾಸ್ ಉಯಿಕಿ ಲಿಖಿತ ಉತ್ತರ ನೀಡಿದ್ದಾರೆ.


ಬುಡಕಟ್ಟು ಉಪಯೋಜನೆಗೆ ಸಾಕಷ್ಟು ಹಂಚಿಕೆ ಹಾಗೂ ಪರಿಣಾಮಕಾರಿ ವೆಚ್ಚವನ್ನು ಖಚಿತಪಡಿಸಿಕೊಳ್ಳಲು ಆಂಧ್ರಪ್ರದೇಶ, ಕರ್ನಾಟಕ, ತೆಲಂಗಾಣ, ಉತ್ತರಾಖಂಡ, ರಾಜಸ್ಥಾನ ಮತ್ತು ತಮಿಳುನಾಡು ರಾಜ್ಯಗಳು ಕಾಯ್ದೆ ಜಾರಿಗೆ ತಂದಿವೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಕ್ರಿಯಾ ಯೋಜನೆಗೆ ಕೇಂದ್ರ ಸರ್ಕಾರ 2013–14ರಲ್ಲಿ ₹24,594 ಕೋಟಿ ವೆಚ್ಚ ಮಾಡಿತ್ತು. 2025–26ನೇ ಬಜೆಟ್‌ನಲ್ಲಿ ₹1,27,434 ಕೋಟಿ ಹಂಚಿಕೆ ಮಾಡಲಾಗಿದೆ. ಕಳೆದ ಐದು ವರ್ಷಗಳಲ್ಲಿ ಈ ನಿಧಿ ಬಳಕೆಯು ಶೇ 92ರಷ್ಟು ಹೆಚ್ಚಳವಾಗಿದೆ. ನೀತಿ ಆಯೋಗವು ಅಸ್ತಿತ್ವದಲ್ಲಿರುವ ಮಾರ್ಗಸೂಚಿಗಳನ್ನು ನಿಯಮಿತವಾಗಿ ಪರಿಶೀಲಿಸುತ್ತಿದೆ ಹಾಗೂ ಹೊಸ ಮಾರ್ಗಸೂಚಿಗಳನ್ನು ಶಿಫಾರಸು ಮಾಡುತ್ತಿದೆ. ಈ ಎಲ್ಲ ಕಾರಣಗಳಿಂದಾಗಿ, ಅನುದಾನ ಹಂಚಿಕೆ ಹಾಗೂ ಬಳಕೆ ಹೆಚ್ಚಳಕ್ಕಾಗಿ ಹೊಸ ಕಾಯ್ದೆ ತರುವ ಅಗತ್ಯ ಇಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಕರ್ನಾಟಕದ ಮಾದರಿಯಲ್ಲೇ ಕೇಂದ್ರದಲ್ಲೂ ಎಸ್‌ಸಿಎಸ್‌ಪಿ/ಟಿಎಸ್‌ಪಿ ಕಾಯ್ದೆ ಜಾರಿಗೆ ತರಬೇಕು ಎಂದು ಕರ್ನಾಟಕ ಸರ್ಕಾರವು ಇತ್ತೀಚೆಗೆ ಒತ್ತಾಯಿಸಿತ್ತು. ಈ ಯೋಜನೆಯ ಹಣವನ್ನು ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕಾಗಿ ಕಾಂಗ್ರೆಸ್ ಸರ್ಕಾರ ಬಳಕೆ ಮಾಡುತ್ತಿದೆ ಎಂದು ಆರೋಪಿಸಿ ಬಿಜೆಪಿ ಪ್ರತಿಭಟನೆ ನಡೆಸಿತ್ತು.

193 ಪ್ರಕರಣ; ಎರಡರಲ್ಲಿ ಮಾತ್ರ ಅಪರಾಧ ಸಾಬೀತು

ಕಳೆದ 10 ವರ್ಷಗಳಲ್ಲಿ ಜಾರಿ ನಿರ್ದೇಶನಾಲಯವು (ಇ.ಡಿ) ವಿವಿಧ ಪಕ್ಷಗಳ 193 ರಾಜಕಾರಣಿಗಳ ವಿರುದ್ಧ ಪ್ರಕರಣ ದಾಖಲಿಸಿದ್ದು, ಈ ಪೈಕಿ ಎರಡು ಪ್ರಕರಣಗಳಲ್ಲಿ ಅಪರಾಧ ಸಾಬೀತಾಗಿದೆ ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಅವರು ಸಿಪಿಎಂ ಸದಸ್ಯ ಎ.ಎ. ರಹೀಂ ಅವರ ಪ್ರಶ್ನೆಗೆ ರಾಜ್ಯಸಭೆಯಲ್ಲಿ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.



ಯಾವೆಲ್ಲಾ ರಾಜಕಾರಣಿಗಳ ಮೇಲೆ ಇ.ಡಿ ಪ್ರಕರಣ ದಾಖಲಿಸಿದೆಯೊ ಅವರ ಪಕ್ಷವಾರು ಮಾಹಿತಿಯನ್ನು ಸರ್ಕಾರ ನಿರ್ವಹಿಸಿಲ್ಲ. ಜೊತೆಗೆ, ರಾಜ್ಯವಾರು ಮಾಹಿತಿಯನ್ನೂ ನಾವು ನಿರ್ವಹಿಸಿಲ್ಲ. ಉಳಿದ ಮಾಹಿತಿಯನ್ನು ನೀಡಲಾಗಿದೆ

ಜಾರಿ ನಿರ್ದೇಶನಾಲಯವು ಸಾಕ್ಷ್ಯಾಧಾರಗಳ ಮೇಲೆ ತನಿಖೆ ಕೈಗೆತ್ತಿಕೊಳ್ಳುತ್ತದೆಯೇ ಹೊರತು, ವ್ಯಕ್ತಿಯ ಪಕ್ಷ, ಧರ್ಮ ಅಥವಾ ಇನ್ನಾವುದೇ ವಿಚಾರಗಳ ಆಧಾರದ ಮೇಲಲ್ಲ. ತನಿಖಾ ಸಂಸ್ಥೆಯ ಕಾರ್ಯವೈಖರಿಯೂ ನ್ಯಾಯಾಂಗದ ವಿಮರ್ಶೆಗೆ ಮುಕ್ತವಾಗಿದೆ.

ಪಂಕಜ್ ಚೌಧರಿ
ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ

ಆಧಾರ: ಸಚಿವ ಪಂಕಜ್ ಚೌಧರಿ ಅವರು ರಾಜ್ಯಸಭೆಗೆ ನೀಡಿದ ಲಿಖಿತ ಉತ್ತರ

ಚಾಹಲ್– ಧನಶ್ರೀ ವಿಚ್ಛೇದನಕ್ಕೆ ನ್ಯಾಯಾಲಯ ಅನುಮತಿ

ಮುಂಬೈ (ಪಿಟಿಐ): ಕ್ರಿಕೆಟಿಗ ಯಜುವೇಂದ್ರ ಚಾಹಲ್ ಮತ್ತು ಅವರಿಂದ ದೂರವಾಗಿರುವ ಪತ್ನಿ ಧನಶ್ರೀ ವರ್ಮಾ ಅವರಿಗೆ ಇಲ್ಲಿನ ಬಾಂದ್ರಾದ ಕುಟುಂಬ ನ್ಯಾಯಾಲಯವು ವಿಚ್ಛೇದನಕ್ಕೆ ಗುರುವಾರ ಅನುಮತಿ ನೀಡಿದೆ.

ಇವರಿಬ್ಬರು ಸಮ್ಮತಿಯ ಮೇರೆಗೆ ವಿಚ್ಛೇದನ ಕೋರಿ ಜಂಟಿಯಾಗಿ ಅರ್ಜಿ ಸಲ್ಲಿಸಿದರು. ಇದರೊಡನೆ ಇವರಿಬ್ಬರ ನಾಲ್ಕು ವರ್ಷಗಳ ದಾಂಪತ್ಯ ಜೀವನಕ್ಕೆ ತೆರೆಬಿದ್ದಿದೆ.

2020ರ ಡಿಸೆಂಬರ್‌ನಲ್ಲಿ ಇಬ್ಬರ ವಿವಾಹ ನಡೆದಿತ್ತು. ಅರ್ಜಿಯ ಪ್ರಕಾರ 2022ರ ಜೂನ್‌ನಿಂದ ಇಬ್ಬರೂ ಪ್ರತ್ಯೇಕವಾಗಿದ್ದಾರೆ. ಫೆ. 5ರಂದು ವಿಚ್ಛೇದನ ಕೋರಿ ಚಾಹಲ್ ಮತ್ತು ಧನಶ್ರೀ ಕುಟುಂಬಗಳು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿವೆ.

ಆದರೆ ಕೂಲಿಂಗ್ ಆಫ್ (ಕಡ್ಡಾಯ ಕಾಯುವಿಕೆ) ಅವಧಿಗೆ ವಿನಾಯಿತಿ ನೀಡಲು ನ್ಯಾಯಾಲಯ ನಿರಾಕರಿಸಿದ ಕಾರಣ ಇಬ್ಬರೂ ಬಾಂಬೆ ಹೈಕೋರ್ಟ್ ಮೆಟ್ಟಿಲೇರಿದ್ದರು. ಹಿಂದೂ ವಿವಾಹ ಕಾಯ್ದೆ ಪ್ರಕಾರ ವಿಚ್ಛೇದನ ಅರ್ಜಿ ಸಲ್ಲಿಸಿದ ಬಳಿಕ ದಂಪತಿಗೆ ಆರು ತಿಂಗಳ ಕಾಯುವಿಕೆ ಕಡ್ಡಾಯವಾಗಿದೆ.



ಯಜುವೇಂದ್ರ ಚಾಹಲ್ ಮತ್ತು ಧನಶ್ರೀ ವರ್ಮಾ

ಕಾಯುವಿಕೆ ಅವಧಿಗೆ ವಿನಾಯಿತಿ ನೀಡಿದ ಹೈಕೋರ್ಟ್ ಚಾಹಲ್ ಅವರು ಐಪಿಎಲ್‌ನಲ್ಲಿ ಆಡಬೇಕಿರುವ ಕಾರಣ ಗುರುವಾರವೇ ಅರ್ಜಿ ಇತ್ಯರ್ಥಪಡಿಸುವಂತೆ ಸೂಚಿಸಿತ್ತು. ಹೋದ ಸಲ ರಾಜಸ್ಥಾನ ರಾಯಲ್ಸ್‌ಗೆ ಆಡಿದ್ದ ಚಾಹಲ್ ಈ ಸಲ ಪಂಜಾಬ್ ಕಿಂಗ್ಸ್ ಪರ ಆಡಲಿದ್ದಾರೆ.

ಚಾಹಲ್ ಅವರು ಒಪ್ಪಂದದ ಪ್ರಕಾರ ಧನಶ್ರೀಗೆ ನೀಡಬೇಕಾಗಿದ್ದ ₹4.75 ಕೋಟಿ ಮೊತ್ತದಲ್ಲಿ ಭಾಗಶಃ ಮೊತ್ತ (₹2.37 ಕೋಟಿ) ಮಾತ್ರ ಪಾವತಿಸಿದ್ದ ಕಾರಣ ಕೂಲಿಂಗ್ ಆಫ್ ಅವಧಿಗೆ ರಿಯಾಯಿತಿ ನೀಡಲಾಗದು ಎಂದು ಕುಟುಂಬ ನ್ಯಾಯಾಲಯ ಹೇಳಿತ್ತು.

'ಹತ್ಯೆ ಬಗ್ಗೆ ಸೊಸೆಯ ಪೋಷಕರಿಗೆ ತಿಳಿದಿತ್ತು'

ಮೀರತ್ (ಉತ್ತರ ಪ್ರದೇಶ) (ಪಿಟಿಐ): ಸೌರಭ್ ರಜಪೂತ್ ಕೊಲೆ ಪ್ರಕರಣ ಕುರಿತು ಆರೋಪಿ ಮುಸ್ಕಾನ್ ರಸ್ತೋಗಿಯ (ಸೌರಭ್ ಪತ್ನಿ) ಪೋಷಕರಿಗೆ ಮಾರ್ಚ್ 18ಕ್ಕೂ ಮೊದಲೇ ತಿಳಿದಿತ್ತು ಎಂದು ಮೃತನ ತಾಯಿ ಆರೋಪಿಸಿದ್ದಾರೆ.

'ಕೊಲೆ ಬಗ್ಗೆ ತಮಗೇನೂ ಗೊತ್ತಿಲ್ಲ ಎಂದು ಮುಸ್ಕಾನ್ ಪೋಷಕರು ಹೇಳಿರುವುದರಲ್ಲಿ ಸತ್ಯಾಂಶವಿಲ್ಲ. ಅವರು ಪೊಲೀಸರ ದಿಕ್ಕು ತಪ್ಪಿಸಲು ಯತ್ನಿಸುತ್ತಿದ್ದಾರೆ' ಎಂದು ಸೌರಭ್ ತಾಯಿ ರೇಣು ದೇವಿ ದೂರಿದ್ದಾರೆ. 'ಸೌರಭ್‌ರ ಆರು ವರ್ಷದ ಪುತ್ರಿಗೂ ತನ್ನ ತಂದೆ ಸಾವಿನ ಬಗ್ಗೆ ತಿಳಿದಿತ್ತು. ಬಾಲಕಿಯು ತಂದೆ ಡ್ರಮ್‌ನಲ್ಲಿ ಇದ್ದಾರೆ ಎಂದು ನೆರೆಯವರ ಬಳಿ ಹೇಳಿದ್ದಳು' ಎಂದು ರೇಣು ದೇವಿ ಪ್ರತಿಪಾದಿಸಿದ್ದಾರೆ. ಆದರೆ ಇದನ್ನು ಪೊಲೀಸರು ಅಲ್ಲಗಳೆದಿದ್ದಾರೆ.

ಎನ್‌ಕೌಂಟರ್: 30 ನಕ್ಸಲರ ಹತ್ಯೆ

ಬಿಜಾಪುರ (ಪಿಟಿಐ): ಛತ್ತೀಸಗಢದ ಬಿಜಾಪುರ ಹಾಗೂ ಕಾಂಕೇರ್ ಜಿಲ್ಲೆಗಳಲ್ಲಿ ನಕ್ಸಲರ ವಿರುದ್ಧ ಬಿಎಸ್‌ಎಫ್ ಹಾಗೂ ಜಿಲ್ಲಾ ಮೀಸಲು ಪಡೆ (ಡಿಆರ್‌ಜಿ) ಗುರುವಾರ ಜಂಟಿ ಕಾರ್ಯಾಚರಣೆ ನಡೆಸಿದ್ದು, ಎನ್‌ಕೌಂಟರ್‌ನಲ್ಲಿ ಒಟ್ಟು 30 ನಕ್ಸಲರು ಮೃತಪಟ್ಟಿದ್ದಾರೆ.

ಬಿಜಾಪುರದಲ್ಲಿ 26, ಕಾಂಕೇರ್‌ನಲ್ಲಿ ನಾಲ್ವರು ನಕ್ಸಲರನ್ನು ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಲಾಗಿದೆ. ಈ ಕಾರ್ಯಾಚರಣೆಯಲ್ಲಿ ಇಬ್ಬರು ಪೊಲೀಸರು ಹುತಾತ್ಮರಾಗಿದ್ದಾರೆ.

'ದಂತೇವಾಡ–ಬಿಜಾಪುರ ಜಿಲ್ಲಾ ಗಡಿ, ಕಾಂಕೇರ್–ನಾರಾಯಣಪುರ ಜಿಲ್ಲೆಗಳ ಗಡಿಗಳ ಅರಣ್ಯ ಪ್ರದೇಶಗಳಲ್ಲಿ ಬಿಎಸ್‌ಎಫ್ ಹಾಗೂ ಡಿಆರ್‌ಜಿ ಪಡೆಗಳು ಮುಂಜಾನೆಯಿಂದಲೇ ಜಂಟಿ ಕಾರ್ಯಾಚರಣೆ ನಡೆಸುತ್ತಿದ್ದವು. ಬೆಳಿಗ್ಗೆ 7 ಗಂಟೆ ಸುಮಾರಿಗೆ ನಕ್ಸಲರು ಹಾಗೂ ಈ ಪಡೆಗಳ ಮಧ್ಯೆ ಗುಂಡಿನ ಚಕಮಕಿ ಏರ್ಪಟಿತ್ತು' ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

'ಬಿಜಾಪುರದಲ್ಲಿ ಎನ್‌ಕೌಂಟರ್ ನಡೆದ ಸ್ಥಳದಿಂದ ನಕ್ಸಲರ ಬಂದೂಕುಗಳು ಹಾಗೂ ಸ್ಫೋಟಕಗಳನ್ನು ವಶಕ್ಕೆ ಪಡೆಯಲಾಗಿದೆ. ಕಾಂಕೇರ್‌ನಲ್ಲಿ ಸ್ವಯಂ ಚಾಲಿತ ಶಸ್ತ್ರಾಸ್ತ್ರ ವಶಪಡಿಸಿಕೊಳ್ಳಲಾಗಿದೆ. ಪಡೆಗಳು ಇನ್ನಷ್ಟು ಶೋಧಕಾರ್ಯ ನಡೆಸುತ್ತಿವೆ' ಎಂದು ವಿವರಿಸಿದರು.

'ಮೋದಿ ಸರ್ಕಾರದಿಂದ ಕಠಿಣ ನೀತಿ'

ದೇಶವನ್ನು ನಕ್ಸಲ್ ಮುಕ್ತ ಮಾಡಬೇಕು ಎಂಬ ಅಭಿಯಾನದಲ್ಲಿ ಭದ್ರತಾ ಪಡೆಗಳು ಛತ್ತೀಸಗಢದಲ್ಲಿ 22 ನಕ್ಸಲರನ್ನು ಹತ್ಯೆ ಮಾಡುವ ಮೂಲಕ ದೊಡ್ಡ ಯಶ ಗಳಿಸಿವೆ. ಮೋದಿ ಸರ್ಕಾರವು ನಕ್ಸಲರ ವಿರುದ್ಧ ಕಠಿಣ ನೀತಿ ರೂಪಿಸಿದೆ. ಭದ್ರತಾ ಪಡೆಗಳ ಮುಂದೆ ಶರಣಾಗತಿ ಹೊಂದಿ, ಸಮಾಜದ ಮುಖ್ಯ ವಾಹಿನಿಗೆ ಬರುವ ನಕ್ಸಲರಿಗೆ ಹಲವು ಸೌಲಭ್ಯಗಳನ್ನು ನೀಡಲಾಗಿದೆ. ಆದರೂ ನಕ್ಸಲರು ಶರಣಾಗುತ್ತಿಲ್ಲ. 2026ರ ಮಾರ್ಚ್ 31ಕ್ಕೆ ದೇಶವು ನಕ್ಸಲ್ ಮುಕ್ತ ದೇಶವಾಗಲಿದೆ ಎಂದು ಗೃಹ ಸಚಿವ ಅಮಿತ್ ಶಾ ಅವರು ಹೇಳಿದ್ದಾರೆ.

ನಾಳೆಯಿಂದ ಟೂರ್ನಿ: ಈಡನ್ ಗಾರ್ಡನ್‌ನಲ್ಲಿ ಆರ್‌ಸಿಬಿ ತಂಡದ ಆಟಗಾರರ ತಾಲೀಮು

‘ಚಾಲೆಂಜ್’ ಎದುರಿಸಲು ಬೆಂಗಳೂರು ಸಿದ್ಧತೆ

ಬೆಂಗಳೂರು/ಕೋಲ್ಕತ್ತ: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ 18ನೇ ಆವೃತ್ತಿಯಲ್ಲಿ ಅಭಿಯಾನ ಆರಂಭಿಸಲು ಸಿದ್ಧವಾಗಿದೆ. ಈಡನ್ ಗಾರ್ಡನ್‌ನಲ್ಲಿ ತಂಡದ ಆಟಗಾರರು ಗುರುವಾರ ಅಭ್ಯಾಸ ನಡೆಸಿದರು.

ಶನಿವಾರ ನಡೆಯಲಿರುವ ಟೂರ್ನಿಯ ಉದ್ಘಾಟನೆ ಪಂದ್ಯದಲ್ಲಿ ಆರ್‌ಸಿಬಿ ತಂಡವು ಹಾಲಿ ಚಾಂಪಿಯನ್ ಕೋಲ್ಕತ್ತ ನೈಟ್ ರೈಡರ್ಸ್ ಎದುರು ಕಣಕ್ಕಿಳಿಯಲಿದೆ. ಬ್ಯಾಟರ್ ವಿರಾಟ್ ಕೊಹ್ಲಿ, ಲಿಯಾಮ್ ಲಿವಿಂಗ್‌ಸ್ಟೋನ್, ಆಲ್‌ರೌಂಡರ್ ಕೃಣಾಲ್ ಪಾಂಡ್ಯ ಸೇರಿದಂತೆ ಎಲ್ಲ ಆಟಗಾರರು ಹಾಜರಿದ್ದರು. ಮುಖ್ಯ ಕೋಚ್ ಆ್ಯಂಡಿ ಫ್ಲವರ್ ಮತ್ತು ಬ್ಯಾಟಿಂಗ್ ಕೋಚ್ ದಿನೇಶ್ ಕಾರ್ತಿಕ್ ಮಾರ್ಗದರ್ಶನದಲ್ಲಿ ಫೀಲ್ಡಿಂಗ್ ತಾಲೀಮು, ಬ್ಯಾಟಿಂಗ್ ಮತ್ತು ಬೌಲಿಂಗ್ ಅಭ್ಯಾಸವನ್ನು ಆಟಗಾರರು ಮಾಡಿದರು.

ಪಡಿಕ್ಕಲ್ ಮಿಂಚು: ಕೋಲ್ಕತ್ತಕ್ಕೆ ಬುಧವಾರ ತೆರಳುವ ಮುನ್ನ ಆರ್‌ಸಿಬಿ ತಂಡವು ತವರಿನಂಗಳದಲ್ಲಿಯೂ ಕಠಿಣ ತಾಲೀಮು ನಡೆಸಿತು.


ಆರ್‌ಸಿಬಿ ಬಳಗವು ಎರಡು ತಂಡಗಳನ್ನು ಮಾಡಿಕೊಂಡು ಅಭ್ಯಾಸ ಪಂದ್ಯವನ್ನೂ ಆಡಿತ್ತು. ಇದರಲ್ಲಿ ಕನ್ನಡಿಗ ದೇವದತ್ತ ಪಡಿಕ್ಕಲ್ ಮಿಂಚಿದ್ದರು. ಎಡಗೈ ಬ್ಯಾಟರ್ ಪಡಿಕ್ಕಲ್ 48 ಎಸೆತಗಳಲ್ಲಿ 82 ರನ್ ಸಿಡಿಸಿದ್ದರು. ಅವರು ಪ್ರತಿನಿಧಿಸಿದ್ದ ‘ಟೀಮ್ ರಜತ್’ 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 219 ರನ್ ಕಲೆ ಹಾಕಿತ್ತು. ಅದಕ್ಕುತ್ತರವಾಗಿ ‘ಟೀಮ್ ಜಿತೇಶ್’ 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 202 ರನ್ ಗಳಿಸಿತ್ತು. ರೊಮಾರಿಯೊ ಶೆಫರ್ಡ್ 21 ಎಸೆತಗಳಲ್ಲಿ 36 ರನ್ ಬಾರಿಸಿದ್ದರು.

ವೇಗಿಗಳಾದ ಲುಂಗಿ ಗಿಡಿ, ಭುವನೇಶ್ವರ್ ಕುಮಾರ್, ಸ್ಪಿನ್ನರ್ ಕೃಣಾಲ್ ಪಾಂಡ್ಯ, ಯಶ್ ದಯಾಳ್, ನುವಾನ್ ತುಷಾರ, ಬ್ಯಾಟರ್ ಲಿವಿಂಗ್‌ಸ್ಟೋನ್, ಫಿಲ್ ಸಾಲ್ಟ್ ಅವರು ತಮ್ಮ ಸಾಮರ್ಥ್ಯ ಪರೀಕ್ಷಿಸಿ ಕೊಂಡರು.



ಮುಂಬೈನಲ್ಲಿ ಐಪಿಎಲ್‌ನ 10 ತಂಡಗಳ ನಾಯಕರು ಟ್ರೋಫಿಯೊಂದಿಗೆ ಫೋಟೊಗೆ ಪೋಸ್ ನೀಡಿದರು. ಸಂಜು ಸ್ಯಾಮ್ಸನ್ (ರಾಜಸ್ಥಾನ ರಾಯಲ್ಸ್), ರಿಷಭ್ ಪಂತ್ (ಲಖನೌ ಸೂಪರ್ ಜೈಂಟ್ಸ್), ಅಜಿಂಕ್ಯ ರಹಾನೆ (ಕೋಲ್ಕತ್ತ ನೈಟ್ ರೈಡರ್ಸ್), ಶುಭಮನ್ ಗಿಲ್ (ಗುಜರಾತ್ ಟೈಟನ್ಸ್), ಶ್ರೇಯಸ್ ಅಯ್ಯರ್ (ಪಂಜಾಬ್ ಕಿಂಗ್ಸ್), ಪ್ಯಾಟ್ ಕಮಿನ್ಸ್ (ಸನ್‌ರೈಸರ್ಸ್ ಹೈದರಾಬಾದ್), ಋತುರಾಜ್ ಗಾಯಕವಾಡ್ (ಚೆನ್ನೈ ಸೂಪರ್ ಕಿಂಗ್ಸ್), ರಜತ್ ಪಾಟೀದಾರ್ (ರಾಯಲ್ ಚಾಲೆಂಜರ್ಸ್ ಬೆಂಗಳೂರು), ಹಾರ್ದಿಕ್ ಪಾಂಡ್ಯ (ಮುಂಬೈ ಇಂಡಿಯನ್ಸ್), ಅಕ್ಷರ್ ಪಟೇಲ್ (ಡೆಲ್ಲಿ ಕ್ಯಾಪಿಟಲ್ಸ್). ಐಪಿಎಲ್ ಎಕ್ಸ್ ಚಿತ್ರ

ರಾಜಸ್ಥಾನದ ಮೊದಲ 3 ಪಂದ್ಯಗಳಿಗೆ ಪರಾಗ್‌ಗೆ ಸಾರಥ್ಯ



ನವದೆಹಲಿ (ಪಿಟಿಐ): ಯುವ ತಾರೆ ರಿಯಾನ್ ಪರಾಗ್ ಅವರು ಈ ಬಾರಿಯ ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ರಾಜಸ್ಥಾನ ರಾಯಲ್ಸ್ ತಂಡ ಆಡುವ ಮೊದಲ ಮೂರು ಪಂದ್ಯಗಳಿಗೆ ನಾಯಕತ್ವ ವಹಿಸಲಿದ್ದಾರೆ.

ಬೆರಳಿ ಗಾಯದಿಂದ ಚೇತರಿಸಿ ಕೊಂಡಿರುವ ಕಾಯಂ ನಾಯಕ ಸಂಜು ಸ್ಯಾಮ್ಸನ್ ಅವರಿಗೆ ಕೀಪಿಂಗ್ ಹೊಣೆ ನಿಭಾಯಿಸದಿರುವಂತೆ ಬಿಸಿಸಿಐ ತಿಳಿಸಿರುವ ಕಾರಣ ಅವರು ಈ ಪಂದ್ಯದಲ್ಲಿ ಬ್ಯಾಟರ್ ಆಗಿಯಷ್ಟೇ ತಂಡಕ್ಕೆ ಲಭ್ಯರಿರಲಿದ್ದಾರೆ. ಇಂಗ್ಲೆಂಡ್ ವಿರುದ್ಧ ಟಿ20 ಸರಣಿಯ ವೇಳೆ ಜೋಫ್ರಾ ಆರ್ಚರ್ ಅವರ ಬೌನ್ಸರ್ ನಿಭಾಯಿಸುವ ವೇಳೆ ಸಂಜು ಬೆರಳಿಗೆ ಪೆಟ್ಟಾಗಿತ್ತು. ಇದಕ್ಕಾಗಿ ಶಸ್ತ್ರಚಿಕಿತ್ಸೆ ನಡೆಸಿದ್ದು, ಬೆಂಗಳೂರಿನ ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ ಪುನಶ್ಚೇತನ ಶಿಬಿರದಲ್ಲಿ ಆರೈಕೆಯಲ್ಲಿದ್ದರು.

ಕೀಪಿಂಗ್ ಹೊಣೆ ನಿಭಾಯಿಸುವ ಮೊದಲು ಇನ್ನೂ ಕೆಲವು ಸಮಯ ಬೆರಳಿಗೆ ಹೆಚ್ಚು ಒತ್ತಡ ಬೀಳದಂತೆ ನೋಡಿಕೊಳ್ಳಬೇಕೆಂದು ವೈದ್ಯರ ಮತ್ತು ಕ್ರೀಡಾ ವಿಜ್ಞಾನ ತಂಡ ಸಲಹೆ ನೀಡಿತ್ತು. ಇದರಿಂದಾಗಿ 23 ವರ್ಷ ವಯಸ್ಸಿನ ಪರಾಗ್ ಐಪಿಎಲ್‌ನ ಅತಿ ಕಿರಿಯ ನಾಯಕರಲ್ಲಿ ಒಬ್ಬರೆನಿಸಲಿದ್ದಾರೆ. ಈ ಹಿಂದೆ, 2011ರಲ್ಲಿ ಆರ್‌ಸಿಬಿ ನಾಯಕತ್ವ ವಹಿಸಿದಾಗ ವಿರಾಟ್ ಕೊಹ್ಲಿ ಅವರ ವಯಸ್ಸು 22 ವರ್ಷವಷ್ಟೇ ಆಗಿತ್ತು.

‘2025ರ ಐಪಿಎಲ್‌ನಲ್ಲಿ ರಾಜಸ್ಥಾನ ರಾಯಲ್ಸ್ ಆಡುವ ಮೊದಲ ಮೂರು ಪಂದ್ಯಗಳಿಗೆ ರಿಯಾನ್ ಪರಾಗ್ ನಾಯಕನಾಗಿರುತ್ತಾರೆ’ ಎಂದು ರಾಜಸ್ಥಾನ ರಾಯಲ್ಸ್ ಹೇಳಿಕೆ ತಿಳಿಸಿದೆ.


ಕೃಣಾಲ್ ಪಾಂಡ್ಯ ಮತ್ತು ವಿರಾಟ್ ಕೊಹ್ಲಿ ಪಿಟಿಐ ಚಿತ್ರ

ಎ.6ರ ಪಂದ್ಯ ಗುವಾಹಟಿಗೆ

ಕೋಲ್ಕತ್ತ: ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಆತಿಥೇಯ ಕೋಲ್ಕತ್ತ ನೈಟ್ ರೈಡರ್ಸ್ ನಡುವಣ ಏಪ್ರಿಲ್ 6ರಂದು ಕೋಲ್ಕತ್ತದಲ್ಲಿ ನಿಗದಿಯಾಗಿದ್ದ ಪಂದ್ಯವನ್ನು ಭದ್ರತಾ ಸಮಸ್ಯೆ ಎದುರಾಗಬಹುದಾದ ಕಾರಣ ಗುವಾಹಟಿಗೆ ಸ್ಥಳಾಂತರಿಸಲಾಗಿದೆ. ಪಂದ್ಯದ ದಿನವೇ ನಗರದಲ್ಲಿ ರಾಮನವಮಿ ಉತ್ಸವ ಇರುವುದರಿಂದ ಭದ್ರತೆ ಒದಗಿಸಲು ಸಮಸ್ಯೆಯಾಗುಬಹುದೆಂಬ ಕಾರಣಕ್ಕೆ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಬಂಗಾಳ ಕ್ರಿಕೆಟ್ ಸಂಸ್ಥೆ ಅಧ್ಯಕ್ಷ ಸ್ನೇಹಾಶಿಶ್ ಗಂಗೂಲಿ ತಿಳಿಸಿದ್ದಾರೆ.

ಐಪಿಎಲ್‌ನಲ್ಲಿ ಎಂಜಲು ಬಳಕೆಗೆ ನಿಷೇಧ ತೆರವು

ನವದೆಹಲಿ (ಪಿಟಿಐ): ಚೆಂಡಿಗೆ ಹೊಳಪು ನೀಡಲು ಎಂಜಲು ಬಳಕೆಯ ಮೇಲಿದ್ದ ನಿಷೇಧವನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ತೆಗೆದುಹಾಕಿದೆ. ಐಪಿಎಲ್ ತಂಡಗಳ ನಾಯಕರ ಸಭೆಯಲ್ಲಿ ಈ ನಿರ್ಧಾರಕ್ಕೆ ಬರಲಾಯಿತು.

‘ಎಂಜಲು ಬಳಕೆ ಮೇಲಿನ ನಿಷೇಧ ತೆರವುಗೊಳಿಸಲಾಗಿದೆ. ಮುಂಬೈನಲ್ಲಿ ಗುರುವಾರ ನಡೆದ ಐಪಿಎಲ್ ತಂಡಗಳ ನಾಯಕರ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು‘ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಅಧಿಕಾರಿಯೊಬ್ಬರು ಪಿಟಿಐಗೆ ತಿಳಿಸಿದರು.

ಚೆಂಡಿಗೆ ಎಂಜಲು ಬಳಸಿ ಹೊಳಪು ನೀಡುವ ಪದ್ಧತಿ ಹಳೆಯ ಕಾಲದಿಂದ ಚಾಲ್ತಿಯಲ್ಲಿತ್ತು. ಕೋವಿಡ್ –19 ಪಿಡುಗಿನ ವೇಳೆ ಅಂತರ ರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಇದಕ್ಕೆ ನಿಷೇಧ ಹೇರಿತ್ತು. 2022ರಲ್ಲಿ ಈ ನಿಷೇಧವನ್ನು ಶಾಶ್ವತಗೊಳಿಸಲಾಗಿತ್ತು.

ಐಪಿಎಲ್‌ನಲ್ಲೂ ಇದನ್ನು ಜಾರಿಗೊಳಿಸಲಾಗಿತ್ತು. ಗುರುವಾರದ ಬೆಳವಣಿಗೆ ಯಿಂದಾಗಿ ಐಪಿಎಲ್, ಕೋವಿಡ್ 19 ಪಿಡುಗಿನ ನಂತರ ಚೆಂಡಿಗೆ ಎಂಜಲು ಬಳಕೆಗೆ ಅವಕಾಶ ನೀಡಿದ ಮೊದಲ ಪ್ರಮುಖ ಕ್ರಿಕೆಟ್ ಕೂಟ ಎನಿಸಿತು.

ಮೈಕ್ ಹಿಡಿಯಲಿರುವ ಅಂಪೈರ್ ಚೌಧರಿ



ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ 17 ವರ್ಷಗಳ ಕಾಲ ಅಂಪೈರ್ ಆಗಿ ಕಾರ್ಯನಿರ್ವಹಿಸಿರುವ ಅನಿಲ್ ಚೌಧರಿ ಇನ್ನು ಬೇರೆ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಕಳೆದ ವಾರ 60ನೇ ವರ್ಷಕ್ಕೆ ಕಾಲಿಟ್ಟ ಚೌಧರಿ ಇನ್ನು ವೀಕ್ಷಕ ವಿವರಣೆಗಾರನಾಗಿ ಮೈಕ್ ಹಿಡಿಯಲಿದ್ದಾರೆ.

ಆ ಮೂಲಕ ಅವರು ಅಂಪೈರಿಂಗ್ ವೃತ್ತಿಗೆ ಅಧಿಕೃತವಾಗಿ ನಿವೃತ್ತಿ ಹೇಳಿದಂತಾಗಿದೆ. ಕಳೆದ ತಿಂಗಳು ಕೇರಳ ಮತ್ತು ವಿದರ್ಭ ನಡುವಣ ರಣಜಿ ಟ್ರೋಫಿ ಪಂದ್ಯದಲ್ಲಿ ಅವರು ಕೊನೆಯ ಬಾರಿ ಅಂಪೈರ್ ಆಗಿ ಕಾರ್ಯನಿರ್ವಹಿಸಿದ್ದರು. ಅವರು 12 ಟೆಸ್ಟ್, 49 ಏಕದಿನ ಮತ್ತು 64 ಟಿ20 ಪಂದ್ಯಗಳಲ್ಲಿ ಅಂಪೈರ್ ಆಗಿ ಕಾರ್ಯನಿರ್ವಹಿಸಿದ್ದಾರೆ.

ಅವರು ಪ್ರಾದೇಶಿಕ ಭಾಷೆಯಲ್ಲಿ (ಹರಿಯಾಣವಿ) ಮತ್ತು ಹಿಂದಿಯಲ್ಲಿ ಕಾಮೆಂಟರಿ ನೀಡಲು ಯೋಜಿಸಿದ್ದಾರೆ.

ಚಾಂಪಿಯನ್ಸ್ ಟ್ರೋಫಿ ವಿಜೇತ ಭಾರತಕ್ಕೆ ₹ 58 ಕೋಟಿ ಬಹುಮಾನ

ನವದೆಹಲಿ (ಪಿಟಿಐ): ದುಬೈನಲ್ಲಿ ಈಚೆಗೆ ಚಾಂಪಿಯನ್ಸ್ ಟ್ರೋಫಿ ಜಯಿಸಿದ ರೋಹಿತ್ ಶರ್ಮಾ ನಾಯಕತ್ವದ ಭಾರತ ತಂಡಕ್ಕೆ ₹ 58 ಕೋಟಿ ಬಹುಮಾನವನ್ನು ಬಿಸಿಸಿಐ ಘೋಷಿಸಿದೆ.

ದುಬೈ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಫೈನಲ್‌ನಲ್ಲಿ ರೋಹಿತ್ ಬಳಗವು ನ್ಯೂಜಿಲೆಮಡ್ ವಿರುದ್ಧ ಗೆದ್ದಿತ್ತು. ತಂಡದ ಆಟಗಾರರು, ತರಬೇತಿ ಸಿಬ್ಬಂದಿ, ನೆರವು ಸಿಬ್ಬಂದಿ ಮತ್ತು ರಾಷ್ಟ್ರೀಯ ಪುರುಷರ ತಂಡದ ಆಯ್ಕೆ ಸಮಿತಿಯವರಿಗೆ ಈ ಹಣದಲ್ಲಿ ಪಾಲು ಸಲ್ಲಲಿದೆ.

‘ಒಂದರ ಹಿಂದೆ ಒಂದು ಐಸಿಸಿ ಟ್ರೋಫಿ ಗೆದ್ದಿರುವುದು ತಂಡದ ವಿಶೇಷ ಸಾಧನೆ. ಆಟಗಾರರ ಸಾಧನೆಯನ್ನು ಗುರುತಿಸಿ ಗೌರವಿಸಲು ಈ ಮೊತ್ತವನ್ನು ಘೋಷಿಸಲಾಗಿದೆ’ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಅಧ್ಯಕ್ಷ ರೋಜರ್ ಬಿನ್ನಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘2025ರಲ್ಲಿ ಭಾರತವು ಗೆದ್ದ ಎರಡನೇ ಐಸಿಸಿ ಟ್ರೋಫಿ ಇದಾಗಿದೆ. 19 ವರ್ಷದೊಳಗಿನವರ ಮಹಿಳೆಯರ ವಿಶ್ವಕಪ್ ವಿಜಯವೂ ಇದೇ ವರ್ಷ ದಾಖಲಾಗಿದೆ. ಇದು ನಮ್ಮಲ್ಲಿ ಕ್ರಿಕೆಟ್ ಆಟದ ಉತ್ತಮ ಸೌಲಭ್ಯಗಳನ್ನು ತೋರಿಸುತ್ತದೆ’ ಎಂದು ಬಿನ್ನಿ ಹೇಳಿದ್ದಾರೆ.

ಕಳೆದ ಎಂಟು ತಿಂಗಳಲ್ಲಿ ಭಾರತವು ಗೆದ್ದ 3ನೇ ಐಸಿಸಿ ಟ್ರೋಫಿ ಇದಾಗಿದೆ. 2024ರಲ್ಲಿ ರೋಹಿತ್ ನಾಯಕತ್ವದ ತಂಡವು ಟಿ20 ವಿಶ್ವಕಪ್ ಜಯಿಸಿತ್ತು.


‘ನಮ್ಮ ಬೆಂಗಳೂರು ಇಂಟರ್‌ನ್ಯಾಷನಲ್ ಗ್ರ್ಯಾಂಡ್ ಮಾಸ್ಟರ್ ಓಪನ್’ ಚೆಸ್ ಟೂರ್ನಿಯ ಪೋಸ್ಟರ್ ಮತ್ತು ಟೀಸರ್ ಬಿಡುಗಡೆ ಕಾರ್ಯಕ್ರಮದಲ್ಲಿ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಮತ್ತು ಕೆಕೆಆರ್‌ಡಿಬಿ ಅಧ್ಯಕ್ಷ ಡಾ.ಅಜಯ್ ಸಿಂಗ್ ಚೆಸ್ ಆಡಿದರು. ಎಂ.ಎನ್. ನಟರಾಜ್, ಕಾರ್ಯಕ್ರಮದ ಸಂಘಟನಾ ಕಾರ್ಯದರ್ಶಿ ಸೌಮ್ಯಾ, ವಕೀಲ ದಿಲೀಪ್ ಕುಮಾರ್, ಅರವಿಂದ ಶಾಸ್ತ್ರಿ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ: ಬಿ.ಕೆ. ಜನಾರ್ದನ

ಏ.10ರಿಂದ ಓಪನ್ ಚೆಸ್ ಟೂರ್ನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ಏ.10ರಿಂದ 18ರವರೆಗೆ ನಡೆಯುವ ‘ನಮ್ಮ ಬೆಂಗಳೂರು ಇಂಟರ್‌ನ್ಯಾಷನಲ್ ಗ್ರ್ಯಾಂಡ್ ಮಾಸ್ಟರ್ ಓಪನ್ ಚೆಸ್ ಟೂರ್ನಿ’ಯ ಎರಡನೇ ಆವೃತ್ತಿಯು ಒಟ್ಟು ₹55 ಲಕ್ಷ ಬಹುಮಾನ ಮೊತ್ತವನ್ನು ಒಳಗೊಂಡಿದೆ.

ವಿಧಾನಸೌಧದ ಮೊದಲ ಮಹಡಿಯಲ್ಲಿ ಟೂರ್ನಿಯ ಪೋಸ್ಟರ್ ಮತ್ತು ಟೀಸರ್ ಅನ್ನು ವಿಧಾನಸಭಾ ಸ್ಪೀಕರ್ ಯು.ಟಿ. ಖಾದರ್, ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಮತ್ತು ಕೆಕೆಆರ್‌ಡಿಬಿ ಅಧ್ಯಕ್ಷ ಡಾ.ಅಜಯ್ ಸಿಂಗ್ ಗುರುವಾರ ಬಿಡುಗಡೆ ಮಾಡಿದರು.

ಬೆಂಗಳೂರು ಇಂಟರ್‌ನ್ಯಾಷನಲ್ ಗ್ರ್ಯಾನ್‌ಮಾಸ್ಟರ್ ಟೂರ್ನಿ ಸಮಿತಿಯ ಸಹಯೋಗದೊಂದಿಗೆ ಕರ್ನಾಟಕ ವಿಧಾನಸಭೆಯು ಆಯೋಜಿಸಿರುವ ಎರಡನೇ ಆವೃತ್ತಿಯ ಈ ಟೂರ್ನಿಯಲ್ಲಿ 20 ದೇಶಗಳಿಂದ 1300 ಚೆಸ್‌ಪಟುಗಳು ಭಾಗವಹಿಸಲಿದ್ದಾರೆ. ಗ್ರ್ಯಾಂಡ್ ಮಾಸ್ಟರ್‌ಗಳು, ಅಂತರರಾಷ್ಟ್ರೀಯ ಮಾಸ್ಟರ್ಸ್‌ಗಳು ಮತ್ತು ಉದಯೋನ್ಮುಖ ಆಟಗಾರರು ಸ್ಪರ್ಧೆಯಲ್ಲಿ ಪಾಲ್ಗೊಳ್ಳುವರು’ ಎಂದು ಕಾರ್ಯಕ್ರಮದ ಸಂಘಟನಾ ಕಾರ್ಯದರ್ಶಿ ಸೌಮ್ಯಾ ಮಾಹಿತಿ ನೀಡಿದರು.